ಕಿಮಾಚಾರಃ ಕಥಂ ಚೈತಾಂಸ್ತ್ರೀನ್ ಗುಣಾನತಿವರ್ತತೇ ॥ ? ೨೧

ಉಃ–
ಪ್ರಕಾಶಂ ಚ ಪ್ರವೃತ್ತಿಂ ಚ ಮೋಹಮೇವ ಚ ಪಾಂಡವ ।
ನ ದ್ವೇಷ್ಟಿ ಸಂಪ್ರವೃತ್ತಾನಿ ನ ನಿವೃತ್ತಾನಿ ಕಾಂಕ್ಷತಿ ॥ ೨೨

ಉದಾಸೀನವದಾಸೀನೋ ಗುಣೈರ್ಯೋ ನ ವಿಚಾಲ್ಯತೇ ।
ಗುಣಾ ವರ್ತಂತ ಇತ್ಯೇವ ಯೋಽವತಿಷ್ಠತಿ ನೇಂಗತೇ ॥ ೨೩

ಸಮದುಃಖಸುಖಃ ಸ್ವಸ್ಥಃ ಸಮಲೋಷ್ಟಾಶ್ಮಕಾಂಚನಃ ।
ತುಲ್ಯಪ್ರಿಯಾಪ್ರಿಯೋ ಧೀರಸ್ತುಲ್ಯನಿಂದಾತ್ಮಸಂಸ್ತುತಿಃ ॥ ೨೪

ಮಾನಾಪಮಾನಯೋಸ್ತುಲ್ಯಸ್ತುಲ್ಯೋ ಮಿತ್ರಾರಿಪಕ್ಷಯೋಃ ।
ಸರ್ವಾರಂಭಪರಿತ್ಯಾಗೀ ಗುಣಾತೀತಃ ಸ ಉಚ್ಯತೇ ॥ ೨೫

ಮಾಂ ಚ ಯೋಽವ್ಯಭಿಚಾರೇಣ ಭಕ್ತಿಯೋಗೇನ ಸೇವತೇ ।
ಸ ಗುಣಾನ್ಸಮತೀತ್ಯೈತಾನ್ ಬ್ರಹ್ಮಭೂಯಾಯ ಕಲ್ಪತೇ ॥ ೨೬

ಪ್ರ:–

೨ ಸ್ಥಿತಪ್ರಜ್ಞಸ್ಯ ಕಾ ಭಾಷಾ ಸಮಾಧಿಸ್ಥಸ್ಯ ಕೇಶವ । ?
ಸ್ಥಿತಧೀಃ ಕಿಂ ಪ್ರಭಾಷೇತ ? ೫೪

ಉ:–

ಯಃ ಸರ್ವತ್ರಾನಭಿಸ್ನೇಹಃ ತತ್ತತ್ಪ್ರಾಪ್ಯ ಶುಭಾಶುಭಮ್ ।
ನಾಭಿನಂದತಿ ನ ದ್ವೇಷ್ಟಿ ॥ ೫೭

೩ ಯಸ್ತ್ವಾತ್ಮರತಿರೇವ ಸ್ಯಾದಾತ್ಮತೃಪ್ತಶ್ಚ ಮಾನವಃ ।
ಆತ್ಮನ್ಯೇವ ಚ ಸಂತುಷ್ಟಸ್ತಸ್ಯ ಕಾರ್ಯಂ ನ ವಿದ್ಯತೇ ॥ ೧೭

೫ ನೈವ ಕಿಂಚಿತ್ಕರೋಮೀತಿ ಯುಕ್ತೋ ಮನ್ಯೇತ ತತ್ತ್ವವಿತ್ ।
ಪಶ್ಯನ್ ಶೃಣ್ವನ್ ಸ್ಪೃಶನ್ ಜಿಘ್ರನ್ನಶ್ನನ್ ಗಚ್ಛನ್ ಸ್ವಪನ್ ಶ್ವಸನ್ ॥ ೮

ಪ್ರಲಪನ್ ವಿಸೃಜನ್ ಗೃಹ್ಣನ್ನುನ್ಮಿಷನ್ನಿಮಿಷನ್ನಪಿ ।
ಇಂದ್ರಿಯಾಣೀಂದ್ರಿಯಾರ್ಥೇಷು ವರ್ತಂತ ಇತಿ ಧಾರಯನ್ ॥ ೯

೧೦ ಕಥಯನ್ತಶ್ಚ ಮಾಂ ನಿತ್ಯಂ ತುಷ್ಯಂತಿ ಚ ರಮಂತಿ ಚ ॥ ೯

ಪ್ರ:–

೨ ಸ್ಥಿತಧೀಃ ಕಿಮಾಸೀತ ? ೫೪

ಉ:–

೬ ಪ್ರಶಾಂತಾತ್ಮಾ ವಿಗತಭೀಃ ಬ್ರಹ್ಮಚಾರಿವ್ರತೇ ಸ್ಥಿತಃ ।
ಮನಸ್ಸಂಯಮ್ಯ ಮಚ್ಚಿತ್ತೋ ಯುಕ್ತ ಆಸೀತ ಮತ್ಪರಃ ॥ ೧೪

೨ ಇಂದ್ರಿಯಾಣಿ ಪ್ರಮಾಥೀನಿ ಹರನ್ತಿ ಪ್ರಸಭಂ ಮನಃ ॥ ೬೦

ತಾನಿ ಸರ್ವಾಣಿ ಸಂಯಮ್ಯ ಯುಕ್ತ ಆಸೀತ ಮತ್ಪರಃ । ೬೧

ಪ್ರ:–

೨ ಸ್ಥಿತಧೀಃ ವ್ರಜೇತ ಕಿಮ್ ? ೫೪

ಉ:–

೬ ಯತ್ರೋಪರಮತೇ ಚಿತ್ತಂ ನಿರುದ್ಧಂ ಯೋಗಸೇವಯಾ ।
ಯತ್ರ ಚೈವಾತ್ಮನಾಽಽತ್ಮಾನಂ ಪಶ್ಯನ್ನಾತ್ಮನಿ ತುಷ್ಯತಿ ॥ ೨೦

ಅಧ್ಯಾಯ ಶ್ಲೋಕ ಸಂ||

ಪ್ರ:–

೩ ಜ್ಯಾಯಸೀ ಚೇತ್ ಕರ್ಮಣಸ್ತೇ ಮತಾ ಬುದ್ಧಿರ್ಜನಾರ್ದನ ।
ತತ್ಕಿಂ ಕರ್ಮಣಿ ಘೋರೇ ಮಾಂ ನಿಯೋಜಯಸಿ ಕೇಶವ ॥ ೧

ವ್ಯಾಮಿಶ್ರೇಣೈವ ವಾಕ್ಯೇನ ಬುದ್ಧಿಂ ಮೋಹಯಸೀವ ಮೇ ।
ತದೇಕಂ ವದ ನಿಶ್ಚಿತ್ಯ ಯೇನ ಶ್ರೇಯೋಽಹಮಾಪ್ನುಯಾಮ್ ॥ ? ೨

ಉ:–

ಲೋಕೇಽಸ್ಮಿನ್ ದ್ವಿವಿಧಾ ನಿಷ್ಠಾ ಪುರಾ ಪ್ರೋಕ್ತಾ ಮಯಾಽನಘ ।
ಜ್ಞಾನಯೋಗೇನ ಸಾಂಖ್ಯಾನಾಂ ಕರ್ಮಯೋಗೇನ
ಯೋಗಿನಾಮ್ । ೩

ನ ಕರ್ಮಣಾಮನಾರಂಭಾನ್ನೈಷ್ಕರ್ಮ್ಯಂ ಪುರುಷೋಽಶ್ನುತೇ ।
ನ ಚ ಸಂನ್ಯಸನಾದೇವ ಸಿದ್ಧಿಂ ಸಮಧಿಗಚ್ಛತಿ ॥ ೪

ಪ್ರ:–

೧೮ ಸಂನ್ಯಾಸಸ್ಯ ಮಹಾಬಾಹೋ ತತ್ತ್ವಮಿಚ್ಛಾಮಿ ವೇದಿತುಮ್ ।
ತ್ಯಾಗಸ್ಯ ಚ ಹೃಷೀಕೇಶ ಪೃಥಕ್ಕೇಶಿನಿಷೂದನ ॥ ? ೧

ಉ:–

ಕಾಮ್ಯಾನಾಂ ಕರ್ಮಣಾಂ ನ್ಯಾಸಂ ಸಂನ್ಯಾಸಂ ಕವಯೋ ವಿದುಃ
ಸರ್ವಕರ್ಮಫಲತ್ಯಾಗಂ ಪ್ರಾಹುಸ್ತ್ಯಾಗಂ ವಿಚಕ್ಷಣಾಃ ॥ ೨

ತ್ಯಾಜ್ಯಂ ದೋಷವದಿತ್ಯೇಕೇ ಕರ್ಮ ಪ್ರಾಹುರ್ಮನೀಷಿಣಃ ।
ಯಜ್ಞದಾನತಪಃಕರ್ಮ ನ ತ್ಯಾಜ್ಯಮಿತಿ ಚಾಪರೇ ॥ ೩

ನಿಶ್ಚಯಂ ಶೃಣು ಮೇ ತತ್ರ ತ್ಯಾಗೇ ಭರತಸತ್ತಮ ।
ತ್ಯಾಗೋ ಹಿ ಪುರುಷವ್ಯಾಘ್ರ ತ್ರಿವಿಧಃ ಸಂಪ್ರಕೀರ್ತಿತಃ ॥ ೪

ಯಜ್ಞದಾನತಪಃಕರ್ಮ ನ ತ್ಯಾಜ್ಯಂ ಕಾರ್ಯಮೇವ ತತ್ ॥
ಯಜ್ಞೋ ದಾನಂ ತಪಶ್ಚೈವ ಪಾವನಾನಿ ಮನೀಷಿಣಾಂ ॥ ೫

ಅಧ್ಯಾಯ ಶ್ಲೋಕ ಸಂ||

ಏತಾನ್ಯಪಿ ತು ಕರ್ಮಾಣಿ ಸಂಗಂ ತ್ಯಕ್ತ್ವಾ ಫಲಾನಿ ಚ ।
ಕರ್ತವ್ಯಾನೀತಿ ಮೇ ಪಾರ್ಥ ನಿಶ್ಚಿತಂ ಮತಮುತ್ತಮಮ್ ॥ ೬

ನಿಯತಸ್ಯ ತು ಸಂನ್ಯಾಸಃ ಕರ್ಮಣೋ ನೋಪಪದ್ಯತೇ ।
ಮೋಹಾತ್ತಸ್ಯ ಪರಿತ್ಯಾಗಸ್ತಾಮಸಃ ಪರಿಕೀರ್ತಿತಃ ॥ ೭

ದುಃಖಮಿತ್ಯೇವ ಯತ್ಕರ್ಮ ಕಾಯಕ್ಲೇಶಭಯಾತ್ತ್ಯಜೇತ್ ।
ಸ ಕೃತ್ವಾ ರಾಜಸಂ ತ್ಯಾಗಂ ನೈವ ತ್ಯಾಗಫಲಂ ಲಭೇತ್ ॥ ೮

ಕಾರ್ಯಮಿತ್ಯೇವ ಯತ್ಕರ್ಮ ನಿಯತಂ ಕ್ರಿಯತೇಽರ್ಜುನ
ಸಂಗಂ ತ್ಯಕ್ತ್ವಾ ಫಲಂ ಚೈವ ಸ ತ್ಯಾಗಃ ಸಾತ್ತ್ವಿಕೋ ಮತಃ ॥ ೯

ನ ದ್ವೇಷ್ಟ್ಯಕುಶಲಂ ಕರ್ಮ ಕುಶಲೇ ನಾನುಷಜ್ಜತೇ ।
ತ್ಯಾಗೀ ಸತ್ತ್ವಸಮಾವಿಷ್ಟೋ ಮೇಧಾವೀ ಛಿನ್ನಸಂಶಯಃ ॥ ೧೦

ನ ಹಿ ದೇಹಭೃತಾ ಶಕ್ಯಂ ತ್ಯಕ್ತುಂ ಕರ್ಮಾಣ್ಯಶೇಷತಃ ।
ಯಸ್ತು ಕರ್ಮಫಲತ್ಯಾಗೀ ಸ ತ್ಯಾಗೀತ್ಯಭಿಧೀಯತೇ ॥ ೧೧

ಅನಿಷ್ಟಮಿಷ್ಟಂ ಮಿಶ್ರಂ ಚ ತ್ರಿವಿಧಂ ಕರ್ಮಣಃ ಫಲಮ್ ।
ಭವತ್ಯತ್ಯಾಗಿನಾಂ ಪ್ರೇತ್ಯ ನ ತು ಸಂನ್ಯಾಸಿನಾಂ ಕ್ವಚಿತ್ ॥ ೧೨

ಪ್ರ:-

೫ ಸಂನ್ಯಾಸಂ ಕರ್ಮಣಾಂ ಕೃಷ್ಣ ಪುನರ್ಯೋಗಂ ಚ ಶಂಸಸಿ ।
ಯಚ್ಛ್ರೇಯ ಏತಯೋರೇಕಂ ತನ್ಮೇ ಬ್ರೂಹಿ ಸುನಿಶ್ಚಿತಮ್ ॥ ೧

ಉ:-

ಸಂನ್ಯಾಸಃ ಕರ್ಮಯೋಗಶ್ಚ ನಿಃಶ್ರೇಯಸಕರಾವುಭೌ ॥
ತಯೋಸ್ತು ಕರ್ಮಸಂನ್ಯಾಸಾತ್ ಕರ್ಮಯೋಗೋ ವಿಶಿಷ್ಯತೇ ॥ ೨

ಸಾಂಖ್ಯಯೋಗೌ ಪೃಥಗ್ಬಾಲಾಃ ಪ್ರವದನ್ತಿ ನ ಪಂಡಿತಾಃ ।
ಏಕಮಪ್ಯಾಸ್ಥಿತಃ ಸಮ್ಯಗುಭಯೋರ್ವಿಂದತೇ ಫಲಮ್ ॥ ೪

ಅಧ್ಯಾಯ ಶ್ಲೋಕ ಸಂ॥

ಯತ್ಸಾಂಖ್ಯೈಃ ಪ್ರಾಪ್ಯತೇ ಸ್ಥಾನಂ ತದ್ಯೋಗೈರಪಿ ಗಮ್ಯತೇ ।
ಏಕಂ ಸಾಂಖ್ಯಂ ಚ ಯೋಗಂ ಚ ಯಃ ಪಶ್ಯತಿ ಸ ಪಶ್ಯತಿ ॥ ೫

ಸಂನ್ಯಾಸಸ್ತು ಮಹಾಬಾಹೋ ದುಃಖಮಾಪ್ತುಮಯೋಗತಃ ।
ಯೋಗಯುಕ್ತೋ ಮುನಿರ್ಬ್ರಹ್ಮ ನ ಚಿರೇಣಾಧಿಗಚ್ಛತಿ ॥ ೬

೬ ಅನಾಶ್ರಿತಃ ಕರ್ಮಫಲಂ ಕಾರ್ಯಂ ಕರ್ಮ ಕರೋತಿ ಯಃ ।
ಸ ಸಂನ್ಯಾಸೀ ಚ ಯೋಗೀ ಚ ನ ನಿರಗ್ನಿರ್ನ ಚಾಕ್ರಿಯಃ ॥ ೧

ಯಂ ಸಂನ್ಯಾಸಮಿತಿ ಪ್ರಾಹುರ್ಯೋಗಂ ತಂ ವಿದ್ಧಿ ಪಾಂಡವ ।
ನ ಹ್ಯಸಂನ್ಯಸ್ತಸಂಕಲ್ಪೋ ಯೋಗೀ ಭವತಿ ಕಶ್ಚನ ॥ ೨

ಪ್ರ:-

೧೨ ಏವಂ ಸತತಯುಕ್ತಾ ಯೇ ಭಕ್ತಾಸ್ತ್ವಾಂ ಪರ್ಯುಪಾಸತೇ । ।
ಯೇ ಚಾಪ್ಯಕ್ಷರಮವ್ಯಕ್ತಂ ತೇಷಾಂ ಕೇ ಯೋಗವಿತ್ತಮಾಃ ॥ ? ೧

ಉ:-

ಮಯ್ಯಾವೇಶ್ಯ ಮನೋ ಯೇ ಮಾಂ ನಿತ್ಯಯುಕ್ತಾ ಉಪಾಸತೇ ।
ಶ್ರದ್ಧಯಾ ಪರಯೋಪೇತಾಸ್ತೇ ಮೇ ಯುಕ್ತತಮಾ ಮತಾಃ ॥ ೨

ಉಪಸಂಹಾರ ಉತ್ತರ:—

೧೮ ಇತಿ ತೇ ಜ್ಞಾನಮಾಖ್ಯಾತಂ ಗುಹ್ಯಾದ್ಗುಹ್ಯತರಂ ಮಯಾ ।
ವಿಮೃಶ್ಯೈತದಶೇಷೇಣ ಯಥೇಚ್ಛಸಿ ತಥಾ ಕುರು ॥ ೬೩

ಇದಂ ತೇನಾತಪಸ್ಕಾಯ ನಾಭಕ್ತಾಯ ಕದಾಚನ ।
ನ ಚಾಶುಶ್ರೂಷವೇ ವಾಚ್ಯಂ ನ ಚ ಮಾಂ ಯೋಽಭ್ಯಸೂಯತಿ ॥ ೬೭

ಯ ಇಮಂ ಪರಮಂ ಗುಹ್ಯಂ ಮದ್ಭಕ್ತೇಷ್ವಭಿಧಾಸ್ಯತಿ ।
ಭಕ್ತಿಂ ಮಯಿ ಪರಾಂ ಕೃತ್ವಾ ಮಾಮೇವೈಷ್ಯತ್ಯಸಂಶಯಃ ೬೮

ನ ಚ ತಸ್ಮಾನ್ಮನುಷ್ಯೇಷು ಕಶ್ಚಿನ್ಮೇ ಪ್ರಿಯಕೃತ್ತಮಃ ।
ಭವಿತಾ ನ ಚ ಮೆ ತಸ್ಮಾದನ್ಯಃ ಪ್ರಿಯತರೋ ಭುವಿ ॥ ೬೯

ಅಧ್ಯಾಯ ಶ್ಲೋಕ ಸಂ॥

ಅಧ್ಯೇಷ್ಯತೇ ಚ ಯ ಇಮಂ ಧರ್ಮ್ಯಂ ಸಂವಾದಮಾವಯೋಃ ।
ಜ್ಞಾನಯಜ್ಞೇನ ತೇನಾಹಮಿಷ್ಟಃ ಸ್ಯಾಮಿತಿ ಮೇ ಮತಿಃ ॥ ೭೦

ಶ್ರದ್ಧಾವಾನನಸೂಯಶ್ಚ ಶೃಣುಯಾದಪಿ ಯೋ ನರಃ ।
ಸೋಽಪಿ ಮುಕ್ತಃ ಶುಭಾಁಲ್ಲೋಕಾನ್ಪ್ರಾಪ್ನುಯಾತ್ಪುಣ್ಯ
ಕರ್ಮಣಾಮ್ । ೭೧

ಕಚ್ಚಿದೇತಚ್ಛ್ರುತಂ ಪಾರ್ಥ ತ್ವಯೈಕಾಗ್ರೇಣ ಚೇತಸಾ ।
ಕಚ್ಚಿದಜ್ಞಾನಸಮ್ಮೋಹಃ ಪ್ರಣಷ್ಟಸ್ತೇ ಧನಂಜಯ ॥ ೭೨

ಕೃತಜ್ಞತಾವಚನಂ:—

೧೧ ಮದನುಗ್ರಹಾಯ ಪರಮಂ ಗುಹ್ಯಮಧ್ಯಾತ್ಮಸಂಜ್ಞಿತಮ್ ।
ಯತ್ತ್ವಯೋಕ್ತಂ ವಚಸ್ತೇನ ಮೋಹೋಽಯಂ ವಿಗತೋ ಮಮ ॥ ೧

ಭವಾಪ್ಯಯೌ ಹಿ ಭೂತಾನಾಂ ಶ್ರುತೌ ವಿಸ್ತರತೋ ಮಯಾ ।
ತ್ವತ್ತಃ ಕಮಲಪತ್ರಾಕ್ಷ ಮಾಹಾತ್ಮ್ಯಮಪಿ ಚಾವ್ಯಯಮ್ ॥ ೨

೧೮ ನಷ್ಟೋ ಮೋಹಃ ಸ್ಮೃತಿರ್ಲಬ್ಧಾ ತ್ವತ್ಪ್ರಸಾದಾನ್ಮಯಾಚ್ಯುತ ।
ಸ್ಥಿತೋಽಸ್ಮಿ ಗತಸಂದೇಹಃ ಕರಿಷ್ಯೇ ವಚನಂ ತವ ॥ ೭೩

–: (ಶ್ರೀಗುರುಚರಣಾರವಿಂದಾರ್ಪಣಮಸ್ತು) :–

ಓಂ ತತ್ಸದಿತಿ

ಶ್ರೀ ಮದ್ಭಗವದ್ಗೀತಾ ವಿಷಯ ವಿಭಜನಸಂಯೋಜನಪೂರ್ವಕ ಸಂಪುಟೀಕೃತ ಗೀತಾಕೃತಾ
ಪ್ರಶ್ನೋತ್ತರಮಾಲಾನಾಮ
ಷಷ್ಠಃ ಪ್ರಬಂಧಃ

ಶ್ರೀ ಸದ್ಗುರು ಶ್ರೀಕೃಷ್ಣಾಯನಮಃ

ಸಂಪುಟೀಕೃತ ಶ್ರೀಮದ್ಭಗವದ್ಗೀತಾ ಶ್ಲೋಕಪ್ರಬಂಧಾಃ

ಸಪ್ತಮಃ ಪ್ರಬಂಧಃ

ಆತ್ಮಸಾಕ್ಷಾತ್ಕಾರಃ

ಪ್ರಾರ್ಥನಾ

೧೧ ಏವಮೇತದ್ಯಥಾತ್ಥ ತ್ವಮಾತ್ಮಾನಂ ಪರಮೇಶ್ವರ ।
ದ್ರಷ್ಟುಮಿಚ್ಛಾಮಿ ತೇ ರೂಪಮೈಶ್ವರಂ ಪುರುಷೋತ್ತಮ ॥ ೩

ಮನ್ಯಸೇ ಯದಿ ತಚ್ಛಕ್ಯಂ ಮಯಾ ದ್ರಷ್ಟುಮಿತಿ ಪ್ರಭೋ ।
ಯೋಗೇಶ್ವರ ತತೋ ಮೇ ತ್ವಂ ದರ್ಶಯಾತ್ಮಾನಮವ್ಯಯಮ್ ॥ ೪

ಅನುಗ್ರಹಃ

ಪಶ್ಯ ಮೇ ಪಾರ್ಥ ರೂಪಾಣಿ ಶತಶೋಽಥ ಸಹಸ್ರಶಃ ।
ನಾನಾವಿಧಾನಿ ದಿವ್ಯಾನಿ ನಾನಾವರ್ಣಾಕೃತೀನಿ ಚ ॥ ೫

ಪಶ್ಯಾದಿತ್ಯಾನ್ವಸೂನ್ರುದ್ರಾನಶ್ವಿನೌ ಮರುತಸ್ತಥಾ ।
ಬಹೂನ್ಯದೃಷ್ಟಪೂರ್ವಾಣಿ ಪಶ್ಯಾಶ್ಚರ್ಯಾಣಿ ಭಾರತ ॥ ೬

ಇಹೈಕಸ್ಥಂ ಜಗತ್ ಕೃತ್ಸ್ನಂ ಪಶ್ಯಾದ್ಯ ಸಚರಾಚರಮ್ ।
ಮಮ ದೇಹೇ ಗುಡಾಕೇಶ ಯಚ್ಚಾನ್ಯದ್ದ್ರಷ್ಟುಮಿಚ್ಛಸಿ ॥ ೭

ನ ತು ಮಾಂ ಶಕ್ಯಸೇ ದ್ರಷ್ಟುಮನೇನೈವ ಸ್ವಚಕ್ಷುಷಾ ।
ದಿವ್ಯಂ ದದಾಮಿ ತೇ ಚಕ್ಷುಃ ಪಶ್ಯ ಮೇ ಯೋಗಮೈಶ್ವರಮ್ ॥ ೮

ಅನೇಕವಕ್ತ್ರನಯನಮನೇಕಾದ್ಭುತದರ್ಶನಮ್ ।
ಅನೇಕದಿವ್ಯಾಭರಣಂ ದಿವ್ಯಾನೇಕೋದ್ಯತಾಯುಧಮ್ ॥ ೧೦

ದಿವ್ಯಮಾಲಾಂಬರಧರಂ ದಿವ್ಯಗಂಧಾನುಲೇಪನಮ್ ।
ಸರ್ವಾಶ್ಚರ್ಯಮಯಂ ದೇವಮನಂತಂ ವಿಶ್ವತೋಮುಖಮ್ ॥ ೧೧

ದಿವಿ ಸೂರ್ಯಸಹಸ್ರಸ್ಯ ಭವೇದ್ಯುಗಪದುತ್ಥಿತಾ ।
ಯದಿ ಭಾಃ ಸದೃಶೀ ಸಾ ಸ್ಯಾದ್ಭಾಸಸ್ತಸ್ಯ ಮಹಾತ್ಮನಃ ॥ ೧೨

ತತ್ರೈಕಸ್ಥಂ ಜಗತ್ ಕೃತ್ಸ್ನಂ ಪ್ರವಿಭಕ್ತಮನೇಕಧಾ ।
ಅಪಶ್ಯದ್ದೇವದೇವಸ್ಯ ಶರೀರೇ ಪಾಂಡವಸ್ತದಾ ॥ ೧೩

ವಾಣೀ–ವಿಜ್ಞಾನಾನನ್ದಾವಿರ್ಭಾವಃ

ಪಶ್ಯಾಮಿ ದೇವಾಂಸ್ತವ ದೇವ ದೇಹೇ ಸರ್ವಾಂಸ್ತಥಾ ಭೂತ
ವಿಶೇಷಸಂಘಾ ।
ಬ್ರಹ್ಮಾಣಮೀಶಂ ಕಮಲಾಸನಸ್ಥಮೃಷೀಂಶ್ಚ ಸರ್ವಾನುರಗಾಂಶ್ಚ
ದಿವ್ಯಾ ॥ ೧೫

ಅನೇಕಬಾಹೂದರವಕ್ತ್ರನೇತ್ರಂ ಪಶ್ಯಾಮಿ ತ್ವಾಂ ಸರ್ವತೋಽನಂತ
ರೂಪಮ್ ।
ನಾನ್ತಂ ನ ಮಧ್ಯಂ ನ ಪುನಸ್ತವಾದಿಂ ಪಶ್ಯಾಮಿ ವಿಶ್ವೇಶ್ವರ
ವಿಶ್ವರೂಪ ॥ ೧೬

ಕಿರೀಟಿನಂ ಗದಿನಂ ಚಕ್ರಿಣಂ ಚ ತೇಜೋರಾಶಿಂ ಸರ್ವತೋ
ದೀಪ್ತಿಮಂತಮ್ ।
ಪಶ್ಯಾಮಿ ತ್ವಾಂ ದುರ್ನಿರೀಕ್ಷ್ಯಂ ಸಮಂತಾದ್ದೀಪ್ತಾನಲಾರ್ಕ
ದ್ಯುತಿಮಪ್ರಮೇಯಮ್ ॥ ೧೭

ತ್ವಮಕ್ಷರಂ ಪರಮಂ ವೇದಿತವ್ಯಂ ತ್ವಮಸ್ಯ ವಿಶ್ವಸ್ಯ ಪರಂ
ನಿಧಾನಮ್ ।
ತ್ವಮವ್ಯಯಃ ಶಾಶ್ವತಧರ್ಮಗೋಪ್ತಾ ಸನಾತನಸ್ತ್ವಂ ಪುರುಷೋ
ಮತೋ ಮೇ ॥ ೧೮

ಅಧ್ಯಾಯ ಶ್ಲೋಕ ಸಂ॥

ಅನಾದಿಮಧ್ಯಾಂತಮನಂತವೀರ್ಯಮನಂತಬಾಹುಂ ಶಶಿಸೂರ್ಯ
ನೇತ್ರಮ್ ।
ಪಶ್ಯಾಮಿ ತ್ವಾಂ ದೀಪ್ತಹುತಾಶವಕ್ತ್ರಂ ಸ್ವತೇಜಸಾ ವಿಶ್ವಮಿದಂ
ತಪಂತಮ್ ॥ ೧೯

ದ್ಯಾವಾಪೃಥಿವ್ಯೋರಿದಮಂತರಂ ಹಿ ವ್ಯಾಪ್ತಂ ತ್ವಯೈಕೇನ
ದಿಶಶ್ಚ ಸರ್ವಾಃ ।
ದೃಷ್ಟ್ವಾದ್ಭುತಂ ರೂಪಮುಗ್ರಂ ತವೇದಂ ಲೋಕತ್ರಯಂ
ಪ್ರವ್ಯಥಿತಂ ಮಹಾತ್ಮನ್ ॥ ೨೦

ಅಮೀ ಹಿ ತ್ವಾಂ ಸುರಸಂಘಾ ವಿಶಂತಿ ಕೇಚಿದ್ಭೀತಾಃ
ಪ್ರಾಂಜಲಯೋ ಗೃಣಂತಿ ।
ಸ್ವಸ್ತೀತ್ಯುಕ್ತ್ವಾ ಮಹರ್ಷಿಸಿದ್ಧಸಂಘಾಃ ಸ್ತುವಂತಿ ತ್ವಾಂ
ಸ್ತುತಿಭಿಃ ಪುಷ್ಕಲಾಭಿಃ ॥ ೨೧

ರುದ್ರಾದಿತ್ಯಾ ವಸವೋ ಯೇ ಚ ಸಾಧ್ಯಾ ವಿಶ್ವೇಽಶ್ವಿನೌ ಮರುತ
ಶ್ಚೋಷ್ಮಪಾಶ್ಚ ।
ಗಂಧರ್ವಯಕ್ಷಾಸುರಸಿದ್ಧಸಂಘಾ ವೀಕ್ಷಂತೇ ತ್ವಾಂ
ವಿಸ್ಮಿತಾಶ್ಚೈವ ಸರ್ವೇ ॥ ೨೨

ರೂಪಂ ಮಹತ್ತೇ ಬಹುವಕ್ತ್ರನೇತ್ರಂ ಮಹಾಬಾಹೋ
ಬಹುಬಾಹೂರುಪಾದಮ್ ।
ಬಹೂದರಂ ಬಹುದಂಷ್ಟ್ರಾಕರಾಲಂ ದೃಷ್ಟ್ವಾ ಲೋಕಾಃ
ಪ್ರವ್ಯಥಿತಾಸ್ತಥಾಹಮ್ ॥ ೨೩

ನಭಸ್ಸ್ಪೃಶಂ ದೀಪ್ತಮನೇಕವರ್ಣಂ ವ್ಯಾತ್ತಾನನಂ ದೀಪ್ತ
ವಿಶಾಲನೇತ್ರಮ್ ।
ದೃಷ್ಟ್ವಾ ಹಿ ತ್ವಾಂ ಪ್ರವ್ಯಥಿತಾಂತರಾತ್ಮಾ ಧೃತಿಂ ನ
ವಿಂದಾಮಿ ಶಮಂ ಚ ವಿಷ್ಣೋ ॥ ೨೪

ದಂಷ್ಟ್ರಾಕರಾಲಾನಿ ಚ ತೇ ಮುಖಾನಿ ದೃಷ್ಟ್ವೈವ
ಕಾಲಾನಲ ಸನ್ನಿಭಾನಿ ।
ದಿಶೋ ನ ಜಾನೇ ನ ಲಭೇ ಚ ಶರ್ಮ ಪ್ರಸೀದ ದೇವೇಶ
ಜಗನ್ನಿವಾಸ ॥ ೨೫

ಅಮೀ ಚ ತ್ವಾಂ ಧೃತರಾಷ್ಟ್ರಸ್ಯ ಪುತ್ರಾಃ ಸರ್ವೇ
ಸಹೈವಾವನಿಪಾಲಸಂಘೈಃ ।
ಭೀಷ್ಮೋ ದ್ರೋಣಃ ಸೂತಪುತ್ರಸ್ತಥಾಸೌ ಸಹಾಸ್ಮದೀಯೈರಪಿ
ಯೋಧಮುಖ್ಯೈಃ ॥ ೨೬

ವಕ್ತ್ರಾಣಿ ತೇ ತ್ವರಮಾಣಾ ವಿಶಂತಿ ದಂಷ್ಟ್ರಾಕರಾಲಾನಿ
ಭಯಾನಕಾನಿ ।
ಕೇಚಿದ್ವಿಲಗ್ನಾ ದಶನಾಂತರೇಷು ಸಂದೃಶ್ಯಂತೇ
ಚೂರ್ಣಿತೈರುತ್ತಮಾಂಗೈಃ ॥ ೨೭

ಯಥಾ ನದೀನಾಂ ಬಹವೋಽಂಬುವೇಗಾಃ ಸಮುದ್ರ
ಮೇವಾಭಿಮುಖಾ ದ್ರವಂತಿ ।
ತಥಾ ತವಾಮೀ ನರಲೋಕವೀರಾ ವಿಶಂತಿ ವಕ್ತ್ರಾಣ್ಯಭಿ
ವಿಜ್ವಲಂತಿ ॥ ೨೮

ಯಥಾ ಪ್ರದೀಪ್ತಂ ಜ್ವಲನಂ ಪತಂಗಾ ವಿಶಂತಿ ನಾಶಾಯ
ಸಮೃದ್ಧವೇಗಾಃ ।
ತಥೈವ ನಾಶಾಯ ವಿಶಂತಿ ಲೋಕಾಸ್ತವಾಪಿ ವಕ್ತ್ರಾಣಿ
ಸಮೃದ್ಧವೇಗಾಃ ॥ ೨೯

ಲೇಲಿಹ್ಯಸೇ ಗ್ರಸಮಾನಃ ಸಮಂತಾಲ್ಲೋಕಾನ್ ಸಮಗ್ರಾನ್
ವದನೈರ್ಜ್ವಲದ್ಭಿಃ ।
ತೇಜೋಭಿರಾಪೂರ್ಯ ಜಗತ್ ಸಮಗ್ರಂ ಭಾಸಸ್ತವೋಗ್ರಾಃ
ಪ್ರತಪಂತಿ ವಿಷ್ಣೋಃ ॥ ೩೦

ಅಧ್ಯಾಯ ಶ್ಲೋಕ ಸಂ॥

ಆಖ್ಯಾಹಿ ಮೇ ಕೋ ಭವಾನುಗ್ರರೂಪೋ ನಮೋಽಸ್ತು ತೇ
ದೇವವರ ಪ್ರಸೀದ ।
ವಿಜ್ಞಾತುಮಿಚ್ಛಾಮಿ ಭವನ್ತಮಾದ್ಯಂ ನ ಹಿ ಪ್ರಜಾನಾಮಿ
ತವ ಪ್ರವೃತ್ತಿಮ್ ॥ ೩೧

ಸ್ಥಾನೇ ಹೃಷೀಕೇಶ ತವ ಪ್ರಕೀರ್ತ್ಯಾ ಜಗತ್ ಪ್ರಹೃಷ್ಯತ್ಯನು
ರಜ್ಯತೇ ಚ ।
ರಕ್ಷಾಂಸಿ ಭೀತಾನಿ ದಿಶೋ ದ್ರವಂತಿ ಸರ್ವೇ ನಮಸ್ಯಂತಿ
ಚ ಸಿದ್ಧಸಂಘಾಃ ॥ ೩೬

ಕಸ್ಮಾಚ್ಚ ತೇ ನ ನಮೇರನ್ ಮಹಾತ್ಮನ್ ಗರೀಯಸೇ
ಬ್ರಹ್ಮಣೋಽಪ್ಯಾದಿಕರ್ತ್ರೇ ।
ಅನಂತದೇವೇಶ ಜಗನ್ನಿವಾಸ ತ್ವಮಕ್ಷರಂ ಸದಸತ್ತತ್ಪರಂ ಯತ್॥ ೩೭

ತ್ವಮಾದಿದೇವಃ ಪುರುಷಃ ಪುರಾಣಸ್ತ್ವಮಸ್ಯ ವಿಶ್ವಸ್ಯ ಪರಂ
ನಿಧಾನಮ್ ।
ವೇತ್ತಾಸಿ ವೇದ್ಯಂ ಚ ಪರಂ ಚ ಧಾಮ ತ್ವಯಾ ತತಂ
ವಿಶ್ವಮನಂತರೂಪ ॥ ೩೮

ವಾಯುರ್ಯಮೋಽಗ್ನಿರ್ವರುಣಃ ಶಶಾಂಕಃ ಪ್ರಜಾಪತಿಸ್ತ್ವಂ
ಪ್ರಪಿತಾಮಹಶ್ಚ ।
ನಮೋನಮಸ್ತೇಽಸ್ತು ಸಹಸ್ರಕೃತ್ವಃ ಪುನಶ್ಚ ಭೂಯೋಽಪಿ
ನಮೋನಮಸ್ತೇ ॥ ೩೯

ನಮಃ ಪುರಸ್ತಾದಥ ಪೃಷ್ಠತಸ್ತೇ ನಮೋಽಸ್ತು ತೇ ಸರ್ವತ
ಏವ ಸರ್ವ ।
ಅನಂತವೀರ್ಯಾಮಿತವಿಕ್ರಮಸ್ತ್ವಂ ಸರ್ವಂ ಸಮಾಪ್ನೋಷಿ
ತತೋಽಸಿ ಸರ್ವಃ ॥ ೪೦

ಪ್ರಾರ್ಥನಾ

ಸಖೇತಿ ಮತ್ವಾ ಪ್ರಸಭಂ ಯದುಕ್ತಂ ಹೇ ಕೃಷ್ಣ ಹೇ ಯಾದವ
ಹೇ ಸಖೇತಿ ।
ಅಜಾನತಾ ಮಹಿಮಾನಂ ತವೇದಂ ಮಯಾ ಪ್ರಮಾದಾತ್
ಪ್ರಣಯೇನ ವಾಪಿ ॥ ೪೧

ಯಚ್ಚಾವಹಾಸಾರ್ಥಮಸತ್ಕೃತೋಽಸಿ ವಿಹಾರಶಯ್ಯಾಸನ
ಭೋಜನೇಷು ।
ಏಕೋಽಥ ವಾಪ್ಯಚ್ಯುತ ತತ್ಸಮಕ್ಷಂ ತತ್ ಕ್ಷಾಮಯೇ
ತ್ವಾಮಹಮಪ್ರಮೇಯಮ್ ॥ ೪೨

ಪಿತಾಸಿ ಲೋಕಸ್ಯ ಚರಾಚರಸ್ಯ ತ್ವಮಸ್ಯ ಪೂಜ್ಯಶ್ಚ
ಗುರುರ್ಗರೀಯಾನ್ ।
ನ ತ್ವತ್ಸಮೋಽಸ್ತ್ಯಭ್ಯಧಿಕಃ ಕುತೋಽನ್ಯೋ ಲೋಕತ್ರಯೇಽಪ್ಯ
ಪ್ರತಿಮಪ್ರಭಾವ ॥ ೪೩

ತಸ್ಮಾತ್ ಪ್ರಣಮ್ಯ ಪ್ರಣಿಧಾಯ ಕಾಯಂ ಪ್ರಸಾದಯೇ
ತ್ವಾಮಹಮೀಶಮೀಡ್ಯಮ್ ।
ಪಿತೇವ ಪುತ್ರಸ್ಯ ಸಖೇವ ಸಖ್ಯುಃ ಪ್ರಿಯಃ ಪ್ರಿಯಾಯಾರ್ಹಸಿ
ದೇವ ಸೋಢುಮ್ ॥ ೪೪

ಅದೃಷ್ಟಪೂರ್ವಂ ಹೃಷಿತೋಽಸ್ಮಿ ದೃಷ್ಟ್ವಾ ಭಯೇನ ಚ
ಪ್ರವ್ಯಥಿತಂ ಮನೋ ಮೇ ।
ತದೇವ ಮೇ ದರ್ಶಯ ದೇವ ರೂಪಂ ಪ್ರಸೀದ ದೇವೇಶ
ಜಗನ್ನಿವಾಸ ॥ ೪೫

ಕಿರೀಟಿನಂ ಗದಿನಂ ಚಕ್ರಹಸ್ತಮಿಚ್ಛಾಮಿ ತ್ವಾಂ
ದ್ರಷ್ಟುಮಹಂ ತಥೈವ ।
ತೇನೈವ ರೂಪೇಣ ಚತುರ್ಭುಜೇನ ಸಹಸ್ರಬಾಹೋ ಭವ
ವಿಶ್ವಮೂರ್ತೇ ॥ ೪೬

ಅಧ್ಯಾಯ ಶ್ಲೋಕ ಸಂ||

ಅನುಗ್ರಹಃ

ಮಯಾ ಪ್ರಸನ್ನೇನ ತವಾರ್ಜುನೇದಂ ರೂಪಂ ಪರಂ
ದರ್ಶಿತಮಾತ್ಮಯೋಗಾತ್ ।
ತೇಜೋಮಯಂ ವಿಶ್ವಮನಂತಮಾದ್ಯಂ ಯನ್ಮೇ ತ್ವದನ್ಯೇನ
ನ ದೃಷ್ಟಪೂರ್ವಮ್ ॥ ೪೭

ನ ವೇದಯಜ್ಞಾಧ್ಯಯನೈರ್ನದಾನೈರ್ನಚ ಕ್ರಿಯಾಭಿರ್ನ
ತಪೋಭಿರುಗ್ರೈಃ ।
ಏವಂರೂಪಃ ಶಕ್ಯ ಅಹಂ ನೃಲೋಕೇ ದ್ರಷ್ಟುಂ ತ್ವದನ್ಯೇನ
ಕುರುಪ್ರವೀರ ॥ ೪೮

ಮಾ ತೇ ವ್ಯಥಾ ಮಾ ಚ ವಿಮೂಢಭಾವೋ ದೃಷ್ಟ್ವಾ ರೂಪಂ
ಘೋರಮೀದೃಙ್ಮಮೇದಮ್ ।
ವ್ಯಪೇತಭೀಃ ಪ್ರೀತಮನಾಃ ಪುನಸ್ತ್ವಂ ತದೇವ ಮೇ
ರೂಪಮಿದಂ ಪ್ರಪಶ್ಯ ॥ ೪೯

ಅನುಭವಃ

ದೃಷ್ಟ್ವೇದಂ ಮಾನುಷಂ ರೂಪಂ ತವ ಸೌಮ್ಯಂ ಜನಾರ್ದನ ।
ಇದಾನೀಮಸ್ಮಿ ಸಂವೃತ್ತಃ ಸಚೇತಾಃ ಪ್ರಕೃತಿಂ ಗತಃ ॥ ೫೧

ಓಂ ತತ್ಸದಿತಿ

ಶ್ರೀಮದ್ಭಗವದ್ಗೀತಾ ವಿಷಯವಿಭಜನ ಸಂಯೋಜನಪೂರ್ವಕ ಸಂಪುಟೀಕೃತ
ಗೀತಾಕೃತೌ 'ಆತ್ಮಸಾಕ್ಷಾತ್ಕಾರೋನಾಮ'
ಸಪ್ತಮಃ ಪ್ರಬಂಧಃ.
ಶ್ರೀಗುರು ಭಗವಚ್ಚರಣಾರವಿಂದಾರ್ಪಣಮಸ್ತು.
ನಮೋ ಗುರುಭ್ಯಃ

|| ಶ್ರೀ: ||

ಶ್ರೀ ಯೋಗಾನಂದಭಾರತೀ ಪರಮಹಂಸ ಗುರುಭ್ಯೋನಮಃ

ಯೋಗಾನಂದಾಭಿಧಾಯುಕ್ತಂ
ಶಿಷ್ಯಧ್ವಾಂತ ನಿವಾರಣಮ್ ।
ಅಹೋಬಲ ನೃಸಿಂಹಾರ್ಯಂ
ಗುರುರಾಜಂ ನಮಾಮ್ಯಹಮ್ ॥

ಸಂಪುಟೀಕೃತ ಶ್ರೀಮದ್ಭಗವದ್ಗೀತಾ ಶ್ಲೋಕಪ್ರಬಂಧಗಳ ಕನ್ನಡ ಗದ್ಯಾನುವಾದ ಪ್ರಬಂಧಗಳು

ಮೊದಲನೆಯ ಪ್ರಬಂಧವು

ಗೀತಾಕರಂಡಕ

ಧೃತರಾಷ್ಟ್ರನ ಪ್ರಶ್ನೆ

“ ಬ್ರಾಹ್ಮಣಧರ್ಮಾ*ಚರಣೆಗೆ ಆಶ್ರಯವಾಗಿರುವ ಬ್ರಾಹ್ಮಣ ಭೂಮಿಯಲ್ಲಿ ಧರ್ಮ ಮತ್ತು ಪುಣ್ಯಗಳಿಗೆ ಹೆಸರುಗೊಂಡಿರುವ ಕುರುಕ್ಷೇತ್ರದಲ್ಲಿ (ಅಸೂಯೆ ಮತ್ತು ಆಸೆಯಿಂದ) ಯುದ್ಧಮಾಡಬೇಕೆಂಬ ಕೌರವರೂ ; (ಜೀವನಕ್ಕಾಗಿ ಹಕ್ಕುಬಾಧ್ಯತೆಗಳನ್ನು ನ್ಯಾಯಮಾರ್ಗದಿಂದ ಊರ್ಜಿತಪಡಿಸಿಕೊಳ್ಳುವುದಕ್ಕಾಗಿ) ಯುದ್ಧಮಾಡಬೇಕೆಂಬ ಪಾಂಡವರೂ– ಯುದ್ಧಭೂಮಿಯಲ್ಲಿ ನೆರೆದು–ಏನೇನು ಮಾಡಿರುತ್ತಾರೆ, ತಿಳಿಸು ” ಎಂದು ಸಂಜಯನನ್ನು ಧೃತರಾಷ್ಟ್ರನು ಕೇಳಿದನು. ೧ ೧

“ ಯುದ್ಧಕ್ಕೆ ನೆರೆದಿರುವ ಪಾಂಡವಸೈನ್ಯವನ್ನೆಲ್ಲಾ ನೋಡಿದಾಗ ದುರ್ಯೋಧನ ಮಹಾರಾಜನು ವಿದ್ಯಾಗುರುಗಳಾದ ದ್ರೋಣಾಚಾರ್ಯರ ಬಳಿಗೆ ಹೋಗಿ, ಅವನ ಮತ್ತು ಎದುರುಕಡೆಯವರ ಸೈನ್ಯಗಳ ಬಲಾಬಲತೆಗಳ ವಿಷಯವನ್ನೆತ್ತಿ ವಿವರಿಸಿ ಹೇಳಿದನು. ೧ ೨

---

* ಹಿಂದು ಎಂಬ ಶಬ್ದದ ಬಳಕೆಗೆ ಆಧಾರವಿಲ್ಲದೆ ಇರುವುದರಿಂದಲೂ, ಹಿಂದು ಶಬ್ದವು ಈಗ ಬಳಕೆಯಲ್ಲಿರುವ ಸನ್ನಿವೇಶಗಳಲ್ಲಿ ಅನ್ವಯಿಸುವುದಿಲ್ಲವಾದುದರಿಂದಲೂ ‘ ಹಿಂದು ’ ಶಬ್ದಕ್ಕೆ ಪ್ರತಿಯಾಗಿ ‘ ಬ್ರಾಹ್ಮಣ ’ ಶಬ್ದವು ಬಳಸಲ್ಪಡಬೇಕೆಂದು ವಿವರಿಸಲ್ಪಟ್ಟಿರುವುದು. ಬ್ರಾಹ್ಮಣಧರ್ಮ-ಪೂನಾ ಓರಿಯಂಟಲಿಸ್ಟ್ ವಾಲ್ಯೂಂ 4 ನಂ. 2 ಪುಟಗಳು. 63-72
121-124 }

“ ಗುರುಗಳೇ ! ದ್ರುಪದರಾಯನ ಮಗನೂ ಗುರುಗಳ ಬುದ್ಧಿಶಾಲಿಯಾದ
ಶಿಷ್ಯನೂ ಆದ ಧೃಷ್ಟದ್ಯುಮ್ನನು ಸೇರಿಸಿರುವ ಪಾಂಡವರ
ಈ ದೊಡ್ಡ ಸೈನ್ಯವನ್ನು ನೋಡೋಣವಾಗಲಿ. ೧ ೩

ದುರ್ಯೋಧನನ ವಿಮರ್ಶೆ

ಈ ರಣರಂಗದಲ್ಲಿ ಭೀಮ ಮತ್ತು ಅರ್ಜುನ ಇವರಿಗೆ ಸಮಾನರಾದ ಶೂರರೂ,
ಬಿಲ್ಲುಗಾರರೂ ಈ ಪಾಂಡವರ ದಳದಲ್ಲಿರುತ್ತಾರೆ. ಮಹಾರಥಿಕರೆನಿಸಿದ ಸಾತ್ಯಕಿ,
ವಿರಾಟ ಮತ್ತು ದ್ರುಪದ; ವೀರರಾದ ಧೃಷ್ಟಕೇತು, ಚೇಕಿತಾನ ಮತ್ತು ಕಾಶೀ ೧ ೪
ರಾಜ; ನರಶ್ರೇಷ್ಠರಾದ–ಪುರುಜಿತು, ಕುಂತಿಭೋಜ ಮತ್ತು ಶೈಬ್ಯ; ವಿಕ್ರಮಶಾಲಿಗ ೫
ಗಳಾದ ಯುಧಾಮನ್ಯು, ವೀರನಾದ ಉತ್ತಮೌಜ, ಸುಭದ್ರೆಯ ಮಗ ಮತ್ತು
ದ್ರೌಪದಿಯ ಮಕ್ಕಳು ಐದುಜನ–ಇವರೆಲ್ಲರೂ ಮಹಾರಥಿಕರೇ. ಗುರುಗಳೇ ! ೧ ೬
ಕೌರವರ ಕಡೆಯಲ್ಲಿ ಮುಖ್ಯರಾಗಿರುವ ದಳಪತಿಗಳನ್ನು ಗೊತ್ತುಮಾಡಿಕೊಳ್ಳಬೇಕು ;
ಕೌರವಸೈನ್ಯದ ಪರಿಚಯಕ್ಕಾಗಿ ಅವರ ಹೆಸರುಗಳೆಲ್ಲವನ್ನೂ ಗುರುಗಳಲ್ಲಿ ಬಿನ್ನೈಸು
ತ್ತೇನೆ. ಗುರುವರ್ಯರು, ಭೀಷ್ಮ, ಕರ್ಣ, ಕೃಪ, ಸಮಿತಿಂಜಯ, ಅಶ್ವತ್ಥಾಮ, ೧ ೭
ವಿಕರ್ಣ ಮತ್ತು ಸೌಮದತ್ತಿ (ಭೂರಿಶ್ರವ)–ಮೊದಲಾದ ಅನೇಕ ಶೂರರು–೧ ೮
ಕೌರವಾದಿಗಳಿಗೋಸ್ಕರ ಅವರವರ ಬಾಳನ್ನೇ ತೊರೆದವರಾಗಿದಾರೆ. ಬಗೆಬಗೆಯ
ಅಸ್ತ್ರಗಳನ್ನು ಬಳಸುವವರಾಗಿಯೂ, ಎಲ್ಲರೂ ಯುದ್ಧಮಾಡುವುದರಲ್ಲಿ ತುಂಬಾ
ತಿಳಿವಳಿಕೆಯುಳ್ಳವರಾಗಿಯೂ ಇರುತ್ತಾರೆ. ಆದುದರಿಂದ ಭೀಷ್ಮರ ಕೈಕೆಳಗೆ ೧ ೯
ಇರುವ ಬಹುಸಂಖ್ಯಾಕವಾದ ಕೌರವಸೇನೆಯನ್ನು ಎದುರಿಸುವುದು ಕಷ್ಟ.
ಭೀಮನ ರಕ್ಷಣೆಗೆ ಒಳಪಟ್ಟ, ಕಡಿಮೆ ಸಂಖ್ಯೆಯ ಎದುರುಕಡೆಯ ಈ ಪಾಂಡವ
ಸೈನ್ಯವನ್ನು ಸೋಲಿಸಿಬಿಡಬಹುದು. ಎಲ್ಲಾ ಸಂದರ್ಭಗಳಲ್ಲಿಯೂ ರಂಗರಚನೆ ೧೦
ಯಲ್ಲಿ ಗೊತ್ತಾದ ಸ್ಥಳಗಳಲ್ಲಿ ನಿಂತಿರುವ ಎಲ್ಲರೂ ಭೀಷ್ಮನನ್ನು ಕಾಯಬೇಕಾಗಿ
ಪ್ರಾರ್ಥನೆ” ಎಂಬುದಾಗಿ ಅರಿಕೆಮಾಡಿದ ದುರ್ಯೋಧನನಿಗೆ ಸಂತೋಷವ ೧ ೧೧
ನ್ನುಂಟುಮಾಡುವವನಾಗಿ, ಕುರುವಂಶದವರಿಗೆ ಹಿರಿಯನಾಗಿ ಅಜ್ಜನೆನಿಸಿರುವ,
ಪ್ರತಾಪಶಾಲಿಯಾದ ಭೀಷ್ಮನು ಸಿಂಹದಂತೆ ಗರ್ಜಿಸಿ ಶಂಖವನ್ನು ಗಟ್ಟಿಯಾಗಿ
ಊದಿದನು. ೧ ೧೨

ಆ ಕೂಡಲೇ ಶಂಖಗಳೂ, ಭೇರಿಗಳೂ, ಪಣವ, ಆನಕ ಮತ್ತು ಗೋಮುಖ
ಗಳೆಂಬ ವಾದ್ಯಗಳೂ ಒಂದೇಕಾಲದಲ್ಲಿ ಹಠಾತ್ತಾಗಿ ಬಾರಿಸಲ್ಪಟ್ಟವು. ಹೀಗೆ
ಮೊಳಗಿದ ರಣವಾದ್ಯಗಳ ಶಬ್ದವು ಕೋಲಾಹಲವ
ನ್ನುಂಟುಮಾಡಿತು. ಈ ಸಂದರ್ಭದಲ್ಲಿ ಬೆಳ್ಳುದುರೆ ೧ ೧೩

ಯುದ್ಧಾರಂಭ

ಗಳನ್ನು ಕಟ್ಟಿರುವ ದೊಡ್ಡ ರಥದಲ್ಲಿ ಕುಳಿತುಕೊಂಡು ಸಾರಥಿಯಾದ ಶ್ರೀಕೃಷ್ಣನೂ
ಮತ್ತು ಬಿಲ್ಗಾರರಲ್ಲಿ ಮೇಲ್ಮೆ ಎನಿಸಿದ ಅರ್ಜುನನೂ ದೇವಾರ್ಹವಾದ ಶಂಖ

ಗಳನ್ನು ಅಂದರೆ—ಶ್ರೀಕೃಷ್ಣನು ಪಾಂಚಜನ್ಯವೆಂಬ ಶಂಖವನ್ನೂ ; ಅರ್ಜುನನು ದೇವದತ್ತವೆಂಬ ಶಂಖವನ್ನೂ ಊದಿದವರಾದರು. ೧ ೧೪

ನೋಡುವವರಿಗೆ ಅಂಜಿಕೆಯಾಗುವಂತೆ ಕೆಲಸಮಾಡುವ ಭೀಮನು ಪೌಂಡ್ರ
ವೆಂಬ ಅವನ ಶಂಖವನ್ನೂ ; ರಾಜನಾದ ಯುಧಿಷ್ಠಿರನು ಅನಂತವಿಜಯವೆಂಬ
ಶಂಖವನ್ನೂ ; ನಕುಲ ಸಹದೇವರು ಸುಘೋಷ ಮಣಿಪುಷ್ಪಕಗಳೆಂಬ ೧ ೧೫
ಅವರವರ ಶಂಖಗಳನ್ನೂ ಊದಿದರು. ಬಿಲ್ಲುಗಾರರಲ್ಲಿ ಶ್ರೇಷ್ಠನೆನಿಸಿದ ಕಾಶ್ಯನೂ ೧ ೧೬
ಮಹಾರಥನಾದ ಶಿಖಂಡಿಯೂ, ಧೃಷ್ಟದ್ಯುಮ್ನ, ವಿರಾಟ, ಇದಿರಾಳಿಯಿಂದ ಸೋಲಿ
ಸಲ್ಪಡದ ಸಾತ್ಯಕಿ, ದ್ರುಪದ, ದ್ರೌಪದಿಯ ಐವರು ಮಕ್ಕಳು, ಬಲಶಾಲಿ ೧ ೧೭
ಯಾದ ಅಭಿಮನ್ಯು-ಎಲ್ಲರೂ ಬೇರೆ ಬೇರೆ ಸ್ಥಾನಗಳಲ್ಲಿ ನಿಂತು ಅವರವರ ಶಂಖಗಳ
ನ್ನೂದಿದರು. ೧ ೧೮

ಪಾಂಡವದಳದ ಕಡೆಯಿಂದ ಹೊರಟ ಶಂಖನಾದವು ಕೌರವಾದಿಗಳ ಎದೆ
ಯನ್ನು ಬಿರಿಯಿಸಿತು. ಅಲ್ಲದೆ ಈ ಕೋಲಾಹಲವು ಭೂಮ್ಯಾಕಾಶಗಳನ್ನು ಪ್ರತಿ ೧ ೧೯
ಧ್ವನಿಯಿಂದ ತುಂಬಿಬಿಟ್ಟಿತು. ಇಷ್ಟಾದ ಬಳಿಕ ಆಯುಧಗಳು ಮೇಲೆ ಬೀಳಲು
ಮೊದಲಾದಾಗ ಕಪಿಧ್ವಜನಾದ ಅರ್ಜುನನು, ಯುದ್ಧಮಾಡಬೇಕೆಂದು ನಿರ್ಣಯಿ
ಸಿರುವ ಧೃತರಾಷ್ಟ್ರನ ಕಡೆಯವರಾದ ಕೌರವಾದಿಗಳನ್ನು ನೋಡಿ, ೧ ೨೦
ಧನುಸ್ಸನ್ನು ಎತ್ತಿ ಹಿಡಿದು ಶ್ರೀಕೃಷ್ಣನನ್ನು ಕುರಿತು ಹೀಗೆ ಹೇಳಿದನು:—೧ ೨೧

'ಕೃಷ್ಣ', ದುರ್ಬುದ್ಧಿಯಾದ ಕೌರವನಿಗೆ ಯುದ್ಧದಲ್ಲಿ ಹಿತವನ್ನುಂಟು
ಮಾಡಲಿಚ್ಛಿಸುವ, ಇಲ್ಲಿ ಸೇರಿ ಯುದ್ಧಮಾಡುವವರನ್ನೆಲ್ಲಾ ನೋಡಲು ಅನು
ಅಹಂಕಾರ, ಮೋಹ; ಕೂಲಿಸುವಂತೆಯೂ, ಈ ಯುದ್ಧಸಮಾರಂಭದಲ್ಲಿ ೧ ೨೩
ಮನಗೆಡುವ ಪರಿಣಾಮ ಯಾರೊಡನೆ ಯುದ್ಧ ಮಾಡಬೇಕೆಂದು ಗೊತ್ತುಮಾಡಿಕೊಳ್ಳು
ವುದಕ್ಕಾಗಿಯೂ, ಯುದ್ಧಾಭಿಲಾಷಿಗಳಾಗಿ ನಿಂತಿರುವವರನ್ನು ಚೆನ್ನಾಗಿ ನೋಡು
ವುದಕ್ಕಾಗಿಯೂ, ಪಾಂಡವರು ಮತ್ತು ಕೌರವರು-ಇವರ ಈ ಎರಡು ೧ ೨೨
ದಳಗಳ ನಡುವೆ ರಥವನ್ನು ನಿಲ್ಲಿಸಬೇಕು ಎಂದು ಅರ್ಜುನನು ಹೇಳಿದ ೧ ೨೧
ಮಾತುಗಳನ್ನು ಕೇಳಿ, ಶ್ರೀಕೃಷ್ಣನು ಆ ದಳಗಳೆರಡರ ನಡುವೆ ಭೀಷ್ಮ ದ್ರೋಣ
ಮತ್ತು ಇತರ ಮಹಾರಾಜರುಗಳ ಎದುರಿಗೆ ರಥವನ್ನು ನಿಲ್ಲಿಸಿ, 'ಇಲ್ಲಿ ೧ ೨೪
ಕೂಡಿರುವ ಕುರುವಂಶದ ಈ ಜನಗಳನ್ನೆಲ್ಲಾ ನೋಡು, ಅರ್ಜುನ,' ಎಂದು
ನುಡಿದನು. ಆಗ ಆ ಸೈನ್ಯಗಳೆರಡರಲ್ಲಿಯೂ ಸಹ ಯುದ್ಧಕ್ಕೆ ೧ ೨೫
ಸಿದ್ಧರಾಗಿ ನಿಂತಿರುವ ವಿದ್ಯಾಗುರುಗಳು, ಸೋದರಮಾವಂದಿರು, ಸಹೋದರರು
ಮೊಮ್ಮಕ್ಕಳು, ಗೆಳೆಯರು, ಹೆಣ್ಣುಕೊಟ್ಟಮಾವಂದಿರು ಮತ್ತು ಉಪಕಾರಿಗಳಾದ
ಸ್ನೇಹಿತರು, ಎಲ್ಲರನ್ನೂ ಅರ್ಜುನನು ನೋಡಿದನು. ೧ ೨೬

ಕ್ಷತ್ರಿಯವೀರನ ವಿರುದ್ಧ ಧರ್ಮ

ಕದನಮಾಡಲು ನಿಂತಿರುವ ನಂಟರಿಷ್ಟರನ್ನೆಲ್ಲಾ ಕಣ್ಣೆತ್ತಿ ನೋಡಿ ತುಂಬಾ ಮರುಕಗೊಂಡು ಕೊರಗುತ್ತಾ ಹೀಗೆ ಹೇಳಿದನು :—

‘ ಕೃಷ್ಣ ’, ಹೋರಾಡಬೇಕೆಂಬ ಇಚ್ಛೆಯಿಂದ ಇಲ್ಲಿ ನೆರೆದಿರುವ ನೆಂಟರು
ಮತ್ತು ಇಷ್ಟರು (ಗೆಳೆಯರು) ಇವರನ್ನು ಕಂಡು ಶರೀರದ ಅಂಗಗಳು ೧ ೨೮
ಸೊರಗಿಹೋಗುತ್ತಿವೆ. ಶರೀರದಲ್ಲಿ ‘ ಜುಮ್ ’ ಎಂದು ಒಂದು ವಿಧವಾದ ನಡುಕವುಂಟಾಗಿ ಕೂದಲುಗಳು ಎದ್ದು
ನಿಂತಿವೆ. ಗಾಂಡೀವ ಧನುಸ್ಸು ಕೈಯಿಂದ ಕೆಳಕ್ಕೆ ೧ ೨೯
ಜಾರುತ್ತಿದೆ; ಚರ್ಮವೆಲ್ಲಾ ಬೆಂದುಹೋಗುತ್ತಿದೆ; ನಿಲ್ಲು
ವುದಕ್ಕೆ ಶಕ್ತಿಯಿಲ್ಲ; ತಲೆಯು ತಿರುಗುತ್ತಿದೆ; ಮನಸ್ಸು ಅಲೆಯುತ್ತಿದೆ; ೧ ೩೦
ಅಯ್ಯೋ ! ಎಂತಹ ದೊಡ್ಡ ಪಾಪದ ಕೆಲಸವನ್ನು ಮಾಡಲು ನಿಶ್ಚೈಸಿದೆವು,- ಏಕೆಂದರೆ :—ರಾಜ್ಯದ ಸುಖದ ಆಸೆಗಾಗಿ ಬೇಕಾದ ಜನಗಳನ್ನೇ ಕೊಂದು
ಹಾಕಲು ಕೈಹಾಕಿರುವೆವಲ್ಲಾ ! ಅಹಹ ! ಈ ಸಂದರ್ಭದಲ್ಲಿ ಆಯುಧ ೧ ೪೫
ಗಳನ್ನು ಕೈಯಲ್ಲಿ ಹಿಡಿದು ಕೌರವಾದಿಗಳು ಆಯುಧವನ್ನು ಬಿಸುಟು ಎದುರಿಸ ದಿರುವ ಈ ಅರ್ಜುನನನ್ನು ಕೊಲ್ಲುವುದಾದರೆ ಬಹಳ ಒಳ್ಳೆಯದಾಗುವು
ದಲ್ಲವೆ !’’ ಎಂಬುದಾಗಿ ಯುದ್ಧವೇಳೆಯಲ್ಲಿ ಗೊಣಗುತ್ತಾ ಅರ್ಜುನನು ೧ ೪೬
ನೋವಿನಿಂದ ಕೂಡಿದ ಮನಸ್ಸುಳ್ಳವನಾಗಿ ರಥದೊಳಗೇನೇ ಬಾಣಸಮೇತವಾಗಿ
ಬಿಲ್ಲನ್ನು ಬಿಸುಟು ಕುಳಿತು ಬಿಟ್ಟನು. ೧ ೪೭

ಮೋಹವು ಅರ್ಜುನನ ಮನಸ್ಸನ್ನು ವ್ಯಾಪಿಸಿ ನಡೆಸುವ ಶಾರೀರಿಕ ವ್ಯಾಪಾರ

ಆಗ ಹಾಗೆ ಮರುಗಿದ, ಕಣ್ಣೀರಿನಿಂದ ತುಂಬಿ ಮಂಕಾದ ನೋಟವುಳ್ಳ ಮತ್ತು ಕಳವಳಗೊಂಡ ಅರ್ಜುನನಿಗೆ ಶ್ರೀಕೃಷ್ಣನು ಈ ಮಾತುಗಳನ್ನು

ಮರ್ಮೋದ್ಘಾಟನೆ

ಆಡಿದನು. “ ಕಿಲುಬಿನಂತಿರುವ ಈ ಮನಸ್ಸಿನ ೨ ೧
ಬೇಗೆಯು ಅವೇಳೆಯಲ್ಲಿ ಏತರಿಂದ (ಏಕೆ) ತಲೆದೋರಿತು, ಅರ್ಜುನ ; ಮನಸ್ಸಿನ ಈ ಬಗೆಯ ಕಲ್ಮಷವನ್ನು ಸತ್ಪುರುಷರು ಆದರಿಸತಕ್ಕು ದಲ್ಲ; ಇದು ಒಳ್ಳೆಯ ಫಲವನ್ನು ಕೊಡತಕ್ಕದ್ದೂ ಅಲ್ಲ; ಅಲ್ಲದೆ ಕೆಟ್ಟಹೆಸರನ್ನು
ತರತಕ್ಕದ್ದಾಗಿದೆ, ಅರ್ಜುನ;.’’ ೨ ೨

“ ಕೊಲ್ಲುವ ಮತ್ತು ಕೊಲ್ಲಲ್ಪಡುವ ವಿಷಯವನ್ನು ವಿಮರ್ಶೆಮಾಡಿದರೆ, ಹುಟ್ಟುಸಾವುಗಳಿಲ್ಲದ, ನಿತ್ಯನೂ ಪುರಾಣನೂ ಆದ ‘ ನಾನು ’*—ಯಾವಾಗಲೂ

ಸಂಸಾರದ ತತ್ತ್ವ

ಹುಟ್ಟುವುದಿಲ್ಲ; ಸಾಯುವುದೂ ಇಲ್ಲ; ಹಿಂದೆ ಇದ್ದವ ನೆಂತಲೂ ಅಲ್ಲ; ತಿರುಗಿ ಮುಂದೆ ಆಗುವವನೂ ಅಲ್ಲ; ಈ

---

* ಶಬ್ದಾರ್ಥಪರಿಚಯ ನೋಡಿ.

ಶರೀರವು ಕೊಲ್ಲಲ್ಪಟ್ಟಾಗ 'ನಾನು' ವು ಕೊಲ್ಲಲ್ಪಡುವುದಿಲ್ಲ. ನಾನುವನ್ನು ೨ ೨೦
ಶಸ್ತ್ರಗಳು ಕತ್ತರಿಸಲಾರವು ; ನಾನುವನ್ನು ನೀರೂ ಸಹ ನೆನೆಯಿಸಲಾರದು; ಗಾಳಿ
ಯೂ ಕೂಡ ನಾನುವನ್ನು ಒಣಗಿಸಲಾರದು. ಹುಟ್ಟಿದವುಗಳೆಲ್ಲಾ ಸಾಯುವು ೨ ೨೩
ದೇನೋ ಖಂಡಿತ; ಸತ್ತದ್ದು ಹುಟ್ಟುವುದೂ ಖಂಡಿತ. ಹೇಗೂ, ಪರಿಹಾರವೇ
ಇಲ್ಲದಿರುವ ಈ ಹುಟ್ಟು ಸಾವುಗಳ ವಿಷಯದಲ್ಲಿ ವ್ಯಸನಪಡಲೇ ಕೂಡದು. ೨ ೨೭

ಅರ್ಜುನ,—ಪ್ರಪಂಚದಮೇಲೆ ಯಂತ್ರದಂತಿರುವ ದೇಹಾದಿಗಳನ್ನು ಹೊಂದಿದ ಸಮಸ್ತ ವಸ್ತುಗಳನ್ನೂ ಮಾಯಾಶಕ್ತಿಯಿಂದ ಕೆಲಸ ಮಾಡುವಂತೆ

ಧರ್ಮಾಚರಣೆ

ಪ್ರೇರಿಸುತ್ತಾ ಆಯಾ ವಸ್ತುಗಳ ಮುಖ್ಯವಾದ ಅಂಗದಲ್ಲಿ
ನೆಲೆಸಿರುವವನು 'ನಾನು'. ಸರ್ವವಿಧವಾದ ಮನೋ ೧೮ ೬೧
ವರ್ತನೆಗಳಿಂದ ನಾನುವನ್ನೇ ಮರೆಹೋಗಬೇಕು. ನಾನುವಿನ ಒಲುಮೆಯಿಂದ
ಶ್ರೇಷ್ಠವಾದ ಶಾಂತಿ ಮತ್ತು ಶಾಶ್ವತವಾದ ನಾನುಪದವಿಗಳನ್ನು ಹೊಂದ
ಬಹುದು. ಪ್ರಾಣಿಗಳಿಗೆ ಕೆಲಸ ಮಾಡತೊಡಗುವಿಕೆಯು ಯಾವ ನಾನು ೧೮ ೬೨
ವಿನಿಂದ ಉಂಟಾಗುವುದೋ, ಈ ಪ್ರಪಂಚವನ್ನೆಲ್ಲಾ ಯಾವ 'ನಾನು' ತುಂಬಿ
ಹರಡಿಕೊಂಡಿರುವುದೋ ಆ ನಾನುವನ್ನು, ನಾನುವಿನ ಆಯಾ ಕೆಲಸದಿಂದ ಪೂಜಿಸಿ
ಮನುಷ್ಯನು ಸಿದ್ಧಿಯನ್ನು ಹೊಂದುತ್ತಾನೆ. ನಾನುವಿನ ಆಯಾ ಕೆಲಸ ೧೮ ೪೬
ಗಳನ್ನು ಮನಸ್ಸಿಟ್ಟು ಮಾಡುವ ಮನುಷ್ಯನು ಒಳ್ಳೆಯ ಸಿದ್ಧಿಯನ್ನು ಪಡೆಯು
ತ್ತಾನೆ. ೧೮ ೪೫

ಕ್ಷತ್ರಿಯ ಬ್ರಾಹ್ಮಣನಿಗೆ ಧರ್ಮಸಮ್ಮತವಾದ ಯುದ್ಧಕ್ಕಿಂತ ಶ್ರೇಯಸ್ಕರವಾದ
ಬೇರೆ ಕೆಲಸವು ಯಾವುದೂ ಇರುವುದಿಲ್ಲ. ಅದಾಗಿಯೇ ಒದಗಿದ ಮತ್ತು ೨ ೩೧
ಸುಖದ ಬಾಗಿಲನ್ನು ತೆಗೆಯುವ ಈ ವಿಧವಾದ, ಧರ್ಮಕ್ಕೋಸ್ಕರ ಮಾಡುವ
ಯುದ್ಧವು, ಸುಖಿಗಳಾದ ಅಥವಾ ಸುಖವನ್ನು ಹೊಂದುವ ಕ್ಷತ್ರಿಯ ಬ್ರಾಹ್ಮಣರಿಗೆ
ದೊರೆಯುವುದು. ಶಾಸ್ತ್ರಗಳಲ್ಲಿ ಹೇಳಿರುವ ನಿಯಮಾದಿಗಳನ್ನೂ ಕರ್ತವ್ಯ ೨ ೩೨
ಗಳನ್ನೂ ತೊರೆದು, ಮನಸ್ಸಿಗೆ (ಇಚ್ಛೆಗೆ) ಬಂದಂತೆ ನಡೆಯುವವನಿಗೆ ಕೆಲಸದ

ಶಾಸ್ತ್ರಗಳ ಮೇಲ್ಮೆ

ಸಿದ್ಧಿಯೂ ದೊರೆಯುವುದಿಲ್ಲ ; ಸುಖವೂ ಇರುವುದಿಲ್ಲ ಮತ್ತು
ಉತ್ತಮ ಸ್ಥಿತಿಯು ಇಲ್ಲವೇ ಇಲ್ಲ. (ಆದುದರಿಂದ) ೧೬ ೨೩
ಜ್ಞಾನಿಗಳು ಬರೆದಿರುವ ಅನುಭವ ವಿಷಯಗಳಿಂದ ತುಂಬಿದ ಶಾಸ್ತ್ರಗಳೇ-ಕೆಲಸ
ಗಳನ್ನು ಕೈಕೊಂಡು ಮಾಡುವ ಅಥವಾ ಮಾಡದೆ ಬಿಡುವ ನಿರ್ಣಯದ ವಿಚಾರ
ದಲ್ಲಿ ಪ್ರಮಾಣವು. ಶಾಸ್ತ್ರಗಳಲ್ಲಿ ವಿಧಿಸಿ ಹೇಳಿರುವ ಕೆಲಸಗಳನ್ನು ತಿಳಿದು
ಕೆಲಸಗಳನ್ನು ಮಾಡಲು ತೊಡಗುವುದುದೊಳ್ಳೆಯದು. ಈ ಲೋಕದಲ್ಲಿ ೧೬ ೨೪
ಜ್ಞಾನಕ್ಕೆ ಸಮಾನವಾಗಿ-ಶ್ರೇಷ್ಠವಾದುದೂ, ಶುದ್ಧಿಗೊಳಿಸುವುದೂ, ಆದ ಬೇರೆ

ಯಾವುದೂ ಇಲ್ಲ-ಎಂದು ಹೇಳಲ್ಪಟ್ಟಿದೆ. ಶ್ರದ್ಧೆಯುಳ್ಳವನೂ, ಜ್ಞಾನದ ೪ ೩೮
ಮೇಲೆ ಆಸಕ್ತಿಯುಳ್ಳವನೂ, ಇಂದ್ರಿಯಗಳನ್ನು ಬಿಗಿ ಹಿಡಿದವನೂ ಜ್ಞಾನವನ್ನು
ಹೊಂದುತ್ತಾನೆ. ೪ ೩೯

ಸ್ವಧರ್ಮವೇ ಪರಮ ಶ್ರೇಷ್ಠ

ಸ್ವಧರ್ಮದಲ್ಲಿ ಗುಣ ಅಥವ ಮಹಿಮೆ ಇಲ್ಲವೆಂದು ತೋರಿಬಂದರೂ ಇತ
ರರು ಆಚರಿಸಬೇಕಾಗಿರುವುದನ್ನು ಆಚರಿಸಬಹುದಾದ ಪರ
ಧರ್ಮಕ್ಕಿಂತಲೂ ಸ್ವಧರ್ಮ (ಅವನವನ ಧರ್ಮ)ವೇ ಶ್ರೇಯ
ಸ್ಸನ್ನುಂಟುಮಾಡುವುದು. ಅವರವರು ಆಚರಿಸುವ ಧರ್ಮದಿಂದ
ಬೇರೆಯಾಗಿರುವ ಆಚಾರ ನಡಾವಳಿಯು ಅದನ್ನು ಅನುಸರಿಸುವ ಸ್ವಧರ್ಮಾನು
ಯಾಯಿಗಳಿಗೆ ಭಯ ಅಂದರೆ ಕೇಡನ್ನೇ ಉಂಟುಮಾಡುವುದಾದುದರಿಂದ
ಸ್ವಧರ್ಮದಲ್ಲೇ ಇದ್ದುಕೊಂಡು ಪ್ರಾಣ ಬಿಡುವುದಾದರೂ ಬಹುಲೇಸು. ೩ ೩೫

ಪರಬ್ರಹ್ಮ

ಎಲ್ಲಾ ಚರಾಚರ ವಸ್ತುಗಳ ಮುಖ್ಯವಾದ ಅಂಗದಲ್ಲಿ ನೆಲೆಸಿರುವ ಆತ್ಮ-
ಬ್ರಹ್ಮ-ವೇ ನಾನು. ಪ್ರಾಣಿಗಳಿಗೆಲ್ಲಾ ಮೊದಲು ನಡು ಮತ್ತು ಕೊನೆ-(ಉತ್ಪತ್ತಿ
ಸ್ಥಿತಿ ಮತ್ತು ಲಯ) ಯೆಲ್ಲವೂ ನಾನು. ಸಾವಿಲ್ಲದ, ಅಳಿವಿಲ್ಲದ
ಶಾಶ್ವತವಾದ, ಧರ್ಮವೆನಿಸಿದ ಮತ್ತು ಅತ್ಯಂತ ೧೦ ೨೦
ಸುಖವೆನಿಸಿದ ಬ್ರಹ್ಮನ ಸ್ಥಾನವು ನಾನು. ಪರಬ್ರಹ್ಮನಾದ ನಾನು ೧೪ ೨೭
ಮೊದಲಿಲ್ಲದುದು ; ಇರುವುದು ಎಂಬ 'ಸತ್' ಮತ್ತು ಇಲ್ಲದಿರುವುದು ಎಂಬ
'ಅಸತ್' ಇವೆರಡೂ ಸಹ ಅನ್ವಯವಾಗಿಯೂ ಆನ್ವಯವಾಗದೆಯೂ, ವಿವರಣೆಗೆ
ನಿಲುಕದೆ ಅನಿರ್ವಚನೀಯವಾಗಿರುವುದು. ಎಲ್ಲೆಡೆಯಲ್ಲಿಯೂ ಕೈಕಾಲು ೧೩ ೧೨
ಗಳುಳ್ಳುದು ; ಎಲ್ಲೆಡೆಯಲ್ಲಿಯೂ ಕಣ್ಣುಗಳು ; ತಲೆಗಳು ; ಮುಖಗಳು ; ಎಲ್ಲೆಡೆ
ಯಲ್ಲಿಯೂ ಕಿವಿಗಳುಳ್ಳುದ್ದು. ಲೋಕದಲ್ಲಿ ಎಲ್ಲವನ್ನೂ ಬಳಸಿ ಕವಿದು ೧೩ ೧೩
ತುಂಬಿಕೊಂಡಿರುವುದು. 'ಓಮ್' 'ತತ್' 'ಸತ್' ಎಂಬದಾಗಿ ನಾನುವಿನ

ಪರಬ್ರಹ್ಮವಾಣಿ

ಕುರುಹು ಮೂರು ಬಗೆಯೆಂದು ಗೊತ್ತಾಗಿದೆ. ವೇದಗಳು,
ಯಜ್ಞಗಳು ಮತ್ತು ವೇದಾದಿಗಳಿಂದ ಅರಿವನ್ನು ಹೊಂದಿ
ಯಜ್ಞಗಳನ್ನು ಮಾಡುವ ಬ್ರಾಹ್ಮಣಧರ್ಮಾನುಯಾಯಿಗಳು, ಇವೆಲ್ಲವೂ
ಮೇಲಿನ ಮೂರು ಬಗೆಯ ಕುರುಹಿನಿಂದ ಮೊದಲೇ ಕ್ರಮಪಡಿಸಲ್ಪಟ್ಟಿವೆ ೧೭ ೨೩

ಭಕ್ತಿ ಸಾಧನ

ಯಾವನಲ್ಲಿ ಸಮಸ್ತ ಚರಾಚರವಸ್ತುಗಳೂ ಅಂತರ್ಗತವಾಗಿವೆಯೋ, ಯಾವ
ವಸ್ತುವಿನಿಂದ ಇದೆಲ್ಲವೂ ತುಂಬಿ ಹರಡಲ್ಪಟ್ಟಿದೆಯೋ ಆ ಶ್ರೇಷ್ಠನಾದ, ಪುರುಷ
ನೆಂದು ಕರೆಯಲ್ಪಡುವ ನಾನುವು ಅತ್ತಿತ್ತ ಕದಲದ ಭಕ್ತಿ
ಯಿಂದ ದೊರೆಯಲ್ಪಡತಕ್ಕವನು. ನೋವನ್ನು ಹೊಂದಿ ೮ ೨೨
ರುವವನು ; ನಾನುವನ್ನು ತಿಳಿಯಲು ಇಚ್ಛೆಯುಳ್ಳವನು ; ಪುರುಷಾರ್ಥಗಳನ್ನು
ಪಡೆಯಬೇಕೆನ್ನುವವನು ಮತ್ತು ನಾನುವನ್ನು ತಿಳಿದವನು-ಎಂಬ ನಾಲ್ಕು ಬಗೆಯ
ಒಳ್ಳೆಯ ಕೆಲಸಗಳನ್ನು ಮಾಡುವ ಜನಗಳು (ಪರಮಪುರುಷನಾದ) ೭ ೧೬

ನಾನುವನ್ನು ಸೇವಿಸುತ್ತಾರೆ. ಇವರಲ್ಲಿ ಸದಾ ನಾನುವಿನಲ್ಲಿ ಮನಸ್ಸಿಟ್ಟು 'ಸ್ವಸ್ವರೂಪಾನುಸಂಧಾನ' ವೆಂಬ ಭಕ್ತಿಯನ್ನೇ ಮುಖ್ಯವಾಗಿ ಹೊಂದಿದ ಅರಿವುಳ್ಳಾತನೇ ಉಳಿದವರಿಗಿಂತಲೂ ಶ್ರೇಷ್ಠನು. ಜ್ಞಾನಿಯಾದವನಿಗೆ 'ನಾನು' ವೇ ಇಷ್ಟವಾಗಿರುವ ವಸ್ತು; ನಾನುವಿಗೂ ಜ್ಞಾನಿಯೇ ಬೇಕಾದವನು. ಬೇರೇ ಕಡೆ ೭ ೧೭
ಎಲ್ಲಿಯೂ ಮನಸ್ಸನ್ನಿಡದೆ, ನಾನುವನ್ನೇ ಧ್ಯಾನ ಮಾಡುತ್ತಾ (ಅನುಸಂಧಾನ ಮಾಡುತ್ತಾ) ಸೇವಿಸುವ ಮತ್ತು ಎಡೆಬಿಡದೆ ನಾನುವಿನಲ್ಲೇ ಸೇರಿಕೊಂಡಿರುವ ಭಕ್ತರು ಜೀವನ ಯಾತ್ರೆಗೆ ಹೊಂದಬೇಕಾಗಿರುವ ವಸ್ತುಗಳನ್ನೂ ಮತ್ತು ಆತ್ಮಜ್ಞಾನವನ್ನೂ ಹೊಂದಿಸುವ ಕೆಲಸವನ್ನೂ ಮತ್ತು ಜೀವನಯಾತ್ರೆಗೆ ಹೊಂದಿದ

ಆರಾಧಕರ ಯೋಗಕ್ಷೇಮ

ವಸ್ತುಗಳನ್ನೂ ಮತ್ತು ಪಡೆದ ಆತ್ಮ ಜ್ಞಾನವನ್ನೂ ಕಾಪಾಡಿ ಊರ್ಜಿತ ಪಡಿಸುವ ಕೆಲಸವನ್ನೂ ವಹಿಸಿಕೊಳ್ಳುವವನು ನಾನುವು. ೯ ೨೨

ಸಂನ್ಯಾಸಿಯೇ ಯೋಗಿ ಅಥವಾ ಯೋಗಿಯೇ ಸಂನ್ಯಾಸಿ

ಕೆಲಸದ ಫಲವನ್ನು ಉದ್ದೇಶಿಸದೆ ಮಾಡಬೇಕಾದ ಕೆಲಸವನ್ನು ಮಾಡುವವನು ಕೆಲಸಗಳನ್ನು ಒತ್ತಟ್ಟಿಗಿಟ್ಟ 'ಸಂನ್ಯಾಸಿಯೆಂದೂ; ಕೆಲಸಗಳನ್ನು ಮಾಡುವ "ಯೋಗಿ"ಯೆಂದೂ ಹೇಳಲ್ಪಡುವನು. ಕೆಲಸಗಳಿಗೆ ಆಧಾರವಾದ ಬೆಂಕಿಯೇ (ಅಗ್ನಿಯೇ) ಮೊದಲಾದುವುಗಳನ್ನು ತೊರೆದವನೂ ಕೆಲಸಗಳನ್ನು ಮಾಡದೇನೆ ಇರುವವನೂ ಮಾತ್ರ ಸಂನ್ಯಾಸಿ ಅಥವಾ ಯೋಗಿ ಎಂದು ಹೇಳಬೇಕಾಗಿಲ್ಲ. ಯಾರು ೬ ೧
ಸಮಸ್ತವಿಧವಾದ ಕೆಲಸಗಳನ್ನೂ ನಾನುವಿನಲ್ಲಿ ಒತ್ತಟ್ಟಿಗೆ ಇಟ್ಟು, ನಾನುವಿನಲ್ಲಿ ಆಸಕ್ತರಾಗಿ ಎಡೆಬಿಡದ ಯೋಗಮಾರ್ಗದಲ್ಲಿ ನಾನುವನ್ನು ಧ್ಯಾನಮಾಡುತ್ತಾ ಸೇವಿಸುತ್ತಾರೆಯೋ ಅವರನ್ನು ಮೃತ್ಯುರೂಪವಾದ ಸಂಸಾರಸಾಗರದಿಂದ ೧೨ ೬
ಮೇಲಕ್ಕೆತ್ತಿ ಉದ್ಧಾರ ಮಾಡುವವನು ನಾನು. ಯಾರ ಮನಸ್ಸು ಸಮಸ್ಥಿತಿ ೧೨ ೭
ಯಲ್ಲಿರುವುದೋ ಅವರು ಈ ಲೋಕದಲ್ಲಿಯೇ ಸಂಸಾರವನ್ನು ಗೆದ್ದವರೆನಿಸುವರು.

ಯೋಗದ ಮುಖ್ಯ ತತ್ತ್ವ

ಬ್ರಹ್ಮವು ದೋಷವಿಲ್ಲದುದಾಗಿ 'ಸಮ' ವೆಂದು ಹೇಳಲ್ಪಡುವುದರಿಂದ ಸಮಸ್ಥಿತಿಯಲ್ಲಿ ಮನಸ್ಸನ್ನಿಟ್ಟಿರುವವರು, ಬ್ರಹ್ಮನಲ್ಲಿಯೇ ಇದ್ದವರಾಗುತ್ತಾರೆ. ಗೌರವಭ್ರಾಂತಿಗಳನ್ನು ೫ ೧೯
ಬಿಟ್ಟವರೂ, ಕೆಲಸ ಮತ್ತು ಕೆಲಸದ ಫಲ ಇವುಗಳೊಡನೆ ಬೆರೆಯುವಿಕೆ ಎಂಬ ದೋಷವನ್ನು ಗೆದ್ದವರೂ (ದೂರಮಾಡಿರುವವರೂ) ಸದಾ ನಾನುವಿನ ವಿಷಯದಲ್ಲಿ ಮನಸ್ಸುಳ್ಳವರೂ, ಬಯಕೆಗಳಿಲ್ಲದವರೂ ಸುಖದುಃಖಾನುಭವಗಳೇ ಮೊದಲಾದ ಜೋಡಿಜೋಡಿಯಾದ ಅನುಭವಗಳಿಂದ ಬಿಡಲ್ಪಟ್ಟವರೂ ಮತ್ತು ಭ್ರಾಂತಿಯಿಲ್ಲದವರೂ ನಾನುವಿನ ಅಳಿವಿಲ್ಲದ ಸ್ಥಾನವನ್ನು ಪಡೆಯುತ್ತಾರೆ. ೧೫ ೫
ಎಂಬದಾಗಿ ಶ್ರೀಕೃಷ್ಣನು ಅರ್ಜುನನಿಗೆ ತತ್ತ್ವೋಪದೇಶಗಳನ್ನು ಮಾಡಿ,

ವಿಶ್ವರೂಪವೇ ಪ್ರಪಂಚದ ವ್ಯವಹಾರ

ನೂರಾರು ಸಹಸ್ರಾರು ಬಗೆಯಾದ, ಅನೇಕವಿಧಗಳಾದ ದಿವ್ಯಗಳಾದ ಬಗೆಬಗೆಯ
ಆಕಾರಗಳೂ ಬಣ್ಣಗಳೂ ಉಳ್ಳ ನಾನುವಿನ ನಾಮರೂಪ
ಗಳನ್ನು ನೋಡೆಂದು ಹೇಳಿ, ಯೋಗೇಶ್ವರ ಶ್ರೇಷ್ಠ ೧೧ ೫
ನಾದ ಶ್ರೀಕೃಷ್ಣನು ಅತ್ಯುತ್ಕೃಷ್ಟವಾದ ಭಗವಂತನ
ಐಶ್ವರ್ಯ ಮತ್ತು ಮಹಿಮೆಗಳನ್ನು ವ್ಯಕ್ತಪಡಿಸುವ ವಿಶ್ವರೂಪವನ್ನು ಅರ್ಜುನನಿಗೆ
ಕರುಣಿಸಿ ತೋರಿಸಿದನು. ೧೧ ೯

"ಪ್ರಪಂಚವು ಅಳಿಯುವಂತೆ* ಮಾಡಲು ವೃದ್ಧಿಯನ್ನು ಹೊಂದಿದ
ಮೃತ್ಯುವು ನಾನು; ಲೋಕಗಳನ್ನೆಲ್ಲಾ ಇಲ್ಲಿ ಒಂದುಗೂಡಿಸಲು ತೊಡ
ಗಿರುವವನು ನಾನು; ಎದುರಾಳಿಗಳನ್ನು ಕೊಲ್ಲುವ ಅರ್ಜುನನಂತಹ
ವೀರರು ಇಲ್ಲದಿದ್ದಾಗ್ಯೂ ಕುರುಕ್ಷೇತ್ರದ ರಣರಂಗದಲ್ಲಿ ಯುದ್ಧಕ್ಕಾಗಿ ಕೂಡಿ
ರುವ ದಳಗಳ ಯೋಧರು ಯಾರೂ ಉಳಿಯುವ ಹಾಗಿಲ್ಲ. ೧೧ ೩೨
ಆದುದರಿಂದ ಕ್ಷತ್ರಿಯನಾದವನು ಉಚಿತವಾದ ಯುದ್ಧವನ್ನು ಮಾಡಲು
ಸಿದ್ಧನಾಗಬೇಕು. ಹಗೆಗಳನ್ನು ಗೆದ್ದು ಹೆಸರುವಾಸಿಯನ್ನು ಪಡೆಯಬೇಕು.
ನ್ಯಾಯಸಮ್ಮತವಾಗಿ ಹಕ್ಕನ್ನು ಹೊಂದಿರುವ ಭೋಗಭಾಗ್ಯಗಳಿಂದ ತುಂಬಿದ
ರಾಜ್ಯವನ್ನು ಅನುಭವಿಸಬೇಕು. ಕುರುಕ್ಷೇತ್ರದ ಯುದ್ಧಭೂಮಿಯಲ್ಲಿ ಸೇರಿರುವ
ಯುದ್ಧ ವೀರರೆಲ್ಲರೂ ನಾನುವಿನ ಅಧಿವಾಸದಿಂದ ಮೊದಲೇ ಬಿಡಲ್ಪಟ್ಟ ಶರೀರ
ವುಳ್ಳವರಾಗಿದ್ದು ಅರ್ಜುನನು ನೆಪಮಾತ್ರಕ್ಕೆ ಮಾತ್ರ ಅವರ ಅಳಿವಿಗೆ ಕಾರಣ
ನಾಗಬೇಕೆಂದು ಶ್ರೀ ಕೃಷ್ಣನು ಎಚ್ಚರಿಸಿದನು. ಮತ್ತು ನಾನುವಿನ ಅಧಿವಾಸ
ದಿಂದ ಬಿಡಲ್ಪಟ್ಟ ಶರೀರವುಳ್ಳ§ ದ್ರೋಣ, ಭೀಷ್ಮ, ಜಯದ್ರಥ, ೧೧ ೩೩
ಕರ್ಣ ಮತ್ತು ಇತರ ವೀರ ಭಟರನ್ನು ತಳ್ಳಿಹಾಕಬೇಕೆಂದೂ, ಮನಸ್ಸಿನಲ್ಲಿ
ಚಿಂತೆಯಿರಕೂಡದೆಂದೂ ಮತ್ತು ಯುದ್ಧದಲ್ಲಿ ಅರಿಗಳನ್ನು ಗೆಲ್ಲಬಹುದೆಂದೂ"
ಹೇಳಿ, ಅರ್ಜುನನ್ನು ಪ್ರೋತ್ಸಾಹಿಸಿದನು. ೧೧ ೩೪

ವಿಶ್ವರೂಪವನ್ನು ತೋರಿಸುತ್ತಾ ಈ ರೀತಿ ಹೇಳಿದ ಶ್ರೀ ಕೃಷ್ಣನ
ಮಾತುಗಳನ್ನು ಕೇಳಿ–ಅರ್ಜುನನು ನಡುಗುತ್ತಾ ಕೈಗಳನ್ನು ಜೋಡಿಸಿ ೧೧ ೩೫
ಆಶ್ಚರ್ಯದಿಂದ ಕೂಡಿ ಕೃಷ್ಣನಿಗೆ ತಲೆ ಬಾಗಿ ಬಗಸೆಯನ್ನು ಒಡ್ಡಿಕೊಂಡು ಹೇಳ
ತೊಡಗಿದನು. ಮತ್ತು ವಿಶ್ವರೂಪ ನಾನುವಿಗೆ ನಮಸ್ಕಾರ ಮಾಡಿ, ೧೧ ೧೪
ಅಂಜುತ್ತಾ ಅಂಜುತ್ತಾ ಮತ್ತೆ ಮತ್ತೆ ನಮಸ್ಕಾರ ಮಾಡಿ, ಮಾತಾಡಲು ೧೧ ೩೫

---

* ಪರಶುರಾಮಾವತಾರದ ರಹಸ್ಯ

§ ಗಳಿತವಾದ ಅಥವಾ ದೂಷ್ಯವಾದ ಶರೀರಗಳು ನಾನುವಿನಿಂದ ದೂರವಾಗುವಿಕೆ.

ತೊಡಗಿದನು. ಹಿಂದೆ ಎಂದೂ ಕಾಣದುದನ್ನು ಈಗ ನೋಡಿ ಅರ್ಜುನನಿಗೆ
ಸಂತೋಷವುಂಟಾಯಿತು. ಮನಸ್ಸು ಮಾತ್ರ ಒಂದು ವಿಧವಾದ ಭಕ್ತಿಯ
ಹೆದರಿಕೆಯಿಂದ ಅಳುಕಿತು. ಜಗತ್ತೇ ವಾಸಸ್ಥಾನವಾದ ನಾನುವಿನ ಈ ವಿಶ್ವ
ನಾಮ ರೂಪಗಳನ್ನು ಬಿಟ್ಟು ಮೊದಲಿನ ಸೌಮ್ಯವಾದ ಶ್ರೀ ಕೃಷ್ಣನ ರೂಪವನ್ನು
ತೋರಿಸಬೇಕೆಂದು ಬೇಡಿಕೊಂಡನು. ಆಗ ಶ್ರೀ ಕೃಷ್ಣನು 'ಹೆದರ ೧೧ ೪೮
ಬೇಕಾದುದಿಲ್ಲ;' ಚಿಂತಿಸಬೇಕಾದುದೂ ಇಲ್ಲ; ನಾನುವಿನ, ಈ ಭಯವನ್ನು
ಅಂದರೆ ಮನಸ್ಸಿನ ಅಲ್ಲೋಲಕಲ್ಲೋಲವಾಗುವಿಕೆಯನ್ನು ಉಂಟುಮಾಡುವ
ವಿಶ್ವರೂಪವನ್ನು ನೋಡಿ, ಭ್ರಾಂತಿಭಾವನೆಯನ್ನು ಇಟ್ಟುಕೊಳ್ಳಬಾರದು;
ಅಂಜಿಕೆಯನ್ನು ಅಂದರೆ ಮನಸ್ಸಿನ ಅಸಮಾಧಾನದ ಬದಲಾವಣೆಯನ್ನು ತೊಲ
ಗಿಸಿ, ಸಂತೋಷವುಳ್ಳವನಾಗಿ ನಾನುವಿನ ಶ್ರೀಕೃಷ್ಣಾಕಾರವನ್ನೇ ಚೆನ್ನಾಗಿ
ನೋಡಬಹುದೆಂದು ಅರ್ಜುನನಿಗೆ ಹೇಳಿದನು. ವಾಸುದೇವನು ಈ ೧೧ ೪೯
ರೀತಿ ಸಮಾಧಾನವನ್ನು ಹೇಳಿ ಶ್ರೀಕೃಷ್ಣನ ಸಾಮಾನ್ಯ ರೂಪವನ್ನೇ ನೋಡು
ವಂತೆ ಮಾಡಿದನು. ತಲ್ಲಣಿಸಿದ ಮನಸ್ಸುಳ್ಳ ಅರ್ಜುನನನ್ನು ಸೌಮ್ಯಶರೀರ
ವುಳ್ಳ ಮಹಾತ್ಮನಾದ ಶ್ರೀ ಕೃಷ್ಣನು ಸಮಾಧಾನಪಡಿಸಿದನು. ೧೧ ೫೦
"ಅರ್ಜುನನು ನೋಡಿದ ನಾನುವಿನ ವಿಶ್ವರೂಪವನ್ನು ನೋಡಲು ಬಲು ಕಷ್ಟವು.
ಈ ಬಗೆಯ ವಿಶ್ವರೂಪವನ್ನು ನೋಡಬೇಕೆಂದು ದೇವತೆಗಳೂ ಸಹ ಸದಾ
ಅಪೇಕ್ಷಿಸುತ್ತಲೇ ಇರುವರು. ಅರ್ಜುನನು ನೋಡಿದಂತೆ, ವಿಶ್ವರೂಪ ೧೧ ೫೨
ದರ್ಶನವು ವೇದಾಧ್ಯಯನವ್ಯಾಸಂಗಿಗಳಿಗೆ ಸುಲಭವಲ್ಲ. ಬರೀ ತಪಸ್ಸು
ಮಾಡಿದರೂ ದೊರೆಯದು, ಕೊಡಿಗೆಯ ಕೆಲಸದಿಂದಲೂ ಸಿಗುವುದಿಲ್ಲ. ಮತ್ತು
ಯಜ್ಞ ಕೆಲಸಗಳಿಂದಲೂ ಸಾಧ್ಯವಾಗುವುದಿಲ್ಲ. ಆದರೆ, ನಿರಾಕಾರನೂ, ೧೧ ೫೩
ಮಾಯಿಯಾಗಿ ವಿಶ್ವರೂಪಧಾರಿಯೂ ಆದ ನಾನುವನ್ನು ನೋಡಲು, ತಿಳಿ
ಯಲು ಮತ್ತು ಭೇದಜ್ಞಾನವನ್ನು ಬಿಟ್ಟು ನಾನುವಿನ ಅಪರೋಕ್ಷಾನುಭವ
ಮಾಡಿಕೊಳ್ಳಲು, ಅತ್ತಿತ್ತ ಅಲುಗದೆ ನಾನುವೊಂದರಲ್ಲಿಯೇ ಸ್ವಸ್ವರೂಪಾನು
ಸಂಧಾನವೆಂಬ ಭಕ್ತಿಯಿಂದ ಮಾತ್ರ ಸಾಧ್ಯವಾಗುವುದು. ನಾನು ೧೧ ೫೪
ವಿಗೋಸ್ಕರವೇ ಕೆಲಸ ಮಾಡುವವನೂ, ನಾನುವೇ ಪರಮಶ್ರೇಷ್ಠವೆಂದು
ಭಾವಿಸುವವನೂ, ಕೆಲಸದ ಮತ್ತು ಅದರ ಫಲಗಳ ಸೋಂಕನ್ನು ದೂರಮಾಡಿರು
ವವನೂ ಮತ್ತು ಸಮಸ್ತ ಪ್ರಾಣಿಗಳ ವಿಷಯದಲ್ಲಿ ಹಗೆತನವಿಲ್ಲದವನೂ ಆದ
ನಾನುವಿನ ಭಕ್ತನು ನಾನುವನ್ನೇ ಸೇರುತ್ತಾನೆ.*" ಎಂಬದಾಗಿ ಶ್ರೀ ಕೃಷ್ಣನು

*'ನಾನು ಎಂಬ ವಸ್ತು ಒಂದೇ' ಎಂಬ ನಾನುವಿನ ಅಪರೋಕ್ಷಾನುಭವವನ್ನು ಹೊಂದುತ್ತಾನೆ.

ವಿವರಿಸಿದನು. ಶ್ರೀ ಸದ್ಗುರುನಾಥನಾದ ಶ್ರೀ ಕೃಷ್ಣನ ಒಲುಮೆಯಿಂದ ೧೧ ೫೫
ಮತ್ತು ಉಪದೇಶಗಳಿಂದ ಅರ್ಜುನನ ಭ್ರಾಂತಿಯೆಲ್ಲವೂ ತೊಡೆದು ಹೋಯಿತು.

ಭ್ರಾಂತಿನಾಶ; ಯೋಗ ಸ್ಮೃತಿಪ್ರಾಪ್ತಿ

ನಾನುವಿನ ಅರಿವೂ (ಆತ್ಮಲಾಭವು) ಉಂಟಾಗಿ ಕರ್ಮಯೋಗವು ಜ್ಞಾಪಕಕ್ಕೆ ಬಂದಿತು. ಧರ್ಮಾಧರ್ಮಗಳೂ, ಮಾಡುವುದೂ ಅಥವಾ ಮಾಡಬಾರದ್ದೂ ಇವೇ ಮೊದಲಾದ ವಿಷಯಗಳಲ್ಲಿದ್ದ ಸಂಶಯಗಳೆಲ್ಲಾ ನೀಗಿ ಹೋದುವು. 'ನಾನುವಿನ ಅಪ್ಪಣೆಯಂತೆ ಅರ್ಜುನನು ಸ್ವಕರ್ಮವನ್ನು ನೆರವೇರಿಸುವವನು' ಎಂದು ಅರ್ಜುನನು ಒಪ್ಪಿಕೊಂಡನು. ೧೮ ೭೩

ಈ ರೀತಿ ಮಹಿಮೆಯಿಂದ ಕೂಡಿದ ವಾಸುದೇವನಾನುವಿಗೂ ಮತ್ತು ಮಹಿಮೆಯಿಂದ ಕೂಡಿದ ಅರ್ಜುನನಾನುವಿಗೂ ನಡೆದ ಆಶ್ಚರ್ಯಕರವಾದ, ಸಂತೋಷವನ್ನುಂಟುಮಾಡಿ ಕೂದಲುಗಳನ್ನು ಎಬ್ಬಿಸಿ ನಿಲ್ಲಿಸುವ, ಯೋಗೇಶ್ವರನಾದ ಶ್ರೀಕೃಷ್ಣನೇ ಸಾಕ್ಷಾತ್ತಾಗಿ ಹೇಳಿದುದರಿಂದ ಬಹಳ ೧೮ ೭೪

ಗೀತೆಯ ಮಹಿಮೆ.

ಗುಟ್ಟಾಗಿಟ್ಟುಕೊಂಡು ಕಾಪಾಡಬೇಕಾದ, ಮತ್ತು ಬ್ರಾಹ್ಮಣ ಧರ್ಮಸಾರವಾದ 'ಯೋಗ' ವಿಷಯದ ಸಂಭಾಷಣೆಯನ್ನು ವ್ಯಾಸಮಹರ್ಷಿಯ ಬಾಯಿಂದ ಕೇಳಿದುದಾಯಿತು. ಶ್ರೀ ಕೇಶವನಿಗೂ ೧೮ ೭೫
ಅರ್ಜುನನಿಗೂ ನಡೆದ ಪುಣ್ಯವೂ ಆಶ್ಚರ್ಯಕರವೂ ಆದ ಈ ಸಂಭಾಷಣೆಯನ್ನು
ನೆನೆನೆನೆದು ಬಾರಿ ಬಾರಿಗೂ ಸಂತೋಷವುಂಟಾಗುತ್ತದೆ. ಅಲ್ಲದೆ ಶ್ರೀ ೧೮ ೭೬
ಹರಿಯ ಅದ್ಭುತವಾದ ಆ ವಿಶ್ವರೂಪದ ವರ್ಣನೆಯನ್ನು ಪದೇ ಪದೇ ಜ್ಞಾಪಕಕ್ಕೆ
ತಂದುಕೊಂಡು ಅತ್ಯಾಶ್ಚರ್ಯವನ್ನೂ ಹೊಂದುತ್ತಿರುವುದಾಗಿದೆ. ಮತ್ತು ಮೇಲೆ
ಮೇಲೆ ಸಂತೋಷವೂ ಉಕ್ಕುತ್ತಿದೆ." ಅಲ್ಲದೆ "ಯೋಗೇಶ್ವರನಾದ ೧೮ ೭೭
ಶ್ರೀಕೃಷ್ಣನು ಇರುವ ಎಡೆಯಲ್ಲಿಯೂ, ಬಿಲ್ಲನ್ನು ಹಿಡಿದಿರುವ ಅರ್ಜುನನು ಇರುವ
ಎಡೆಯಲ್ಲಿಯೂ ಸಂಪತ್ತು, ಸಿದ್ಧಿ, ಐಶ್ವರ್ಯ ಮತ್ತು ನೀತಿ ಇವುಗಳೆಲ್ಲಾ ಶಾಶ್ವತ
ವಾಗಿ ನೆಲೆಸಿರುವುವು" ಎಂಬದಾಗಿ ಸಂಜಯನು ಯುದ್ಧಕ್ಕೆ ನೆರೆದ ಪಾಂಡವ
ಕೌರವರು ಏನೇನು ಮಾಡಿದರು ಎಂದು ಕೇಳಿದ ಧೃತರಾಷ್ಟ್ರನಿಗೆ ಮೇಲೆ ಕಂಡಂತೆ
ವಿವರಿಸಿ ಹೇಳಿದನು. ೧೮ ೭೮

—ಓಂ ತತ್ಸತ್—

ಎಂಬುದಾಗಿ ಶ್ರೀಮದ್ಭಗವದ್ಗೀತಾ ವಿಷಯ ವಿಭಜನಸಂಯೋಜನಪೂರ್ವಕ ಸಂಪುಟೀಕೃತ ಗೀತಾಕೃತಿಯಲ್ಲಿ ಗೀತಾಕರಂಡಕನೆಂಬ ಮೊದಲನೆಯ ಕನ್ನಡ ಪ್ರಬಂಧವು.

|| ಶ್ರೀ: ||

ಶ್ರೀ ಯೋಗಾನಂದ ಗುರುಭ್ಯೋನಮಃ

ಸಂಪುಟೀಕೃತ ಶ್ರೀಮದ್ಭಗವದ್ಗೀತಾ ಶ್ಲೋಕಪ್ರಬಂಧಗಳ ಕನ್ನಡ ಗದ್ಯಾನುವಾದ ಪ್ರಬಂಧಗಳು

ಎರಡನೆಯ ಪ್ರಬಂಧವು

ಗೀತೆಯ ಮೊಳಕೆ

ಕೃಷ್ಣಾರ್ಜುನರು ಯುದ್ಧಕ್ಕೆ ಸನ್ನದ್ಧರಾಗಿ ನಿಂತು ಕದನಕ್ಕೆ ತೊಡಗುವ ಸಮಯದಲ್ಲಿ ಅರ್ಜುನನು ರಣರಂಗದಲ್ಲಿ ಎದುರಾಳಿಗಳಾಗಿ ನಿಂತಿರುವ ಗುರು ಹಿರಿಯರನ್ನೂ ಬಂಧುವರ್ಗಗಳನ್ನೂ ನೋಡಿ ಭಕ್ತಿ, ವಿಶ್ವಾಸ ಮತ್ತು ವಾತ್ಸಲ್ಯ ಗಳಿಂದ ತುಂಬಿ, ಮರ್ಯಾದೆಗೆ ಪಾತ್ರರೂ, ಗುರುಗಳೂ ಆದ ಭೀಷ್ಮನನ್ನೂ, ದ್ರೋಣ ನನ್ನೂ ಯುದ್ಧದಲ್ಲಿ ಬಾಣಗಳಿಂದ ಪ್ರತಿಭಟಿಸುವುದು ಹೇಗೆ ಸಾಧ್ಯವಾದೀತು!
ಎಂದು ಶತ್ರುಸಂಹಾರಕನಾದ ಶ್ರೀಕೃಷ್ಣನನ್ನು ಕುರಿತು ಹೇಳುತ್ತಾ ೨ ೪
"ಹೀಗೆ, ಹಿಂಸೆ ಮಾಡುವ ಸನ್ನಿವೇಶವೊದಗಿದ್ದಾಗ್ಗೂ ಮಹಾನುಭಾವರಾದ
ಗುರುಗಳನ್ನೂ ಹಿಂಸೆಮಾಡದೇನೇ ಭಿಕ್ಷವನ್ನಾದರೂ ಬೇಡಿ ಬದುಕುವುದೇ ಈ
ಕ್ಷತ್ರಿಯಧರ್ಮ ವಿರುದ್ಧ ಲೋಕದಲ್ಲಿ ಶ್ರೇಷ್ಠವೆನಿಸುವುದು ; ಗುರುಗಳನ್ನು ಹಿಂಸೆಗೀಡು
ವಾದ ಅಹಂಕಾರದ ಮಾಡಿದರೆ ಈ ಬದುಕಿನಲ್ಲಿಯೇ ರಕ್ತದಿಂದ ಕಲಸಲ್ಪಟ್ಟ
ಮಾತುಗಳು ಭೋಗಗಳನ್ನೂ, ದ್ರವ್ಯಗಳನ್ನೂ ಮತ್ತು ಅಪೇಕ್ಷೆಗಳನ್ನೂ
ಅನುಭವಿಸಬೇಕಾದೀತು ; ಎರಡು ಕಡೆಯ ದಳಗಳಲ್ಲೂ ಯಾರು ಗಟ್ಟಿ ೨ ೫
ಗರು? ಎಂಬುದನ್ನು ತಿಳಿದಿಲ್ಲ. ಗೆಲ್ಲುತ್ತೇವೆಯೋ ಅಥವಾ ಎದುರಾಳಿಗಳೇ
ಗೆಲ್ಲುತ್ತಾರೆಯೋ ಎಂಬುದೂ ಕೂಡ ತಿಳಿವಳಿಕೆಗೆ ಬರುವ ಹಾಗಿಲ್ಲ. ಯಾರನ್ನು
ಕೊಂದು ಬದುಕಬೇಕೆಂಬ ಆಸೆಯಿಲ್ಲವೋ ಅಂತಹ ಧೃತರಾಷ್ಟ್ರನ ಮಕ್ಕಳೆಲ್ಲರೂ
ಯುದ್ಧದಲ್ಲಿ ಎದುರಾಗಿ ನಿಂತಿದ್ದಾರೆ. ಅರಿಗಳಿಲ್ಲದ ಭೋಗ್ಯವಸ್ತುಗಳಿಂದ ೨ ೬
ತುಂಬಿದ ರಾಜ್ಯವನ್ನಾಗಲೀ, ದೇವತೆಗಳ ಮೇಲಿನ ಆಳ್ವಿಕೆಯನ್ನಾಗಲೀ, ಒಂದು
ವೇಳೆ ಹೊಂದಬಹುದಾದರೂ 'ಮನಸ್ಸಿನ ನೋವನ್ನೂ, ಇಂದ್ರಿಯಗಳ ಬೇಗೆ
ಯನ್ನೂ ಹೋಗಲಾಡಿಸುವುದು ಆವುದು?' ಎಂಬುದು ಮಾತ್ರ ಕಂಡು ಬರಲಿಲ್ಲ"

ಎಂಬದಾಗಿ ಮನಮರುಗಿ ಶ್ರೀಕೃಷ್ಣನಿಗೆ ಅರಿಕೆಮಾಡಿಕೊಂಡನು. ಆಗ ೨ ೮
ಶ್ರೀಕೃಷ್ಣನು ಅರ್ಜುನನನ್ನು ಕುರಿತು “ ಯುದ್ಧಕ್ಕೆ ಸಿದ್ಧನಾಗಿ ನಿಂತು ಕರುಳಿನ ಅಭಿಮಾನಕ್ಕೆ ಮನಸೋತು ಹೇಳಿದುದು, ಗಂಡಸುತನವಿಲ್ಲದಿರುವಿಕೆಯು; ಇದು

ಮರ್ಮೋದ್ಘಾಟನೆ

ಕ್ಷತ್ರಿಯವೀರನಿಗೆ ತಕ್ಕುದಲ್ಲ; ಈ ಅಭಿಪ್ರಾಯವನ್ನು ಇಟ್ಟುಕೊಳ್ಳಕೂಡದು; ಈ ತೆರನಾದ ಅಶಕ್ತತೆಯು ನೀಚವಾದುದು; ಇದನ್ನು ತಳ್ಳಿಹಾಕಿ ಧರ್ಮವನ್ನು ನೆಲೆಗೊಳಿಸಬೇಕಾದ ಯುದ್ಧಕ್ಕೆ ಕ್ಷತ್ರಿಯನಾದವನು ಸಿದ್ಧನಾಗಬೇಕೆಂದು ಎಚ್ಚರಿಸಿದನು. ೨ ೩

ಅಸಮಂಜಸವಾದ ಶಕುನಗಳು ತಲೆದೋರುತ್ತಿವೆ; ನಾನುವಿನ-(ಸ್ವ)-
ಜನಗಳನ್ನು ಯುದ್ಧದಲ್ಲಿ ಕೊಂದುಹಾಕುವುದರಿಂದ ಉಂಟಾಗುವ ಮೇಲ್ಮೆಯಾ
ಗಲೀ, ಧರ್ಮವಾಗಲೀ ಕಾಣುವುದಿಲ್ಲ; ಸಾವೇ ಉಂಟಾಗುವದಾ ೧ ೩೧
ಗಿದ್ದರೂ ಅಥವಾ ಮೂರುಲೋಕದ ಮೇಲಿನ ವಿಚಾರಣೆಯ ಅಧಿಕಾರವು ಉಂಟಾಗುವುದಾಗಿದ್ದರೂ ಸಹ “ ಆಚಾರ್ಯರು, ದೊಡ್ಡಪ್ಪಂದಿರು, ಚಿಕ್ಕಪ್ಪಂದಿರು, ಮಕ್ಕಳು-ಹಾಗೆಯೇ-ನೋಡುತ್ತಾ ಬಂದರೆ ಅಜ್ಜಂದಿರು, ಸೋದರಮಾವಂದಿರು

ಗಾಢವಾದ ಮೋಹದ ಮಾತುಗಳು

ಹೆಣ್ಣು ಕೊಟ್ಟ ಮಾವಂದಿರು, ಮೊಮ್ಮಕ್ಕಳು, ಭಾವಮೈದು
ನಂದಿರು ಮತ್ತು ಇತರ ನೆಂಟರು ಇವರನ್ನೆಲ್ಲಾ ಕೊಲ್ಲುವು
ದಕ್ಕೆ ಇಚ್ಛೆಯಿಲ್ಲ' ಇಂಥಾದ್ದರಲ್ಲಿ ಭೂಮಿಯನ್ನು ೧ ೩೪
ಹೊಂದಬೇಕೆಂಬ ತುಚ್ಛವಾದ ಇಚ್ಛೆಯಿಂದ ಇವರೆಲ್ಲರನ್ನೂ ಕೊಲ್ಲುವು ೧ ೩೫
ದೆಂದರೆ ಹೇಗಾದೀತು? ಅಹಹ!! ಈ ಕೌರವಾದಿಗಳನ್ನು ಕೊಲ್ಲುವುದರಿಂದ ಸಂತೋಷ ಸಮಾಧಾನಗಳುಂಟಾಗುವುವೇನು? ಈ ಕೇಡಿಗರನ್ನು ಕೊಂದು
ಹಾಕಿದವರು ಪಾಪವನ್ನೇ ಗಳಿಸಿದಂತಾಗುವುದು. ಆದುದರಿಂದ ನೆಂಟ ೧ ೩೬
ರಾಗಿರುವ ಈ ಕೌರವಾದಿಗಳನ್ನು ಕೊಲ್ಲುವುದು ಸರಿಯಲ್ಲ; ಸ್ವಜನ (ನಾನುವಿನ
ರೂಪರಾದ ಜನ) ಗಳನ್ನು ಕೊಂದು ಸುಖಿಗಳಾಗುವುದು ತಾನೆ ಹೇಗೆ? ೧ ೩೭
ಅತಿಯಾಸೆಯಿಂದ ವಿವೇಕವು ಮರೆಯಾಗಿರುವ ಈ ಜನಗಳು ವಂಶವನ್ನೇ ತೊಡೆದುಹಾಕುವುದರಿಂದುಂಟಾಗುವ ತಪ್ಪನ್ನೂ ಮತ್ತು ಗೆಳೆಯರಿಗೆ ಮಾಡಿದ ಮೋಸದಿಂದುಂಟಾಗುವ ಕೇಡನ್ನೂ ವಿಮರ್ಶೆಮಾಡದೆ ಇರುತ್ತಾರೆ.” ೧ ೩೮

“ ಆದರೆ ಕುಲವು ಅಳಿದುಹೋಗುವುದರ ಕೆಟ್ಟಫಲವನ್ನು ಚೆನ್ನಾಗಿ ಮನ
ಗಂಡಿರುವವರು ಕೆಟ್ಟ ಫಲವುಳ್ಳ ಈ ಕೆಲಸದಿಂದ ಹಿಂದೆಗೆಯದಿರುವುದು ೧ ೩೯
ಹೇಗೆ? ಕುಲವು ಅಳಿಯುವುದರಿಂದ ಸಂಪ್ರದಾಯವಾಗಿ ಬಹುಕಾಲದಿಂದ

ಕುಲಧರ್ಮದ ಮೋಹದ ಮಾತುಗಳು

ರೂಢಿಗೆ ಬಂದಿರುವ ಆಯಾ ಕುಲಧರ್ಮಗಳು ನಾಶವಾಗುವುವು. ಆಯಾ ಕುಲಧರ್ಮಗಳ ನಾಶದಿಂದ ಒಟ್ಟು ಧರ್ಮವು ಹಾಳಾಗಿ ಕುಲವು ಉಳಿದುಕೊಂಡಿದ್ದರೂ ಅಧರ್ಮವು ಹೆಚ್ಚುವುದು.

ಅಧರ್ಮವು ತಲೆದೋರಿದಂತೆಲ್ಲಾ ಸತ್ಕುಲ ಸ್ತ್ರೀಯರೆಲ್ಲರೂ ದಾರಿದಪ್ಪಿ ೧ ೪೦
ಹೋಗುವರು. ಹೀಗೆ ಹೆಂಗಸರು ಕೆಡುವುದರಿಂದ ಹುಟ್ಟುವರ್ತನೆಗಳೆಲ್ಲಾ
ಕಲಸಿಹೋಗುವುವು. ಆಯಾ ಕುಲಗಳಿಗೆ ತಕ್ಕಂತೆ ಬೇರೆ ಬೇರೆ ವರ್ತನೆ ೧ ೪೧
ಗಳುಳ್ಳ ಸ್ತ್ರೀಪುರುಷರ ಕೂಟವು ಕುಲಗಳನ್ನು ಹಾಳುಮಾಡುವವರ ಕೇಡಿ
ಗಾಗಿಯೇ. ಏಕೆಂದರೆ: ಪಿಂಡೋದಕಗಳನ್ನು ಅರ್ಪಿಸುವ ಶ್ರಾದ್ಧವೇ ಮೊದ
ಲಾದ ಕೆಲಸಗಳಿಲ್ಲದೆ ಆಯಾ ಕುಲಗಳ ಪಿತೃದೇವತೆಗಳು ಕೀಳುಸ್ಥಿತಿಗೆ ೧ ೪೨
ಬರುವರು. ಬೇರೆ ಬೇರೆ ಹುಟ್ಟು ಮತ್ತು ವರ್ತನೆಗಳು ಒಂದರಲ್ಲಿ ಮತ್ತೊಂದು
ಬೆರೆಯುವಂತೆ ಮಾಡುವ ಮನೆಮುರುಕರ ಈ ವಿಧವಾದ ತಪ್ಪುಗಳಿಂದ ಕುಲ
ಸಂಪ್ರದಾಯದ ಮತ್ತು ಅಂಥಾ ಅನೇಕ ಕುಲಗಳಿಗೆ ಸಾಮಾನ್ಯವಾಗಿಯೂ, ಜಾತಿ
ಸಂಪ್ರದಾಯವಾಗಿಯೂ ಇರುವ ಶಾಶ್ವತವಾದ ಆಚಾರಗಳು* ಹಾಳಾಗುವುವು.
ಕುಲಧರ್ಮಗಳನ್ನು ಹಾಳುಮಾಡಿಕೊಂಡ ಮನುಷ್ಯರಿಗೆ ಗೊತ್ತಿಲ್ಲದಷ್ಟು ೧ ೪೩
ಕಾಲ ಕೆಟ್ಟ ಸ್ಥಿತಿಯಲ್ಲಿ ವಾಸವುಂಟಾಗುವುದೆಂದು ಕೇಳಬರುವುದು. ೧ ೪೪
ಅಯ್ಯೋ! ಪಾಪ!! ರಾಜ್ಯಸುಖದ ಆಸೆಯಿಂದ ನಾನುವಿನ ರೂಪಗಳಾದ ಜನ
ಗಳನ್ನು ಕೊಲ್ಲಲು ಯತ್ನಿಸಿ ದೊಡ್ಡ ಪಾಪಕೆಲಸವನ್ನೇ ಮಾಡಲು ನಿರ್ಣಯ
ಮಾಡಿದಂತಾಯಿತಲ್ಲಾ! ಜಯಾಪೇಕ್ಷೆಯಿಲ್ಲ!—ರಾಜ್ಯವೂ ಬೇಡ!! ೧ ೪೫
ಸುಖಗಳೂ ಸಾಕು!!! ರಾಜ್ಯದಿಂದ ದೊರೆಯುವುದೇನು? ಭೋಗಗಳಿಂದಾಗಲೀ,
ಭಾಗ್ಯಗಳಿಂದಾಗಲೀ ಮತ್ತು ಬಾಳಿನಿಂದಾಗಲೀ ಆಗಬೇಕಾದುದೇನು?!" ೧ ೩೨

'ಯಾರ ಸಲುವಾಗಿ ಹಕ್ಕಿನ ರಾಜ್ಯವೂ, ಭೋಗವೂ ಮತ್ತು ಸುಖಗಳೂ
ಬಯಸಲ್ಪಟ್ಟವೋ ಅವರೆಲ್ಲರೂ ಪ್ರಾಣಗಳನ್ನೂ, ಧನದ್ರವ್ಯಗಳನ್ನೂ ತೊರೆದು
ಯುದ್ಧಕ್ಕೆ ನಿಂತಿದ್ದಾರೆ.' ಎಂದು ಬಣ್ಣಿಸುತ್ತಾ, ಆಯುಧಗಳನ್ನು ಕೈಲಿ ೧ ೩೩
ಎತ್ತಿ ಹಿಡಿದಿರುವ ಕೌರವಾದಿಗಳು ಆಯುಧಗಳನ್ನು ಬಿಸುಟು ಎದುರಿಸದೆ ನಿಂತಿ
ರುವ ಈ ಅರ್ಜುನನನ್ನು ಯುದ್ಧದಲ್ಲಿ ಕೊಲ್ಲುವುದಾದರೆ ಅರ್ಜುನನಿಗೆ ತುಂಬಾ
ಒಳ್ಳೆಯದೇ ಉಂಟಾಗುವುದು" ಎಂಬ ನಿರ್ಣಯಕ್ಕೆ ಬಂದನು. ಈ ೧ ೪೬
ರೀತಿಯಾಗಿ ಅರ್ಜುನನು ಶ್ರೀಕೃಷ್ಣನಿಗೆ ಹೇಳಿ 'ಯುದ್ಧಮಾಡುವುದಿಲ್ಲ' ವೆಂದು
ತಿಳಿಸಿ ಸುಮ್ಮನಾಗಿಬಿಟ್ಟನು. ಮತ್ತು ಗೋಳಿನಿಂದ ೨ ೯
ಕೊರಗಿದ ಮನಸ್ಸುಳ್ಳವನಾಗಿ, ಬಿಲ್ಲನ್ನು ಬಾಣ ಸಮೇತ
ಬಿಸುಟು ರಥದಲ್ಲಿಯೇ ಕುಳಿತುಬಿಟ್ಟನು. ೧ ೪೭

ಸ್ವಧರ್ಮವಾದ ಕ್ಷಾತ್ರ ಧರ್ಮಕ್ಕೆ ವಿರುದ್ಧವಾದ ಆಚರಣೆ

---

* ಧರ್ಮದ ಪರಿಣಾಮವೇ ಆಚಾರ,

ಹೀಗೆ ಮರುಕಗೊಂಡ, ಕಣ್ಣೀರಿನಿಂದ ತುಂಬಿದ ಮತ್ತು ವಿಕಾರವಾದ
ಕಣ್ಣುಗಳುಳ್ಳ, ಎರಡು ದಳಗಳ ನಡುವೆ ನಿಂತು ಕೊರಗುತ್ತಿರುವ ಅರ್ಜುನನನ್ನು
ಮುಗುಳುನಗೆಯಿಂದ ಕೂಡಿದ ಶ್ರೀಕೃಷ್ಣನು ಸಂತೈಸಲು ತೊಡಗಿದನು. ೨ ೧; ೧೦
ಭಲಾ! ಯಾರ ವಿಷಯದಲ್ಲಿ ಕೊರಗಬಾರದೋ ಅಂತಹವರ ವಿಷಯದಲ್ಲಿ ಕೊರ
ಗುವುದು! ಅಬ್ಬ! ಧರ್ಮ ಮತ್ತು ಅಧರ್ಮಗಳ ವಿಚಾರವಾಗಿ ಪಾಂಡಿತ್ಯದ ಮಾತು
ಗಳನ್ನಾಡುವುದು! (ಇವೆರಡೂ ಒಂದಕ್ಕೊಂದು ವಿರೋಧ-ಅಹಹ!!) ಶಾಸ್ತ್ರ
ವನ್ನು ಬಲ್ಲ ಪಂಡಿತರು, ಪ್ರಾಣವು ಬಿಟ್ಟುಹೋಗಿರುವ ಅಥವಾ ಬಿಡದೆ ಸೇರಿ
ಕೊಂಡಿರುವ ವಸ್ತುಗಳ ವಿಷಯದಲ್ಲಿ ಕೊರಗುವುದಿಲ್ಲವಲ್ಲವೆ? ಸಮಸ್ತ ೨ ೧೧
ವಿಧವಾದ ದೇಹಗಳನ್ನೂ ಹೊಂದಿ,* 'ದೇಹೀ' (ದೇಹವುಳ್ಳವನು) ಎನಿಸುವ
ನಾನು ಎಂದಿಗೂ ಕೊಲ್ಲಲ್ಪಡತಕ್ಕವನಲ್ಲ. ಆದುದರಿಂದಲೇ ಯಾವ ಪ್ರಾಣಿಗಳ
ವಿಷಯದಲ್ಲಿಯೂ ಕೊರಗಬೇಕಾಗಿಲ್ಲ. ಹುಟ್ಟಿದುದಕ್ಕೆ ಸಾವೂ ಖಂಡಿತ. ೨ ೩೦
ಸತ್ತದ್ದಕ್ಕೆ ಹುಟ್ಟೂ ನಿಜ. ಏನು ಮಾಡಿದರೂ ಪರಿಹರಿಸಲಾಗದ ಈ ಹುಟ್ಟು
ಸಾವುಗಳ ವಿಷಯದಲ್ಲಿ ಕೊರಗಬಾರದು. ನಾನುವು ಆಕಾರದಿಂದ ೨ ೨೭
ಕಾಣಿಸಿಕೊಳ್ಳುವವನಲ್ಲ; ಆಲೋಚನೆಗೆ ನಿಲುಕುವವನೂ ಅಲ್ಲ; 'ಬದಲಾವಣೆ
ಹೊಂದದವನು' ಎಂದು ಹೇಳಲ್ಪಟ್ಟಿರುವುದರಿಂದ ಈ ರೀತಿಯಲ್ಲಿ 'ನಾನು'
ವನ್ನು ತಿಳಿದ ಮೇಲೆ ಕೊರಗುಂಟಾಗಲೇ ಬಾರದು. ಹಾಗೂ, ೨ ೨೫
ಒಂದು ವೇಳೆ 'ಯಾವಾಗಲೂ ಹುಟ್ಟುವವನು ಮತ್ತು ಸಾಯುವವನು'
ಎಂದು ತಿಳಿದರೂ ಕೂಡ ಪರಿಹರಿಸಲಾಗದ ಹುಟ್ಟು ಸಾವುಗಳ ವಿಷಯದಲ್ಲಿ
ಕೊರಗಲಾಗದು. ದೇಹಕ್ಕೆ ಉಂಟಾಗುವ ವಯಸ್ಸಿನ ಅವಸ್ಥೆಗಳಾದ ೨ ೨೬
ಬಾಲ್ಯ, ಯೌವನ, ಕೌಮಾರ ಮತ್ತು ಮುಪ್ಪುಗಳು ದೇಹವುಳ್ಳ ನಾನುವಿಗೆ
ಉಂಟಾಗುವಹಾಗೆ ಹುಟ್ಟು ಸಾವುಗಳಿಂದ ನಾನುವಿಗೆ ಬೇರೆ ದೇಹವು ದೊರೆಯು
ವುದು. ಮತ್ತು ಒಂದು ದೇಹದಿಂದ ಬಿಡುಗಡೆಯುಂಟಾಗು

ಸಂಸಾರದ ತತ್ತ್ವ

ವುದು. ಆದ ಕಾರಣ ಧೈರ್ಯಶಾಲಿಯು ಈ ವಿಷಯದಲ್ಲಿ
ಭ್ರಾಂತಿಗೊಳ್ಳಬಾರದು. ಮನುಷ್ಯನು ಹಳೆಯ ಬಟ್ಟೆಗಳನ್ನು ಬಿಸುಟು ಬೇರೆ ೨ ೧೩
ಹೊಸಬಟ್ಟೆಗಳನ್ನು ಪಡೆವ (ಉಡುವ) ಹಾಗೆ ದೇಹವುಳ್ಳ ನಾನುವು ಸುಖದುಃ
ಖಾನುಭವಕ್ಕೆ ಹಳೆಯದಾದ ಶರೀರಗಳನ್ನು ಬಿಟ್ಟು, ಬೇರೆ ಬೇರೆ ಹೊಸ ಹೊಸ
ಶರೀರಗಳನ್ನು ಹೊಂದುತ್ತಾನೆ. ಚರಾಚರ ವಸ್ತುಗಳು ಮೊದಲು ಯಾವ ೨ ೨೨
ನಾಮರೂಪಗಳನ್ನೂ ಹೊಂದಿರಲಿಲ್ಲ; ನಡುವಣ ಕಾಲದಲ್ಲಿ ಮಾತ್ರ ನಾಮ

---

* ಸರ್ವಸ್ಯದೇಹೇ= ನಾನಾಬಗೆಯ ದೇಹಗಳಲ್ಲಿ ಇದ್ದು

ರೂಪಗಳನ್ನೂ ಪಡೆಯುವುವು; ಕೊನೆಗೆ ನಾವು ರೂಪಗಳ ಅಳಿವನ್ನು ಹೊಂದು
ವುವು. ಈ ವಿಷಯದಲ್ಲಿ ಕೊರಗೆಂಥಾದ್ದು? ಯಾವುದು ಪ್ರಪಂಚ ೨ ೨೮
ವೆಲ್ಲವನ್ನೂ ತುಂಬಿ ದರಡಿಕೊಂಡಿದೆಯೋ, ಅದು ಅಳಿವಿಲ್ಲದುದೆಂದು ತಿಳಿಯ
ಬೇಕು. ಮತ್ತು ಅಳಿವಿಲ್ಲದ ಈ ತತ್ವಕ್ಕೆ ಅಳಿವನ್ನು ಯಾರೂ ಉಂಟು ೨ ೧೭
ಮಾಡಲಾರರು. ದೇಹವನ್ನು ಹೊಂದಿರುವ ನಾನುವನ್ನು ಕೊಲ್ಲುವವನೆಂದು
ಯಾರು ತಿಳಿಯತ್ತಾರೋ, ನಾನುವು ಕೊಲ್ಲಲ್ಪಡತಕ್ಕವನೆಂದು ಯಾರು ತಿಳಿಯು
ತ್ತಾರೋ ಆ ಎರಡು ಬಗೆಯ ಜನಗಳೂ—ತತ್ತ್ವವನ್ನು ತಿಳಿಯದವರೇ ಸರಿ.
ಏಕೆಂದರೆ:—ನಾನುವು ಕೊಲ್ಲುವುದೂ ಇಲ್ಲ. ನಾನುವನ್ನು ಆಯುಧಗಳು ೨ ೧೯
ಗಾಸಿ ಮಾಡಲಾರವು; ಬೆಂಕಿಯು ಸುಡಲಾರದು; ನೀರು ನೆನೆಯಿಸಲಾರದು;
ಗಾಳಿಯು ಆರಿಸಿ ಒಣಗಿಸಲಾರದು. ನಾನುವು ಹುಟ್ಟು ಮತ್ತು ಅಳಿವು ೨ ೨೩
ಗಳಿಲ್ಲದವನೆಂದೂ, ಶಾಶ್ವತನೆಂದೂ ಮತ್ತು ನಾಶವಿಲ್ಲದವನೆಂದೂ ತಿಳಿಯುವ
ಮನುಷ್ಯನು ಯಾರನ್ನು ಏಕೆ ಹಿಂಸೆ ಪಡಿಸುತ್ತಾನೆ? ಅಥವಾ ಯಾರನ್ನು ಹೇಗೆ
ಹಿಂಸೆ ಪಡಿಸುತ್ತಾನೆ? ನಾನುವು ಕತ್ತರಿಸಲ್ಪಡದವನು; ನಾನುವು ಸುಡ ೨ ೨೧
ಲ್ಪಡದವನು; ನಿತ್ಯನು; ಎಲ್ಲೆಡೆಯಲ್ಲಿಯೂ ಎಲ್ಲಾ ಕಾಲಗಳಲ್ಲಿಯೂ ಹರಡಿರು
ವವನು; ಸ್ಥಿರನು; ಚಲಿಸದಿರುವವನು ಮತ್ತು ಶಾಶ್ವತನು. ೨ ೨೪

ಯುದ್ಧವು ಅಧರ್ಮಕ್ಕೆ ಕಾರಣವೆಂಬ ವಿಷಯವನ್ನು ಅವರವರ ಧರ್ಮದ ದೃಷ್ಟಿಯಿಂದ ನೋಡಿದರೂ ಕೂಡ ಅಂಜಿ, ಕೊರಗಿ ನಡುಗಬೇಕಾಗಿಲ್ಲ. ಏಕೆಂದರೆ

ಯುದ್ಧವು ಪರಮಧರ್ಮ

—ಧರ್ಮವನ್ನು ನೆಲೆಗೊಳಿಸುವುದಕ್ಕಾಗಿ ಮಾಡುವ ಧರ್ಮ ಯುದ್ಧಕ್ಕಿಂತ ಹೆಚ್ಚು ಶ್ರೇಯಸ್ಸನ್ನುಂಟು ಮಾಡುವ ಮತ್ತು ಕ್ಷತ್ರಿಯ ಬ್ರಾಹ್ಮಣನು ಆಚರಿಸಬೇಕಾದುದಾಗಿರುವ ಧರ್ಮವು ಬೇರೆ ಯಾವುದೂ ಇರುವುದಿಲ್ಲ. ೨ ೩೧

ಮಹಿಮೆಯುಳ್ಳದ್ದೆಂದು ತೋರಿಬರಬಹುದಾದ, ಇತರರು ಆಚರಿಸಬೇಕಾಗಿರುವುದನ್ನು ಆಚರಿಸಿದ ಧರ್ಮಕ್ಕಿಂತಲೂ ಮಹಿಮೆಯಿಲ್ಲದ್ದೆಂದು ತೋರಬಹು

ಸ್ವಧರ್ಮವೇ ಶ್ರೇಷ್ಠ

ದಾದರೂ ಬಿಡದೆ ಆಚರಿಸಿದ ಅವರವರ ಧರ್ಮವೇ
ಶ್ರೇಯಸ್ಸನ್ನುಂಟುಮಾಡುವುದು. ಅವರವರ ೧೮-೪೭-೩-೩೫
ಹುಟ್ಟುವರ್ತನೆಯ ಧರ್ಮವನ್ನು ಆಚರಿಸುವುದರಲ್ಲಿ ಸಾವೇ ಉಂಟಾಗುವು
ದಾದರೂ—ಅವರವರ ಧರ್ಮವನ್ನಾಚರಿಸುವುದೇ ಲೇಸು. ಅವರವರ ೩ ೩೫
ಹುಟ್ಟುವರ್ತನೆಗಳಿಂದ ಗೊತ್ತಾಗಿರುವ ಕೆಲಸವನ್ನು ಮಾಡಿದರೆ ಪಾಪವುಂಟಾಗು
ವುದೇ ಇಲ್ಲ. ನಾನುವಿನ (ಅವರವರ) ಆಯಾ ಕೆಲಸದಲ್ಲಿ ಮನಸ್ಸಿಟ್ಟಿರುವ ೧೮ ೪೭

ಮನುಷ್ಯನು ಒಳ್ಳೆಯ ಸ್ಥಿತಿಯನ್ನೇ ಪಡೆಯುತ್ತಾನೆ. ಯಾವ ನಾನುವಿ ೧೮ ೪೫
ನಿಂದ ಪ್ರಾಣಿಗಳಿಗೆ ಕೆಲಸದಲ್ಲಿ ತೊಡಗುವಿಕೆಯುಂಟಾಗುವುದೋ ಯಾವ
ನಾನುವು ಇದೆಲ್ಲವನ್ನೂ ಹರಡಿ ತುಂಬಿಕೊಂಡಿರುವುದೋ ಆ ನಾನುವನ್ನು
ನಾನುವಿನ (ಅವರವರ) ಆಯಾ ಕೆಲಸಗಳಿಂದ ಪೂಜಿಸಿ ಮನುಷ್ಯನು ಸಿದ್ಧಿಯನ್ನು
ಪಡೆಯುತ್ತಾನೆ. ಅದಾಗಿಯೇ ಒದಗಿಬಂದ, ಚಿರಕಾಲ ಸುಖಾನುಭವ ೧೮ ೪೬
ಸ್ಥಿತಿಗೆ (ಸ್ವರ್ಗಕ್ಕೆ) ತೆರೆದಿರುವ ಬಾಗಿಲೆನಿಸಿದ ಮತ್ತು ಧರ್ಮ ಸಂಸ್ಥಾಪನೆಗೆ
ಹೂಡಿರುವ ಯುದ್ಧವು ಸುಖಿಗಳಾದ ಕ್ಷತ್ರಿಯ ಬ್ರಾಹ್ಮಣರಿಗೆ ಮಾತ್ರ ದೊರೆ
ಯುವುದು. ಹೀಗೆ ದೊರೆತಿರುವಾಗಲೂ ಕೂಡ ಅಂತಹ ಧರ್ಮಸಮ್ಮತ ೨ ೩೨
ವಾದ ಯುದ್ಧವನ್ನು ಮಾಡದೇ ಇದ್ದರೆ, ಸ್ವಧರ್ಮವನ್ನೂ ಹೆಸರುವಾಸಿಯನ್ನೂ

ಸ್ವಧರ್ಮವನ್ನು ತೊರೆದವನಿಗೆ ಶ್ರೇಯಸ್ಸಿಲ್ಲ

ದೂರಮಾಡಿ ಪಾಪವನ್ನೇ ಪಡೆಯಬೇಕಾಗುವುದು. ೨ ೩೩
ಎಲ್ಲಜನರೂ ಇಂತಹ ಕ್ಷತ್ರಿಯ ಬ್ರಾಹ್ಮಣನ ಕೊನೆಯಿಲ್ಲದ
ಕೆಟ್ಟ ಹೆಸರನ್ನೇ ಆಡಿಕೊಳ್ಳುವರು. ಮರ್ಯಾದೆಯುಳ್ಳ
ವನಿಗೆ ಇಂತಹ ಕೆಟ್ಟ ಹೆಸರು ಸಾವಿಗಿಂತಲೂ ಹೆಚ್ಚಾದುದು. (ಹೆಚ್ಚು ೨ ೩೪
ನಿಕೃಷ್ಟವಾದುದು.) ಅಂಜಿಕೊಂಡು ಯುದ್ಧದಿಂದ ಹಿಮ್ಮೆಟ್ಟಿದ ಹೇಡಿಯೆಂಬದಾಗಿ
ಇತರ ವೀರರು ತಿಳಿಯುತ್ತಾರೆ. ಅವನವನ ಧರ್ಮದಲ್ಲಿರುವಾಗ ಯಾರ ಮನ್ನಣೆಗೆ
ಮೊದಲು ಪಾತ್ರನಾಗಿದ್ದಾನೋ ಅವನೇ ಕೊನೆಗೆ ಅವರ ತಿರಸ್ಕಾರಕ್ಕೂ ಹಗ್ಗಿಗೂ
ಒಳಗಾಗಬೇಕಾಗುತ್ತದೆ. ಆಗದವರಂತೂ ಧರ್ಮಯುದ್ಧದಿಂದ ಹಿಂದಿರು ೨ ೩೫
ಗಿದ ಕ್ಷತ್ರಿಯನ ಶಕ್ತಿಯನ್ನು ಅಲ್ಲಗಳೆಯುತ್ತಾ, ಆಡಬಾರದ ಮಾತುಗಳನ್ನು
ಬಹಳವಾಗಿ ಆಡಿಕೊಳ್ಳುವರು. ವೀರನಾದ ಕ್ಷತ್ರಿಯ ಬ್ರಾಹ್ಮಣನಿಗೆ ಇದಕ್ಕಿಂತಲೂ
ಹೆಚ್ಚು ನೋವನ್ನುಂಟುಮಾಡುವುದೇನಿರುವದು ? ಯುದ್ಧದಲ್ಲಿ ಕೊಲ್ಲಲ್ಪ ೨ ೩೬
ಟ್ಟರೆ ಚಿರಕಾಲ ಸುಖಾನುಭವ ಸ್ಥಿತಿಯು (ಸ್ವರ್ಗವು) ದೊರೆಯುವುದು. ಹಾಗಲ್ಲದೆ
ಜಯವುಂಟಾದರೆ ಭೂಮಿಯ ಭೋಗಭಾಗ್ಯಗಳು ದೊರೆಯವುವು. ಆದುದರಿಂದ
ರಣವನ್ನು ಹೊಕ್ಕಮೇಲೆ ಮುನ್ನುಗ್ಗಿ ಹೋರಾಡಲು ನಿಶ್ಚಯಿಸಲೇಬೇಕು. ೨ ೩೭

ರಣವನ್ನು ಹೊಕ್ಕ ಕ್ಷತ್ರಿಯನ ಮನೋಭಾವನೆ

ಸುಖ ಮತ್ತು ದುಃಖಗಳೆಂಬ ಅನುಭವಗಳನ್ನೂ ; ಪಡೆಯದ
ವಸ್ತುಗಳನ್ನು ಪಡೆಯುವಿಕೆ ಅಥವಾ ಪಡೆಯದೆ ಹೋಗು
ವಿಕೆಗಳನ್ನೂ ; ಗೆಲುವು ಮತ್ತು ಸೋಲುಗಳನ್ನೂ 'ಒಂದೇ
ಸಮ' ವೆಂಬ ಭಾವನೆಯಿಂದ ತಿಳಿದು ಕ್ಷತ್ರಿಯ ಬ್ರಾಹ್ಮಣನು ಕದನಕ್ಕೆ ತೊಡಗ
ಬೇಕು. ಹೀಗೆ ಮಾಡುವುದರಿಂದ ಪಾಪವೆಂದಿಗೂ ಇರುವುದಿಲ್ಲ. ೨ ೩೮

ಅಳಿವಿಲ್ಲದ, ಜ್ಞಾನಕ್ಕೆ ವಿಷಯನಲ್ಲದ, ಶರೀರವನ್ನು ಹೊಂದಿದ, ನಿತ್ಯ
ನಾದ ನಾನುವಿನ ಈ ದೇಹಗಳು ಕೊನೆಗಾಣತಕ್ಕವು. ಆದುದರಿಂದ ಈ ವಿಷಯ

ವನ್ನು ತಿಳಿದಮೇಲಾದರೂ ಸ್ವಧರ್ಮವಾದ ಯುದ್ಧವನ್ನು ಮಾಡಲೇಬೇಕು. ೨ ೧೮
ನಾನುವು ಯಾವಾಗಲೂ ಈ ಶ್ರೀಕೃಷ್ಣನ ರೂಪದಲ್ಲಿಯೇ ಇರುವದಿಲ್ಲ; ಅರ್ಜು
ನನ ರೂಪದಲ್ಲಿಯೂ ಇರುವದಿಲ್ಲ; ಕುರುಕ್ಷೇತ್ರದ ರಣರಂಗದಲ್ಲಿ ನೆರೆದಿರುವ
ರಾಜರುಗಳ ರೂಪದಲ್ಲಿಯೂ ಯಾವಾಗಲೂ ಇರುವುದಿಲ್ಲ; ಈ ಜೀವಮಾನ
ಕಳೆದಮೇಲೆ ಹುಟ್ಟುವುದಿಲ್ಲವೆಂಬುದೂ ಇಲ್ಲ. ಎಲ್ಲಾ ಪ್ರಾಣಿಗಳ ೨ ೧೨

ಸರ್ವಕ್ಕೂ ಬ್ರಹ್ಮವೇ ಕಾರಣ*

ಮುಖ್ಯವಾದ ಅಂಗಗಳಲ್ಲಿರುವ ನಾನುವೇ ಪರಬ್ರಹ್ಮನು.
ಚರಾಚರ ವಸ್ತುಗಳಿಗೆಲ್ಲಾ ಮೊದಲೂ ಮಧ್ಯವೂ ಮತ್ತು
ಕೊನೆಯೂ ನಾನುವೇ. ಲೋಕವೆಲ್ಲಕ್ಕೂ ಅಳಿ ೧೦ ೨೦
ವನ್ನುಂಟು ಮಾಡುವ, ದೊಡ್ಡದು ಎನಿಸಿದ ಕಾಲನು ನಾನು; ಈ ಲೋಕ
ಗಳನ್ನೆಲ್ಲಾ ಒಂದು ಗೂಡಿಸಲು ತೊಡಗಿರುವವನು 'ನಾನು'. ಎದುರಾಳಿಗಳನ್ನು
ಕೊಲ್ಲುವ ವೀರನಾದ ಬಿಲ್ಲುಗಾರನಿಲ್ಲದಿದ್ದರೂ ಈ ಕುರುಕ್ಷೇತ್ರ ಯುದ್ಧಭೂಮಿಯಲ್ಲಿ
ನೆರೆದಿರುವ ಯೋಧರಾರೂ ಉಳಿಯುವಹಾಗಿಲ್ಲ. ಈ ಪಾಂಡವ ಕೌರವರ ೧೧ ೩೨
ಯುದ್ಧದಲ್ಲಿ ನಾನುವಿನ ಅಧಿವಾಸದಿಂದ ಬಿಡಲ್ಪಟ್ಟ ಭೀಷ್ಮ, ದ್ರೋಣ, ಜಯದ್ರಥ
ಕರ್ಣ ಮತ್ತು ಇತರ ಯೋಧರನ್ನು (ನಾಮ ರೂಪಗಳನ್ನು) ತಳ್ಳಿಹಾಕಿ ವ್ಯಸನ
ಪಡದೆ, ಸ್ವಕರ್ಮವಾದ ಯುದ್ಧವನ್ನು ಮಾಡಿ ಅರಿಗಳನ್ನು ಗೆಲ್ಲುವವನಾಗ
ಬಹುದು. ಆದುದರಿಂದ ಮೇಲಕ್ಕೆದ್ದು, ಯುದ್ಧಕ್ಕೆ ನಿಂತು, ಶತ್ರುವನ್ನು ೧೧ ೩೪
ಗೆದ್ದು, ಸೌಖ್ಯದಿಂದ ತುಂಬಿದ ರಾಜ್ಯವನ್ನು ಪಡೆದು ಅನುಭವಿಸಿ ಹೆಸರುವಾಸಿ
ಯನ್ನು ಹೊಂದುವವನಾಗಬೇಕು. ಕುರುಕ್ಷೇತ್ರರಣರಂಗದಲ್ಲಿ ಸೇರಿದ ಯೋಧರ
(ಶರೀರಗಳೆಲ್ಲಾ) ನಾನುವಿನ ಅಧಿವಾಸದಿಂದ ಮೊದಲೇ ಬಿಡಲ್ಪಟ್ಟಿರುತ್ತದೆ.
ನೆಪಮಾತ್ರಕ್ಕೆ ಮಾತ್ರ ಅರ್ಜುನನು ಅವರ (ಆ ನಾಮರೂಪಗಳ) ಅಳಿವಿಗೆ
ಕಾರಣನಾಗಬೇಕು. ನಾನುವಿನಲ್ಲಿ ಚಿತ್ತವನ್ನು ಸೇರಿಸಿದವನು ನಾನು ೧೧ ೩೩
ವಿನ ಅನುಗ್ರಹದಿಂದ ಎಲ್ಲಾ ಕಷ್ಟಗಳಿಂದಲೂ ಪಾರಾಗುವನು. ಹಾಗಲ್ಲದೆ

ಜನಗಳ ಹೆಮ್ಮೆಯ ಕೆಲಸವು ಎಂದಿಗೂ ಸಾಗುವುದಿಲ್ಲ*

ಬುದ್ಧಿವಾದವನ್ನು ಕೇಳದೆ ಹೋದರೆ ಕೇಡಿಗೆ ಗುರಿಯಾಗ
ಬೇಕಾಗುತ್ತದೆ. ಅದೂ ಅಲ್ಲದೆ, ಹೆಮ್ಮೆಯನ್ನೇ ೧೮ ೫೮
ಮುಂದುಮಾಡಿ ಕ್ಷತ್ರಿಯ ಬ್ರಾಹ್ಮಣನು ಸ್ವಧರ್ಮವಾದ
ಯುದ್ಧವನ್ನು ಮಾಡುವುದಿಲ್ಲವೆಂದು ಭಾವಿಸುವುದಾದರೂ ಈ ನಿಶ್ಚಯ ಭಾವ
ನೆಯು ಸುಳ್ಳೇ ಆಗುವುದು. ಏಕೆಂದರೆ:–ಪ್ರಕೃತಿಯು ಮಾನವನನ್ನು ಕೆಲಸಮಾಡು
ವಂತೆ ಬಲಾತ್ಕರಿಸುವುದು. ಹುಟ್ಟುವರ್ತನೆಗಳಿಗೆ ತಕ್ಕಂತೆ ಮಾಡ ೧೮ ೫೯

---

* ಕೇನೋಪನಿಷತ್ತಿನಲ್ಲಿ ಈ ವಿಷಯವು ಸ್ಪಷ್ಟವಾಗಿದೆ.

ಬೇಕಾದ ಕೆಲಸದಲ್ಲಿ ಭ್ರಾಂತಿಯಿಂದ ಇಚ್ಛೆಯುಂಟಾಗದಿದ್ದರೂ, ನಾನುವಿನ
ಆಯಾ ಕೆಲಸದಿಂದ ಕಟ್ಟಿಹಾಕಲ್ಪಟ್ಟು, ಆ ಇಚ್ಛೆಯಿಲ್ಲದ ಸ್ವಕರ್ಮವನ್ನೇ ಮೈ
ಮರೆತು ನಿರ್ವಾಹವಿಲ್ಲದೆ ಮಾಡುವವನಾಗಬೇಕಾಗುವುದು. ೧೮ ೬೦

ಯಂತ್ರಗಳಂತಿರುವ ದೇಹಗಳಲ್ಲಿ ಸೇರಿ ಪ್ರಾಣಿಗಳನ್ನು ಮಾಯಾಶಕ್ತಿ
ಯಿಂದ ಕೆಲಸದಲ್ಲಿ ಪ್ರೇರಿಸುತ್ತಾ ಎಲ್ಲಾ ಚರಾಚರವಸ್ತುಗಳ ಮುಖ್ಯವಾದ ಅಂಗ
ದಲ್ಲಿ ನೆಲೆಸಿರುವವನು ನಾನು. ಈಶ್ವರನೆನಿಸಿದ ೧೮ ೬೧

ಈಶ್ವರನ ಒಲುಮೆ ಯಿಂದ ಶಾಂತಿ

ನಾನುವನ್ನು ಸರ್ವ ಪ್ರಕಾರದಿಂದಲೂ ಮರೆಹೋಗಬೇಕು.
ಈಶ್ವರ-ನಾನುವಿನ ಒಲುಮೆಯಿಂದ ಅತ್ಯುತ್ಕೃಷ್ಟವಾದ
ಶಾಂತಿಯನ್ನೂ ಶಾಶ್ವತವಾದ ನಾನುವಿನ ಪದವಿಯನ್ನೂ ಹೊಂದ
ಬಹುದು. ೧೮ ೬೨

ಹುಟ್ಟಿದ ಪ್ರತಿಯೊಂದು ವ್ಯಕ್ತಿಗೂ ಯೋಗದಿಂದ ಶಾಂತಿ

ಶುದ್ಧನಾದ ನಾನುವಿನಿಂದ ಗುಣಬದ್ಧನಾದ ನಾನುವನ್ನು ಸ್ವಸ್ವರೂಪಜ್ಞಾನ
ಸ್ಥಿತಿಗೆ ಮೇಲಕ್ಕೆತ್ತಬೇಕು. ಗುಣಬದ್ಧನಾದ ನಾನುವನ್ನೆಂದಿಗೂ ಕೀಳು ಸ್ಥಿತಿಗೆ
ಸಿಕ್ಕಿಸಬಾರದು. ಗುಣಬದ್ಧನಾದ ನಾನುವಿಗೆ ಶುದ್ಧನಾದ
ನಾನುವೇ ನೆಂಟನು. ಶುದ್ಧನಾದ ನಾನುವಿಗೆ ಗುಣಬದ್ಧ
ನಾದ ನಾನುವೇ ಶತ್ರುವು. ನಾನುವಿನ ಅರಿವಿಗೆ ಸಮಾನ ೬ ೫
ವಾದ ಪವಿತ್ರವಸ್ತುವು ಬೇರೆಯಾವುದೂ ಇಲ್ಲ. ನಾನುವಿನ ಜ್ಞಾನವನ್ನು ೪ ೩೮
(ಆತ್ಮಲಾಭವನ್ನು) ಪಡೆದಕೂಡಲೇ ಉತ್ಕೃಷ್ಟವಾದ ಶಾಂತಿಯನ್ನು ಹೊಂದು
ವನು. ಮಾಡುವ ಕೆಲಸಗಳೆಲ್ಲವೂ ಕೊನೆಯಲ್ಲಿ ನಾನುಪಿನ ಅರಿವಿ ೪ ೩೯
ನಲ್ಲಿಯೇ ಅಡಕವಾಗುತ್ತದೆ. ಆದುದರಿಂದ ಸಾಷ್ಟಾಂಗನಮಸ್ಕಾರ ೪ ೩೩
ದಿಂದಲೂ ಉಚಿತಪ್ರಶ್ನೆಗಳಿಂದಲೂ ಮತ್ತು ಸೇವೆಯಿಂದಲೂ ನಾನುವಿನ ಅರಿವನ್ನು
ಪಡೆಯಬೇಕು. ೪ ೩೪

ಯೋಗಕ್ಕೆ ಗುರುಗಳ ಆಶ್ರಯವು ಮೊದಲ ನೆಯ ಸೋಪಾನ

ಯಾವುದನ್ನು ತಿಳಿಯುವುದರಿಂದ ತಿರುಗಿ ಹೀಗೆ ಕರ್ತವ್ಯಕಾಲದಲ್ಲಿ
ಭ್ರಾಂತಿಯನ್ನು ಹೊಂದಲಾರನೋ, ಯಾವ ತಿಳಿವಳಿಕೆಯಿಂದ ಸಮಸ್ತ ವಸ್ತು
ಗಳನ್ನೂ ಪೂರ್ಣ ನಾನುವಿನಲ್ಲಿಯೂ, ದೇಹವನ್ನು ಧರಿಸಿದ
ನಾನುವಿನಲ್ಲಿಯೂ ತಿಳಿಯಬಹುದೋ, ಅಂತಹ ೪ ೩೫
ನಾನುವಿನ ಜ್ಞಾನವನ್ನು ತತ್ತ್ವ ಸಾಕ್ಷಾತ್ಕಾರವುಳ್ಳ ಮತ್ತು
ನಾನುವಿನ ಅರಿವುಳ್ಳ ಜ್ಞಾನಿಗಳು ಉಪದೇಶಮಾಡುವರು. ಸಮಸ್ತ ಪಾಪ ೪ ೩೪
ಕೆಲಸಗಳನ್ನು ಮಾಡಿ ಪಾಪ ಮಾಡಿದವರಲ್ಲೆಲ್ಲಾ ಕೀಳಾದವನೂ ಸಹ ಸಮಸ್ತ
ಪಾಪದ ಸಮುದ್ರವನ್ನು, ನಾನುವಿನ ಅರಿವೆಂಬ ದೋಣಿಯಿಂದ ದಾಟ
ಬಿಡಬಹುದು. ಉರಿಯುವ ಬೆಂಕಿಯು ಹೇಗೆ ಸೌದೆಗಳನ್ನು ಬೂದಿ ೪ ೩೬

ಜ್ಞಾನದ ಮಹಿಮೆ

ಮಾಡಿಬಿಡುವುದೋ ಹಾಗೆಯೇ, ಆತ್ಮಜ್ಞಾನವೆಂಬ ಬೆಂಕಿಯು ಪಾಪಕ್ಕೆ ಕಾರಣವಾದ ಸಮಸ್ತ ಕೆಲಸಗಳನ್ನೂ ಕೆಲಸಗಳ ಫಲವನ್ನೂ ಸಹ ಸುಟ್ಟು ಬೂದಿಮಾಡಿಬಿಡುವುವು. ಮರುಳನೂ, ೪ ೩೭

ಜ್ಞಾನದ ಅವಶ್ಯಕತೆ

ನಂಬಿಕೆ ಮತ್ತು ಭಕ್ತಿಗಳಿಲ್ಲದವನೂ, ನಾನುವಿನ ವಿಷಯದಲ್ಲಿ ಸಂಶಯವುಳ್ಳವನೂ ಸಹ ಕೇಡನ್ನು ಹೊಂದುವನು. ನಾನುವಿನ ವಿಷಯದಲ್ಲಿ ಸಂದೇಹವುಳ್ಳವನಿಗೆ ಈ ಲೋಕದಲ್ಲಿ ಸಿದ್ಧಿಯೂ ಇಲ್ಲ; ಪರಲೋಕದ ಸಿದ್ಧಿಯೂ ಇರುವುದಿಲ್ಲ. ಮತ್ತು ಸುಖವಂತೂ ಇಲ್ಲವೇ ೪ ೪೦ ಇಲ್ಲ. ಬ್ರಾಹ್ಮಣ ಧರ್ಮದ* ಅರಿವನ್ನುಂಟುಮಾಡುವ ಶಾಸ್ತ್ರಗಳನ್ನು ಬಿಟ್ಟು

ಗುರುಗಳ ಮೂಲಕ ಶಾಸ್ತ್ರಜ್ಞಾನಾರ್ಜನೆ

ಬಯಕೆಗಳನ್ನೇ ಮುಂದುಮಾಡಿಕೊಂಡು ನಡೆಯುವವನು ಸಿದ್ಧಿಯನ್ನಾಗಲೀ ಸುಖವನ್ನಾಗಲೀ ಮತ್ತು ಉತ್ತಮ ಸ್ಥಾನ(ಫಲ) ವನ್ನಾಗಲೀ ಹೊಂದಲಾರನು. ಆದುದ ೧೬ ೨೩ ರಿಂದ ಮನುಷ್ಯನಿಗೆ ಕೆಲಸಮಾಡತಕ್ಕ ನಿರ್ಣಯ ವಿಷಯದಲ್ಲಿ ಶಾಸ್ತ್ರಗಳೇ ದಾರಿಯನ್ನು ತೋರಿಸತಕ್ಕವು. ಶಾಸ್ತ್ರಗಳಲ್ಲಿ ಗೊತ್ತುಮಾಡಿ ಹೇಳಿರುವ ಕೆಲಸಗಳನ್ನು ತಿಳಿದುಕೊಂಡು ಅವುಗಳನ್ನು ಮಾಡಬೇಕಾಗಿರುವದು. ಈ ರೀತಿಯಾಗಿ ೧೬ ೨೪ ಗುಟ್ಟುಗಳಲ್ಲೆಲ್ಲಾ ಗುಟ್ಟೆನಿಸಿದ ಜ್ಞಾನದ ಮಹಿಮೆಯು ಈ ರೀತಿ ವಿವರಿಸಲ್ಪಟ್ಟಿರುವದು. ಇದೆಲ್ಲವನ್ನೂ ಸಂಪೂರ್ಣವಾಗಿ ವಿಮರ್ಶಿಸಿ ಅನಂತರ ಇಷ್ಟಬಂದಂತೆ ಮಾಡಬಹುದು." ಎಂದು ಶ್ರೀಕೃಷ್ಣನು ಅರ್ಜುನನಿಗೆ ವಿವರಿಸಿ ತಿಳಿಸಿದನು. ೧೮ ೬೩

"ಹಾಗಾದರೆ ಮನಸ್ಸಿನಲ್ಲಿ ಉಂಟಾಗಿರುವ ಸಂಶಯವನ್ನು ಸ್ವಲ್ಪವೂ ಉಳಿಯದಂತೆ ಹೋಗಲಾಡಿಸಬೇಕು. ಈ ಸಂಶಯವನ್ನು ಹೋಗಲಾಡಿಸಲು ಶ್ರೀಕೃಷ್ಣ

ಗುರುವಿನ ಆಶ್ರಯ ಗೀತೆಯ ಮೊಳಕೆ

ನಲ್ಲದೆ ಮತ್ತಾವ ಸಮರ್ಥರೂ ಸಮಂಜಸವಾಗಿ ಹೇಳುವವರೂ ಇಲ್ಲ; ತಿಳಿವಳಿಕೆ ಮುಚ್ಚಿಹೋಗಿರುವ ದೋಷದಿಂದ ಕೂಡಿರುವ ಹುಟ್ಟುವರ್ತನೆಗಳುಳ್ಳವನೂ, ೬ ೩೯ ಧರ್ಮದ ವಿಚಾರದಲ್ಲಿ ಕವಿದಿರುವ ಮಂಕುತನದ ಮನಸ್ಸುಳ್ಳವನೂ ಆಗಿ ಮಾಡುವ

ಶಿಷ್ಯತ್ವವೇ ಉಪದೇಶಕ್ಕೆ ಮೂಲ

ಪ್ರಾರ್ಥನೆ :—ಯಾವುದು ಶ್ರೇಯಸ್ಕರವೋ ಅದನ್ನು ನಿಶ್ಚಯಿಸಿಹೇಳಬೇಕು; ಶಿಷ್ಯನಾಗಿದೇನೆ; ನಾನುವನ್ನು ಶರಣುಹೊಂದಿ ಬಂದವನಿಗೆ ಜ್ಞಾನೋಪದೇಶಮಾಡಬೇಕಾಗಿ ಪ್ರಾರ್ಥನೆ." ೨ ೭

ಓಂ ತತ್ಸತ್

ಎಂಬದಾಗಿ ಶ್ರೀಮದ್ಭಗವದ್ಗೀತಾ ವಿಷಯ ವಿಭಜನ ಸಂಯೋಜನಪೂರ್ವಕ ಸಂಪುಟೀಕೃತ ಗೀತಾಕೃತಿಯಲ್ಲಿ 'ಗೀತೆಯ ಮೊಳಕೆ' ಯೆಂಬ ಎರಡನೆಯ ಕನ್ನಡ ಪ್ರಬಂಧವು.

---

* ಬ್ರಾಹ್ಮಣ ಧರ್ಮದ ಪರಮಗುರಿಯು ಆತ್ಮಲಾಭ. ಆತ್ಮಲಾಭಾನ್ನ ಪರಂ ವಿದ್ಯತೇ ಎಂಬ ಸೂತ್ರವನ್ನು ಪ್ರಾಯಶ್ಚಿತ್ತ ಪ್ರಕರಣದಲ್ಲಿ ಸೇರಿಸಿ ಆತ್ಮಲಾಭವು ಉತ್ತಮೋತ್ತಮವಾದ ಪ್ರಾಯಶ್ಚಿತ್ತವೆಂದು ತಿಳಿಸಿರುವುದು.

ಶ್ರೀ ಯೋಗಾನಂದ ಗುರವೇನಮಃ

ಸಂಪುಟೀಕೃತ ಶ್ರೀಮದ್ಭಗವದ್ಗೀತಾ ಶ್ಲೋಕಪ್ರಬಂಧಗಳ ಕನ್ನಡ ಗದ್ಯಾನುವಾದ ಪ್ರಬಂಧಗಳು

ಮೂರನೆಯ ಪ್ರಬಂಧವು

ಅರಿವು

ಯಾವುದನ್ನು ತಿಳಿದು ಮುನಿಗಳೆಲ್ಲರೂ ಉತ್ತಮಸಿದ್ಧಿಯನ್ನು ಹೊಂದಿ
ಪರಂಧಾಮುವನ್ನೈದಿದರೋ, ಜ್ಞಾನಿಗಳಲ್ಲೆಲ್ಲಾ ಶ್ರೇಷ್ಠವಾದ ಅಂತಹ ಜ್ಞಾನ
ವನ್ನು ಮತ್ತೆ ವಿವರಿಸಿ ಹೇಳಲಾಗುವುದು. ಅನುಭವವೆಂಬ ವಿಜ್ಞಾನ ೧೪ ೧
ದಿಂದ ಕೂಡಿದ ತಿಳಿವಳಿಕೆಯನ್ನು ಪಡೆದು ಅಶುಭವಾದ ಅವಿದ್ಯೆಯಿಂದ ಬಿಡುಗಡೆ
ಯನ್ನು ಹೊಂದಬಹುದು. ಈ ಜ್ಞಾನವು ಕೇವಲ ರಹಸ್ಯದಲ್ಲಿ ಇರಬೇಕಾದುದು.
ಅಸೂಯಾದಿಗಳಿಲ್ಲದವರಿಗೆ ಮಾತ್ರ ಬಿಡಿಸಿ ಹೇಳಲ್ಪಡುವುದು. ಈ ೯ ೧
ಜ್ಞಾನವು ವಿದ್ಯೆಗಳಿಗೆಲ್ಲಾ ರಾಜನಂತೆ ಮೇಲ್ಪಟ್ಟು "ರಾಜವಿದ್ಯೆ" ಎನಿಸುವುದು,
ರಕ್ಷಿಸಬೇಕಾದವುಗಳಲ್ಲಿ ರಾಜನಂತೆ ಅತಿ ಮುಖ್ಯವಾದುದು; ಶುದ್ಧಿಗೊಳಿಸ
ತಕ್ಕದ್ದು ಮತ್ತು ಅತ್ಯುತ್ತಮವಾದದ್ದು; ಸಾಕ್ಷಾತ್ತಾಗಿ ತಿಳಿವಳಿಕೆಗೆ ಬರುವುದು;
ಧರ್ಮಸಮ್ಮತವಾದದ್ದು; ಬಹಳ ಸುಲಭವಾಗಿ ಆಚರಿಸಲು
ಅನುಕೂಲವಾಗಿರುವುದು; ಅಳಿವಿಲ್ಲದುದು. ಧರ್ಮದಲ್ಲಿ ೯ ೨
ನಂಬಿಕೆ ಭಕ್ತಿಗಳನ್ನಿಡದ ಮನುಷ್ಯರು ನಾನುವನ್ನು ಪಡೆಯದೆ, ಮೃತ್ಯು(ಭಯ
ಅಥವಾ ಸಾವು=ಕಷ್ಟ) ರೂಪವಾದ ಹುಟ್ಟು ಸಾವುಗಳೆಂಬ ಸಂಸಾರಮಾರ್ಗವನ್ನು
ದಾಟದೆ ಉತ್ತಮ ಮಾರ್ಗದಿಂದ ಹಿಮ್ಮುಖರಾಗಿ ನಿಲ್ಲುವವರಾಗುತ್ತಾರೆ. ೯ ೩
ಈ ಜ್ಞಾನವನ್ನು ಆಶ್ರಯಿಸಿ ನಾನುವಿನ ಸಮಾನಧರ್ಮವನ್ನು ಹೊಂದಿದವರು
ಸೃಷ್ಟಿಕಾಲದಲ್ಲಿ ಹುಟ್ಟುವುದೇ ಇಲ್ಲ, ಅಥವಾ ಕೊನೆಯಲ್ಲಿ ಅಳಿಯುವಾಗ ಕೊರಗು
ವುದೂ ಇಲ್ಲ. ಅನುಭವವೆಂಬ ವಿಜ್ಞಾನದೊಡನೆ ಕೂಡಿದ ಜ್ಞಾನವು ೧೪ ೨
ಪೂರ್ಣವಾಗಿ ವಿವರಿಸಿ ಹೇಳಲ್ಪಡುವುದು. ಇದನ್ನರಿತರೆ ಬೇರೆ ತಿಳಿಯಬೇಕಾ
ದುದು ಯಾವುದೂ ಇರುವುದಿಲ್ಲ. ೭ ೨

ಅರಿವಿನ ಹೆಚ್ಚುಗಾರಿಕೆ

(ಅ) ಬಾಯಾರಿಕೆಯನ್ನು ಹೋಗಲಾಡಿಸಿಕೊಳ್ಳಬೇಕೆಂಬ ಅಥವಾ
ಸ್ನಾನವೇ ಮೊದಲಾದ ಶುಚಿಯ ಕೆಲಸಗಳನ್ನು ಮಾಡಿಕೊಳ್ಳಬೇಕೆಂಬ ಮನು

ಷ್ಯನಿಗೆ ಕೆರೆ, ನದಿ, ಭಾವಿ ಮೊದಲಾದುವುಗಳಲ್ಲಿ ಎಲ್ಲ ಕಡೆಗಳಲ್ಲಿ ನೀರು ತುಂಬಿ ತುಳುಕಾಡುತ್ತಿರುವಾಗಲೂ ಸಹ ಸ್ವಲ್ಪ ನೀರಿನಿಂಥ ಅಥವಾ ನೀರಿನ ಪ್ರದೇಶ ದಿಂದ ಆವಶ್ಯಕವಾದಷ್ಟು ಉಪಯೋಗವು ಪೂರ್ಣವಾಗುವಹಾಗೆ ಅಜ್ಞಾನವನ್ನು

ಅರಿವಿನ ಮೂಲಾಧಾರ

ಹೋಗಲಾಡಿಸಿಕೊಂಡು ಬ್ರಾಹ್ಮಣಧರ್ಮದ ಸಾರವನ್ನು ತಿಳಿಯ ಬೇಕೆಂಬ ಬ್ರಾಹ್ಮಣಧರ್ಮಾನುಯಾಯಿಗೆ ವೇದಗಳು ಅನೇ ಕವಾದ ಬ್ರಾಹ್ಮಣ ಧರ್ಮದ ವಿಷಯಗಳಿಂದ ತುಂಬಿರುವುದಾದರೂ ಅವುಗಳ ಯಾವುದಾದರೊಂದು ಭಾಗದಿಂದಲೇ ಬ್ರಾಹ್ಮಣಧರ್ಮಜ್ಞಾನವೆಂಬ ಆವಶ್ಯಕ ವಾದಷ್ಟು ಉಪಯೋಗವು ಪೂರ್ಣವಾಗುವುದು. ೨ ೪೬

(ಆ) ಬಾಯಾರಿಕೆಯನ್ನು ಹೋಗಲಾಡಿಸಿಕೊಳ್ಳಬೇಕೆಂಬ ಅಥವಾ ಸ್ನಾನವೇ ಮೊದಲಾದ ಶುಚಿಯ ಕೆಲಸಗಳನ್ನು ಮಾಡಿಕೊಳ್ಳಬೇಕೆಂಬ ಮನುಷ್ಯನಿಗೆ ಕೆರೆ, ನದಿ ಮತ್ತು ಭಾವಿ ಮೊದಲಾದವುಗಳಲ್ಲಿ ಎಲ್ಲೆಡೆಯಲ್ಲಿಯೂ ನೀರು ತುಂಬಿ ತುಳು ಕುತ್ತಿರುವಾಗಲೂ ಸಹ ಸ್ನಾನಪಾನಾದಿಗಳ ವಿಷಯದಲ್ಲಿ ಎಷ್ಟು ಮಾತ್ರ ಉಪ ಯೋಗವಾಗುವುದೋ ಹಾಗೆ, ತಿಳಿಯುವವನಾದ ಬ್ರಾಹ್ಮಣಧರ್ಮಾನುಯಾಯಿಗೆ ಬ್ರಾಹ್ಮಣಧರ್ಮಪ್ರತಿಪಾದಕವಾದ ಅನೇಕ ವಿಷಯಗಳಿಂದ ನಿಬಿಡವಾಗಿರುವ ವೇದಗಳಲ್ಲಿ ಬ್ರಾಹ್ಮಣಧರ್ಮಸಾರದ ಜ್ಞಾನವುಂಟಾಗುವಷ್ಟು ಮಾತ್ರವೇ ಉಪ ಯೋಗವು. ೨ ೪೬

(ಇ) ಸುತ್ತಮುತ್ತಲೂ ಎಲ್ಲೆಡೆಯಲ್ಲಿಯೂ ಕೆರೆ, ನದಿ ಮೊದಲಾದುವುಗಳು ನೀರಿನಿಂದ ತುಂಬಿರುವಾಗ, ನೀರು ಕುಡಿಯುವುದೇ ಮೊದಲಾದ ಅಪೇಕ್ಷೆಗಳನ್ನು ನೆರವೇರಿಸಿಕೊಳ್ಳುವವನಿಗೆ (ಅವನ ಶಕ್ತಿ, ಸ್ಥಿತಿ, ಉದ್ದೇಶವೇ ಮೊದಲಾದ ಸನ್ನಿ ವೇಶಗಳಿಗೆ ತಕ್ಕಂತೆ) ಅನುಕೂಲವಾದ ಜಲಾಶಯದ ಪ್ರದೇಶ ಅಥವಾ ನೀರಿನ ಭಾಗದಿಂದ ಪ್ರಯೋಜನವಾಗುವಹಾಗೆ ಅನುಭವಜ್ಞಾನ ವಿಷಯಗಳಿಂದ ನಿಬಿಡ ವಾದ ವೇದರಾಶಿಯಲ್ಲಿ (ಅವನವನ ಶಕ್ತಿ, ಸ್ಥಿತಿ, ಉದ್ದೇಶವೇ ಮೊದಲಾದ ಸನ್ನಿ ವೇಶಗಳಿಗೆ ತಕ್ಕಂತೆ) ವೇದರಾಶಿಯ ಅನುಕೂಲವಾದ ಯಾವುದಾದರೊಂದಂಶ ದಿಂದಲೇ ಅನುಭವಜ್ಞಾನವನ್ನು ಹೊಂದಲೆಳಸಿದ ಬ್ರಾಹ್ಮಣಧರ್ಮಾನುಯಾಯಿಗೆ ಪ್ರಯೋಜನವಾಗುವುದು.§ ೨ ೪೬

---

*ಸರ್ವೇಷು ವೇದೇಷು=ಎಲ್ಲ ವೇದಗಳಲ್ಲಿ ಅಥವಾ ಪ್ರತಿಯೊಂದು ವೇದ-ವೇದ ಭಾಗದಲ್ಲಿ

§ ಈ ಶ್ಲೋಕದಲ್ಲಿಯ ಉಪಮಾನೋಕ್ತಿಗಳಿಂದ ಆಯಾ ವ್ಯಕ್ತಿಯ ಅಂತಸ್ತು ಅಧಿ ಕಾರಗಳೂ ಸ್ಪಷ್ಟಪಡುವುವು.

“ ಈ ಶರೀರವು ಕ್ಷೇತ್ರವೆನಿಸುವುದು. ಈ ಕ್ಷೇತ್ರವನ್ನು ತಿಳಿಯುವವನು
ಮತ್ತು ಕ್ಷೇತ್ರದಿಂದ ಬೇರೆಯಾದವನೆನಿಸಿಕೊಂಡು ಕ್ಷೇತ್ರದಲ್ಲಿರುವವನು ಕ್ಷೇತ್ರ

ಕ್ಷೇತ್ರಮತ್ತು ಕ್ಷೇತ್ರಜ್ಞರ ವಿಚಾರ

ಜ್ಞನು ”† ಎಂಬದಾಗಿ ಕ್ಷೇತ್ರ ಕ್ಷೇತ್ರಜ್ಞರ ವಿಚಾರವನ್ನು
ಬಲ್ಲವರು ಹೇಳುತ್ತಾರೆ. “ ಆ ಕ್ಷೇತ್ರವು ಯಾವಲಕ್ಷಣ ೧೩ ೧
ವುಳ್ಳದ್ದು ? ಯಾವ ಗುಣಗಳುಳ್ಳದ್ದು ? ಎಂತೆಂತಹ ಬದಲಾ
ವಣೆಯ ರೂಪಗಳನ್ನು ಒಳಗೊಂಡಿರುವುದು ? ಯಾವ ಅಂತಹ ಬದಲಾವಣೆಗಳ
ಕ್ಷೇತ್ರದ ಆಶ್ರಯದಲ್ಲಿ ಯಾವ ಯಾವ ಕೆಲಸಗಳು ನಡೆಯುತ್ತವೆ” ಎಂಬುದನ್ನೂ
ಮತ್ತು ‘ ಆ ಕ್ಷೇತ್ರಜ್ಞನು ಯಾವ ಲಕ್ಷಣಗಳುಳ್ಳವನು ? ಯಾವ ಮಹಿಮೆಗಳು
ಳ್ಳವನು ? ’–ಎಂಬುದನ್ನೂ ಸಹ ಅಡಕವಾಗಿ ಇಲ್ಲಿ ಹೇಳಲಾಗುವುದು. ೧೩ ೩
ಈ ವಿಷಯವು ಬಗೆಬಗೆಯಾದ ಛಂದಸ್ಸುಗಳಲ್ಲಿ ಬೇರೆಬೇರೆಯಾಗಿ ಋಷಿಗಳಿಂದ
ಗಾನಮಾಡಲ್ಪಟ್ಟಿರುವುದು. ವ್ಯಾಸಮಹರ್ಷಿಗಳು ರಚಿಸಿರುವ, ಸಕಾರಣವಾದ
ನಿರ್ಣಯಗಳುಳ್ಳ ಬ್ರಹ್ಮಸೂತ್ರಗ್ರಂಥದ ವಾಕ್ಯ ಮತ್ತು ಶಬ್ದಗಳಿಂದ ವಿಸ್ತಾರ
ವಾಗಿ ವಿವರಿಸಲ್ಪಟ್ಟಿರುವುದು. ೧೩ ೪

ಅವ್ಯಕ್ತವಾದ ಮೂಲಪ್ರಕೃತಿ ಅಥವಾ ಮಾಯೆ ; ಬುದ್ಧಿ ; ಅಹಂಕಾರ ;
ಮನಸ್ಸು; ಜ್ಞಾನ ಮತ್ತು ಕರ್ಮಗಳ ಹತ್ತು ಇಂದ್ರಿಯಗಳು ; ಜ್ಞಾನೇಂದ್ರಿಯ

ಕ್ಷೇತ್ರ

ಗಳಿಗೆ ಕಾಣುವ ಶಬ್ದವೇ ಮೊದಲಾದ ಐದು ವಿಷಯಗಳು,–
ಮತ್ತು ಆಕಾಶ, ವಾಯು, ಅಗ್ನಿ, ಜಲ ಮತ್ತು ಭೂಮಿ
ಗಳೆಂಬ ಮಹಾ ವಸ್ತುಗಳು ಇವೆಲ್ಲಾ ಸೇರಿ ಆಗುವ ಇಪ್ಪತ್ತನಾಲ್ಕು ತತ್ವ ೧೩ ೫
ಗಳೂ ; ಬಯಕೆ, ಹಗೆತನ, ಸುಖ ಮತ್ತು ದುಃಖಗಳೂ ; ದೇಹ ಮತ್ತು ಇಂದ್ರಿ
ಯಗಳ ಕೂಟವೂ ; ಸತ್ವಮಯವಾದ ಬುದ್ಧಿಯೂ ; ‘ ಚಿತ್ ’ ಎಂಬ ವಸ್ತುವಿನ
ಪ್ರತಿಬಿಂಬವನ್ನು ಧರಿಸಬಲ್ಲ ಮತ್ತು ಸತ್ವಮಯವಾಗಿಯೂ, ಬುದ್ಧಿಯ ಪರಿ
ಣಾಮವಾಗಿಯೂ ಇರುವ ಚೇತನವೂ ; ದೇಹೇಂದ್ರಿಯಗಳನ್ನು ಧರಿಸುವ ಧೈರ್ಯ
ವೆಂಬ ಶಕ್ತಿಯೂ ಕ್ಷೇತ್ರವೆನಿಸುವುವು. ಇವುಗಳೆಲ್ಲವೂ ಬದಲಾವಣೆಗೆ ಒಳಪಟ್ಟು
ಅವುಗಳ ಸಮೇತವಾಗಿಯೇ ಇರುವುವು. ೧೩ ೬

ಹೆಚ್ಚುಗಾರಿಕೆಯ ಭಾವನೆಯಿಲ್ಲದಿರುವುದು ; ತೋರಣೆಗಾಗಿ ಕೆಲಸಗಳನ್ನು
ಕೈಗೊಳ್ಳದಿರುವುದು ; ಹಿಂಸೆಮಾಡದಿರುವುದು ; ತಪ್ಪು ಮನ್ನಿಸುವ ಸೈರಣೆ; ಮರೆ
ಮಾಜದೆ ಸರಳವಾಗಿರುವುದು ; ಆಚಾರ್ಯಸೇವೆ ; ಶುಚಿಯಾಗಿರುವಿಕೆ ; ಚಂಚಲ

ಜ್ಞಾನ-ಅರಿವು

ವಿಲ್ಲದೆ ಸ್ಥಿರವಾದ ಮನಸ್ಸಿನಿಂದ ಕೂಡಿರುವುದು ; ನಾನುವಿನ
ಅರಿವಿಗೋಸ್ಕರ ದೇಹೇಂದ್ರಿಯಗಳನ್ನು ಪಳಗಿಸುವುದು ;

† ಮನೆ ಮತ್ತು ಮನೆಯ ಯಜಮಾನ ಎಂಬಂತೆ.

ಇಂದ್ರಿಯಗಳಿಗೆ ಬೇಕಾದ ವಿಷಯಗಳನ್ನು ಪಡೆದಿದ್ದರೂ ಅವುಗಳ ೧೩. ೭
ಮೇಲಿನ ಪ್ರೀತಿಯನ್ನು ಬಿಟ್ಟಿರುವುದು ; ಹೆಮ್ಮೆಯಿಲ್ಲದಿರುವುದು ; ಹುಟ್ಟು, ಸಾವು, ಮುಪ್ಪು-ರೋಗ ಮತ್ತು ದುಃಖಗಳೇ ಮೊದಲಾದ ಕುಂದುಕೊರತೆಗಳನ್ನು ಮನಗಾಣುವುದು ; ಪ್ರಾಪಂಚಿಕ ವಿಷಯಗಳ ಸೋಂಕಿಲ್ಲದಿರುವುದು ; ಮಕ್ಕಳು ೧೩. ೮
ಹೆಂಡತಿ ಮತ್ತು ಮನೆ ಮೊದಲಾದುವುಗಳಲ್ಲಿ ಪ್ರೀತಿಯು ಬಹುವಾಗಿ ಬೇರೂರದಂತೆ (ನಾಟದಂತೆ) ಇರುವುದು ; ಬೇಕಾದವುಗಳು ಮತ್ತು ಬೇಕಿಲ್ಲದವುಗಳು ಒದಗಿದಾಗ ಚಿತ್ತವನ್ನು ಹಿಗ್ಗಿಸಿ ಅಥವಾ ಕುಗ್ಗಿಸಿ ಬದಲಾಯಿಸದೆ ಯಾವಾಗಲೂ ಒಂದೇಸಮನಾಗಿಟ್ಟುಕೊಳ್ಳುವುದು. ಬೇರೇಕಡೆ ಗೋಜಿಲ್ಲದೆ ನಾನುವಿ ೧೩. ೯
ನಲ್ಲಿ ಮಾತ್ರವೇ ಮನಸ್ಸನ್ನು ಒಂದುಗೂಡಿಸುವ ಯೋಗದಿಂದ ಅತ್ತಿತ್ತ ಚದರದಿರುವ ಭಕ್ತಿಯನ್ನು ನಾನುವಿನಲ್ಲಿಯೇ ಇಡುವುದು ; ಜನಸಂದಣಿ ಹೆಚ್ಚಿಲ್ಲದಿರುವೆಡೆಯಲ್ಲಿರುವುದು ; ಜನಗಳ ಕೂಟದಲ್ಲಿ ಸೇರುವ ಇಚ್ಛೆಯಿಲ್ಲದಿರುವುದು ; ೧೩. ೧೦
ಯಾವಾಗಲೂ ನಾನುವಿನ ವಿಷಯಕವಾದ ಅರಿವಿನಲ್ಲಿ ಮನಸ್ಸಿರುವಿಕೆ ; ತತ್ವಜ್ಞಾನ ಮತ್ತು ಪುರುಷಾರ್ಥಗಳ ವಿಮರ್ಶೆ—ಇವುಗಳಲ್ಲಿ ಒಂದೊಂದೂ ಜ್ಞಾನವೆನಿಸುವುದು. ೧೩. ೧೧

ಅಜ್ಞಾನ=ಮರೆಯಾದ ಅರಿವು

ಇವುಗಳಲ್ಲಿ ಪ್ರತಿಯೊಂದಕ್ಕೂ ಬೇರೆಯಾಗಿರುವುದೇ ಅಜ್ಞಾನ. ಅಂದರೆ ಮರೆಯಾಗಿರುವ ಅರಿವು ಎನಿಸುವುದು. ೧೩. ೧೧

ಕ್ಷೇತ್ರಜ್ಞ='ನಾನು'

ಸಮಸ್ತ ಕ್ಷೇತ್ರಗಳಲ್ಲಿರುವ ಕ್ಷೇತ್ರಜ್ಞನನ್ನು ನಾನುವೆಂದೇ ತಿಳಿಯಬೇಕು. 'ಕ್ಷೇತ್ರ ಮತ್ತು ಕ್ಷೇತ್ರಜ್ಞ' ಇವರ ವಿಷಯವಾದ ತಿಳಿವಳಿಕೆಯೇ 'ನಾನುವಿನ ಅರಿವು' ಎಂದು ತಿಳಿಯಬೇಕು. ೧೩. ೨

ಜ್ಞೇಯ ವಸ್ತು

ಯಾವುದನ್ನು ತಿಳಿಯಬೇಕೋ, ಯಾವುದನ್ನು ತಿಳಿದರೆ ಸಾವಿಲ್ಲದ ನಿಜಸ್ಥಿತಿಯನ್ನು ಅನುಭವಿಸಬಹುದೋ ಅಂತಹ ಜ್ಞೇಯ ವಸ್ತುವನ್ನು ವಿವರಿಸಿ ಇಲ್ಲಿ ಹೀಗೆ ಹೇಳಿದೆ. ಪರಬ್ರಹ್ಮ ನಾನುವು ಮೊದಲಿಲ್ಲದುದು (ಆದಿಯಿಲ್ಲದ್ದು.) ಇರುವುದು ಎಂಬ 'ಸತ್', ಇಲ್ಲದಿರುವುದೆಂಬ 'ಅಸತ್' ಇವೆರಡೂ ಸಹ ಅನ್ವಯವಾಗಿಯೂ, ಅನ್ವಯವಾಗದೆಯೂ ವಿವರಣೆಗೆ ನಿಲುಕದೆ ಅನಿರ್ವಚನೀಯವಾಗಿರುವುದು. ಎಲ್ಲೆಡೆಯಲ್ಲಿಯೂ ೧೩. ೧೨
ಕೈಕಾಲುಗಳುಳ್ಳದು ; ಎಲ್ಲೆಡೆಯಲ್ಲಿಯೂ ಕಣ್ಣುಗಳು, ತಲೆಗಳು, ಮುಖಗಳು ; ಎಲ್ಲೆಡೆಯಲ್ಲಿಯೂ ಕಿವಿಗಳುಳ್ಳದು. ಲೋಕದಲ್ಲಿ ಎಲ್ಲವನ್ನೂ ಬಳಸಿ ಕವಿದು ತುಂಬಿಕೊಂಡಿರುವುದು ; ಎಲ್ಲಾ ಇಂದ್ರಿಯಗಳಿಂದಲೂ ಗುಣಗಳಿಂದಲೂ ೧೩. ೧೩
ಬೇರೆಯಾಗಿರುವುದು ; ಇಂದ್ರಿಯಗಳನ್ನೆಲ್ಲಾ ಬಿಟ್ಟಿರುವುದು ; ಯಾವುದರ ಗೋಜೂ ಇಲ್ಲದುದು, ಎಲ್ಲವನ್ನೂ ಹಿಡಿದುಕೊಂಡಿರುವುದು ; ಗುಣವಿಲ್ಲದುದು ;

ಗುಣಗಳನ್ನು ಅನುಭವಿಸತಕ್ಕದ್ದಾಗಿರುವುದು; ಬಹಳ ಸೂಕ್ಷ್ಮವಾಗಿರು ೧೩ ೧೪
ವುದರಿಂದ ಚರಾಚರ ವಸ್ತುಗಳ ಹೊರಗೂ ಒಳಗೂ ಇರುವುದು; ಚಲಿಸುವುದು; ಚಲಿಸದಿರುವುದು; ದೂರದಲ್ಲಿರುವುದು; ಬಳಿಯಲ್ಲೂ ಇರುವುದು; ತಿಳಿವಳಿಕೆಗೂ ಅನುಭವಕ್ಕೂ ಕಷ್ಟವಾಗಿರುವುದು; ಬೇರೆ ಬೇರೆಯಾಗಿರದೆ ಆಕಾಶ ೧೩ ೧೫
ದಂತೆ ಒಂದೇ ಆಗಿದ್ದು ವಸ್ತುಗಳಲ್ಲೆಲ್ಲಾ ಬೇರೆ ಬೇರೆಯಾಗಿರುವಂತೆ ಕಾಣು ವುದು; ವಸ್ತುಗಳನ್ನೆಲ್ಲಾ ಕಾಪಾಡುವುದು; ನುಂಗುವಶಕ್ತಿಯುಳ್ಳದ್ದು ಮತ್ತು ಹುಟ್ಟಿಸುವಶಕ್ತಿಯುಳ್ಳದ್ದು; ‘ತತ್’ ಎಂಬ (ತತ್ = ಅದು) ಶಬ್ದ ೧೩ ೧೬
ದಿಂದ ತಿಳಿಯಲ್ಪಡತಕ್ಕದ್ದು; ಬೆಳಗುವ ವಸ್ತುಗಳಿಗೆಲ್ಲಾ ‘ತತ್ = ಅದು’ ಎನಿಸುವ ಬೆಳಕಾಗಿರುವುದು; ಕತ್ತಲೆಯಿಂದ ಹೊರಗಿರುವುದು; ತಿಳಿವಳಿಕೆ–ಅರಿವು ಆಗಿರುವುದು; ತಿಳಿವಳಿಕೆಯಿಂದ ಸಾಕ್ಷಾತ್ಕರಿಸಲ್ಪಡುವುದು; ಸರ್ವವಸ್ತುಗಳ ಮುಖ್ಯಾವಯವದಲ್ಲಿ ಅಂದರೆ ಬುದ್ಧಿಯಲ್ಲಿ ನೆಲೆಸಿರುವುದು; ೧೩ ೧೭

ಈ ರೀತಿಯಲ್ಲಿ ಕ್ಷೇತ್ರವೂ, ಜ್ಞಾನವೂ ಮತ್ತು ಜ್ಞೇಯ ವಸ್ತುವೂ, ಸಂಗ್ರಹವಾಗಿ ಹೇಳಲ್ಪಟ್ಟವು. ನಾನುವಿನ ಭಕ್ತನಾದವನು ಇದನ್ನು ತಿಳಿದು ಅನುಭವಿಸಿ ನಾನುವಿನಸ್ಥಿತಿಯನ್ನೇ ಹೊಂದುತ್ತಾನೆ. ಅರಿವೆಂಬ ೧೩ ೧೮
ಕಣ್ಣಿನಿಂದ ಕ್ಷೇತ್ರ ಮತ್ತು ಕ್ಷೇತ್ರಜ್ಞರ ಭೇದವನ್ನೂ, ವಸ್ತು = ಪ್ರಾಣಿಗಳು, ಪ್ರಕೃತಿ ಮತ್ತು ದುಃಖದಿಂದ ಬಿಡುಗಡೆ ಇವೆಲ್ಲವನ್ನೂ ತಿಳಿದವರು ಉತ್ತಮಸ್ಥಿತಿಯನ್ನು ಹೊಂದುವರು. ಇಲ್ಲದಿರುವ ವಸ್ತುವಿಗೆ ‘ಇರುವಿಕೆ’ ೧೩ ೩೪
ಎಂಬುದಿಲ್ಲ. ಇರುವ ವಸ್ತುವಿಗೆ ಇಲ್ಲದಿರುವಿಕೆ ಎಂಬುದಿಲ್ಲ. ಸದಸದ್ವಸ್ತುಗಳೆರಡರ ರಹಸ್ಯವನ್ನು ತತ್ತ್ವಜ್ಞಾನಿಗಳು ಮನಗಂಡಿರುತ್ತಾರೆ. ೨ ೧೬

ಪ್ರಕೃತಿ ಮತ್ತು ಪುರುಷ–ಇವೆರಡೂ ಮೊದಲಿಲ್ಲದವೆಂದು ತಿಳಿಯಬೇಕು. ಇಚ್ಛೆ ಮೊದಲಾದ ವಿಕಾರಗಳೂ, ಗುಣಗಳಾದ ಬುದ್ಧಿ ಮತ್ತು ಇಂದ್ರಿಯಗಳೂ ಪ್ರಕೃತಿಯಿಂದ ಉಂಟಾದುವೆಂದು ತಿಳಿಯ

ಪ್ರಕೃತಿ ಮತ್ತು ಪುರುಷ

ಬೇಕು. ಕೆಲಸ, ಕೆಲಸದ ಫಲ, ಕೆಲಸಕ್ಕೆ ಕಾರಣ ೧೩ ೧೯
ಮತ್ತು ಕೆಲಸಮಾಡುವ ವ್ಯಕ್ತಿ–ಇವುಗಳಿಗೆಲ್ಲಾ ಪ್ರಕೃತಿಯೇ ಕಾರಣವು; ಸುಖ ಮತ್ತು ದುಃಖ ಇವುಗಳ ಅನುಭವಕ್ಕೆ ಪುರುಷನೇ ಕಾರಣನು. ಪುರು ೧೩ ೨೦
ಷನು ಪ್ರಕೃತಿಯಲ್ಲಿ ಸೇರಿ ಪ್ರಕೃತಿಯಿಂದುಂಟಾದ ಗುಣಗಳನ್ನು ಅನುಭವಿಸುತ್ತಾನೆ. ಪುರುಷನು ಗುಣಗಳೊಡನೆ ಬೆರೆಯುವುದೇ ಒಳ್ಳೆಯ ಮತ್ತು ಕೆಟ್ಟ ಸನ್ನಿವೇಶಗಳಲ್ಲಿ (ಸ್ಥಿತಿಗಳಲ್ಲಿ) ಹುಟ್ಟುವುದಕ್ಕೆ ಕಾರಣವಾಗಿದೆ. ೧೩ ೨೧

ದೇಹದಲ್ಲಿರುವ ಆದರೆ ದೇಹಕ್ಕೆ ಮೀರಿ (ಬೇರೆಯಾಗಿ) ಪರನೆನಿಸುವ ಪುರುಷನು ತುಂಬಾ ಹತ್ತಿರದಲ್ಲಿರುವುದರಿಂದ ಮೇಲೆ ವಿಚಾರಕನೂ, ಸಂತೋಷದ ಮೂಲಕ ಅನುಕೂಲ ಸಾಕ್ಷಿಯಂತೆ ಒಪ್ಪಿಗೆ ಕೊಡುವವನೂ,

‘ಪುರುಷ’— ‘ನಾನು’; ಲಕ್ಷಣ.

ಸ್ವತಂತ್ರನಾದುದರಿಂದ ಮಹೇಶ್ವರನೂ, ಕಾಪಾಡುವವನೂ, ಸುಖದುಃಖಗಳನ್ನು ಅನುಭವಿಸುವವನೂ ಪರಮಾತ್ಮನು =

ನಾನು ಎನಿಸಿಕೊಂಡಿರುತ್ತಾನೆ. ಹುಟ್ಟದೇ ಇರುವುದರಿಂದ ಅಜನಾದ ೧೩ ೨೨
ನಾನುವು ಹುಟ್ಟುವುದಿಲ್ಲ. ನಿತ್ಯನಾದುದರಿಂದ ಸಾಯುವುದಿಲ್ಲ; ಶಾಶ್ವತನೂ ಪುರಾಣನೂ ಆದ ನಾನುವು ಹಿಂದೂ ಇದ್ದು ಮುಂದೂ ಮತ್ತೆ ಇರುತ್ತಾನೆ ಎಂಬುದಿಲ್ಲ; ಆದುದರಿಂದ ಶರೀರವು ಕೊಲ್ಲಲ್ಪಟ್ಟಾಗ ನಾನುವು ಕೊಲ್ಲಲ್ಪಡುವುದಿಲ್ಲ. ಮೊದಲಿಲ್ಲದಿರುವಿಕೆಯಿಂದಲೂ, ಗುಣವಿಲ್ಲದಿರುವಿಕೆಯಿಂದಲೂ ೨ ೨೦
ಅಳಿವಿಲ್ಲದ ‘ಪರಮ’ ನೆನಿಸಿದ ನಾನುವು ಶರೀರದಲ್ಲಿದ್ದರೂ ಸಹ ಏನನ್ನೂ ಮಾಡುವುದಿಲ್ಲ. ಶರೀರದಿಂದ ನಡೆದ ಕೆಲಸಗಳೊಡನೆ ಅಂಟುವುದೂ ಇಲ್ಲ. ೧೩ ೩೧
ಎಲ್ಲೆಡೆಯಲ್ಲಿಯೂ ಹರಡಿರುವ ಆಕಾಶವು ಅತಿ ಸೂಕ್ಷ್ಮವಾಗಿರುವ ಕಾರಣದಿಂದ ಯಾವುದರೊಡನೆಯೂ ಅಂಟಿಕೊಳ್ಳದಹಾಗೆ, ಎಲ್ಲೆಡೆಯಲ್ಲಿರುವ ನಾನುವು ದೇಹಕ್ಕೆ ಅಂಟಿಕೊಂಡಿರುವುದಿಲ್ಲ. ಒಬ್ಬನೇ ಸೂರ್ಯನು ಪ್ರಪಂಚವ ೧೩ ೩೨
ನ್ನೆಲ್ಲಾ ಬೆಳಗುವಹಾಗೆ ದೇಹವೆಂಬ ಕ್ಷೇತ್ರದಲ್ಲಿದ್ದು ಕ್ಷೇತ್ರೀ ಎನಿಸುವ ನಾನುವು ಕ್ಷೇತ್ರವನ್ನೆಲ್ಲಾ ಬೆಳಗಿಸುತ್ತಾನೆ. ಲೋಕದಲ್ಲಿ ೧೩ ೩೩

ನಾನುವೇ ಕ್ಷೇತ್ರೀ

‘ಕ್ಷರಪುರುಷ’, ‘ಅಕ್ಷರಪುರುಷ’ ರೆಂಬದಾಗಿ ಇಬ್ಬರು ಹೇಳಲ್ಪಡುತ್ತಾರೆ. ಅಳಿವನ್ನು ಹೊಂದುವ ಮನಸ್ಸು ಮತ್ತು ದೇಹಗಳೇ ಮೊದಲಾದ ವಸ್ತುಗಳೆಲ್ಲವೂ ಅಳಿವನ್ನು ಹೊಂದುವ ಪುರುಷನೆಂಬದಾಗಿಯೂ, ಅಳಿವನ್ನು ಹೊಂದದೆ ಶರೀರೇಂದ್ರಿಯಗಳ ನಡುವೆ ಇದ್ದು ಕೂಟಸ್ಥನೆನಿಸುವ ಅವ್ಯಕ್ತವಾದ ಪ್ರಕೃತಿಯು ಅಕ್ಷರಪುರುಷನೆಂತಲೂ ಹೇಳಲ್ಪಟ್ಟದೆ. ಮೂರು ಲೋಕಗಳನ್ನೂ ಒಳಹೊಕ್ಕು ೧೫ ೧೬

ಮೂರು ಬಗೆಯ ‘ಪುರುಷ’

ಕಾಪಾಡುವ, ಅಳಿವಿಲ್ಲದ, ಈಶ್ವರನೆನಿಸಿದ ಉತ್ತಮನಾದ ಪರಬ್ರಹ್ಮ ನಾನುವು ಪರಮಾತ್ಮನೆನಿಸಿ, ಮೇಲೆ ಹೇಳಿದ ಕ್ಷರಾಕ್ಷರಪುರುಷರಿಗೆ ಬೇರೆಯಾಗಿರುತ್ತಾನೆ. ಕ್ಷರಪುರುಷಸ್ಥಿತಿಯನ್ನು ಮೀರಿ, ಅಕ್ಷರಪುರುಷ ೧೫ ೧೭
ಸ್ಥಿತಿಗಿಂತಲೂ ಮಿಗಿಲೆನಿಸಿ ಉತ್ತಮನೆನಿಸಿರುವುದರಿಂದ ವಸ್ತುಪ್ರಪಂಚದಲ್ಲಿಯೂ ಬ್ರಾಹ್ಮಣಧರ್ಮಬೋಧಕವಾದ ವೇದಶಾಸ್ತ್ರಪ್ರಪಂಚದಲ್ಲಿಯೂ ಸಹ ಪುರುಷೋತ್ತಮನೆಂದು ಪ್ರಸಿದ್ಧನಾಗಿರುವವನು ಪೂರ್ಣನಾನುವು. ೧೫ ೧೮

ನಾನುವಿನ ಒಂದು ಸನಾತನಾಂಶವೇ ಈ ಪ್ರಪಂಚದಲ್ಲಿ ಪ್ರಕೃತಿಯಲ್ಲಡಗಿರುವ ಇಂದ್ರಿಯಗಳನ್ನು ಆರನೆಯದಾದ ಮನಸ್ಸಿನ ಸಮೇತ ಆಳುವವನಾಗಿ ಜೀವನೆನಿಸಿಕೊಳ್ಳುವನು. ಯಾವ ಶರೀರವನ್ನು ೧೫ ೭

ಜೀವ ನಾನು ಮತ್ತು ಪ್ರಪಂಚರಚನಾಕ್ರಮ

ಹೊಂದುತ್ತಾನೋ ಅಥವಾ ಯಾವ ಶರೀರವನ್ನು ಬಿಟ್ಟು ಬಿಡುತ್ತಾನೋ ಆಗ ಜೀವನಾನುವು ಹೂವುಗಳಿಂದ ವಾಸನೆಯನ್ನೊಯ್ಯುವ ಗಾಳಿಯಹಾಗೆ–ಇಂದ್ರಿಯಾದಿಗಳನ್ನು ಜತೆಯಲ್ಲಿ ಹಿಡಿದುಕೊಂಡೇ ಮುಂದರಿಯುತ್ತಾನೆ. ಕಿವಿ, ಕಣ್ಣು, ಚರ್ಮ, ನಾಲಿಗೆ, ಮೂಗು ೧೫ ೮
ಮತ್ತು ಮನಸ್ಸುಗಳೆಂಬ ಇಂದ್ರಿಯಗಳನ್ನು ಆಶ್ರಯಿಸಿ ಶಬ್ದಾದಿವಿಷಯಗಳನ್ನು

ಬೆಳಗುತ್ತಾನೆ ಮತ್ತು ಸೇವಿಸುತ್ತಾನೆ. ಹೀಗೆ ದೇಹವನ್ನು ಆಶ್ರಯಿಸಿ ೧೫ ೯
'ಜೀವ', 'ಕ್ಷೇತ್ರಜ್ಞ' ಎನಿಸಿಕೊಳ್ಳುವ ನಾನುವನ್ನು ಕೆಲವರು ಆಶ್ಚರ್ಯದಿಂದ
ತಿಳಿಯುತ್ತಾರೆ; ಕೆಲವರು ಆಶ್ಚರ್ಯವಾಗಿ ಹೇಳುತ್ತಾರೆ; ಮತ್ತೆ ಕೆಲವರು ಆಶ್ಚರ್ಯ
ದಿಂದ ಕಿವಿಯಿಂದ ಕೇಳುತ್ತಾರೆ; ಬೇರೆ ಕೆಲವರು ಕೇಳಿದರೂ ತಿಳಿಯ
ಲಾರರು.* ೨ ೨೯

ಆಕಾರವು ತೋರದೆ ಇರುವ ನಾನುವಿನಿಂದ ಈ ಜಗತ್ತೆಲ್ಲವೂ ಹರಡಿ
ತುಂಬಲ್ಪಟ್ಟಿದೆ. ಸಮಸ್ತ ಚರಾಚರ ವಸ್ತುಗಳೂ ನಾನುವಿನಲ್ಲಿರುತ್ತವೆ. ಆದರೆ
ನಾನುವು ಮಾತ್ರ ಅವುಗಳ ನಾಮರೂಪಗಳಲ್ಲಿ ನೆಲೆಸಿರುವುದಿಲ್ಲ. ೯ ೪
ಚರಾಚರವಸ್ತುಗಳು ಎಲ್ಲಾ ಸಂದರ್ಭಗಳಲ್ಲಿಯೂ ನಾನುವಿನಲ್ಲಿ ಐಕ್ಯವಾಗಿವೆ
ಯೆಂದಲ್ಲ; ಪ್ರಕೃತಿಯನ್ನು ಆಳುವ ನಾನುವಿನ ಯೋಗಮಹಿಮೆಯನ್ನು ವಿಮ
ರ್ಶಿಸಿ ತಿಳಿಯಬೇಕು. ವಸ್ತುಗಳನ್ನೆಲ್ಲಾ ಹಿಡಿದಿರುವವನು, ಆದರೆ ವಸ್ತುಗಳಲ್ಲಿ
ಸೇರದವನು. ನಾಮರೂಪದ ನಾನುವು† ವಸ್ತುಗಳನ್ನೆಲ್ಲಾ ಹುಟ್ಟಿಸಿ ೯ ೫
ಕಾಪಾಡುವವನು. ವಸ್ತುಗಳ ಸ್ಥಿತಿ ಪರಿಣಾಮ ಬೆಳವಣಿಗೆಗಳೂ ಸಹ ನಾನು
ವಿನ ನಾಮರೂಪವೇ. ಆಕಾಶದಲ್ಲಿ ಯಾವಾಗಲೂ ಇರುವ ಮಹತ್ತಾದ ವಾಯುವು
ಪ್ರಪಂಚವನ್ನೆಲ್ಲಾ ತುಂಬಿಕೊಂಡಿದ್ದರೂ ಸಮಸ್ತ ವಸ್ತುಗಳೂ ಇರುವ ಹಾಗೆ
ಸಮಸ್ತ ವಸ್ತುಗಳೂ ನಾನುವಿನಲ್ಲಿವೆಯೆಂದು ಗೊತ್ತುಮಾಡಿಕೊಳ್ಳಬೇಕು. ೯ ೬

ಪ್ರಪಂಚದ ಲಯ ಮತ್ತು ಸೃಷ್ಟಿ

ಒಂದೊಂದು ಕಲ್ಪವು ಮುಗಿಯುವಾಗ ಸಮಸ್ತ ವಸ್ತುಗಳೂ ನಾನುವಿನ
ಪ್ರಕೃತಿಯನ್ನೇ ಹಿಂಬಾಲಿಸಿ ಸೇರಿ ಹೋಗುವುವು. ಕಲ್ಪವು ಮೊದಲಾದಾಗ ಮತ್ತೆ
ಅವನ್ನು ಪ್ರಪಂಚದಲ್ಲಿ ಸೃಷ್ಟಿಸುವವನು 'ನಾನು'; ೯ ೭
ಹೀಗೆ ನಾನುವಿನ ಪ್ರಕೃತಿಯನ್ನು ಅವಲಂಬಿಸಿ, ಪ್ರಕೃತಿಯ
ಅಧೀನತೆಯಿಂದ ಸ್ವತಂತ್ರವಿಲ್ಲದಿರುವ ಈ ವಸ್ತುಸಮೂಹ
ವೆಲ್ಲವನ್ನೂ ಒಂದೂ ಉಳಿಯದಂತೆ ಮತ್ತೆ ಮತ್ತೆ ಸೃಷ್ಟಿಸುವವನು ನಾನು. ೯ ೮
ಆದರೆ ಈ ವಿಧವಾದ ಕೆಲಸಗಳಲ್ಲಿ ಬೆರೆಯದೆ, ಸಂಬಂಧಪಡದೆ, ಉದಾ
ಸೀನನಂತೆಯಿರುವ ನಾನುವನ್ನು ಆ ಸೃಷ್ಟಿಲಯ ಕೆಲಸಗಳು ಕಟ್ಟಿಹಾಕುವುದಿಲ್ಲ.
೯ ೯

---

* ಜ್ಞಾನಸೋಪಾನದ ತುದಿಯನ್ನು ಏರಿದ ಆತ್ಮಜ್ಞರು ನಾನುವಿನ ಅದ್ಭುತವಾದ ಸ್ಥಿತಿಯನ್ನು ಮನಗಂಡಿರುತ್ತಾರೆ; ಕೆಳಗಿನ ಅಂತಸ್ತಿನವರು ನಾನುವಿನ ಲಕ್ಷಣವಿಷಯವಾಗಿ ಮಾತುಗಳಿಂದ ತಿಳಿದಿರುತ್ತಾರೆ, ಇನ್ನೂ ಕೆಳಗಿನವರು ಕೇವಲ ಕೇಳ್ಮೆಯಿಂದ ನಾನುವಿನ ಸ್ಥಿತಿಯನ್ನು ತಿಳಿದಿರುತ್ತಾರೆ, ಮತ್ತೂ ಕೆಳಗಿರುವವರು ನಾನುವಿನ ಸ್ಥಿತಿಯ ವಿಷಯವನ್ನು ಕಿವಿಯಿಂದ ಕೇಳಿದರೂ ಕೂಡ ತಿಳಿಯಲು ಶಕ್ತರಲ್ಲದವರಾಗಿರುತ್ತಾರೆ.

† ನಾನುವಿನ ಸನಾತನಾಂಶವಾದ ಕೃಷ್ಣ ಮೊದಲಾದ ರೂಪದ ನಾನು—ಜೀವ ನಾನು

ನಾನುವಿಗೂ ಸೃಷ್ಟಿ ಲಯ ಕಾರ್ಯಗಳಿಗೂ ಇರುವ ಸಾಕ್ಷಿತ್ವ ಸಂಬಂಧ

ಅಧ್ಯಕ್ಷತೆಯನ್ನು ವಹಿಸಿ ಸಾಕ್ಷಿಯಾಗಿ ನೋಡುತ್ತಿರುವ ನಾನುವಿನಿಂದಲೇ ಪ್ರಕೃತಿಯು ಚರಾಚರವಸ್ತು ಸಮೇತ ಪ್ರಪಂಚವನ್ನು ಹೊರಗೆಡವುತ್ತದೆ. ಮತ್ತು ಕಾರ್ಯಕ್ಷೇತ್ರದಲ್ಲಿ ನಿಲ್ಲಿಸುತ್ತದೆ. ಈ ಕಾರಣದಿಂದ ಜಗತ್ತೆಲ್ಲವೂ ತಿರುತಿರುಗಿ ಮುಂದುವರಿಯುತ್ತದೆ- ೯ ೧೦

ಪ್ರಕೃತಿ

ಭೂಮಿ, ನೀರು, ಬೆಂಕಿ, ಗಾಳಿ, ಆಕಾಶ, ಮನಸ್ಸು, ಬುದ್ಧಿ ಮತ್ತು ಅಹಂ ಕಾರಗಳೆಂದು ನಾನುವಿನ ಪ್ರಕೃತಿಯು ಎಂಟು ಬಗೆಯಾಗಿರುವುದು. ಪ್ರಕೃ ೭ ೪
ತಿಯುಅವಿದ್ಯೆಯೊಡನೆ ಕೂಡಿದಾಗ 'ಅಪರಾಪ್ರಕೃತಿ'ಯೆನಿಸುವುದು. ಇದಲ್ಲದೆ ಬೇರೆ ಉತ್ತಮವಾದ ಮತ್ತು ಕ್ಷೇತ್ರಜ್ಞನೆನಿಸಿ, ಒಳಹೊಕ್ಕು ಜಗತ್ತನ್ನೆಲ್ಲಾ ಧರಿಸುವ ಮತ್ತು ಜಗತ್ತಿಗೆ ಜೀವವಾಗಿ ಪ್ರಾಣಧಾರಣೆಗೆ ಕಾರಣವಾದ ಪ್ರಕೃತಿಯು 'ಪರಾಪ್ರಕೃತಿ' ಯೆನಿಸುವುದು. ೭ ೫

ಪ್ರಕೃತಿಯು ಎರಡು ಬಗೆ

ಸಮಸ್ತ ಚರಾಚರವಸ್ತುಗಳಿಗೆಲ್ಲಾ ಈ ಪರಾಪರ ಪ್ರಕೃತಿಗಳೇ (ಯೋನಿ) ಕಾರಣವಾಗಿರುತ್ತವೆಯೆಂಬುದನ್ನು ಮನದಟ್ಟು ಮಾಡಿಕೊಳ್ಳಬೇಕು. ಇಡೀ ಪ್ರಪಂಚದ ಉತ್ಪತ್ತಿಯೂ ನಾನು; ಸ್ಥಿತಿಯೂ ನಾನು ಮತ್ತು ಅಳಿವೂ ನಾನು. ನಾನುವಿನ ೭ ೬
ಯೋನಿಯು 'ಮಹತ್' ಎಂಬ ಬ್ರಹ್ಮ. (ನಾನುವು). ಅದರಲ್ಲಿ ಗರ್ಭವನ್ನು ಇಡುವವನು 'ನಾನು;' ಅದರಿಂದ ಚರಾಚರ ವಸ್ತುಗಳ ಉತ್ಪತ್ತಿಯು ೧೪ ೩
ಉಂಟಾಗುವುದು.

ಜಗತ್ತಿನ ಉತ್ಪತ್ತಿ

ಪ್ರಪಂಚದಲ್ಲಿರುವ ಯೋಗಿಗಳಲ್ಲೆಲ್ಲಾ ದೇಹವೇ ಮೊದಲಾದ ಯಾವ ಯಾವ ಆಕಾರಗಳು ಉಂಟಾಗುವುವೋ ಅವುಗಳಿಗೆಲ್ಲಾ 'ಮಹತ್' ಎಂಬ ಬ್ರಹ್ಮವೇ ಯೋನಿಯು; ಬೀಜವನ್ನು ನೆಡುವ (ಅಥವಾ ನಾಟುವ-ವಾ-ಕೊಡುವ) ತಂದೆಯು ನಾನು ೧೪ ೪

ಪ್ರಕೃತಿಯಿಂದುಂಟಾದ ಸತ್ವ, ರಜಸ್ಸು, ತಮಸ್ಸುಗಳೆಂಬ ಗುಣಗಳು, ದೇಹಿಯಾದ ಅಳಿವಿಲ್ಲದ ನಾನುವನ್ನು ದೇಹದಲ್ಲಿ ಸೆರೆಹಾಕುವುವು. ೧೪ ೫

ನಾನು ಮತ್ತು ಪ್ರಕೃತಿಯಗುಣಗಳು:

ಆ ಗುಣಗಳಲ್ಲಿ ಸತ್ವಗುಣವು ಕಳಂಕ, ಕೊಳಕು ಮತ್ತು ಕೊರತೆಗಳಿಲ್ಲದಿರುವುದರಿಂದ ರೋಗಾದಿಗಳಿಂದ ಬಿಡಲ್ಪಟ್ಟಿರುವುದು. ಮತ್ತು ಬೆಳಕನ್ನೂ, ಜ್ಞಾನವನ್ನೂ ಕೊಡುವುದು; ದೇಹಿಯಾದ ನಾನುವನ್ನು ಸುಖದೊಡನೆಯೂ, ಜ್ಞಾನದೊಡನೆಯೂ ಸೇರಿ ೧೪ ೬
ಸುವುದು. ರಜೋಗುಣವು ಬಳಿಯಲ್ಲಿರುವ ವಿಷಯಗಳ ಮೇಲೆ ಇರುವ ಪ್ರೇಮಮಯುವೆಂದು ತಿಳಿಯುವುದು; ಬಯಕೆಯೊಡನೆ ಬೆರೆಯಿಸುವುದು. ಆದುದರಿಂದ ದೇಹಿಯಾದ ನಾನುವನ್ನು ಕೆಲಸದೊಡನೆ ಬೆರೆಯುವ ಮಾರ್ಗದಲ್ಲಿ ಸೇರಿಸುವುದು. ತಮೋಗುಣವು ಅಜ್ಞಾನದಿಂದ (ಅರಿವು ಮರೆಯಾಗಿರುವುದರಿಂದ) ೧೪ ೭
ಉಂಟಾಗುವುದು; ಎಲ್ಲಾ ದೇಹಗಳಲ್ಲಿರುವ ನಾನುವನ್ನು ಭ್ರಾಂತಿಗೊಳಿಸು

ವುದು ; ಆದುದರಿಂದ ಕ್ರಮ ತಪ್ಪಿ ನಡೆಯುವಿಕೆ ಮತ್ತು ಜಡರು ಮತ್ತು ನಿದ್ದೆ ಗಳಲ್ಲಿ ದೇಹಿಯಾದ ನಾನುವು ಆಸಕ್ತವಾಗುವಂತೆ ಮಾಡುವುದು. ೧೪ ೮

ಸತ್ವಗುಣವು ಸುಖದಲ್ಲಿ ಫಲಿಸುವುದು. ರಜೋಗುಣವು ಕೆಲಸಮಾಡುವಿಕೆ ಯಲ್ಲಿ ಫಲಿಸುವುದು. ತಮೋಗುಣವಾದರೋ ಅರಿವನ್ನು ಮುಚ್ಚಿಕೊಂಡು ಕ್ರಮ ತಪ್ಪಿ ನಡೆಯುವ ಫಲವನ್ನು ಉಳ್ಳದ್ದಾಗಿರುವುದು. ೧೪ ೯

ಗುಣಗಳು

ರಜೋಗುಣ ತಮೋಗುಣಗಳನ್ನು ತಗ್ಗಿಸಿ ಸತ್ವವು ಕಾಣಿಸಿ ಕೊಳ್ಳುವುದು. ತಮೋಗುಣ ಸತ್ವಗುಣಗಳನ್ನದುಮಿ ರಜೋಗುಣವು ಬಲವಾಗು ವುದು. ರಜೋಗುಣ ಸತ್ವಗುಣಗಳನ್ನು ತುಳಿದು ತಮೋಗುಣವು ಮೇಲಾಗು ವುದು. ಸತ್ವಗುಣದಿಂದ ಜ್ಞಾನೋದಯವಾಗುವುದು. ರಜೋಗುಣದಿಂದ ೧೪ ೧೦
ಅತಿಯಾಸೆಯು ತಲೆದೋರುವುದು. ತಮೋಗುಣದಿಂದ ಕ್ರಮತಪ್ಪಿ ನಡೆಯುವಿಕೆ ಭ್ರಾಂತಿ ಮತ್ತು ಅರಿವಿನ ಮರೆಯಾಗುವಿಕೆಗಳು ಮೂಡುವುವು. ಒಳ್ಳೆಯ ೧೪ ೧೭
ಕೆಲಸಗಳಿಗೆ ಕುಂದಿಲ್ಲದ ಸಾತ್ವಿಕಫಲವೂ, ರಾಜಸ ಕೆಲಸಗಳಿಗೆ ದುಃಖ ಫಲವೂ, ತಮೋಗುಣದ ಕೆಲಸಗಳಿಗೆ ಅರಿವು ಮರೆಯಾಗುವಿಕೆಯ ಫಲವೂ ಉಂಟಾಗುವುವು. ಈ ಶರೀರದಲ್ಲಿ ಎಲ್ಲಾ ಇಂದ್ರಿಯಗಳಲ್ಲಿಯೂ, ಬೆಳಕು ೧೪ ೧೬
(ಜ್ಞಾನ ಶಾಂತಿ) ಉಂಟಾದಾಗ ಸತ್ವಗುಣ ಹೆಚ್ಚಾಗಿರುತ್ತದೆಂದೂ; ೧೪ ೧೧
ಅತ್ಯಾಸೆ, ಕೆಲಸಮಾಡುವ ಸಮಾಲೋಚನೆ ಮತ್ತು ಕೆಲಸದಲ್ಲಿ ತೊಡಗುವಿಕೆ, ಕೆಲಸಗಳ ಕೊನೆಗಾಣದಿರುವಿಕೆ ಮತ್ತು ಬಯಕೆಗಳು-ಇವು ತೋರಿದಾಗ ರಜೋ ಗುಣವು ಬಲವಾಗಿರುವುದೆಂತಲೂ; ತಮೋಗುಣವು ಹೆಚ್ಚಾಗಿರುವಾಗ ೧೪ ೧೨
ಕಣ್ಗತ್ತಲಾಗುವುದು, ಮಂಕು ಕವಿಯುವುದು, ಕೆಲಸದ ಯೋಚನೆಯಿಲ್ಲ ದಿರುವುದು. ಮತ್ತು ಭ್ರಾಂತಿ ಇವುಗಳುಂಟಾಗುವುವೆಂತಲೂ ಹೇಳಲ್ಪಟ್ಟಿರು ವುದು. ೧೪ ೧೩

ಸತ್ವಗುಣವು ಶರೀರದಲ್ಲಿ ತಲೆದೋರಿದಾಗ ದೇಹಿಯು ಶರೀರವನ್ನು ಬಿಟ್ಟರೆ ಆಗ ಉತ್ತಮವಾದ ಜ್ಞಾನವುಳ್ಳವರಿರುವ, ಕುಂದಿಲ್ಲದ ಸನ್ನಿವೇಶ (ಸ್ಥಿತಿ)ಗಳನ್ನೇ ಹೊಂದುತ್ತಾನೆ ; ರಜೋಗುಣವು ಪ್ರಬಲವಾಗಿದ್ದಾಗ ದೇಹವನ್ನು ಬಿಟ್ಟರೆ ಕೆಲಸ ದೊಡನೆ ಬೆರೆಯುವವರ ಸನ್ನಿವೇಶದಲ್ಲಿ ಹುಟ್ಟುವನು ; ತಮೋಗುಣವು ತಲೆ ದೋರಿದಾಗ ಶರೀರವನ್ನು ಕಳೆದರೆ ಮರುಳು ಜನಗಳ ಹೊಟ್ಟೆಯಲ್ಲಿ ಹುಟ್ಟ ಬೇಕಾಗುವುದು. ಸಾತ್ವಿಕರು ಉತ್ತಮಸ್ಥಿತಿಯನ್ನು ಹೊಂದುವರು. ೧೪ ೧೫
ರಾಜಸರು ಮಧ್ಯಮ ಸ್ಥಿತಿಯಲ್ಲಿ ಇರುತ್ತಾರೆ; ನೀಚವಾದ ತಾಮಸಗುಣದಿಂದ ಕೂಡಿದವರು ಕೀಳುಸ್ಥಿತಿಗೆ ಇಳಿಯುತ್ತಾರೆ. ೧೪ ೧೮

ಮರ್ತ್ಯಲೋಕದಲ್ಲಿಯಾಗಲೀ, ಸ್ವರ್ಗದಲ್ಲಿಯಾಗಲೀ ಮತ್ತು ದೇವತೆ ಗಳ ಗುಂಪಿನಲ್ಲಿಯೇ ಆಗಲಿ ಪ್ರಕೃತಿಯಿಂದುಂಟಾದ ಈ ಮೂರು ಗುಣಗಳಿಂದ ಬಿಡುಗಡೆಯನ್ನು ಹೊಂದಿದ ವಸ್ತುವು—ಪ್ರಾಣಿಯು-ಯಾವುದೂ ಇಲ್ಲ. ೧೮ ೪೦

ಸ್ಥಾವರಜಂಗಮಪ್ರಪಂಚದಲ್ಲಿ ಯಾವ ಪ್ರಾಣಿಯು ಹುಟ್ಟಿದರೂ ಆ ಜನ್ಮವು ಕ್ಷೇತ್ರ ಮತ್ತು ಕ್ಷೇತ್ರಜ್ಞರ ಕೂಡುವಿಕೆ—ಕೂಟ—ದಿಂದ ಉಂಟಾಗಿದೆ ಎಂದು ತಿಳಿಯಬೇಕು. ಪುರುಷ, ಗುಣಗಳೊಡನೆ ಕೂಡಿದ ಪ್ರಕೃತಿ ೧೩ ೨೬
ಇವುಗಳನ್ನು ಮೇಲೆ ಹೇಳಿದ ರೀತಿಯಲ್ಲಿ ತಿಳಿಯುವವನು ಯಾವ ಸ್ಥಿತಿಯಲ್ಲಿ ಇದ್ದರೂ ಸಹ ಮತ್ತೆ ಹುಟ್ಟುವುದಿಲ್ಲ. ಯಾರಿಂದ ಕೆಲಸದಲ್ಲಿ ೧೩ ೨೩
ತೊಡಗುವಿಕೆಯು (ಪ್ರವೃತ್ತಿಯು) ಬಹು ಹಿಂದಿನ ಕಾಲದಿಂದಲೂ (ಅನಾದಿಯಿಂದಲೂ) ಉಂಟಾಗಿದೆಯೋ ಅಂತಹ, ಸರ್ವಕ್ಕೂ ಮೊದಲೆನಿಸಿದ ಪುರುಷನನ್ನು ಪಡೆಯಬೇಕು. ಯಾರು ನಾನುವನ್ನು ಹುಟ್ಟದೆ ಇರುವುದರಿಂದ ೧೫ ೪
'ಅಜ' ನೆಂತಲೂ, ಮೊದಲಿಲ್ಲದುದರಿಂದ 'ಅನಾದಿ' ಎಂತಲೂ, ಲೋಕಕ್ಕೆಲ್ಲಾ ಒಡೆಯನಾದ ಮಹೇಶ್ವರನೆಂತಲೂ ತಿಳಿಯುತ್ತಾನೋ ಅವನು, ಮನುಷ್ಯಲೋಕದಲ್ಲಿ ಭ್ರಾಂತಿಯನ್ನು ನೀಗಿದವನಾಗಿ ಸಮಸ್ತ ಪಾಪಗಳಿಂದಲೂ ಬಿಡುಗಡೆ ಹೊಂದುತ್ತಾನೆ. ೧೦ ೩

ಬುದ್ಧಿ (ವಿವೇಕ), ಜ್ಞಾನ, ಭ್ರಾಂತಿಯಿಲ್ಲದಿರುವುದು, ಸಹನೆ, ಸತ್ಯ, ಹೊರಗಿನ ಇಂದ್ರಿಯಗಳ ಹತೋಟಿ, ಅಂತರಿಂದ್ರಿಯಗಳನ್ನು ಪಳಗಿಸುವುದು,

ಪ್ರಾಣಿಗಳ ಸೃಷ್ಟಿ

ಸುಖ, ದುಃಖ, ಇರುವಿಕೆ, ಇಲ್ಲದಿರುವಿಕೆ, ಅಂಜಿಕೆ, ಹೆದರದಿರುವಿಕೆ, ತೊಂದರೆ ಮಾಡದಿರುವಿಕೆ, ಸಮವಾಗಿ ೧೦ ೪
ಕಾಣುವಿಕೆ, ತೃಪ್ತಿ, ತಪಸ್ಸು, ಕೊಡಿಗೆ, ಒಳ್ಳೆಯ ಹೆಸರುವಾಸಿ ಮತ್ತು ಕೆಟ್ಟ ಹೆಸರನ್ನು ಹೊಂದುವುದು—ಈ ವಿಧವಾದ ಪ್ರಾಣಿಗಳ ಭಾವನೆಗಳೆಲ್ಲವೂ ಬೇರೆ ಬೇರೆಯಾಗಿ ನಾನುವಿನಿಂದಲೇ ಉಂಟಾಗುವುವು. ನಾನುವಿನ ಮನಸ್ಸಿನ ೧೦ ೫
ಆಲೋಚನೆಯ ಮಾತ್ರದಿಂದ ಮೊದಲು ಹುಟ್ಟಿದವರು ಏಳು ಜನ ಮಹರ್ಷಿಗಳು ಮತ್ತು ನಾಲ್ಕು ಜನ ಮನುಗಳು. ಅವರಿಗೆ ಸೇರಿದ ಈ ಲೋಕದಲ್ಲಿ ಈ ಪ್ರಜೆಗಳು ಹುಟ್ಟಿರುತ್ತಾರೆ. ೧೦ ೬

ಬುಡವು ಮೇಲಾಗಿಯೂ ಕೊಂಬೆಗಳು ಕೆಳಮುಖವಾಗಿಯೂ ಇರುವ ಅಳಿವಿಲ್ಲದುದನ್ನು ಅಶ್ವತ್ಥ* ವೆನ್ನುವರು. ವೇದಗಳೇ ಇದರ ಎಲೆಗಳು.

---

* ಅಶ್ವತ್ಥ=ಅಶ್ವ ಎಂದರೆ ಕಿರಣ, ಕಾಂತಿ, ತೇಜಸ್ಸು, ಶಕ್ತಿ, ವಿದ್ಯುಚ್ಛಕ್ತಿ. ಅಶ್ವವು ಸೇರಿರುವ ಸ್ಥಳ ಅಶ್ವತ್ಥ=ಶಕ್ತಿಯನ್ನು ವಹಿಸಿ ಒಯ್ಯುವುದಕ್ಕೆ ಬೇಕಾದ ವಾಹನವೆನಿಸುವ ವಸ್ತು. ಇದೇ 'ನರಮಂಡಲ'. ಶರೀರವೆಲ್ಲಾ ನರಗಳಿಂದ ವ್ಯಾಪಿಸಲ್ಪಟ್ಟಿರುವುದು. ನರಮಂಡಲದ ಮೂಲಸ್ಥಾನ 'ಮಿದುಳು'. ಇದು ಶರೀರದ ಉತ್ತಮಾಂಗದಲ್ಲಿ ತಲೆಯ ಬುರುಡೆಯಲ್ಲಿರುವುದು. ಈ ಮೂಲದಿಂದ ಹೊರಟು (ಮೂಲ=ಬುಡ) ಕವಲುಗಳಿಂದ ಕೂಡಿ ಮುಖ್ಯ ನರವು ಬೆನ್ನು ಮೂಳೆಗಳ ಮಧ್ಯೆ ಸುರಕ್ಷಿತವಾಗಿ ಸೊಂಟದವರೆಗೂ ಹೋಗಿ, ಅಲ್ಲಿ ಎರಡು ಕವಲಾಗಿ ಕಾಲುಗಳ ಕಡೆ ಪ್ರವೇಶಿಸುವುದು. ಈ ನರಗಳೇ ಹುರಿ (ಗುಣ) ಗಳಂತೆ ಶರೀರದ

ಆಧಾರ ಶಕ್ತಿ   ಇದರ ತತ್ತ್ವಾರ್ಥವನ್ನು ತಿಳಿದವನು ಬ್ರಾಹ್ಮಣ ಧರ್ಮವನ್ನು

ಲ್ಲೆಲ್ಲಾ ಕೆಳಗೆ, ಮೇಲೆ ಮತ್ತು ಪಕ್ಕಗಳಲ್ಲೆಲ್ಲಾ ಹರಡಿಕೊಂಡಿರುವುವು. ಇವುಗಳು ಯಾವಾಗಲೂ ವಿಷಯಗಳೊಡನೆ ಬೆರೆಯುವುದಾಗಿರುವುದರಿಂದ ವಿಷಯಗಳೇ ಚಿಗುರುಗಳಂತೆ ವರ್ಣಿತವಾಗಿವೆ. ಇವುಗಳನ್ನು ಎಲೆಗಳಂತೆ ಮುಚ್ಚಿಕೊಂಡಿರುವ ಮಾಂಸಖಂಡ, ಚರ್ಮ, ರಕ್ತನಾಳಾದಿಗಳೇ ಇವುಗಳಿಗೆ ಛಂದೋಸ್ಥಾನ ಅಂದರೆ ಮುಚ್ಚಿ ಸಂರಕ್ಷಿಸುವ ಸ್ಥಾನ. ಇವುಗಳ ವ್ಯಾಪಾರವು, 'ಬುದ್ಧಿಃ ಕರ್ಮಾನುಸಾರಿಣೀ' ಎಂಬಂತೆ ಹಿಂದು ಹಿಂದಿನಕೆಲಸಗಳ ಫಲದ ವಾಸನೆಗನುಗುಣವಾಗಿಯೂ, ಪ್ರಕೃತಿಯ ವ್ಯಾಪನೆಗನುಗುಣವಾಗಿಯೂ ಇರುವುದು. ಇದೇ ಸಂಸಾರಕ್ಕೆ ಮೂಲಾಧಾರ. ಇದೇ ಜೀವನದ ತಾಯಿಬೇರು.

ತಲೆಯಿಂದ ಹೊರಟು ವಿವಿಧಾಕಾರವಾಗಿ ಕತ್ತಿನಿಂದ ಕೆಳಕ್ಕೆ ಒಂದೇ ಸಮನಾಗಿ ಸೊಂಟದವರೆಗೂ ಮೂಳೆಗಳ ನಳಿಕೆಯಲ್ಲಿ ಹೊರಡುವ ನರದ ಮಧ್ಯಭಾಗದಲ್ಲಿ ಕಣ್ಣಿನಿಂದ ನೋಡಲು ಸಾಧ್ಯವಾಗದಿರುವ ಸೂಕ್ಷ್ಮವಾದ ನಾಡಿ (ನರ) ವೊಂದನ್ನು ಯೋಗಿಗಳು ಅರಿವಿನ ನೋಟದಿಂದ ಕಾಣಬಲ್ಲರು. ಇದು ಕುಂಡಲಿನೀ ಎಂದು ಹೇಳಲ್ಪಡುವುದು. ಎಡಬಲಗಳಲ್ಲಿ 'ಇಡಾಪಿಂಗಳ' ನಾಡಿಗಳೆಂದೆನಿಸಿ ಮಧ್ಯೆ ಮೂರನೆಯದಾಗಿರುವ ನಳಿಕೆಯು 'ಸುಷುಮ್ನಾ' ಎಂಬ ಹೆಸರನ್ನು ಹೊಂದಿರುವುದು. ಇದಕ್ಕೆ ಆದ್ಯಂತಗಳನ್ನು ಗುರ್ತಿಸಿ ಹೇಳಲು ಸಾಧ್ಯವಿಲ್ಲ. ಬುಡವು ಮಾತ್ರ ತಲೆಯಲ್ಲಿ ಬಲವಾಗಿ ಊರಿ ನಿಂತಿರುವುದು. ಈ ಕುಂಡಲಿನಿಯ ಅಗ್ರಭಾಗದಲ್ಲಿ ಸುಷುಮ್ನಾ ನಾಡಿಗೆ ಸೇರಿ 'ಸ್ವಯಂಭೂ ಲಿಂಗ' ವಿರುವುದೆಂದೂ, ಇಡಾಪಿಂಗಳಗಳು ಅದನ್ನು ಬಳಸಿದೆ ಯೆಂದೂ, ಈ ಅಗ್ರದಿಂದ ಮೂಲದವರೆಗೂ ಇರುವ ನಾಡಿಯಲ್ಲಿ ಅಲ್ಲಲ್ಲಿ ಚಕ್ರಗಳೆಂಬ ಕೇಂದ್ರಗಳಿವೆಯೆಂದೂ ಹೇಳಲ್ಪಟ್ಟಿದೆ. ಈ ಕೇಂದ್ರಗಳೇ ಕುಂಡಲಿನಿಯ ಮುಖಗಳೆಂದೂ ವರ್ಣಿತವಾಗಿ, ಕುಂಡಲಿನಿಯನ್ನು-ಏಕಮುಖ, ತ್ರಿಮುಖ, ಚತುರ್ಮುಖ, ಷಣ್ಮುಖ ಮತ್ತು ಸಪ್ತಮುಖವಾಗಿ ಭಾವಿಸಿರುತ್ತಾರೆ. ಈ ಕುಂಡಲಿನಿಯೇ ಸರ್ಪ = ಹಾವು = ಸುಬ್ರಹ್ಮಣ್ಯ = ಶಕ್ತಿ—ರೂಪವಾಗಿ ಪರಿಗಣಿಸಲ್ಪಟ್ಟಿದೆ. ಇದೇ ನಾದ. ಅಪರಾಶಕ್ತಿ. ಇದರ ಆಧಾರದಲ್ಲಿ ಪರಾಪ್ರಕೃತಿಯಾದ ಪುರುಷನು ಬಿಂದುರೂಪದಲ್ಲಿ ನೆಲೆಸಿರುವನು. ಶೇಷಶಾಯಿಯ ಮತ್ತು ವಟಪತ್ರಶಾಯಿಯ ನಾಮರೂಪವು ಇದಕ್ಕೆ ಉದಾಹರಣೆಯಾಗಿರುವುದು.

ನರಮಂಡಲಗಳ ವ್ಯಾಪಾರವೇ ಅದಿತಿ, ದಿತಿ ಮತ್ತು ದನುಗಳು; ಮತ್ತು ಅವರಿಂದ ಹುಟ್ಟಿದವರು—ಸುರರು ಮತ್ತು ಅಸುರರು. ಮಿದುಳು, ಅದರ ಭಾಗಗಳು ಮತ್ತು ಪ್ರಧಾನ ಕಾಂಡದಂತಿರುವ ನಾಡಿ (ನರ) ಗಳೇ ದೇವತೆಗಳು ಮತ್ತು ರಾಕ್ಷಸರು. ಈ ನಾಡಿಗಳ ರೂಪಾದಿಗಳನ್ನು ದಿವ್ಯದೃಷ್ಟಿಯಿಂದ ತಿಳಿದು ಅದಕ್ಕೆ ತಕ್ಕಂತೆ ದೇವತೆಗಳು, ರಾಕ್ಷಸರು ಎಂಬ ಹೊರಗಿನ ರೂಪಕಲ್ಪನೆಗಳನ್ನು ಮಾಡಿ ಸಾಮಾನ್ಯ ಜನರ ತಿಳಿವಳಿಕೆಗೆ ಕೊಟ್ಟಿರುತ್ತಾರೆ. ವೇದದಲ್ಲಿ ಹೇಳಿರುವ ಸಮಸ್ತ ದೇವತೆಗಳೂ ಪಿಂಡಾಂಡವೆನಿಸಿದ ಶರೀರದಲ್ಲಿಯೂ, ಬ್ರಹ್ಮಾಂಡವಾದ ಜಗತ್ತಿನಲ್ಲಿಯೂ ಒಂದೇ ವಿಧವಾಗಿ ಭಾವಿಸಲ್ಪಡುತ್ತಾರೆ. ಇದರಿಂದ ತಿಳಿದವರೂ,

ತಿಳಿಯಬಲ್ಲನು. ಈ ಅಶ್ವತ್ಥ ಕೊಂಬೆಗಳು ಕೆಳಗೆ ಮತ್ತು ಮೇಲೆ ೧೫ ೧

ತಿಳಿಯದವರೂ ಸಾಕ್ಷಾತ್ತಾಗಿಯೋ ಪರೋಕ್ಷವಾಗಿಯೋ ಅವರವರ ವಾಸನಾನುಗುಣವಾಗಿ ಶರೀರದೊಳಗೆ ಅಥವಾ ಹೊರಗೆ ನಾನುವನ್ನು ಪೂಜಿಸಿ, ಅನುಭವಿಸಿ ಆನಂದಿಸಬಹುದು. ಈ ಆನಂದವೇ ಕಲ್ಕಿ, ಮಯೂರ. ಗರಿಗಳನ್ನು ತೆರೆದು ನಲಿಯುವ ಮಯೂರ. ಇದೇ ಸುಷುಮ್ನಾ ನಾಡಿಯ ಬುಡದಲ್ಲಿ ಸಹಸ್ರಾರವೆಂಬ ಚಕ್ರದಲ್ಲಿ, ಸುಬ್ರಹ್ಮಣ್ಯನಿಗೆ ಆಶ್ರಯರಾಗಿರುವ ರೂಪ ಕಲ್ಪನೆಗೆ ಆಧಾರ ಬಳ್ಳಿಯಂತೆ ಇರುವ ಇಡಾಪಿಂಗಳ ನಾಡಿಗಳು ವಲ್ಲೀ ದೇವಿಗಳೆಂದೂ, ಸುಬ್ರಹ್ಮಣ್ಯನ ಪತ್ನಿಗಳೆಂದೂ ಕವಿಗಳ ವರ್ಣನೆ ಮತ್ತು ಕುಶಲ ವಿದ್ಯಾನಿಷ್ಣಾತರಾದ ಋಷಿಗಳು ಕೊಟ್ಟಿರುವ ಕಲ್ಪನಾರೂಪಗಳು. ತಲೆಬುರುಡೆ ಎಂಬ ಪರ್ವತರಾಜನ ಆಧಾರದಿಂದ ಮೂಳೆಗಳ ನಳಿಕೆಯಲ್ಲಿ ಹೊರಟು, ಅಗ್ರದಲ್ಲಿ ಸ್ವಯಂಭೂ ಲಿಂಗವನ್ನು ಆಶ್ರಯಿಸಿರುವ ಪಾರ್ವತೀ, ಗಿರಿಜೆ, ಅಂಬಿಕಾ ಮೊದಲಾದ ಹೆಸರುಗಳಿಂದ ಕರೆಯಲ್ಪಡುವ ಕುಂಡಲಿನಿ ಸಹ ಇದೇ ಆಗಿರುತ್ತದೆ. ನಾದದ ದೃಷ್ಟಿಯಿಂದ ನೋಡಿದರೆ ಇದೇ ವೀಣೆ. ಪ್ರತಿಯೊಂದರಲ್ಲಿಯೂ ವ್ಯಕ್ತವಾಗುವ ಸರಸ್ವತಿಯ ವೀಣೆ. ಆನಂದದ ವೀಣೆ. ಸಪ್ತ ಸ್ವರಗಳಲ್ಲಿ ಓಂಕಾರ ನಾದವನ್ನು ಬೀರಿ ಪ್ರಪಂಚವನ್ನೂ, ಬ್ರಹ್ಮಾಂಡಪಿಂಡಾಂಡಗಳನ್ನೂ ಮರುಳುಮಾಡಿ, ಸಾಕ್ಷಾತ್ತಾಗಿಯೋ, ಪರೋಕ್ಷವಾಗಿಯೋ ಸ್ವಸ್ವರೂಪಾನುಭವಕ್ಕೆ ಪ್ರೋತ್ಸಾಹಿಸುವುದು. ಶ್ರೀ ಕೃಷ್ಣನು ಬಾರಿಸುವ ವೇಣುವಿನ ರಚನೆಯೂ ಕುಂಡಲಿನಿಗೆ ಅನುಗುಣವಾಗಿಯೇ ಇರುವುದು.

ಸಮುದ್ರದಂತಿರುವ ಶರೀರದಲ್ಲಿ ನಾದ-ಸರ್ಪ-ಕುಂಡಲಿನೀ-ಶಕ್ತಿಯ ಮೇಲೆ ಬಿಂದು ಪುರುಷನಾದ ‘ಓಂ’ ಕಾರ ನಾರಾಯಣನು ಮಲಗಿರುತ್ತಾನೆ. ಪಿಂಡಾಂಡದ ನಾಡಿಯಲ್ಲಿ ಪರಾ, ಪಶ್ಯನ್ತೀ, ಮಧ್ಯಮಾ, ವೈಖರೀ ಎಂಬ ನಾದೋತ್ಪತ್ತಿಯಾಗುವಂತೆ, ಬ್ರಹ್ಮಾಂಡದಲ್ಲಿಯೂ ಹೊರಡುವುದು. ಇದೇ ಅಪೌರುಷೇಯ ಶಬ್ದನಾದವೆನಿಸುವುದು. ಆದರೂ ಸಾಮಾನ್ಯರ ಅವಗಾಹನೆಗೆ, ನಾರಾಯಣನ ನಾಭೀಕಮಲದಲ್ಲಿ ಹುಟ್ಟಿದ ಹಿರಣ್ಯಗರ್ಭನಿಂದ ಅಪೌರುಷೇಯವೆಂದು ಹೇಳುವ ಶಬ್ದವಾಕ್ಯಗಳು ಅಖಂಡವಾಗಿ ಹೊರಟಿವೆ ಎಂದು ಹೇಳಲಾಗಿದೆ. ಪಂಚಭೂತಗಳಿಗೆ ಸಮಾನವಾಗಿ ಪಂಚಾಯತನದೇವತಾರೂಪಕಲ್ಪನೆಗಳೂ ಇದರ ಆಧಾರದಿಂದಲೇ ಉಂಟಾಗಿವೆ.

ಮೂವತ್ತಮೂರು ಅಥವಾ ಮೂವತ್ತಮೂರು ಕೋಟಿ ದೇವತೆಗಳೂ ಇದರಲ್ಲಿಯೇ ಅಡಕವಾಗಿರುವರು. ಬ್ರಹ್ಮಾಂಡಕುಂಡಲಿನಿಯಲ್ಲಿನ ಜ್ಯೋತಿಶ್ಚಕ್ರದ ಗ್ರಹಗಳೂ ಪಿಂಡಾಂಡದ ಕುಂಡಲಿನಿಯಲ್ಲಿಯೇ ಪ್ರತಿಬಿಂಬಿಸಿದಂತೆ ಇರುವುವು. ಪಿಂಡಾಂಡಕ್ಕೆ ಸೇರಿ ಕುಂಡಲಿನೀ ಶಕ್ತಿಯ ಅದ್ಭುತ ವ್ಯಾಪಾರಗಳು ವಾಲರೂಪದಲ್ಲಿ ಹೊರಗಾಣಿಸಿಕೊಂಡಿರುವ ಆಂಜನೇಯನ ಚರಿತ್ರೆಯನ್ನು ಎಲ್ಲರೂ ತಿಳಿದಿರುತ್ತಾರೆ.

ತಪೋಮಹಿಮೆಯಿಂದ ಸಾತ್ವಿಕ ಮಾರ್ಗದ ಯೋಗಿಗಳು ಸರ್ಪಶಕ್ತಿಯನ್ನು ವಶಮಾಡಿಕೊಂಡು ಅಪರೋಕ್ಷಾನುಭವವನ್ನು ಹೊಂದುವರು. ಮತ್ತು ಸರ್ಪಶಕ್ತಿಯನ್ನು ವಶಮಾಡಿಕೊಂಡು ಯೋಗಿಗಳಾದವರು ರಾಜಸ ತಾಮಸ ವೃತ್ತಿಗಳನ್ನು ಕೈಹಿಡಿದರೆ ರಾಕ್ಷಸರೆನಿಸು

ಹರಡಿಕೊಂಡಿರುವುವು. ಗುಣಗಳಿಂದ ಹುರಿಗಳಂತೆ ಬೆಳೆದಿರುವುವು ವಿಷಯ
ಗಳೆಂಬ ಚಿಗುರುಗಳುಳ್ಳುವು. ಬೇರುಗಳು ಕೆಳಮುಖವಾಗಿಯೇ ಹಬ್ಬುವುವು.
ಹಿಂದು ಹಿಂದಿನ ಕೆಲಸಗಳ ಫಲದ ವಾಸನೆಗಳಿಗೆ ಅನುಸಾರವಾಗಿ ಈ ಮಾನವ
ಪ್ರಪಂಚದಲ್ಲಿ ಕೆಲಸ ಮಾಡತೊಡಗಲು ಸಹಾಯಮಾಡುವುವು. ಈ ಅಶ್ವತ್ಥ
ವೃಕ್ಷಕ್ಕೆ ಆಕಾರವಿಲ್ಲ, ಬುಡವಿಲ್ಲ, ತುದಿಯಲ್ಲ; ಒಂದೇ ಒಂದು ಗೊತ್ತಾದ ೧೫ ೨
ನೆಲೆಯೂ ಇಲ್ಲ. ಮೇಲ್ಗಡೆಯಲ್ಲಿರುವ ಬೇರು ಮಾತ್ರ ಬಲವಾಗಿ ನಾಟ
ನಿಂತಿರುವುದು. ೧೫ ೩

ವರು. ಅಂಥಕ, ನರಕ, ಮಹಿಷ, ರಾವಣ ಇವರ ವರ್ಣನೆ ಮತ್ತು ಚಿತ್ರಗಳೂ ಸಹ ಈ ಅರ್ಥವನ್ನು ವಿಶದಪಡಿಸುವುವು. ಈ ದೃಷ್ಟಿಯಿಂದ ಯೋಗಿಗಳು ಸುರರೂ ಮತ್ತು ಅಸುರ ಅಂದರೆ ರೂಢಾರ್ಥವಾದ ರಾಕ್ಷಸರೂ ಅಗುತ್ತಾರೆ.

ಸರ್ಪಶಕ್ತಿಯನ್ನು ವಶಮಾಡಿಕೊಳ್ಳುವ ಯೋಗಮಾರ್ಗಗಳು ಅನಂತವಾಗಿವೆ. ಆತ್ಮ ಲಾಭದ ದೃಷ್ಟಿಯಿಂದ ಯಾವ ಮಾರ್ಗಹಲ್ಲಿ ಹೊರಟರೂ ಯೋಗಿಯಾಗಬಹುದು. 'ಪ್ರಾಪಂಚಿಕ ಕೆಲಸ, ವಸ್ತು ಇವುಗಳೊಡನೆ ಬೆರೆಯದೆ ಇರುವುದು' ಎಂಬ ಅಸಂಗವೆಂಬ ಶಕ್ತಿಯಿಂದ ಆತ್ಮಲಾಭದಲ್ಲಿ ಮನಸ್ಸನ್ನು ನಾಟಿಸಿದವನು ಇಡಾಪಿಂಗಳಗಳನ್ನು ಎಚ್ಚರಿಸಿ, ಚದರಿಸಿ-ಸ್ವಯಂಭೂಲಿಂಗದ ಆಶ್ರಯದಿಂದ ಸುಷುಮ್ನಾ ನಾಡಿಯಲ್ಲಿ ಆನಂದ ಸುಖವನ್ನು ಅನುಭವಿಸುವನು. ಇದೇ ನಾನುವಿನ ಅಪರೋಕ್ಷಾನುಭವವು.

ತಂತ್ರ ಮಂತ್ರ ಯೋಗ ಶಾಸ್ತ್ರಗಳಲ್ಲಿ ಹೇಳಿರುವ ಅನಂತ ಮಹಿಮೆಯುಳ್ಳ ಮುದ್ರೆಗಳೂ, ಆಸನಗಳೂ ಸಹ ನರ-ವಾ-ನಾಡೀಮಂಡಲಕ್ಕೆ ಸಂಸ್ಕಾರವನ್ನುಂಟುಮಾಡುವುದರಿಂದ ಆನಂದವೆಂಬ ಮೋಕ್ಷವನ್ನು ಹೊಂದುವುದಕ್ಕೆ ದಾರಿಯೆಂದು ವಿವರಿಸಿ ಹೇಳಿರುವುದೂ ಸಹಜವಾಗಿಯೇ ಇದೆ.

ಈ ರೀತಿ ಅನುಭವವು ನಾಡೀ ಶುದ್ಧಿಯಾದವರಿಗೆ ಲಭಿಸುವುದು. ನಾಡೀ ಶುದ್ಧಿಯು, ಸತ್ವಗುಣಾಧಿಕ್ಯದಿಂದ ಉಂಟಾಗುವುದು. ಸಾತ್ವಿಕ ಗುಣವೃದ್ಧಿಗಾಗಿ, ಆಯಾ ಹುಟ್ಟುವರ್ತನೆಗಳಿಗನುಗುಣವಾಗಿ (ಸ್ವಭಾವ, ಸ್ವಕರ್ಮ)–ಯಾವ ಮಾರ್ಗವನ್ನಾದರೂ ಆಶ್ರಯಿಸಬಹುದು. ಸ್ವಕರ್ಮ–ಹುಟ್ಟು ವರ್ತನೆಯ ಧರ್ಮವ್ಯಾಧ, ಕಬೀರ, ನಂದನಾರ್, ಕನಕದಾಸ, ರಾಮದಾಸ ಮತ್ತು ತ್ಯಾಗರಾಜ ಮೊದಲಾದ ಅನೇಕ ಜನ ಬ್ರಾಹ್ಮಣ ಧರ್ಮಯೋಗಿಗಳು ಬ್ರಾಹ್ಮಣ ಭೂಮಿಯಲ್ಲಿ ಮಾರ್ಗದರ್ಶಿಗಳಾಗಿರುವರು.)

ದೇಹಿಯ ದೇಹದಲ್ಲಿ ವಾಸನೆಗೆ ಅಂದರೆ ಸಂಸ್ಕಾರಕ್ಕೆ ಅನುಗುಣವಾಗಿ ವಯಸ್ಸೇ ಮೊದಲಾದ ಬದಲಾವಣೆಗೆ ತಕ್ಕಂತೆ ಬದಲಾವಣೆಯಾಗುವ, ಅಶ್ವತ್ಥವೆಂಬ ನಾದದ ಅವಸ್ಥೆಗಳು ನಾದರೂಪವಾದ ಪ್ರಪಂಚದಲ್ಲಿಯೂ, ಸ್ವಕರ್ಮದಲ್ಲಿಯೂ, ವ್ಯವಹಾರಾದಿಗಳಲ್ಲಿಯೂ ಮತ್ತು ನಾದರೂಪವಾದ ಸಪ್ತಸ್ವರಗಳ ಸಂಯೋಜನೆ ವಿಭಜನೆಗಳುಳ್ಳ ಸಂಗೀತಧ್ವನಿಯ ರಾಗಗಳಲ್ಲಿಯೂ ಪ್ರತಿಬಿಂಬಿಸುತ್ತವೆ. ಮತ್ತು ಪ್ರತಿ ಕ್ಷಣದಲ್ಲಿಯೂ ಅನುಭವವನ್ನುಂಟುಮಾಡುತ್ತಿರುತ್ತವೆ.

ಒಂದು ಸಹಸ್ರ ಚತುರ್ಯುಗಗಳವರೆಗೂ ಬ್ರಹ್ಮನಿಗೆ ಹಗಲು ಇರುವುದೆಂದೂ, ಬ್ರಹ್ಮನ ರಾತ್ರಿಯೂ ಸಹ ಒಂದು ಚತುರ್ಯುಗ ಸಹಸ್ರಗಳವರೆಗೂ ಇರುವುದೆಂದೂ ತಿಳಿಯುವವರು ಅಹೋರಾತ್ರಿಗಳನ್ನು ತಿಳಿದವರೆನಿಸಿಕೊಳ್ಳುತ್ತಾರೆ. ಹಗಲಾದಾಗ ಆಕಾರ ತೋರ ೮ ೧೭
ದಿರುವ ಅವ್ಯಕ್ತವಾದ ಮಾಯಾ ಪ್ರಕೃತಿಯಿಂದ, ಎಲ್ಲಾ ನಾಮ ರೂಪಗಳೂ ಹೊರಪಡುತ್ತವೆ. ರಾತ್ರಿ ಕಾಲದಲ್ಲಿ ಅವ್ಯಕ್ತವು ಎನಿಸುವ ಮಾಯೆಯಲ್ಲೇ ಕೂಡಿ ಹೋಗುವುವು. ಈ ಪಂಚ ೮ ೧೮
ಭೂತಗಳ ಸಮೂಹವು ಕೂಡ ಮೇಲೆ ಹೇಳಿದಂತೆ ಕಾಣುತ್ತದೆ, ಮರೆಯಾಗುತ್ತದೆ; ಮತ್ತೆ ಕಾಣುತ್ತದೆ, ಮತ್ತೆ ಮರೆಯಾಗುತ್ತದೆ. ಹಗಲಾದಾಗ ತಲೆದೋರುತ್ತದೆ. ರಾತ್ರಿಯಾದಾಗ ಮೈಮರೆತು ಮರೆಯಾಗುವುದು. ೮ ೧೯
ಅವ್ಯಕ್ತವಾದ ಅಪರಾಪ್ರಕೃತಿಗಿಂತಲೂ ಶ್ರೇಷ್ಠವಾದ ಮತ್ತು ಬೇರೆಯಾದ ಅವ್ಯಕ್ತ ಭಾವ ಪದಾರ್ಥವು ಪರಾಪ್ರಕೃತಿಯಾಗಿರುವುದು. ಇದಕ್ಕಿಂತಲೂ ಬೇರೆಯಾದ, ಅಳಿದು ಹೋಗುವ ವಸ್ತುಗಳಲ್ಲೆಲ್ಲಾ ಇದ್ದರೂ ಅಳಿವನ್ನು ಹೊಂದದಿರುವ ಪರವಸ್ತುವು 'ನಾನು.' ೮ ೨೦

ಜಗತ್ತಿನ ಸೃಷ್ಟಿ ಮತ್ತು ಲಯಂಗಳ ಕಾಲ

ಉತ್ತಮಸ್ಥಾನ

ವೇದವನ್ನು ಬಲ್ಲವರು ಯಾವುದನ್ನು 'ಅಕ್ಷರ' ವೆಂದು ಹೇಳುತ್ತಾರೋ, ಇಂದ್ರಿಯನಿಗ್ರಹವುಳ್ಳವರೂ ಯತಿಗಳೂ 'ಪ್ರೀತಿ' (ಬಯಕೆ) ಯನ್ನು ತೊರೆದು ಎಲ್ಲಿ ಸೇರುತ್ತಾರೋ ಮತ್ತು ಯಾವುದನ್ನು ಅಪೇಕ್ಷಿಸಿ ಬ್ರಹ್ಮಚರ್ಯ ವ್ರತವನ್ನು ಆಚರಿಸುತ್ತಾರೋ ಅಂತಹ ಉತ್ತಮವಾದ ಸ್ಥಾನದ ವಿಚಾರವನ್ನು ಸಂಗ್ರಹವಾಗಿ ಹೇಳಲಾಗುವುದು: ಅವ್ಯಕ್ತವಾದ ೮ ೧೧
ಪರಾಪ್ರಕೃತಿಯೇ ಅಕ್ಷರವು; ಇದೇ ಪರಮ ಶ್ರೇಯಸ್ಸಿನ ಸ್ಥಾನವು. ಈ ಸುಖಸ್ಥಾನವನ್ನು ಸೇರಿ ಮತ್ತೆ ಹಿಂತಿರುಗಿ ದುಃಖಾನುಭವಕ್ಕೆ ಬರಬೇಕಾಗಿಲ್ಲ. ಇದೇ ನಾನುವಿನ ಶ್ರೇಷ್ಠವಾದ ತೇಜಸ್ಸಿನ ಆವಾಸವು. ನಾನುವಿನ ತೇಜೋ ೮ ೨೧
ಮಯಸ್ಥಾನವನ್ನು ಸೂರ್ಯನು ಬೆಳಗಬೇಕಾಗಿಲ್ಲ. ಚಂದ್ರನೂ ಬೆಳಗುವುದಿಲ್ಲ; ಬೆಂಕಿಯೂ ಬೆಳಗಲಾರದು. ಈ ಶಾಶ್ವತ ಸುಖಸ್ಥಾನವನ್ನು ಪಡೆದವರು ಮತ್ತೆ 'ಸಂಸಾರ' ಕ್ಕೆ ಹಿಂತಿರುಗುವುದೇ ಇಲ್ಲ. ಇದೇ ನಾನುವಿನ ಶ್ರೇಷ್ಠವಾದ ತೇಜೋಮಯವಾದ ಬೀಡು. ಇಷ್ಟೇ ಅಲ್ಲದೆ, ಸೂರ್ಯನಲ್ಲಿರುವ ಯಾವ ತೇಜಸ್ಸು ೧೫ ೬
ಜಗತ್ತನ್ನೆಲ್ಲಾ ಬೆಳಗುವುದೋ, ಯಾವ ತೇಜಸ್ಸು ಚಂದ್ರನಲ್ಲಿದೆಯೋ ಮತ್ತು ಯಾವ ತೇಜಸ್ಸು ಅಗ್ನಿಯಲ್ಲಿದೆಯೋ—ಆ ತೇಜಸ್ಸೆಲ್ಲವೂ ನಾನುವಿಗೆ ಸೇರಿದುದೇ. ೧೫ ೧೨

ಅಳಿವಿಲ್ಲದ ನಾನುವು ಹುಟ್ಟದಿರುವುದರಿಂದ ಅಜನೆನಿಸಿದರೂ, ಪ್ರಾಣಿಗಳ

ಗೆಲ್ಲಾ ಒಡೆಯನಾಗಿದ್ದರೂ, ನಾನುವಿನ ಮಾಯೆಯಿಂದ ನಾನುವಿನ ಪ್ರಕೃತಿ
ಅವತಾರ ಯನ್ನು ಆಧಾರವಾಗಿಟ್ಟುಕೊಂಡು ಲೋಕದಲ್ಲಿ ನಾಮರೂಪ
ಗಳನ್ನು ಹೊಂದಿ ಕಾಣಿಸಿಕೊಳ್ಳುವವನು 'ನಾನು'. ೪ ೬
ಯಾವ ಯಾವ ಕಾಲದಲ್ಲಿ ಧರ್ಮಕ್ಕೆ ಕೊರತೆ (ಬಾಧೆ) ಯುಂಟಾಗುವುದೋ
ಆಯಾ ಕಾಲಗಳಲ್ಲಿ ಅಧರ್ಮವನ್ನು ಹೋಗಲಾಡಿಸುವುದಕ್ಕಾಗಿ ನಾನುವನ್ನು
ನಾಮರೂಪಧಾರಣೆಯಿಂದ ಹುಟ್ಟಿಸುವವನು 'ನಾನು'. ಸಾಧುಗಳನ್ನು ೪ ೭
ಕಾಪಾಡುವುದಕ್ಕೂ, ದುಷ್ಟಕಾರ್ಯಗಳನ್ನು ಎಸಗುವವರನ್ನು ನಾಶಮಾಡುವು
ನಾನುವಿನಿಂದ ನಾನುವಿನದಕ್ಕೂ ಮತ್ತು ಧರ್ಮವನ್ನು ನೆಲೆಗೊಳಿಸುವ ಉದ್ದೇಶ
ನಾಮರೂಪಗಳ ದಿಂದಲೂ ಆಗಾಗ್ಗೆ ನಾಮರೂಪಗಳನ್ನು* ಧರಿಸುವವನು
ಉತ್ಪತ್ತಿ 'ನಾನು'. ದೇವತೆಗಳಾಗಲೀ, ಮಹರ್ಷಿಗಳಾಗಲೀ ೪ ೮
ನಾನುವಿನ ಮಹಿಮೆ ಅಥವಾ ಮೂಲವನ್ನು ತಿಳಿದಿರುವುದಿಲ್ಲ. ನಾನುವಿನ ೧೦ ೨
ಅಥವಾ ಮಹಿಮೆಗಳ ವರ್ಣನೆಯು ಅಸದಳವಾದುದು. ನಾನುವಿನ ಮಹಿಮೆ
ಗಳು ಕೊನೆಯಿಲ್ಲದಷ್ಟಿವೆಯಾದುದರಿಂದ ಮುಖ್ಯಮುಖ್ಯವಾದುವುಗಳು ಮಾತ್ರ
ಸಂಗ್ರಹಿಸಿ ಹೇಳಲ್ಪಡುವುವು. ೧೦ ೧೯

ಎಲ್ಲಾ ಚರಾಚರ ವಸ್ತುಗಳ ಹೃದಯದಲ್ಲಿರುವ ಆತ್ಮನು(ನಾನುವು) ನಾನು.
ನಾಮರೂಪಗಳುಳ್ಳ ವಸ್ತುಗಳ ಮತ್ತು ಸೃಷ್ಟಿಗಳ ಬುಡವೂ ನಡುವೂ ೧೫ ೧೫
ಮತ್ತು ಕೊನೆಯೂ ನಾನು. ಎಲ್ಲಾ ಪ್ರಪಂಚದ ೧೦ ೨೦
ನಾನು_ಮಹಿಮೆ ಹುಟ್ಟು, ಇರುವಿಕೆ ಮತ್ತು ನಾಶ, ಆಶ್ರಯ ಸ್ಥಾನ ೧೦ ೩೨
ಮತ್ತು ಅಳಿವಿಲ್ಲದ ಬೀಜ ಇವೆಲ್ಲವೂ ನಾನು. ಸಮಸ್ತ ವಸ್ತುಗಳ ೭ ೬; ೯ ೧೮
ಉತ್ಪತ್ತಿಗೆ ಕಾರಣವಾದುದು ಯಾವುದೋ ಆ ಸನಾತನವಾದ ಆಯಾ
ವಸ್ತುವಿನ ಬೀಜವೇ ನಾನು. ಎಲ್ಲವನ್ನೂ ನಾಶಪಡಿಸುವ ೧೦ ೩೯; ೭ ೧೦
ಮೃತ್ಯುವು ನಾನು. ಉತ್ತರೋತ್ತರ ಉಂಟಾಗುವುವುಗಳನ್ನು ಉಂಟುಮಾಡತಕ್ಕ
ವನು ನಾನು. ಈ ಜಗತ್ತಿನ ಒಳಹೊಕ್ಕು 'ಓಜಸ್' ಎಂಬ ೯ ೧೯; ೧೦ ೩೪
ಶಕ್ತಿಯಿಂದ ಎಲ್ಲಾ ವಸ್ತುಗಳನ್ನೂ ಹಿಡಿದು (ಹೊತ್ತು) ಕೊಂಡಿರುವವನು
ನಾನು. ನಾಶವಿಲ್ಲದ ಕಾಲನೂ ನಾನು. ಪೂರ್ವಾಪರ (ಹಿಂದುಮುಂದಿನ)
ವಿಚಾರವನ್ನು ಲೆಕ್ಕ ಮಾಡುವವರ ವಿಷಯವಾದ ಕಾಲವೂ ೧೦ ೩೩; ೧೦ ೩೦
ನಾನು. ಆಕಾಶವಸ್ತುವಿನಲ್ಲಿ ಅತ್ಯವಶ್ಯಕವಾಗಿರಬೇಕಾದ ಶಬ್ದಗುಣವು
ನಾನು. ಒಂದೆಡೆಯಿಂದ ಮತ್ತೊಂದೆಡೆಗೆ ಚಲಿಸಿ ಶುದ್ಧಿ ಮಾಡುವ ವಸ್ತು ೭ ೮

---

* ದಶಾವತಾರಗಳ ರಹಸ್ಯ.

ಗಳಲ್ಲಿ ವಾಯುವು ನಾನು. ತೇಜೋದ್ರವ್ಯಗಳಾದ ಚಂದ್ರ ಮತ್ತು ೧೦ ೩೧
ಸೂರ್ಯರಲ್ಲಿರುವ ಪ್ರಭೆ (ಕಾಂತಿ) ಎಂಬ ರೂಪಗುಣವು ನಾನು. ೭ ೮
ಬೆಂಕಿಯಲ್ಲಿರುವ ತೇಜಸ್ಸು ನಾನು. ಸ್ವತಂತ್ರವಾಗಿ ಬೆಳಗುವ ವಸ್ತು ೭ ೯
ಗಳಲ್ಲಿ ಕಿರಣಗಳಿಂದ ಕೂಡಿದ ಸೂರ್ಯನು ನಾನು. ಮಿನುಗುವ ದ್ರವ್ಯಗಳಾದ
ಮರುತ್ತುಗಳಲ್ಲಿ ಮರೀಚಿಯು ನಾನು. ನಕ್ಷತ್ರಗಳಲ್ಲೆಲ್ಲಾ ಚಂದ್ರನು
ನಾನು. ನೀರು ಎಂಬ ವಸ್ತುವಿನಲ್ಲಿ ಮುಖ್ಯವಾಗಿರಬೇಕಾದ ರಸ ೧೦ ೨೧
ವೆಂಬ ಗುಣವು ನಾನು. ಭೂಮಿತತ್ವದಲ್ಲಿ ಅತ್ಯವಶ್ಯಕವಾಗಿರಬೇಕಾದ ೭ ೮
ಪುಣ್ಯವಾದ ಗಂಧ ಗುಣವು ನಾನು. ಮರಣವಿಲ್ಲದ್ದು ನಾನು. 'ಸತ್' ೭ ೯
ಎಂಬ ವಸ್ತುವಿನ ಇರುವಿಕೆಯು ನಾನು. 'ಅಸತ್' ಎಂಬ ವಸ್ತುವಿನ ಇಲ್ಲದಿರು
ವಿಕೆಯು ನಾನು. 'ಸತ್' ಎಂಬ ಒಳ್ಳೆಯದು ನಾನು. 'ಅಸತ್' ಎಂಬ
ಒಳ್ಳೆಯದಲ್ಲದ್ದೂ ನಾನು. ದೇವತೆಗಳಿಗೆಲ್ಲಾ ಮೊದಲು ನಾನು. ೯ ೧೯; ೧೦ ೨
ಕೆಲಸದ ಫಲವನ್ನು ಗೊತ್ತುಮಾಡುವವನು ನಾನು. ಜಗತ್ತಿಗೆ ಅಜ್ಜನಂತಿರುವ
ಪಿತಾಮಹ (ಬ್ರಹ್ಮ)ನು ನಾನು. ಎಲ್ಲೆಡೆಯಲ್ಲಿಯೂ ಮುಖವುಳ್ಳ ೯ ೧೭
ಬ್ರಹ್ಮನು ನಾನು. ಅದಿತಿ ದೇವಿಯ ಉದರದಲ್ಲಿ ಹುಟ್ಟಿದ ಹನ್ನೆರಡು ೧೦ ೩೩
ಸಂಖ್ಯೆಯ ಆದಿತ್ಯರಲ್ಲಿ ಒಳಹೊಕ್ಕು ವ್ಯಾಪಿಸುವ ಗುಣವುಳ್ಳ ವಿಷ್ಣುವು
ನಾನು. ಹನ್ನೊಂದು ಸಂಖ್ಯೆಯ ರುದ್ರರಲ್ಲಿ ನಿತ್ಯ ಸುಖವನ್ನು ಕೊಡುವ ೧೦ ೨೧
ಶಂಕರನು ನಾನು. ದಿಕ್ಪಾಲಕ ದೇವತೆಗಳಲ್ಲಿ ಇಂದ್ರನು ನಾನು. ೧೦ ೨೩ ; ೧೦ ೨೨
ಎಂಟು ವಸುಗಳ ನಡುವೆ ಶುದ್ಧಿಗೊಳಿಸುವನೆಂಬ ಪಾವಕನೂ ನಾನು. ೧೦ ೨೩
ನಿಗ್ರಹ ಶಕ್ತಿಯುಳ್ಳವರಲ್ಲಿ ಯಮನು ನಾನು. ಜಲಚರಗಳಿಗೆಲ್ಲಾ ಒಡೆಯನಾದ
ವರುಣನು ನಾನು. ಯಕ್ಷರೂ ರಾಕ್ಷಸರೂ ಇವರ ಗುಂಪಿನಲ್ಲಿ ಹಣಕ್ಕೆ ೧೦ ೨೯
ಒಡೆಯನಾದ ಕುಬೇರನೂ ನಾನು. ಪಿತೃಗಣ ದೇವತೆಗಳಲ್ಲಿ ಪಿತೃ ೧೦ ೨೨
ರಾಜನಾದ ಅರ್ಯಮನೂ ನಾನು. ಪ್ರಾಣಿಗಳ ಜನನಕ್ಕೆ ಕಾರಣನಾದ ೧೦ ೨೯
ಮತ್ತು ಮನಸ್ಸು ಆವಾಸಸ್ಥಾನವಾಗಿರುವ ಮನ್ಮಥನೂ ನಾನು. ಕಾಲಿಲ್ಲದೆ ಎದೆ
ಯಲ್ಲಿ ಸಂಚರಿಸುವ ಪ್ರಾಣಿಗಳಿಗೆಲ್ಲಾ (ಸರ್ಪಗಳು) ಒಡೆಯನಾದ ವಾಸುಕಿಯು
ನಾನು. ನಾಗಗಳಲ್ಲಿ ಅನಂತನು ನಾನು. ಸೈನ್ಯಗಳನ್ನು ನಡೆಸುವ ೧೦ ೨೮ ; ೧೦ ೨೯
ಮುಂದಾಳುಗಳಲ್ಲೆಲ್ಲಾ ಶಿವಕುಮಾರನಾದ ಸ್ಕಂದನು ನಾನು. ಜನರಿಗೆ ಅಥವಾ
ಪ್ರಾಣಿಗಳಿಗೆ ಒಡೆಯರಾದವರ ಲೌಕಿಕ ಮತ್ತು ಧಾರ್ಮಿಕ ವಿಷಯ ಮಂತ್ರಾ
ಲೋಚನೆಗೆ ಸಮೀಪದಲ್ಲಿ ಇರಬೇಕಾದ ಪಂಡಿತರಲ್ಲಿ (ಪ್ರಾಜ್ಞರಲ್ಲಿ) ಮುಖ್ಯನಾದ
ದೇವಲೋಕದ ಬೃಹಸ್ಪತಿಯು ನಾನು. ೧೦ ೨೪

ಕುದುರೆಗಳಲ್ಲೆಲ್ಲಾ—ದೇವಲೋಕದಲ್ಲಿರುವ, ಅಮೃತಮಥನ ಕಾಲದಲ್ಲಿ (ಸಮುದ್ರಮಥನ ಕಾಲದಲ್ಲಿ) ಹುಟ್ಟಿದ 'ಉಚ್ಚೈಶ್ಶ್ರವಸ್' ಎಂಬ ಕುದುರೆಯು

ನಾನು. ಉತ್ತಮವಾದ ಆನೆಗಳಲ್ಲಿ ದೇವಲೋಕದ ಐರಾವತವು ನಾನು. ೧೦ ೨೭
ಹಾಲುಕರೆವ ಹಸುಗಳಲ್ಲಿ ಕೇಳಿದುದನ್ನೀವ ದೇವಲೋಕದ ಕಾಮಧೇನುವು
ನಾನು. ಆಯುಧಗಳಲ್ಲೆಲ್ಲಾ ದೇವಲೋಕದ ವಜ್ರಾಯುಧವು ನಾನು. ೧೦ ೨೮
ಗಾಂಧರ್ವಕಲಾನಿಪುಣರಾದ ಗಂಧರ್ವರಲ್ಲಿ ಚಿತ್ರರಥನು ನಾನು. ಶಿಖರಗ ೧೦ ೨೬
ಳುಳ್ಳ ಪರ್ವತಗಳಲ್ಲಿ ಮೇರುಪರ್ವತವು ನಾನು. ಅತ್ತಿತ್ತ ಚಲಿಸದೆ ಇದ್ದೆಡೆ ೧೦ ೨೩
ಇರುವ ವಸ್ತುಗಳಲ್ಲೆಲ್ಲಾ ಹಿಮಾಲಯಪರ್ವತವೇ ನಾನು. ಪ್ರಕೃತಿ ೧೦ ೨೫
ಯಿಂದ ಆಗಿರುವ ಜಲಾಶಯಗಳಲ್ಲಿ ಸಾಗರವು ನಾನು. ಹರಿಯುವ ೧೦ ೨೪
ನೀರುಗಳಲ್ಲಿ ಗಂಗೆಯು ನಾನು. ನೀರಿನಲ್ಲಿರುವ (ವಾಸಿಸುವ) ಮೀನುಗಳಲ್ಲೆಲ್ಲಾ
ಶ್ರೇಷ್ಠವಾದ ಮೊಸಳೆಯು ನಾನು. ಮರಗಳಲ್ಲೆಲ್ಲಾ ಅಶ್ವತ್ಥವು ನಾನು. ೧೦ ೩೧
ನಾಲ್ಕುಕಾಲಿನ ಪ್ರಾಣಿಗಳಲ್ಲೆಲ್ಲಾ ಮೃಗರಾಜನಾದ ಸಿಂಹನು ನಾನು. ೧೦ ೨೬
ರೆಕ್ಕೆಗಳಿರುವ ಪ್ರಾಣಿಗಳಲ್ಲಿ ಗರುಡಪಕ್ಷಿಯು ನಾನು. ೧೦ ೩೦

ರಸವೇ ಮುಖ್ಯವಾದ ಗುಣವುಳ್ಳ ಸೋಮನೆನಿಸಿ, ಸಸ್ಯವರ್ಗವನ್ನೆಲ್ಲಾ
ಕಾಪಾಡಿ ಬೆಳೆಸುವವನು ನಾನು. ಪ್ರಾಣಿಗಳ ದೇಹವನ್ನು ಹೊಕ್ಕು ೧೫ ೧೩
ಪ್ರಾಣವಾಯು ಮತ್ತು ಅಪಾನವಾಯುಗಳೊಡಗೂಡಿ 'ವೈಶ್ವಾನರ' ಎಂಬ
ಜಠರಾಗ್ನಿಯಾಗಿ ನಾಲ್ಕು ತೆರನಾದ ಆಹಾರಪದಾರ್ಥ*ಗಳನ್ನು ಜೀರ್ಣಿಸುವವನು
ನಾನು. ಶಾಖವನ್ನು ಅಥವಾ ಬಿಸಿಲನ್ನುಂಟುಮಾಡುವವನು ನಾನು. ೧೫ ೧೪
ಆವಿಯ ರೂಪದ ನೀರನ್ನು ಆಕಾಶದಲ್ಲಿ ಮೋಡದ ರೂಪದಲ್ಲಿ ಸಂಗ್ರಹಿಸುವವನೂ
ಮಳೆಯ ರೂಪದಲ್ಲಿ ಸುರಿಸುವವನೂ ನಾನು. ವರ್ಷದ ಹನ್ನೆರಡು ತಿಂಗ ೯ ೧೯
ಳಲ್ಲಿ ವರ್ಷಕ್ಕೆಲ್ಲಾ ಶಿರೋಪ್ರಾಯವಾಗಿರುವ ಮಾರ್ಗಶೀರ್ಷವು ನಾನು.† ವಸಂತಾದಿ
ಆರು ಋತುಗಳಲ್ಲಿ ವಸಂತಋತುವು ನಾನು. ಪ್ರಪಂಚಕ್ಕೆಲ್ಲಾ ದಾರಿ ೧೦ ೩೫
ತೋರಿಸುವವನೂ, ರಕ್ಷಕನೂ, ಒಡೆಯನೂ, ಮಾಡಿದ ಮತ್ತು ಮಾಡದವು
ಗಳನ್ನು ಸಾಕ್ಷಿಯಂತೆ ನೋಡುವವನೂ, ವಾಸಸ್ಥಾನವೂ, ನೋವನ್ನು ಹೋಗ
ಲಾಡಿಸಿ ಕಾಪಾಡುವವನೂ ಮತ್ತು ಉಪಕಾರಮಾಡುವವನೂ ನಾನು. ೯ ೧೮

---

* ಭಕ್ಷ್ಯ—ಹಲ್ಲುಗಳಿಂದ ಅಗಿದು ತಿನ್ನುವುದು. ಕಬ್ಬು, ರೊಟ್ಟಿ, ಮುಂತಾದ ಗಟ್ಟಿ ಪದಾರ್ಥಗಳು.

ಭೋಜ್ಯ—ಹಲ್ಲಿನ ಸಹಾಯವಿಲ್ಲದೆ ನುಂಗುವ ಪಾಯಸಾದಿ ಪದಾರ್ಥಗಳು.

ಲೇಹ್ಯ—ನಾಲಗೆಯಲ್ಲಿ ನೆಕ್ಕುವ ಹುಳಿ, ಉಪ್ಪು, ಖಾರಗಳಿಂದ ಕೂಡಿದ ಗೊಜ್ಜು ಮುಂತಾದುವು.

ಚೋಹ್ಯ—ನಂಜಿಕೊಳ್ಳುವ ವಸ್ತುಗಳು.

† ವರ್ಷದ ಆದಿಮಾಸವಾದ ಚೈತ್ರವೆಂಬ ಅರ್ಥದಲ್ಲಿ ಮಾರ್ಗಶೀರ್ಷವೆಂಬ ಶಬ್ದವು ಪ್ರಯೋಗವಾಗಿದೆಯೆಂದು ತಿಳಿಯುವುದು ಮೇಲು.

ಎಲ್ಲೆಲ್ಲಿಯೂ ಇರುವ ಮಹರ್ಷಿಗಳಿಗೆಲ್ಲಾ ಮೊದಲು ನಾನು. ಮಹರ್ಷಿ ೧೦ ೨
ಗಳಲ್ಲಿ ಭೃಗುಮಹರ್ಷಿ ನಾನು. ದೇವರ್ಷಿಗಳಲ್ಲಿ ನಾರದನು ನಾನು. ೧೦ ೨೫
ಸಿದ್ಧರಲ್ಲಿ ಕಪಿಲಮುನಿಯು ನಾನು. ಸರ್ವಪದಾರ್ಥಗಳ ಅರಿವುಳ್ಳ ೧೦ ೨೬
ಮುನಿಗಳಲ್ಲೆಲ್ಲಾ ವ್ಯಾಸನು ನಾನು. ಕವಿಗಳಲ್ಲಿ ಶ್ರೇಷ್ಠಕವಿಯಾದ ೧೦ ೩೭
ಶುಕ್ರನು ನಾನು. ಮನುಷ್ಯರಲ್ಲೆಲ್ಲಾ ಮಾನವರಿಗೆ ಒಡೆಯನಾದ ರಾಜನು
ನಾನು. ದಿತಿದೇವಿಯ ಹೊಟ್ಟೆಯಲ್ಲಿ (ಉದರದಲ್ಲಿ) ಹುಟ್ಟಿದ ದೈತ್ಯರಲ್ಲಿ ೧೦ ೨೭
ಪ್ರಹ್ಲಾದನು ನಾನು. ಶಸ್ತ್ರವನ್ನು ಹಿಡಿಯುವ ವೀರರಲ್ಲಿ ಕೋದಂಡ ೧೦ ೩೦
ರಾಮನು ನಾನು. ಯದುವಂಶದವರಲ್ಲಿ ವಾಸುದೇವನು ನಾನು. ೧೦ ೩೧
ಪಾಂಡವರಲ್ಲಿ ಅರ್ಜುನನು ನಾನು. ೧೦ ೩೭

ಅರಿವು ಮತ್ತು ಕೆಲಸದ ಇಂದ್ರಿಯಗಳ ಗುಂಪಿನಲ್ಲಿ ಹನ್ನೊಂದನೆಯ
ಇಂದ್ರಿಯವೆಂದು ಹೇಳಲ್ಪಡುವ ಮನಸ್ಸು ನಾನು ಚೇತನವುಳ್ಳ ಸ್ಥಾವರ
ಜಂಗಮ ವಸ್ತುಗಳಲ್ಲಿ ಚೈತನ್ಯಶಕ್ತಿಯು ನಾನು. ಧರ್ಮಾಚರಣೆಗೆ ೧೦ ೨೨
ಶಕ್ತಿಯಂತಿರುವ ಸ್ತ್ರೀ (ಶಕ್ತಿ) ವರ್ತನೆಯುಳ್ಳವುಗಳಲ್ಲಿ ಯಶಸ್ಸು, ಲಕ್ಷ್ಮಿ
(ಸಂಪತ್ತು), ಸರಸ್ವತಿ (ವಾಗ್ಮಿತಾ), ಭಗವಂತನ ಸ್ಮರಣೆಮಾಡುವ ಶಕ್ತಿ, ವಿವೇಕ
ದಿಂದ ನಿರ್ಣಯಮಾಡುವ ಬುದ್ಧಿಶಕ್ತಿ, ತೊಂದರೆಗಳು ಒದಗಿದಾಗ ಧರ್ಮವನ್ನು
ಬಿಡದೆ ಹಿಡಿಯುವ ಶಕ್ತಿ, ಸಮಸ್ತವಿಧವಾದ ತಪ್ಪುಗಳನ್ನು ಸಹಿಸಿ ಮನ್ನಿಸುವ
ಶಕ್ತಿ ಇವುಗಳೆಲ್ಲಾ ನಾನು. ವಿದ್ಯೆಗಳಲ್ಲೆಲ್ಲಾ ನಾನುವಿನ ವಿಚಾರವನ್ನು ೧೦ ೩೪
ಬೋಧಿಸುವ ಅಧ್ಯಾತ್ಮವಿದ್ಯೆಯು ನಾನು. ಶಬ್ದಗಳಲ್ಲೆಲ್ಲಾ 'ಓಂ' ೧೦ ೩೨
ಎಂಬ ಏಕಾಕ್ಷರವು ನಾನು. ಶಬ್ದದ ಯೋಜನೆಗೆ ಗೊತ್ತಾಗಿರುವ ಅಕ್ಷರ ೧೦ ೨೫
ಗಳಲ್ಲಿ ಮೊದಲನೆಯದಾದ ಅಕಾರವು ನಾನು. ಒಟ್ಟುಗೂಡಿದ ಸಮಾಸಪದ
ಗಳಲ್ಲಿ ಸೇರಿದ ಪದಗಳೆರಡೂ ಮುಖ್ಯವೆನಿಸುವ ದ್ವಂದ್ವಸಮಾಸವು ನಾನು. ೧೦ ೩೩
ವೇದರಾಶಿಗಳಲ್ಲಿ ಸಾಮವೇದವು ನಾನು. ಸಾಮವೇದದಲ್ಲಿ 'ಬೃಹತ್' ೧೦ ೨೨
ಎಂಬ ಸಾಮವು ನಾನು. ಛಂದಸ್ಸುಗಳಲ್ಲಿ ಗಾಯತ್ರಿಯು ನಾನು. ೧೦ ೩೫
ಸಮಸ್ತ ವೇದಗಳಲ್ಲೆಲ್ಲಾ ಪ್ರಣವವು (ಓಂಕಾರ) ನಾನು. ತಿಳಿಯಲ್ಪಡ ೭ ೮
ತಕ್ಕದ್ದು, ಶುದ್ಧವಾದದ್ದು, ಓಂಕಾರ, ದೇವತೆಗಳನ್ನು ಸ್ತುತಿಸುವ ವೇದ, ದೇವತೆ
ಗಳನ್ನು ಆನಂದಗೊಳಿಸುವ ಸಾಮಗಾನ, ದೇವತೆಗಳ ತೃಪ್ತಿಗಾಗಿ ದ್ರವ್ಯ
ಸಮರ್ಪಣೆ ಮಾಡುವ ಯಜ್ಞಕಾರ್ಯವಿಧಾನ ಇವೆಲ್ಲವೂ ನಾನು. ಸಮಸ್ತ ೯ ೧೭
ವೇದಶಾಸ್ತ್ರಗಳಿಂದ ತಿಳಿಯಲ್ಪಡುವ ಪರಮಾತ್ಮವಸ್ತುವು ನಾನು. ವೇದಾಂತ
ಅಂದರೆ ವೇದದ ತಿರುಳನ್ನು ಹೊರಗೆಡವಿ ತಿಳಿಸಿರುವವನೂ ಮತ್ತು ವೇದವನ್ನು
ತಿಳಿದವನೂ ನಾನು. ದೇವತಾಪ್ರೀತಿಗಾಗಿ ದ್ರವ್ಯಸಮರ್ಪಣೆಮಾಡುವ ೧೫ ೧೫

ವಿಧಾನವನ್ನು ಹೇಳುವ ಯಜ್ಞವು ನಾನು. ದೇವತಾಧ್ಯಾನರೂಪವಾದ ಕ್ರತು
ಗಳೆಂಬ ಯಜ್ಞಭಾಗಗಳೂ, ಪಿತೃದೇವತಾಹ್ವಾನ ಮತ್ತು ದ್ರವ್ಯಸಮರ್ಪಣವನ್ನು
ತಿಳಿಸುವ 'ಸ್ವಧಾ' ಎಂಬುದೂ ನಾನು. ದೇವತೆಗಳ ಆಹ್ವಾನ ಮತ್ತು ದ್ರವ್ಯ
ಸಮರ್ಪಣವನ್ನು ತಿಳಿಸುವ 'ವೌಷಟ್'* ನಾನು. ದೇವತಾಧ್ಯಯನಾದಿ ಮಂತ್ರವು
ನಾನು. ಹವಿಸ್ಸಾದ ಆಜ್ಯವೂ ನಾನು. ಯಜ್ಞದಲ್ಲಿ ಯಾರ ಮೂಲಕ ಹವಿಸ್ಸು
ಗಳು ದೇವತೆಗಳಿಗೆ ಸಮರ್ಪಿಸಲ್ಪಡುವುವೋ ಆ ಅಗ್ನಿಯು ನಾನು. ಸಮರ್ಪಣೆ
(ಹೋಮ) ಮಾಡಲ್ಪಟ್ಟ ವಸ್ತುವೂ ನಾನು. ದೇವತಾ ಪ್ರೀತಿಗಾಗಿ ೯ ೧೬
ದ್ರವ್ಯಸಮರ್ಪಣೆ ಮಾಡುವ ಯಜ್ಞಗಳಲ್ಲಿ ಆಯಾ ದೇವತೆಗಳಿಗೆ ಸಂಬಂಧಪಟ್ಟ
ಪದ (ಮಂತ್ರ) ಗಳನ್ನು ಉಚ್ಚರಿಸುವ ವಿಧಾನದಲ್ಲಿ ಮತ್ತೆ ಮತ್ತೆ ಉಚ್ಚರಿಸುವ
ಜಪವೆಂಬ ಯಜ್ಞವು ನಾನು. ಸಮಸ್ತ ಯಜ್ಞಗಳ ಫಲವನ್ನು ೧೦ ೨೫
(ಫಲಗಳನ್ನು) ಕೊಡುವ ಒಡೆಯನು ನಾನು. ೯ ೨೪

ನಿಶ್ಚಯ ಜ್ಞಾನದ ವಿವೇಕವುಳ್ಳವರ ಬುದ್ಧಿಯು ಅಂದರೆ ನಿಶ್ಚಯ ಜ್ಞಾನದ
ವಿವೇಕವು ನಾನು. ಆತ್ಮಜ್ಞಾನವುಳ್ಳವರ ಆತ್ಮಜ್ಞಾನವು ನಾನು. ೭ ೧೦, ೧೦ ೩೮
ಕಾಮ ಮತ್ತು ರಾಗಗಳಿಂದ ಬಿಡಲ್ಪಟ್ಟ ದೈಹಿಕ ಮತ್ತು ಮಾನಸಿಕ ಬಲವುಳ್ಳವರ
ಬಲವು ನಾನು. ಪ್ರಾಣಿಗಳಲ್ಲಿ ಧರ್ಮವನ್ನು ಮೀರದ ಇಚ್ಛೆಯು ನಾನು. ೭ ೧೧
ಗೆಲುವು ನಾನು. ಆಯಾ ಪ್ರಾಣಿಗಳ ಇರುವಿಕೆಗೆ ಅತ್ಯವಶ್ಯಕವಾದ ಸತ್ತ್ವವೆಂಬ
ವಿಶೇಷ ಗುಣವು ನಾನು. ಎಲ್ಲಾ ಪ್ರಾಣಿಗಳ ಬದುಕು ನಾನು. ಮನಸ್ಸು ೧೦ ೩೬
ಮತ್ತು ಶರೀರವನ್ನು ಹಿಡಿತಕ್ಕೆ ತರಲು ಗೊತ್ತಾಗಿರುವ ಕಷ್ಟ ಅಥವಾ ಬೇಗೆ
ಎಂದು ತೋರುವ ಮತ್ತು ತಪಸ್ಸನ್ನು ಆಚರಿಸುವವರ ಪಾಪವನ್ನು ಸುಡುವ
ತಪಸ್ಸು ನಾನು. ಮನುಷ್ಯರಲ್ಲೆಲ್ಲಾ ಇರುವ ವ್ಯಕ್ತಿತ್ವವೆಂಬ ಗುಣವು ೭ ೯
ನಾನು. ಮನುಷ್ಯರಲ್ಲೆಲ್ಲಾ ಇರುವ ಪುರುಷನಾನುವಿನ, ಹಿಂದೆ ಮಾಡಿದ ಅಥವಾ
ಈಗ ಮಾಡಿದ ಕೆಲಸದ ಪೌರುಷವೆಂಬ ಶಕ್ತಿಯು ನಾನು. ತೇಜಸ್ಸುಳ್ಳ ೭ ೮
ವರ ತೇಜಸ್ಸೆಂಬ ಹೊಳಪು ನಾನು. ಶಕ್ತಿಯುಳ್ಳವರ ಶಕ್ತಿಯ ಹೊಳಪು
ನಾನು. ಗೆಲ್ಲಲು ಅಪೇಕ್ಷಿಸುವವರ ಜಯಕ್ಕೆ ಕಾರಣವಾದ ಮಾರ್ಗ ೧೦ ೩೬
ಅಂದರೆ ನೀತಿಯು ನಾನು. ವಾಗ್ಮಿತೆಯುಳ್ಳ ನ್ಯಾಯವಾದಿಗಳ ದೃಷ್ಟಿ ೧೦ ೩೮
ಯಿಂದ ನಿರ್ಣಯವನ್ನು ಸೂಚಿಸುವ ಮಾತು ನಾನು. ಗುಟ್ಟಾಗಿರುವ ೧೦ ೩೨
ವರ ಮಾತಾಡದಿರುವಿಕೆಯೆಂಬ ಮೌನವು ನಾನು. ಹಿಡಿತದಲ್ಲಿಟ್ಟು ೧೦ ೩೮

---

* 'ಔಷಧಂ' ಎಂಬುದು ಮೂಲದಲ್ಲಿದೆ. ಇದರ ಅರ್ಥ ಮೂಲಿಕೆ ಅಥವಾ ಅನ್ನ ಎಂದು. 'ಸ್ವಾಹಾ' 'ಸ್ವಧಾ' ಶಬ್ದಗಳ ಜೊತೆಯಲ್ಲಿ 'ವೌಷಟ್' ಎಂಬುದನ್ನು ಜೋಡಿಸಬಹುದು. ಮಹಾಪುರುಷವಾಕ್ಯವಾದುದರಿಂದ ಛಂದೋದೋಷವಿರುವುದಿಲ್ಲ.

ಕೊಳ್ಳುವವರ ದಂಡ (ಶಿಕ್ಷೆ) ಯು ನಾನು. ಪೈಪೋಟಿ (ಜೂಜು) ಗಾರರ ಜೂಜು ನಾನು. ೧೦ ೩೬

ಈ ಚರಾಚರ ವಸ್ತುಗಳಲ್ಲಿ ನಾನುವನ್ನು ಬಿಟ್ಟು ಬೇರೆಯಾಗಿರುವ ವಸ್ತು ವಾವುದೂ ಇಲ್ಲ. ನಾನುವಿನಿಂದ ಬೇರೆಯಾದುದು ಎಳ್ಳಷ್ಟೂ ಇಲ್ಲ. ೧೦ ೩೯
ಇವೆಲ್ಲವೂ ದಾರದಲ್ಲಿ ಪೋಣಿಸಿದ ಮಣಿಗಳಂತೆ ನಾನುವಿನ ಆಧಾರದಿಂದ ಜೋಡಿಸಲ್ಪಟ್ಟಿವೆ. ನಾನುವಿನ ಅತ್ಯುತ್ಕೃಷ್ಟವಾದ ಮಹಿಮೆಗಳಿಗೆ ಕೊನೆಯಿಲ್ಲ. ೭ ೭
ಇದುವರೆಗೆ ಹೇಳಿದ ಮಹಿಮೆಯು ಸಂಗ್ರಹವಾಗಿ ತಿಳಿಸುವ ಉದ್ದೇಶದಿಂದ ವಿವರಿಸಲಾಯಿತು. ಮಹಿಮೆಯುಳ್ಳ, ಸಂಪತ್ತುಳ್ಳ ಮತ್ತು ಉದ್ದಾಮ ೧೦ ೪೦
ಘನತೆಯುಳ್ಳ ವಸ್ತುಗಳ ಯಾವ ಯಾವ ಸತ್ತ್ವ ವಿಶೇಷ ಗುಣಗಳಿವೆಯೋ ಅದೆಲ್ಲವೂ ನಾನುವಿನ ಶಕ್ತಿ, ಹೊಳಪಿನ ಅಂಶದಿಂದುಂಟಾದುವು ಎಂದು ತಿಳಿಯಬೇಕು. ಸೂಕ್ಷ್ಮವಾಗಿ ಈ ವಿಷಯವನ್ನು ತಿಳಿದುಕೊಂಡರೆ ದೊರೆಯುವ ೧೦ ೪೧
ಫಲಕ್ಕಿಂತಲೂ, ವಿಸ್ತಾರವಾಗಿ ತಿಳಿದುದರಿಂದ ಹೆಚ್ಚು ಫಲವೇನಾದೀತು? ಈ ಜಗತ್ತೆಲ್ಲವನ್ನೂ ಒಂದಂಶದಿಂದ ಹಿಡಿದು ನಿಂತಿರುವವನು ನಾನು. ೧೦ ೪೨
ಸಾವಿಲ್ಲದ, ಅಳಿವಿಲ್ಲದ, ಶಾಶ್ವತವಾದ ಬ್ರಾಹ್ಮಣ ಧರ್ಮದ, ಶಾಶ್ವತವಾದ ಮತ್ತು ಅತ್ಯಂತ ಸುಖದ, ಬ್ರಹ್ಮನ ಶಾಶ್ವತ ನೆಲೆಯು 'ನಾನು.' ಈ ರೀತಿಯಾಗಿ ೧೪ ೨೭
ತುಂಬಾ ಗುಟ್ಟಾದ ಶಾಸ್ತ್ರ ವಿಷಯವು ಹೇಳಲ್ಪಟ್ಟಿತು. ಇದನ್ನು ತಿಳಿದವನು ಬುದ್ಧಿಯು-(ವಿವೇಕವು)-ಳ್ಳವನೂ, ಕೃತಕೃತ್ಯನೂ ಆಗುತ್ತಾನೆ. ೧೫ ೨೦

—ಓಂ ತತ್ಸತ್—

ಎಂಬುದಾಗಿ ಶ್ರೀಮದ್ಭಗವದ್ಗೀತಾ ವಿಷಯ ವಿಭಜನಸಂಯೋಜನಪೂರ್ವಕ ಸಂಪುಟೀಕೃತ ಗೀತಾಕೃತಿಯಲ್ಲಿ 'ಅರಿವು' ಎಂಬ ಮೂರನೆಯ ಕನ್ನಡ ಪ್ರಬಂಧವು.

॥ श्रीः ॥

ಶ್ರೀ ಯೋಗಾನಂದ ಗುರುಭ್ಯೋನಮಃ

ಸಂಪುಟೀಕೃತ ಶ್ರೀಮದ್ಭಗವದ್ಗೀತಾ ಶ್ಲೋಕಪ್ರಬಂಧಗಳ ಕನ್ನಡ ಗದ್ಯಾನುವಾದ ಪ್ರಬಂಧಗಳು

ನಾಲ್ಕನೆಯ ಪ್ರಬಂಧವು

ಗೆಯ್ಮೆ (ಗೇಮೆ-ಕೆಲಸ)

ನಾನುವಿನಲ್ಲಿ ಪ್ರೀತಿಗೆ ಪಾತ್ರನಾದವನಿಗೆ ಒಳ್ಳೆಯದನ್ನುಂಟುಮಾಡಬೇಕೆಂಬ ಇಚ್ಛೆಯಿಂದ ಮತ್ತೆ ಮತ್ತೆ ಹೇಳಲಾಗುವುದು. ನಾನುವಿನ ಶ್ರೇಷ್ಠವಾದ ಮಾತನ್ನು ಲಾಲಿಸಬೇಕು. ೧೦ ೧

ಪ್ರಪಂಚ ವ್ಯವಹಾರ

ಈಶ್ವರನೆನಿಸಿಕೊಳ್ಳುವ ನಾನುವು ಮಾಯೆಯೆಂಬ ಶಕ್ತಿಯಿಂದ ಯಂತ್ರದೋಪಾದಿಯಲ್ಲಿರುವ ದೇಹಗಳುಳ್ಳ ಪ್ರಾಣಿಗಳು ಪ್ರಪಂಚದ ವ್ಯವಹಾರ ಕೆಲಸಗಳನ್ನು ನೆರವೇರಿಸುವಂತೆ ಮಾಡುತ್ತಾ ಪ್ರತಿಯೊಂದು ಪ್ರಾಣಿಯ ದೇಹದ ಮುಖ್ಯಾಂಗವಾದ ಹೃದಯದಲ್ಲಿ ಇರುತ್ತಾನೆ. ೧೮ ೬೧

ಪೂರ್ಣವಾದ ಮನೋವರ್ತನೆಗಳಿಂದ ಈಶ್ವರನಾದ ನಾನುವನ್ನೇ ಮರೆಹೊಗಬೇಕು. ನಾನುವಿನ ಒಲುಮೆಯಿಂದ ಪೂರ್ಣವಾದ ಮನಸ್ಸಮಾಧಾನವನ್ನೂ, ಶಾಶ್ವತ ಸುಖವೆನಿಸಿದ ಬ್ರಹ್ಮಪದವಿಯನ್ನೂ ಪಡೆಯಬಹುದು. ೧೮ ೬೨

ಭಗವತ್ಪ್ರಸಾದಸಿದ್ಧಿ

ಯಾವ ನಾನುವಿನಿಂದ ಪ್ರಾಣಿಗಳಿಗೆ ಕಾರ್ಯಗಳನ್ನು ನೆರವೇರಿಸಬೇಕೆಂಬ ಮನಸ್ಸು (ಅಥವಾ ಪ್ರಯತ್ನವು) ಉಂಟಾಗುವುದೋ ಯಾವ ನಾನುವಿನಿಂದ ಈ ಜಗತ್ತೆಲ್ಲವೂ ತುಂಬಿಕೊಂಡಿರುವುದೋ ಆ ನಾನುವನ್ನು, ನಾನುವಿನ ಆಯಾ ಕೆಲಸದಿಂದ–ಸ್ವಕರ್ಮದಿಂದ-ಪೂಜಿಸಿ ಮನುಷ್ಯನು ಜೀವನ ಮತ್ತು ಜ್ಞಾನಸಿದ್ಧಿಗಳನ್ನು ಹೊಂದುತ್ತಾನೆ. ೧೮ ೪೬

ಸ್ವಕರ್ಮ ಮತ್ತು ಫಲಸಿದ್ಧಿ

ಮಾನವನು ಅವನವನ ಕೆಲಸದಲ್ಲಿ ನಿರತನಾಗಿದ್ದುಕೊಂಡೇ ಪೂರ್ಣಸಿದ್ಧಿಯನ್ನು ಪಡೆಯಬಲ್ಲನು. ೧೮ ೪೫

ಕೆಲಸವಾವುದು ? ಕೆಲಸವಲ್ಲದ್ದು ಅಥವಾ ಕೆಲಸವಿಲ್ಲದ್ದು ಆವುದು ? ಹಾಗೆಂದರೇನು ? ಎಂಬ ವಿಷಯದಲ್ಲಿ ಚುರುಕಾದ ಬುದ್ಧಿಯುಳ್ಳವರೂ ಸಹ ಭ್ರಾಂತರಾಗಿ

ಕೆಲಸದ ರಹಸ್ಯವು ತೊಡಕು

ರುತ್ತಾರೆ. ಹೀಗೆ ಭ್ರಮೆಯನ್ನುಂಟುಮಾಡುವ ಕೆಲಸದ ವಿಚಾರವು ಈಗ ಬಿಡಿಸಿ ಹೇಳಲ್ಪಡುವುದು. ಇದನ್ನು ಅರಿತವನು ಶುಭವಲ್ಲದ ಅಜ್ಞಾನದ ದೆಸೆಯಿಂದ ಬಿಡುಗಡೆ ಹೊಂದಬಹುದು. ಕೆಲಸದ ಲಕ್ಷಣವು ಅಥವಾ ರಹಸ್ಯವಾದ ತತ್ವವು ತಿಳಿಯ ೪ ೧೬
ಲ್ಪಡತಕ್ಕದ್ದು; ಮಾಡಬಾರದ ಕೆಲಸದ ಲಕ್ಷಣ ಮತ್ತು ರಹಸ್ಯ ತತ್ತ್ವಗಳನ್ನು ತಿಳಿಯಬೇಕಾದುದು; ಕೆಲಸವಲ್ಲದುದರ ಅಥವಾ ಕೆಲಸವಿಲ್ಲವೆಂಬುದರ ಲಕ್ಷಣ ಮತ್ತು ರಹಸ್ಯತತ್ತ್ವಗಳೂ ತಿಳಿಯಲ್ಪಡಬೇಕಾದುವುಗಳೇ. ಕೆಲಸದ ರಹಸ್ಯ ತತ್ವವು ಬಹಳ ತೊಡಕಾದುದು. ಸಾಮಾನ್ಯವಾಗಿ ಕೆಲಸಗಳು ಫಲಿಸು ೪ ೧೭
ವುದಕ್ಕಾಗಿ ಇಲ್ಲಿ ಹೇಳಿರುವಂತೆ ಐದುಬಗೆಯ ಕಾರಣಗಳು ಆತ್ಮಜ್ಞಾನವನ್ನು ತಿಳಿಸುವ ಸಾಂಖ್ಯಶಾಸ್ತ್ರ ಮತ್ತು ವೇದಾಂತಗಳಲ್ಲಿ ಹೇಳ

ಕೆಲಸದ ವಿಭಜನೆ ಐದು ಅಂಗಗಳು

ಲ್ಪಟ್ಟವೆ. ಇವುಗಳಲ್ಲಿ **ಮೊದಲನೆಯದು** ಕೆಲಸದ ೧೮ ೧೩
ಆಶ್ರಯಸ್ಥಾನ; ಕೆಲಸಮಾಡುವ ವ್ಯಕ್ತಿ **ಎರಡನೆಯದು**; **ಮೂರನೆಯದಾಗಿ** ಕೆಲಸಕ್ಕೆ ಸಹಾಯಗಳಾದ ಬೇರೆ ಬೇರೇ ತರದ ಕೈಕಾಲು ಮೊದಲಾದ ಇಂದ್ರಿಯಗಳು. ಬಗೆಬಗೆಯ ಮತ್ತು ಬೇರೆ ಬೇರೆಯಾದ ಚಲನವಲನಾದಿಗಳು **ನಾಲ್ಕನೆಯ ಕಾರಣವು.** ದೈವೇಚ್ಛೆಯಂತೆ ನಡೆಯುವ ಭೌತಿಕ ವ್ಯಾಪಾರಗಳೂ ಮತ್ತು ದೇವರ ವ್ಯವಸ್ಥೆಗೆ ಒಳಪಟ್ಟು ವ್ಯಕ್ತಿಯ ಇಂದ್ರಿಯಗಳಿಗೆ ಗೋಚರವಾಗದಂತೆ ಆಯಾ ಕಾಲದಲ್ಲಿ ಅನುಭವಕ್ಕೆ ಮಾತ್ರ ಉಂಟಾಗುವ, ವ್ಯಕ್ತಿಯ ಹಿಂದೆ ಮಾಡಿದ ಕೆಲಸಗಳ ಫಲವೂ ದೈವವೆಂದು ಹೇಳಲ್ಪಡುವ **ಐದನೆಯ ಕಾರಣ**ವಾಗಿರುವುವು. ನ್ಯಾಯ ಅಥವಾ ಧರ್ಮಕ್ಕೆ ಅನು ೧೮ ೧೪
ಸಾರವಾಗಿಯಾಗಲೀ, ವಿರೋಧವಾಗಿಯಾಗಲೀ–ಶರೀರ, ಮಾತು ಮತ್ತು ಮನಸ್ಸುಗಳಿಂದ ಮನುಷ್ಯನು ಏನೇನು ಕೆಲಸಗಳನ್ನು ಮೊದಲು ಮಾಡುತ್ತಾನೆಯೋ ಅಥವಾ ಹಿಂದೆ ಮಾಡಿರುತ್ತಾನೆಯೋ ಅವುಗಳಿಗೆಲ್ಲಾ ತಕ್ಕ ಫಲವನ್ನು ಕೊಡುವ ಮೇಲ್ಕಂಡ ಐದು ಕಾರಣಗಳು ಇದ್ದೇ ಇರುತ್ತವೆ. ಆಚರಿಸಬೇಕಾದ ೧೮ ೧೫
ಕೆಲಸದ ವಿಷಯಗಳನ್ನು ಪ್ರಕಾಶಗೊಳಿಸುವ 'ಅರಿವು' ಎಂಬ ಶಕ್ತಿ,[1] ತಿಳಿದುಕೊಳ್ಳಬೇಕಾದ ವಿಷಯ[2] ಮತ್ತು ತಿಳಿಯುವ ವ್ಯಕ್ತಿ[3] ಎಂಬಿವು ಮೂರೂ–ಕೆಲಸ ಪ್ರೇರಣೆಯ ಅಂಗಗಳೆನಿಸುವುವು. ಕೆಲಸ ನಡೆಯಲು ಸಹಾಯ, ಕೆಲಸ ಮತ್ತು ಮಾಡುವ ವ್ಯಕ್ತಿ ಎಂಬದಾಗಿ ಕೆಲಸ ನೆರವೇರುವಿಕೆಯ ಅಂಗ

ಕೆಲಸ ಪ್ರೇರಣೆಯ ಮತ್ತು ನೆರವೇರಿಸುವ ಅಂಗಗಳು ಮೂರು ಮೂರು

ಗಳು ಮೂರು. ಮಾಡಬೇಕಾದ ಕೆಲಸವನ್ನು ೧೮ ೧೮
ಪ್ರಕಾಶಗೊಳಿಸುವ ಅರಿವು, ಮಾಡಬೇಕಾದ ಕೆಲಸ ಮತ್ತು ಮಾಡುವ ವ್ಯಕ್ತಿ–ಎಂದು ಮೇಲೆ ಹೇಳಿದ ಮೂರು ಅಂಗಗಳಲ್ಲಿ ಪ್ರತಿಯೊಂದೂ ಅದರದರ ಗುಣಗಳಿಗನುಸಾರವಾಗಿ ಮೂರುಬಗೆಯಾಗಿರುವುದು.

ಗುಣವಿವರಣೆಯ ಸಂದರ್ಭದಲ್ಲಿ ಇವೆಲ್ಲವೂ ಕ್ರಮವಾಗಿ ಚಿತ್ರಿಸಲ್ಪಡುವುವು. ಅವೆಲ್ಲವನ್ನೂ ಲಾಲಿಸಬೇಕು. ೧೮ ೧೯

ಬುದ್ಧಿ ಮತ್ತು ಧೃತಿ (ಧೈರ್ಯ) ಎಂಬಿವೆರಡೂ ಗುಣಾನುಸಾರ ಮೂರು ಮೂರು ಬಗೆಯಾಗಿವೆ. ಸ್ವಲ್ಪವೂ ಬಿಡದಂತೆ ಅವೆಲ್ಲವನ್ನೂ ವಿಸ್ತಾರವಾಗಿ ಬಿಡಿ

ಅರಿವು, ಕೆಲಸ, ವ್ಯಕ್ತಿ ಮೊದಲಾದುವುಗಳ ಸತ್ತ್ವಾದಿ ಭೇದಗಳು

ಬಿಡಿಯಾಗಿ ವಿವರಿಸಲಾಗುವುದು. ಅವುಗಳ ಭೇದಗಳನ್ನೂ ಕೇಳಿ ತಿಳಿಯಬೇಕು. ಪ್ರಾಪಂಚಿಕ ವಿಷಯಗಳಲ್ಲಿ ೧೮ ೨೯
ಪರಿಚಯ–ವಾ–ರೂಢಿಗೆ ತಕ್ಕಂತೆ ಯಾವ ಸ್ಥಿತಿಯಲ್ಲಿ ಸುಖಾನುಭವವಾಗಿ ದುಃಖಾನುಭವದವರೆಗೂ ಇರುವುದೋ ಆ ಸುಖ ಸ್ಥಿತಿಯೂ ಸಹ ಮೂರು ಬಗೆಯಾಗಿರುವುದನ್ನು ಈ ಸಂದರ್ಭದಲ್ಲಿಯೇ ತಿಳಿಸಲಾಗುವುದು. ೧೮ ೩೬

ಅರಿವು :—

ಬೇರೆ ಬೇರೆಯಾಗಿ ಕಾಣುವ ಸಮಸ್ತ ಚರಾಚರವಸ್ತು–ದೇಹಾದಿಗಳಲ್ಲಿ–ಬೇರೆ ಬೇರೆಯಾಗಿಲ್ಲದೆ ಒಂದೇ ಆಗಿರುವ, ನಾಶವಿಲ್ಲದಿರುವ ನಾನುವನ್ನು ಯಾವ

ಸಾತ್ತ್ವಿಕ

ಅರಿವಿನಿಂದ ನೋಡಲು ಸಾಧ್ಯವೋ, ಆ ತಿಳಿವಳಿಕೆಯು 'ಸಾತ್ತ್ವಿಕ'ವೆಂದು ತಿಳಿಯಬೇಕು. ಯಾವ ೧೮ ೨೦
ತಿಳಿವಳಿಕೆಯಿಂದ ಸಕಲ ಚರಾಚರವಸ್ತು–ದೇಹಾದಿಗಳಲ್ಲಿ ಬೇರೆ ಬೇರೆಯಾಗಿ

ರಾಜಸ

ರುವಂತೆ ನಾನಾ ತೆರನಾಗಿ ಕಾಣುವ ನಾನುವನ್ನು ಬೇರೆ ಬೇರೆ ಎಂಬದಾಗಿಯೇ ತಿಳಿಯಲಾಗುವುದೋ ಅದು 'ರಾಜಸ' ಎಂಬ ತಿಳಿವಳಿಕೆಯಾಗುವುದು. ಪ್ರತಿಮೆ ಮತ್ತು ದೇಹಾದಿ ೧೮ ೨೧
ಗಳೆಂಬ ಒಂದೇ ವಿಧವಾದ ಕಾರ್ಯಗಳಿಗೆಲ್ಲಾ ಕಾರಣವಲ್ಲದ ಪೂರ್ಣ ನಾನು

ತಾಮಸ

ವನ್ನು ಕಾರಣವೆಂಬದಾಗಿ ತಿಳಿದು ಅದನ್ನು ಕಾರ್ಯಕ್ಕೆ ಸಂಬಂಧಪಟ್ಟದ್ದಾಗಿಯೂ, ನಿಜಾಂಶಕ್ಕೆ ವಿರೋಧವಾಗಿಯೂ ಮತ್ತು ನಿಕೃಷ್ಟವಾಗಿಯೂ ತಿಳಿಸುವುದು 'ತಾಮಸ' ತಿಳಿವಳಿಕೆ ಎಂದು ಹೇಳಲ್ಪಡುವುದು. ೧೮ ೨೨

ಬುದ್ಧಿ * :—

ಕೆಲಸದಲ್ಲಿ ತೊಡಗುವಿಕೆ ಮತ್ತು ಕೆಲಸದಿಂದ ಹಿಂತೆಗೆಯುವಿಕೆ, ಮಾಡಬೇಕಾದ ಮತ್ತು ಮಾಡಬಾರದ ಕೆಲಸ, ಅಂಜಿಕೆಯಿಲ್ಲದಿರುವುದು ; ಕಷ್ಟದ ಕಟ್ಟು

ಸಾತ್ತ್ವಿಕ ಬುದ್ಧಿ

ಅಥವಾ ಸೆರೆ ಮತ್ತು ಸೆರೆಯಿಂದ ಬಿಡುಗಡೆ ಇವುಗಳನ್ನು ಗೊತ್ತುಮಾಡುವುದೇ ಸಾತ್ತ್ವಿಕವಾದ ನಿರ್ಣಯಶಕ್ತಿ. ೧೮ ೩೦

---

* ಒಳ್ಳೆಯದು ಕೆಟ್ಟದ್ದು ಎಂಬುದನ್ನು ತಿಳಿದು ನಿರ್ಣಯಿಸುವ ಶಕ್ತಿ–ವಿವೇಕ.

ಯಾವ ನಿರ್ಣಯಶಕ್ತಿಯು ಆಚರಿಸಬೇಕಾದ (ಧರ್ಮದ) ಕೆಲಸಗಳನ್ನೂ, ಆಚರಿಸ

ರಾಜಸ ಬುದ್ಧಿ

ಬಾರದ (ಅಧರ್ಮ) ಕೆಲಸಗಳನ್ನೂ, ಮಾಡತಕ್ಕ ಮತ್ತು ಮಾಡಬಾರದ ಸಾಮಾನ್ಯ ಕೆಲಸಗಳನ್ನೂ ಅವುಗಳ ನಿಜಸ್ಥಿತಿಯನ್ನು ಮರೆಮಾಡಿ ಗೊತ್ತುಮಾಡುವುದೋ ಅದು ರಾಜಸ ಬುದ್ಧಿಯು. ೧೮ ೩೧

ಆಚರಿಸಬೇಡವಾದ (ಬಾರದ) ಅಧರ್ಮ ಕೆಲಸವನ್ನು ಆಚರಿಸಬೇಕಾದ ಧರ್ಮ ಕೆಲಸವೆಂಬದಾಗಿಯೂ, ಒಳ್ಳೆಯವುಗಳನ್ನೆಲ್ಲಾ ಅವುಗಳಿಗೆ ವ್ಯತಿರಿಕ್ತ (ವಿರುದ್ಧ)

ತಾಮಸ ಬುದ್ಧಿ

ವಾಗಿಯೂ ತಿಳಿಯುವ ಮತ್ತು ಅರಿವನ್ನು ಮರೆಮಾಡಿ ಕತ್ತಲೆಯಿಂದ ಕವಿಯಲ್ಪಟ್ಟಿರುವ ಬುದ್ಧಿಯು ತಾಮಸವು. ೧೮ ೩೨

ಧೃತಿ–ಧೈರ್ಯ : ಹಿಡಿದ ಕೆಲಸವನ್ನು ಬಿಡದೆ ನಡೆಸುವ ಶಕ್ತಿ :—

ಫಲಾಪೇಕ್ಷೆಯನ್ನು ಇಟ್ಟುಕೊಳ್ಳದೆ ನಡುವೆ ಕುಸಿದು ಹೋಗದಿರುವ ಯೋಗದಿಂದ ಮನಸ್ಸು, ಪ್ರಾಣ ಮತ್ತು ಇಂದ್ರಿಯಗಳ ಕೆಲಸಗಳನ್ನು ಮೊದಲಿ

ಸಾತ್ತ್ವಿಕ ಧೃತಿ

ನಿಂದ ಕೊನೆಯವರೆಗೂ ಬಿಡದೆ ನಡೆಸುವ ಶಕ್ತಿಯು ಸಾತ್ತ್ವಿಕ ಧೃತಿಯೆನಿಸುವುದು. ಯಾವ ಧೈರ್ಯದಿಂದ ಸಂದರ್ಭಾ ೧೮ ೩೩

ನುಸಾರ ಫಲಾಪೇಕ್ಷೆಗಳಿಂದ ಕೂಡಿ ಆಚರಿಸಬೇಕಾದ ಧರ್ಮಕೆಲಸ, ವ್ಯಾವಹಾರಿಕ ವಿಷಯಗಳಿಗೆ ಸಂಬಂಧಪಟ್ಟ ಕೆಲಸ ಮತ್ತು ಇಚ್ಛೆಗೆ ಸಂಬಂಧಪಟ್ಟ ಕೆಲಸ

ರಾಜಸ ಧೃತಿ

ಗಳೆಂಬ ಪುರುಷಾರ್ಥ ಕಾರ್ಯಗಳನ್ನು ನೆರವೇರಿಸಲಾಗುವುದೋ ಆ ಶಕ್ತಿಯು ರಾಜಸ ಧೃತಿಯೆನಿಸುವುದು. ೧೮ ೩೪

ನಿದ್ದೆ, ಅಂಜಿಕೆ, ಕೊರಗುವುದು, ಕುಗ್ಗಿ ಹೋಗುವುದು ಮತ್ತು ಕೊಬ್ಬುಗಾರಿಕೆ

ತಾಮಸಧೃತಿ

(ಸೊಕ್ಕು) ಇವುಗಳನ್ನು ಬಿಡದೇನೇ ಇರುವ ಕೆಟ್ಟಮನಸ್ಸಿನ ಧೈರ್ಯವು ತಾಮಸಧೃತಿಯಾಗುವುದು. ೧೮ ೩೫

ಸುಖ :—

ಮೊದಮೊದಲು ವಿಷದಂತೆ ಬೇಡವಾಗಿಯೂ, ಕೊನೆಕೊನೆಗೆ ಜ್ಞಾನ ವೈರಾಗ್ಯಗಳಿಂದ ಪರಿಪಾಕವಾಗಿ ಅಮೃತದಂತೆ ಹಿತವಾಗಿಯೂ ಇರುವ ಸುಖಾನು

ಸಾತ್ತ್ವಿಕ ಸುಖ

ಭವವು ನಾನುವಿನ ಅರಿವಿನ ಬುದ್ಧಿಗೆ ಶುದ್ಧತೆಯನ್ನುಂಟು ಮಾಡುವುದಾಗಿ ಸಾತ್ವಿಕ ಸುಖವೆನಿಸುವುದು. ೧೮ ೩೭

ಇಂದ್ರಿಯಗಳು ಮತ್ತು ವಿಷಯಗಳು—ಇವುಗಳ ಸಂಬಂಧದಿಂದುಂಟಾಗುವ

ರಾಜಸ ಸುಖ

ಸುಖಾನುಭವವು ಮೊದಮೊದಲು ಅಮೃತದಂತೆ ಹಿತವಾಗಿಯೂ ಕೊನೆಕೊನೆಗೆ ವಿಷದಂತೆ ಬೇಡವಾಗಿಯೂ ಇರುವುದ

ರಿಂದ ರಾಜಸ ಸುಖವೆಂದು ಹೇಳಲ್ಪಟ್ಟಿದೆ. ಮೊದಲಿನಿಂದ ಕೊನೆಯ ೧೮ ೩೮
ವರೆಗೂ ನಿದ್ದೆ ಮತ್ತು ಜಡರುಗಳಿಂದ ಮತ್ತು ಕ್ರಮತಪ್ಪಿ ಮಾಡತಕ್ಕ ಕಾರ್ಯವನ್ನು

ತಾಮಸ ಸುಖ

ಮಾಡದೆ ಸುಮ್ಮನೆ ಇರುವಿಕೆಗಳಿಂದ ಉಂಟಾದ ಸುಖಾನುಭವದ ಭ್ರಾಂತಿಯನ್ನು ತಾಮಸವೆಂದು ಹೇಳುತ್ತಾರೆ. ೧೮ ೩೯

ಕೆಲಸ-ಗೆಯ್ಮೆ:—*

ಫಲದಮೇಲೆ ಆಸೆಯಿಲ್ಲದೆ ಇರುವವನಿಂದ ಆತ್ಮಲಾಭಕ್ಕಾಗಿ ಮಾಡಲ್ಪಡುವ

ಸಾತ್ವಿಕ ಕೆಲಸ

ಪ್ರೇಮ ಮತ್ತು ಹಗೆತನಗಳಿಂದ ಬಿಡಲ್ಪಟ್ಟಿರುವ ನಿತ್ಯ (ಕಡ್ಡಾಯ) ವಾದ ಗೆಯ್ಮೆಯು ಸಾತ್ವಿಕವು. ಫಲ ೧೮ ೨೩
ವನ್ನು ಬಯಸುವವನೂ ಹೆಮ್ಮೆಯುಳ್ಳವನೂ ಮಾಡುವ ಮತ್ತು ಬಹಳ ಆಯಾಸ

ರಾಜಸ ಕೆಲಸ

ದಿಂದ ನಡೆಯಬೇಕಾದ ಗೆಯ್ಮೆಯು ರಾಜಸವು. ೧೮ ೨೪
ಕೆಲಸದ ಕೊನೆಯಲ್ಲಿ ಉಂಟಾಗುವ ಫಲ, ನಷ್ಟ, ಹಿಂಸೆ
ಮಾಡುವುದಕ್ಕೆ ಬೇಕಾದ ಶಕ್ತಿ ಮತ್ತು ಸಾಮರ್ಥ್ಯಗಳೊಂದನ್ನೂ ಲೆಕ್ಕಿಸದೆ

ತಾಮಸ ಕೆಲಸ

ಭ್ರಾಂತಿಯಿಂದ ದುಡುಕಿ ಮಾಡಲ್ಪಡುವ ಗೆಯ್ಮೆಯೇ ತಾಮಸವು. ೧೮ ೨೫

ಆಹಾರ : —

ಪ್ರಾಣಿಗಳಿಗೆಲ್ಲಾ ಇಷ್ಟವಾದ ಆಹಾರವೂ; ನಾನುಪಿನ ಪ್ರೀತಿಗಾಗಿ ಮಾಡುವ ದ್ರವ್ಯಸಮರ್ಪಣೆಯೂ; ತಪಸ್ಸು ಮತ್ತು ದಾನ ಇವಕ್ಕೆ ಸಂಬಂಧಿಸಿದ ಕೆಲಸಗಳೂ ಸಹ ಮೂರುಮೂರು ತೆರನಾಗಿರುವುವು. ಅವುಗಳ ಭೇದಗಳು:-೧೭ ೭
ಆಯುಸ್ಸು (ಬದುಕುವ ಕಾಲ), ಪ್ರಾಣಿಯ ವ್ಯಕ್ತಿತ್ವವನ್ನು ಬೆಳಗುವ ಮುಖ್ಯ

ಸಾತ್ವಿಕ ಆಹಾರ

ಗುಣ-ವಾ-ಶಕ್ತಿ, ಶರೀರದ ಬಲ ಮತ್ತು ರೋಗವಿಲ್ಲದಿರುವಿಕೆ-ಇವುಗಳಿಗನುಕೂಲವಾಗಿಯೂ, ಸುಖ ಸಂತೋಷಗಳನ್ನು ಹೆಚ್ಚಿಸುವುವುಗಳಾಗಿಯೂ, ರಸವತ್ತಾಗಿ (ಸಾರವತ್ತಾಗಿ) ಯೂ, ಜಿಡ್ಡಿನಿಂದ ಕೂಡಿದವುಗಳಾಗಿಯೂ, ಶರೀರಕ್ಕೆ ಹೆಚ್ಚುಕಾಲ ಫಲವನ್ನು ಕೊಡುವುದಾಗಿಯೂ ಮತ್ತು ಮನಸ್ಸಿಗೆ ಹಿತವಾಗಿಯೂ ಇರುವ ಆಹಾರಗಳು ಸಾತ್ವಿಕರಿಗೆ ಬೇಕಾದವುಗಳು. ಕಾರ, ಹುಳಿ ಮತ್ತು ಉಪ್ಪುಗಳಿಂದ ತುಂಬಿಯೂ, ೧೭ ೮

---

* ತಮಿಳು, ತೆಲಗು, ಕನ್ನಡನಾಡುಗಳಲ್ಲಿ ರೂಢಿಯಲ್ಲಿರುವ ಶಯ್, ಚಯ್, ಗೆಯ್-ಎಂಬಿವು ಎಲ್ಲಾವಿಧವಾದ ಕೆಲಸಗಳನ್ನು ತಿಳಿಸಲು ಸಾಕಾಗಿವೆ. ಆದುದರಿಂದ 'ಕರ್ಮ' ಶಬ್ದಕ್ಕೆ 'ಗೆಯ್ಮೆ' ಎಂಬುದು ಸರಿಯಾದ ಅರ್ಥ. 'ಗೆಯ್ಮೆ' ಯು ಕೇವಲ ಸಾಧಾರಣವಾದ ಕೆಲಸಗಳನ್ನು ಸೂಚಿಸಲು ಉಪಯೋಗಿಸಲ್ಪಡುತ್ತದೆಂಬ ಕನ್ನಡಿಗರು ಇಲ್ಲಿ ಆ ಶಬ್ದದ ಸಾಮಾನ್ಯ ಮತ್ತು ವಿಶೇಷಾರ್ಥಗಳ ಸ್ವಾರಸ್ಯವನ್ನು ವಿಮರ್ಶಿಸಿ ಅನುಭವಿಸಬೇಕಾಗಿರುತ್ತದೆ.

ತುಂಬಾ ಬಿಸಿಯಾಗಿಯೂ, ಬಹಳ ಚುರುಕಾಗಿಯೂ, ಜಿಡ್ಡು ಕಮ್ಮಿಯಾಗಿಯೂ ಇರುವ, ಶರೀರದ ಬಲಗೆಡಿಸಿ ಒಣಗಿಸುವ ಆಹಾರಗಳು ರಾಜಸಗುಣದವರಿಗೆ ಬೇಕಾದವುಗಳಾಗಿರುವುವು. ಇವುಗಳಿಂದ ಕಷ್ಟ, ಕೊರಗು ಮತ್ತು ಕಾಯಿಲೆಗಳು ಉಂಟಾಗುವುವು. ೧೭ ೯

ರಾಜಸ ಆಹಾರ

ಸಿದ್ಧವಾದ ಮೇಲೆ ಬಹುಕಾಲ ಇಟ್ಟಿರುವ, ಸಾರವಿಲ್ಲದ, ಕೆಟ್ಟವಾಸನೆಯಿಂದ ಕೂಡಿದ, ತಂಗಳಾಗಿರುವ, ತಿಂದುಮಿಕ್ಕಿರುವ ಮತ್ತು ಚೊಕ್ಕಟವಿಲ್ಲದ ಆಹಾರವು ತಾಮಸಗುಣದವರಿಗೆ ಇಷ್ಟವಾದುದು. ೧೭ ೧೦

ತಾಮಸ ಆಹಾರ

ಯಜ್ಞ: ದೇವತಾ ಕೆಲಸ :—

ಫಲದ ಮೇಲಿನ ಆಸೆಯಿಲ್ಲದೆ, ನಾನುವಿನ ಪ್ರೀತಿಗಾಗಿ ಅವಶ್ಯವಾಗಿ ಮಾಡತಕ್ಕ ಕೆಲಸವೆಂದು ಮನಸ್ಸನ್ನು ಸಮಾಧಾನವಾಗಿಟ್ಟುಕೊಂಡು ನಿಯಮಗಳಿಗನುಸಾರವಾಗಿ ಮಾಡಲ್ಪಡತಕ್ಕ ಯಜ್ಞವು ಸಾತ್ತ್ವಿಕವು. ೧೭ ೧೧

ಸಾತ್ತ್ವಿಕ ಯಜ್ಞ

ಫಲವನ್ನು ಪಡೆಯಬೇಕೆಂದಾಗಿಯಾಗಲೀ, ದಂಭಕ್ಕಾಗಿಯಾಗಲೀ ಮಾಡಲ್ಪಡತಕ್ಕದ್ದು ರಾಜಸಯಜ್ಞವೆಂದು ತಿಳಿಯಬೇಕು. ೧೭ ೧೨

ರಾಜಸ ಯಜ್ಞ

ಯಾವುದೊಂದು ನಿಯಮಕ್ಕೆ ಅಂದರೆ ಕಟ್ಟಳೆಗೆ ಒಳಪಡದೆಯೂ, ಅನ್ನವೇ ಮೊದಲಾದ ಪದಾರ್ಥಗಳ ಕೊಡಿಗೆ (ದಾನ) ಗಳಿಲ್ಲದೆಯೂ, ನಾನುವಿಗೆ ಪ್ರೀತಿಯಾಗುವ ಮಂತ್ರಗಳೆಂಬ ಮಾತುಗಳ ಉಚ್ಚಾರಣೆಯು ಇಲ್ಲದೆಯೂ, ಪರಸ್ಪರ ಪ್ರೇಮದ ವರ್ತನವೆಂಬ ಹಂಗು ಇಲ್ಲದೆ (ದಾಕ್ಷಿಣ್ಯವಿಲ್ಲದೆ) ಯೂ * ಮತ್ತು ಸಡ್ಡೆ (ಶ್ರದ್ಧೆ) ಯಿಲ್ಲದೆಯೂ ಮಾಡಲ್ಪಡುವ ಯಜ್ಞವು ತಾಮಸವೆಂದು ಹೇಳಲ್ಪಡುತ್ತದೆ. ೧೭ ೧೩

ತಾಮಸ ಯಜ್ಞ

ತಪಸ್ಸು :—

ದೇವತೆಗಳು, ದ್ವಿಜರು ಮತ್ತು ಆತ್ಮಜ್ಞಾನಿಗಳು ಇವರನ್ನು ಸತ್ಕರಿಸುವುದು, (ಸತ್ಕಾರ=ಉಪಕಾರ) ಕುಟಿಲ (ಕಪಟ) ವಿಲ್ಲದೆ ಸರಳವಾಗಿರುವುದು, ಬ್ರಹ್ಮವಿಚಾರಕ್ಕೆ ಸಂಬಂಧಪಟ್ಟ ಅಧ್ಯಯನ ಮತ್ತು ಇಂದ್ರಿಯನಿಗ್ರಹ, ತೊಂದರೆಯುನ್ನುಂಟುಮಾಡದಿರುವುದು ಇವೆಲ್ಲವೂ ದೇಹದಿಂದ ಆಗಬೇಕಾಗಿರುವ ತಪಸ್ಸು ಎನಿಸುವುವು. ೧೭ ೧೪

ಶಾರೀರಕ ತಪಸ್ಸು

ಪ್ರಾಣಿಗಳ ಮನಸ್ಸಿಗೆ ನೋವನ್ನುಂಟುಮಾಡುವ-ಶಬ್ದಾದಿಗಳನ್ನು ಮಾಡದಿರುವುದು ;

* ದಕ್ಷಿಣಾ ಎಂದರೆ, ದಾಕ್ಷಿಣ್ಯ=ಹಂಗನ್ನು ಪರಸ್ಪರವಾಗಿ ಹೆಚ್ಚಿಸಿಕೊಂಡು ಉತ್ತರೋತ್ತರ ದೇವತಾಕಾರ್ಯಾಭಿವೃದ್ಧಿಗೆ ಸಹಾಯವನ್ನು ಸೂಚಿಸುವುದಕ್ಕಾಗಿ ವಸ್ತುತಃ ತೋರಿಸುವ ಮರ್ಯಾದೆ ಅಥವಾ ಪ್ರೀತಿ.

ವಾಕ್ ತಪಸ್ಸು

ಸತ್ಯವಾಗಿಯೂ ಹಿತವಾಗಿಯೂ ಇರುವ ಮಾತಾಡುವುದು; ನಾನುವಿನ (ಬ್ರಹ್ಮನ) ವಿಚಾರಕ್ಕೆ ಸಂಬಂಧಪಟ್ಟ ವಿಷಯಗಳನ್ನು ಗ್ರಹಿಸಲು ಮತ್ತು ತಿಳಿಯಲು ಮಾಡುವ ಪಠನ, ಶ್ರವಣ ಮತ್ತು ಮನನಾದಿ ಕಾರ್ಯಗಳನ್ನು (ವಿದ್ಯಾಸಂಗ್ರಹ ಕಾರ್ಯಗಳನ್ನು) ಮತ್ತೆ ಮತ್ತೆ ಮಾಡುತ್ತಿರುವಿಕೆ ಇವೆಲ್ಲವೂ ವಾಕ್ ತಪಸ್ಸೆನಿಸುವುವು. ಶುದ್ಧವಾದ ೧೭ ೧೫
ಮನಸ್ಸು; ಸೌಮ್ಯವಾಗಿರುವಿಕೆ; ಹೆಚ್ಚು ಮಾತಾಡದಿರುವುದು; ಇಂದ್ರಿಯ

ಮನಸ್ ತಪಸ್ಸು

ಮತ್ತು ಮನಸ್ಸುಗಳನ್ನು ಹತೋಟಿಯಲ್ಲಿಟ್ಟಿರುವುದು; ವ್ಯವಹಾರದಲ್ಲಿ ಪರಿಶುದ್ಧವಾದ ಆಲೋಚನೆಗಳಿಂದ ಮೋಸವಿಲ್ಲದಂತೆ ಇರುವಿಕೆ ಇವುಗಳು ಮನಸ್ಸಿನಲ್ಲಿ ನಡೆಯುಬಹುದಾದ ತಪಸ್ಸು ಆಗಿರುವುವು. ೧೭ ೧೬

ಈ ಮೇಲ್ಕಂಡ ಮೂರು ಬಗೆಯ ತಪಸ್ಸುಗಳಲ್ಲಿ ಪ್ರತಿಯೊಂದರಲ್ಲಿಯೂ–ಗುಣಾನುಸಾರವಾಗಿ ಮೂರು ಬಗೆಗಳಿವೆ:—ಮಾಡಿದುದರ ಫಲವನ್ನಪೇಕ್ಷೆ

ಸಾತ್ತ್ವಿಕ ತಪಸ್ಸು

ಮಾಡದಿರುವ ಯೋಗಿಗಳಾದ ಮನುಷ್ಯರು ಅತ್ಯಂತ ಶ್ರದ್ಧೆಯಿಂದ ಆಚರಿಸುವ ತಪಸ್ಸು ಸಾತ್ತ್ವಿಕವು. ಮನ್ನಣೆ, ೧೧ ೧೭
ಗೌರವ ಮತ್ತು ಆದರಣೆಗಳಿಗಾಗಿಯೂ, ದಂಭಕ್ಕಾಗಿಯೂ ಮಾಡುವ ರಾಜಸ

ರಾಜಸ ತಪಸ್ಸು

ತಪಸ್ಸು ಅಲ್ಪಕಾಲವಿರತಕ್ಕದ್ದು; ಮತ್ತು ಸ್ಥಿರವಾದುದೂ ಅಲ್ಲ. ಮಂಕುತನ ಕವಿದುಕೊಂಡಿರುವವನು ೧೭ ೧೮
ಶರೀರದ ಹಿಂಸೆಯಿಂದಲೂ, ಮತ್ತೊಬ್ಬರನ್ನು ಹಾಳುಮಾಡಬೇಕೆಂಬ ಉದ್ದೇಶ

ತಾಮಸ ತಪಸ್ಸು

ದಿಂದಲೂ ಮಾಡುವ ತಪಸ್ಸು ತಾಮಸವೆಂದು ಹೇಳಲ್ಪಟ್ಟಿದೆ. ೧೭ ೧೯

ಕೊಡಿಗೆ–ದಾನ:—

'ಕೊಡಬೇಕಾದುದು', 'ಸಲ್ಲಿಸಬೇಕಾದುದು ಎಂದು ತಿಳಿದು, ಯಾರಿಂದ ಉಪಕಾರವನ್ನು ಹೊಂದಬಹುದಾಗಿಲ್ಲವೋ, ಅಂತಹ (ತಕ್ಕ) ಮನುಷ್ಯನಿಗೆ ತಕ್ಕ

ಸಾತ್ತ್ವಿಕ ದಾನ

ಕಾಲ, ತಕ್ಕ ಸ್ಥಳಗಳಲ್ಲಿ ಕೊಡುವುದು—ಸಾತ್ತ್ವಿಕವಾದ ಕೊಡಿಗೆಯು. ಬದಲು ಉಪಕಾರವನ್ನು ಹೊಂದುವ ೧೭ ೨೦
ಅಥವಾ ಯಾವುದಾದರೂ ಫಲವನ್ನು ಪಡೆಯಬೇಕೆಂಬ ಎಣಿಕೆಯಿಂದಲೂ ಮತ್ತು

ರಾಜಸ ದಾನ

ಕಷ್ಟದಿಂದಲೂ ಕೊಡಲ್ಪಡುವ ಕೊಡಿಗೆಯು ರಾಜಸವೆನಿಸುವುದು- ಸ್ಥಳ ಸಮಯಗಳು ಸರಿಯಾಗಿಲ್ಲದಿರುವಾಗ ೧೭ ೨೧
ತಕ್ಕವರಲ್ಲದವರಿಗೆ ಕೊಡುವ, ಮನ್ನಣೆಯಿಲ್ಲದ ಮತ್ತು ತಿರಸ್ಕಾರದಿಂದ ಕೂಡಿದ

ತಾಮಸ ದಾನ

ಕೊಡಿಗೆಯು ತಾಮಸವೆಂದು ಹೇಳಲ್ಪಟ್ಟಿದೆ. ೧೭ ೨೨

ಫಲ :—

ಬೇಡವಾದುದು, ಬೇಕಾದುದು ಮತ್ತು ಇವೆರಡರ ಬೆರಕೆ ಎಂಬದಾಗಿ ಗೆಯ್ಮೆಯ ಫಲವು ಮೂರು ವಿಧ. ಸಮಂಜಸವಾಗಿ ನೆರವೇರಿಸಿದ ೧೮ ೧೨
ಒಳ್ಳೆಯ ಕೆಲಸಗಳ ಫಲವು ದೋಷಗಳಿಂದ ದೂರವಾಗಿರುವುದು–ಇದೇ ಸಾತ್ವಿಕ ಫಲ; ಕಷ್ಟವನ್ನುಂಟುಮಾಡುವ ಫಲವೇ ರಾಜಸ. ಅರಿವು ಮರೆಯಾಗುವುದೇ ತಾಮಸ ಫಲ. ೧೪ ೧೬

ಸಾತ್ವಿಕ ಫಲ

ರಾಜಸ, ತಾಮಸ ಫಲಗಳು

ಕರ್ತೃ–ಮಾಡುವವ :—

ವಿಷಯಸುಖದೊಡನೆ ಬೆರೆಯುವುದನ್ನು ಬಿಟ್ಟವನೂ, ಎಲ್ಲರಿಗಿಂತಲೂ ಹೆಚ್ಚೆಂಬ ಭಾವನೆಯಿಲ್ಲದಿರುವವನೂ, ಕೆಲಸವನ್ನು ಬಿಡದೆ ಮಾಡುವ ಧೈರ್ಯವುಳ್ಳವನೂ, ಕೆಲಸವನ್ನು ನೆರವೇರಿಸುವೆನೆಂಬ ದೃಢಭಾವನೆಯುಳ್ಳವನೂ ಮತ್ತು ಗೆಯ್ಮೆಯ ಫಲವಾಗುವಿಕೆ ಅಥವಾ ಫಲವಿಲ್ಲದೇ ಹೋಗುವಿಕೆಗಳಿಂದ ಬದಲಾವಣೆ ಹೊಂದದ ಮನೋಭಾವನೆಯುಳ್ಳವನೂ ಸಾತ್ವಿಕನಾದ ಗೆಯ್ಮೆಗಾರನೆನಿಸುವನು. ವಿಷಯಸುಖದೊಡನೆ ಬೆರೆಯು ೧೮ ೨೬
ವವನೂ, ಗೆಯ್ಮೆಯ ಫಲವನ್ನು ಬಯಸುವವನೂ, ಹೆಚ್ಚಿನ ಆಸೆಯುಳ್ಳವನೂ ಉತ್ತಮವಾದ ಸನ್ನಿವೇಶಗಳಲ್ಲಿ ಕೊಡಿಗೆ (ದಾನ) ಮೊದಲಾದ ಕೆಲಸಗಳನ್ನು ಮಾಡದವನೂ, ಹಿಂಸೆಮಾಡುವ ಮನೋಭಾವನೆಯುಳ್ಳವನೂ, ಶುಚಿಯಿಲ್ಲದವನೂ ಬೇಕಾದ್ದು ಮತ್ತು ಬೇಕಿಲ್ಲದುದರ ಪ್ರಾಪ್ತಿಗನುಸಾರವಾಗಿ ಹಿಗ್ಗು ಅಥವಾ ಕೊರಗುಗಳಿಂದ ಕೂಡಿದವನೂ ರಾಜಸಗೆಯ್ಮೆಗಾರನೆನಿಸುವನು. ಯಾವ ವಿಧದಲ್ಲಿಯೂ ಮನಸ್ಸನ್ನು ೧೮ ೨೭
ಹಿಡಿದು ನಿಲ್ಲಿಸದ, ಅರಿವು ಮರೆಯಾಗಿರುವ, ಹಿರಿಯರಿಗೆ ಮರ್ಯಾದೆ (ಮನ್ನಣೆ) ಯನ್ನು ಸಲ್ಲಿಸದ, ಮಂಕುತನದಿಂದ ಕೂಡಿದ, ಮೊಂಡ ಅಥವಾ ಮೋಸಗಾರನಾದ, ಇತರರ ಜೀವನವನ್ನು ಹಾಳು ಮಾಡುವ, ಜಡನಾದ ಮತ್ತು ಯಾವಾಗಲೂ ಗೊಣಗುಟ್ಟುತ್ತಾ ಕೊರಗಿ ಕಾಲ ಕಳೆಯುವ ಗೆಯ್ಮೆಗಾರನು ತಾಮಸನು. ೧೮ ೨೮

ಸಾತ್ವಿಕ ಕರ್ತೃ

ರಾಜಸ ಕರ್ತೃ

ತಾಮಸ ಕರ್ತೃ

ಸರ್ವಪ್ರಕಾರದಲ್ಲಿಯೂ ಪ್ರಕೃತಿಯ ಗುಣಗಳಿಂದಲೇ ಕೆಲಸಗಳು ಮಾಡಲ್ಪಡುವುವು. ಕೆಲಸಗಳೂ ಸಹ ವ್ಯಕ್ತಿಯ ಆಯಾ ಹುಟ್ಟಿಗೆ ತಕ್ಕಂತೆ ಇರುವ ಗುಣಗಳಿಂದ ಬೇರೆಬೇರೆಯಾಗಿ ವಿಂಗಡಿಸಲ್ಪಟ್ಟಿವೆ. ಹಿಂದೆ ಹೇಳಿದ ವಿಷಯಗಳ ದೃಷ್ಟಿ ೧೮ ೪೧
ಯಿಂದ ಗೆಯ್ಮೆಯನ್ನು ತಿಳಿಯಬೇಕು. ಆದುದರಿಂದ ಗೆಯ್ಮೆಯ ಸ್ಥಿತಿಯು ಬಹು ತೊಡಕಾದುದು. ೪ ೧೬

ಪ್ರಕೃತಿಯ–ವಾ–ಗುಣಗಳ ಕರ್ತೃತ್ವ

ಈ ಪ್ರಪಂಚದಲ್ಲಿ ಯಾವ ಪ್ರಾಣಿಯೂ ಯಾವ ಸಂದರ್ಭದಲ್ಲಿಯೂ ಒಂದು
ಬಾರಿ ಕಣ್ಣಿನ ರೆಪ್ಪೆ ತೆಗೆದು ಮುಚ್ಚುವಷ್ಟು ಕಾಲವೂ ಕೂಡ ಕೆಲಸಮಾಡದೆ

ಕ್ಷಣವಾದರೂ ಕೆಲಸ ವಿಲ್ಲದ ವ್ಯಕ್ತಿಯಿಲ್ಲ

ಇರುವುದಿಲ್ಲ. ಪ್ರತಿಯೊಂದು ವ್ಯಕ್ತಿಯೂ ವೈಮರೆತು ೩ ೫
ಕೆಲಸಮಾಡುವಂತೆ ಪ್ರಕೃತಿಯಿಂದಾದ ಸತ್ವಾದಿ ಗುಣಗಳು
ಬಲಾತ್ಕರಿಸುವುವು. ದೇಹವನ್ನು ಧರಿಸಿದ ಯಾವ ವ್ಯಕ್ತಿ
ಯಿಂದಲೂ ಶರೀರ, ಮಾತು (ನಾಲಿಗೆ ಮೊದಲಾದ ಸಾಧನ) ಮತ್ತು ಮನಸ್ಸು
ಗಳಿಂದ ಆಗುವ ಕೆಲಸಗಳನ್ನು ಸಂಪೂರ್ಣವಾಗಿ ಬಿಟ್ಟುಬಿಡಲು ಸಾಧ್ಯವಿಲ್ಲ.
ಕೆಲಸವಿಲ್ಲದ ಅಥವಾ ಕೆಲಸಮಾಡದೆ ಇರುವುದರಿಂದ ಶರೀರಧಾರಣೆಯೂ ೧೮ ೧೧
ನಡೆಯಲಾರದು. ಕೆಲಸ ಮತ್ತು ತತ್ವಶಾಸ್ತ್ರಗಳ ಜ್ಞಾನಗಳನ್ನು ಹೊಂದಿದ ೩ ೮
ಪಂಡಿತನೂ ಕೂಡ ಅವನವನ ಪ್ರಕೃತಿಗೆ (ಹುಟ್ಟುವರ್ತನೆಗಳಿಗೆ) ಅನುಸಾರ
ವಾಗಿ ಕೆಲಸಗಳನ್ನು ನಡೆಸಲೇಬೇಕಾಗುವುದು. ಇಂದ್ರಿಯಾದಿಗಳನ್ನು ಹತೋ
ಟಿಗೆ ತಂದುಕೊಳ್ಳುವಿಕೆಯೂ ಸಹ ಕೆಲಸಕ್ಕೆ ಬಾರದ್ದಾಗುತ್ತದೆ. ಆದುದ ೩ ೩೩
ರಿಂದ ಒಂದುವೇಳೆ ಆತ್ಮಜ್ಞಾನವಿಲ್ಲದ ಅಂದರೆ ನಾನುವಿನ ಅರಿವು ಮರೆಯಾಗಿ
ರುವ ಸಾಮಾನ್ಯ ಮನುಷ್ಯನು ಗೆಯ್ಮೆಗೆ ಸಹಾಯಗಳಾದ ಕೈಕಾಲು ಮೊದಲಾದ
ಇಂದ್ರಿಯಗಳ ಕೆಲಸಗಳನ್ನು ತಡೆದು ನಿಲ್ಲಿಸಿದ್ದರೂ, ಆಯಾ ಇಂದ್ರಿಯಗಳಿಗೆ
ಸಂಬಂಧಪಟ್ಟ ವಿಷಯಗಳನ್ನು ಮನಸ್ಸಿನಲ್ಲಿಯಾದರೂ ಸಂದರ್ಭಾನುಸಾರ
ಜ್ಞಾಪಿಸಿಕೊಳ್ಳುತ್ತಿರಬೇಕಾಗಿರುವುದರಿಂದ ಅಂತಹವನು (ಕೆಲಸಮಾಡುತ್ತಿಲ್ಲ
ವೆಂದು ಹೇಳುವುದಾದರೆ) ಕಪಟವಾದ ನಡೆವಳಿಕೆಯುಳ್ಳವನೆನಿಸಿಕೊಳ್ಳುತ್ತಾನೆ.
೩ ೬

ಸನ್ನಿವೇಶಗಳಿಗನುಗುಣವಾಗಿ ಸ್ವರ್ಗ, ಮರ್ತ್ಯ ಮತ್ತು ಪಾತಾಳಗಳೆಂದು
ಕರೆಯಲ್ಪಡುವ ಈ ಪ್ರಪಂಚದ ವಾಸಸ್ಥಾನ, ಸ್ಥಿತಿ, ಮತ್ತು ಸನ್ನಿವೇಶಗಳಿಗನು

ನಾಯಕನಾದವನಿಗೆ ಕೆಲಸದ ಆವಶ್ಯಕತೆ

ಗುಣವಾಗಿ ವಿಂಗಡಿಸಬಹುದಾದ, ಉತ್ತಮ ಮಧ್ಯಮಾಧಮ
ಗಳೆಂಬ ಮೂರು ಲೋಕಗಳಲ್ಲಿಯೂ, ಆಚರಿಸಬೇಕಾದ
ಕೆಲಸವಾಗಲೀ; ಪಡೆಯದಿರುವುದನ್ನು ಪಡೆಯಬೇಕಾಗಿರು
ವುದಾಗಲೀ ಯಾವುದೂ ಶ್ರೀಕೃಷ್ಣನಿಗೆ ಇರುವುದಿಲ್ಲ, ಹಾಗಾದರೂ (ಹೀಗಿದ್ದರೂ)
ಕೆಲಸದಲ್ಲಿಯೇನಿರತನಾಗಿರಬೇಕಾಗಿದೆ. ಯಾವಾಗಲಾದರೂ ಆಲಸ್ಯದಿಂದ ೩ ೨೨
ಈ ಶ್ರೀಕೃಷ್ಣನು ಕೆಲಸಗಳನ್ನು ನಡೆಸದೆ ಹೋದರೆ, ಮನುಷ್ಯರೆಲ್ಲರೂ ಎಲ್ಲಾ ವಿಧ
ದಲ್ಲೂ, ನಾಯಕನು ಹಿಡಿದ ದಾರಿಯನ್ನೇ ಅನುಸರಿಸುವವರಾಗಿ ಅವರವರ ಕೆಲಸ
ಗಳನ್ನೇ ನಿಲ್ಲಿಸಿಬಿಡುವರು. ಅದರ ಪರಿಣಾಮವಾಗಿ ಈ ಲೋಕದ ಜನಗ ೩ ೨೩
ಳೆಲ್ಲರೂಕೆಟ್ಟು ಹೋಗುವರು, ಮತ್ತು ನಾಯಕನಾದವನು ಕೆಲಸಗಳನ್ನು ಮಾಡ
ದೇನೇ ಹೋದರೆ, ಪ್ರಪಂಚದ ಸ್ಥಿತಿಗಳೆಲ್ಲಾ ಒಂದಕ್ಕೊಂದು ಸೇರಿ, ಕಲಸಿ ಹೋಗು
ವಂತೆ ಮಾಡುವವನಾಗುತ್ತಾನೆ. ಅಲ್ಲದೆ ಪ್ರಜೆಗಳನ್ನೆಲ್ಲಾ ಕಷ್ಟಕ್ಕೀಡುಮಾಡುವವ

ನಾಗುತ್ತಾನೆ. ಉನ್ನತಸ್ಥಾನದಲ್ಲಿರುವವನು ಏನೇನು ಕೆಲಸಗಳನ್ನು ೩ ೨೪ ಆಚರಿಸುತ್ತಾನೋ ಆಯಾ ಕೆಲಸಗಳನ್ನು ಉಳಿದ ಜನರೂ ಆಚರಿಸುತ್ತಾರೆ. ಮತ್ತು ಮುಂದಾಳಾಗಿ ಮಾರ್ಗದರ್ಶಕನಾಗಿ ನಿಂತವನು ಯಾವುದನ್ನು ಒಳ್ಳೆಯ ದೆಂದು ನಿರ್ಣಯ ಮಾಡುವನೋ ಸಾಮಾನ್ಯ ಜನರೂ ಅದನ್ನೇ ಪಾಲಿಸುತ್ತಾರೆ. ೩ ೨೧

ಕೆಲಸಮಾಡುವಿಕೆಯ ಶ್ರೇಷ್ಠತೆ

ಜನಕನೇ ಮೊದಲಾದ ರಾಜರ್ಷಿಗಳು, ಕೆಲಸದಿಂದಲೇ ಉತ್ತಮವಾದ 'ಜ್ಞಾನನಿಷ್ಠೆ' ಯೆಂಬ ಸಿದ್ಧಿಯನ್ನು ಪಡೆದರು. ಕೆಲಸವಿಲ್ಲದೆ ಅಥವಾ ೩ ೨೦ ಕೆಲಸಮಾಡದೆ ಇರುವುದಕ್ಕಿಂತಲೂ ಕೆಲಸಮಾಡುವುದು ಒಳ್ಳೆಯದು. ಆದುದರಿಂದ ವಿಧಾಯುಕವಾಗಿರುವ ಕೆಲಸಗಳನ್ನು ಮಾಡಲೇಬೇಕು. ಉತ್ತಮಸ್ಥಿತಿಯಲ್ಲಿರು ೩ ೮ ವವನು-ಸಾಮಾನ್ಯ ಜನರು ಧರ್ಮಮಾರ್ಗದಲ್ಲಿ ನಡೆಯಬೇಕೆಂಬುದನ್ನು ಮನಸ್ಸಿನಲ್ಲಿಟ್ಟುಕೊಂಡಾದರೂ ಅವನವನ ಕೆಲಸಗಳನ್ನು ಮಾಡುವವನಾಗಬೇಕು. ೩ ೨೦ ಮೇಲೆ ವಿವರಿಸಿದಂತೆ ಗುಣಗಳಿಂದ ನಡೆಯುವ ಕೆಲಸಗಳ ವಿಂಗಡಣೆಗೆ ತಕ್ಕಂತೆಯೂ, ಗುಣಗಳು ಮತ್ತು ಕೆಲಸಗಳು ಇವುಗಳ ವಿಭಜನೆಗೆ ತಕ್ಕಂತೆಯೂ ನಾಲ್ಕುವಿಧಗಳಾದ 'ವರ್ತನೆ' ಗಳು ನಾನುವಿನಿಂದ ಪರಿಣಾಮವನ್ನು ಹೊಂದಿವೆಯೆಂತಲೂ, ಕರ್ತೃತ್ವವಿಲ್ಲದ ನಾಶರಹಿತನಾದ ನಾನುವೇ ವರ್ತನೆಗಳ ಪರಿಣಾಮವನ್ನು ಉಂಟುಮಾಡಿದವನೆಂತಲೂ ತಿಳಿಯಬೇಕು. ೪ ೧೩

ಕೆಲಸದ ಬಗೆ

ಬ್ರಾಹ್ಮಣಧರ್ಮಾನುಯಾಯಿಗಳ ನಾಲ್ಕು ವಿಧ ವರ್ತನೆಗಳು †

ಶ್ರೋತ್ರಿಯ ಬ್ರಾಹ್ಮಣ ವರ್ತನೆ, ಕ್ಷತ್ರಿಯ ಬ್ರಾಹ್ಮಣ ವರ್ತನೆ, ವೈಶ್ಯ ಬ್ರಾಹ್ಮಣ ವರ್ತನೆ ಮತ್ತು ಶೂದ್ರಬ್ರಾಹ್ಮಣ ವರ್ತನೆಗಳಿಗೆ ಸಂಬಂಧಪಟ್ಟ ಕೆಲಸಗಳು ಆಯಾ ವರ್ತನೆಗಳ ಗುಣಗಳಿಂದ ವಿಂಗಡಿಸಲ್ಪಟ್ಟಿರುವುವು.* ಮನಸ್ಸನ್ನು ಹತೋಟಿಯಲ್ಲಿಟ್ಟು ೧೮ ೪೧ ಕೊಳ್ಳುವುದು, ಇಂದ್ರಿಯಗಳ ಹತೋಟಿ, ತಪಸ್ಸು, ಶುಚಿಯಾಗಿರುವಿಕೆ, ಸಹನೆ, ಕುಟಿಲವಿಲ್ಲದೆ ಸರಳವಾಗಿರುವುದು, ತತ್ವಜ್ಞಾನ ಮತ್ತು ಆತ್ಮಜ್ಞಾನ, ಶಾಶ್ವತ ಸುಖ ಮತ್ತು ಅಪರೋಕ್ಷಾನುಭವಗಳಲ್ಲಿ ನಂಬಿಕೆ ಇವೆಲ್ಲವೂ-ಸಾಮಾನ್ಯವಾಗಿ ಬ್ರಾಹ್ಮಣಧರ್ಮಾನು

---

*Universal Religion–Brahmana Dharma–
(Poona Orientalist) See Pages 65-66, 121-124 } Vol. IV

† ಬ್ರಾಹ್ಮಣಧರ್ಮದಲ್ಲಿ ಮೇಲ್ಕಂಡ ನಾಲ್ಕು ವಿಧವಾದ ವರ್ತನೆಗಳು—ಒಂದರಲ್ಲಿ ಒಂದು ಸೇರಿ ಹೆಣೆದುಕೊಂಡಿವೆ. (ವೇದದಲ್ಲಿ ನಿಷಾದರೆಂಬ ಐದನೆಯ ವರ್ತನೆಗೆ ಸೇರಿದ ಜನಗಳೂ ಹೇಳಲ್ಪಟ್ಟಿರುವುದರಿಂದ ಅದನ್ನೂ ಗಮನಕ್ಕೆ ತಂದುಕೊಳ್ಳುವುದು ಅತ್ಯಾವಶ್ಯಕ.)

ಯಾಯಿಯ ಶ್ರೋತ್ರಿಯ ವರ್ತನೆಯಿಂದ ಪರಿಣಾಮವಾಗುವ ಕೆಲಸಗಳು. ೧೮ ೪೨
ಶರೀರದ ಶಕ್ತಿ, ವ್ಯಕ್ತಿತ್ವದ ಹೊಳಪು, ಕೆಲಸವನ್ನು ಬಿಡದೆ ಮಾಡುವ ಧೈರ್ಯ, ಕೆಲಸವನ್ನು ನಿರ್ವಾಹಮಾಡುವ ಶಕ್ತಿ, ಯುದ್ಧಮಾಡುತ್ತಿರುವಾಗ ಹಿಂತಿರುಗಿ ಓಡದಿರುವುದು, ಅರ್ಹರಾದವರಿಗೆ ಬದುಕುವಿಕೆಗೆ ಅವಶ್ಯಕವಾಗಿ ಬೇಕಾಗಿರುವ ವಸ್ತುಗಳನ್ನು ಕೊಡುವುದು ಮತ್ತು ಅನೇಕರನ್ನು ಕೈಕೆಳಗೆ ಇಟ್ಟುಕೊಂಡು ಅವರಿಗೆ ಒಡೆಯನೆಂದು ಭಾವಿಸಿಕೊಳ್ಳುವುದು—ಇವೆಲ್ಲವೂ ಸಾಮಾನ್ಯವಾಗಿ ಬ್ರಾಹ್ಮಣಧರ್ಮಾನುಯಾಯಿಯಾದ ಕ್ಷತ್ರಿಯ ವರ್ತನೆಯಿಂದ ಪರಿಣಾಮವಾಗುವ ಕೆಲಸಗಳು. ಭೂಮಿಯ ಕೃಷಿ, ಪಶುಗಳ (ಗೋಗಳ) ಪಾಲನೆ, ೧೮ ೪೩
ಮತ್ತು ಕ್ರಯವಿಕ್ರಯವ್ಯವಹಾರಗಳೆಲ್ಲವೂ ಸಾಮಾನ್ಯವಾಗಿ ಬ್ರಾಹ್ಮಣಧರ್ಮಾನುಯಾಯಿಯಾದ ವೈಶ್ಯವರ್ತನೆಯ ಪರಿಣಾಮದ ಕೆಲಸಗಳು. ಆಶ್ರಯ ೧೮ ೪೪
ದಿಂದ ಸೇವೆಮಾಡುವುದು-ಸಾಮಾನ್ಯವಾಗಿ ಬ್ರಾಹ್ಮಣಧರ್ಮಾನುಯಾಯಿಯ ಶೂದ್ರವರ್ತನೆಯ ಪರಿಣಾಮದ ಕೆಲಸಗಳು. ೧೮ ೪೪

ಅವನವನ ಕೆಲಸದಲ್ಲಿ ಮನಸ್ಸಿಟ್ಟವನು ಆತ್ಮಜ್ಞಾನಸಿದ್ಧಿಯನ್ನು ಹೊಂದುತ್ತಾನೆ. ೧೮ ೪೫

ಗುಣಗಳ ಮತ್ತು ಕೆಲಸಗಳ ವಿಭಜನೆ ಮತ್ತು ಸಂಯೋಜನೆ ಮೇರೆ ಶತಾಂಶ (ಅಂದರೆ ನೂರಕ್ಕೆ ಇಷ್ಟು ಎಂಬ) ಕ್ರಮದಲ್ಲಿ ಸೃಷ್ಟಿಯಾಗಿರುವ ಚರಾಚರ ವಸ್ತುಗಳಲ್ಲೆಲ್ಲಾ ಮೇಲ್ಕಂಡ ನಾಲ್ಕು ವರ್ತನೆಗಳು ಕಾಣುತ್ತವೆ. ದೇವತೆಗಳು; ಖಗೋಳದಲ್ಲಿ ಕಾಣುವ ಜ್ಯೋತಿರ್ವಸ್ತುಗಳು, ಗ್ರಹಗಳು, ವೃಕ್ಷಗಳು, ಮೃಗಗಳು, ಪಕ್ಷಿಗಳು, ಕ್ರಿಮಿಕೀಟಾದಿಗಳು ಮತ್ತು ಕ್ಷೇತ್ರಾದಿಗಳು–ಇವುಗಳಲ್ಲೆಲ್ಲಾ ಈ ನಾಲ್ಕು ವರ್ತನೆಗಳಿರುವುವು–ಎಂದು ಬ್ರಾಹ್ಮಣಧರ್ಮವನ್ನು ತಿಳಿಸುವ ಅನೇಕ ಗ್ರಂಥಗಳಲ್ಲಿ ಬಹಳ ಸ್ಪಷ್ಟವಾಗಿ ತಿಳಿಸಲ್ಪಟ್ಟಿದೆ. ಸೃಷ್ಟಿಕ್ರಮದ ರೀತ್ಯಾ ಉತ್ತಮೋತ್ತಮವಾದ ಸೃಷ್ಟವಸ್ತುಗಳಲ್ಲಿಯೂ ಸಹ ಕೆಳಗಿನದರ್ಜೆಯ (ತರಗತಿಯ) ವಸ್ತುಗಳ ಗುಣವರ್ತನೆಗಳೂ ಸಹ ಕಂಡುಬರುತ್ತವೆ. (ಉದಾ:–ಮನುಷ್ಯರಲ್ಲಿ ಮೃಗಧರ್ಮಗಳಿವೆ. ವ್ಯವಹಾರಧರ್ಮವನ್ನರಿತ (Civilised) ಜನಗಳಲ್ಲಿ ಕಾಡುಜನರ ಗುಣಗಳೂ ಹೊರಪಡುತ್ತವೆಂಬುದು ಬಹುಜನರ ಅನುಭವದಲ್ಲಿರುವ ವಿಷಯವಾಗಿದೆ.) ಹೀಗೆ ಶತಾಂಶ ಹೆಚ್ಚಾಗಿರುವ ವರ್ತನೆಯು ಆಯಾ ವ್ಯಕ್ತಿಯಲ್ಲಿ ಪ್ರಾಧಾನ್ಯತೆಯನ್ನು ಹೊಂದಿರುವುದಲ್ಲದೆ, ಅದಕ್ಕನುಗುಣವಾಗಿ ಸುತ್ತಮುತ್ತಲಿನ ಸನ್ನಿವೇಶಗಳಲ್ಲಿ ವ್ಯಾಪಿಸುವುದು. ಉನ್ನತಿ (ಮೇಲ್ಮೆ) ಗಾಗಲೀ ಅವನತಿ (ಕೀಳುಸ್ಥಿತಿ) ಗಾಗಲೀ–ಈ ವರ್ತನೆಗಳ ಬದಲಾವಣೆಗೆ ಪರಿಣಾಮಪದ್ಧತಿರೀತ್ಯಾ ಅವಕಾಶವಿರುವುದು. ಮನುಷ್ಯನ ಜೀವಮಾನದಲ್ಲಿ, ನಡೆವಳಿಕೆಯಲ್ಲಿ ಮತ್ತು ಒಂದುದಿನದ ಚರ್ಯೆಯಲ್ಲೂ ಸಹ ಈ ವರ್ತನೆಗಳು ಪರಿವರ್ತಿಸಿಕೊಂಡೇ ಇರುವುವು. ಈ ದೃಷ್ಟಿಯಿಂದ ಪರಿಶೀಲಿಸಿದಾಗ ಚರಾಚರ ವಸ್ತುಗಳೆಲ್ಲಾ ಸಂದರ್ಭಾನುಸಾರ ಶೂದ್ರ, ವೈಶ್ಯ, ಕ್ಷತ್ರಿಯ ಮತ್ತು

ಅವನವನ ಕೆಲಸದಿಂದಲೇ ಪರಮಾತ್ಮನನ್ನು ಪೂಜಿಸಿ ಆತ್ಮಜ್ಞಾನಸಿದ್ಧಿಯನ್ನು ಹೊಂದುತ್ತಾನೆ. ಅವನವನ ಕೆಲಸದಲ್ಲಿ ಆಸಕ್ತನಾದವನು ೧೮ ೪೬
ಹೇಗೆ ಸಿದ್ಧಿಯನ್ನು ಹೊಂದುತ್ತಾನೆ ಎಂಬುದನ್ನು ವಿವರಿಸಲಾಗುವುದು. ೧೮ ೪೫
ಆಯಾ ಸನ್ನಿವೇಶ ಸ್ಥಿತಿಗತಿಗಳಿಗೊಳಪಟ್ಟು ಅವನವನ ಹುಟ್ಟುವರ್ತನೆಗಳ ಮಿತಿಯಲ್ಲಿ, ಅವನವನ ಧರ್ಮದಲ್ಲಿದ್ದುಕೊಂಡು ಪ್ರಾಣವನ್ನು ಬಿಡುವುದಾದರೂ ಮೇಲು. ಒಂದು ಪಂಗಡದವರು ಆಚರಿಸಬೇಕಾಗಿರುವುದು ಗುಣಕರ್ಮರೀತ್ಯಾ ಎಲ್ಲರಿಗೂ ಸರಿ ಹೋಗದೆ ಇರುವುದರಿಂದ ಸ್ವಧರ್ಮವುಳ್ಳವರು ಬೇರೆಯಾಗಿರುವುದೆನಿಸಿಕೊಳ್ಳುವ ಅದನ್ನು ಆಚರಿಸಿದರೆ ಕೇಡನ್ನುಂಟುಮಾಡುವುದು. ಅವನವನ ಧರ್ಮವು ಗುಣದಲ್ಲಿ (ಮಹಿಮೆಯಲ್ಲಿ) ಕಡಿಮೆಯಾಗಿದ್ದರೂ ಇತ ೩ ೩೫
ರರ ಧರ್ಮದ ದೃಷ್ಟಿಯಿಂದ ಕುಂದುಕೊರತೆಗಳಿಂದ ಕೂಡಿದುದೆಂದು ತೋರಿಬಂದರೂ (ಸ್ವಧರ್ಮ ದೃಷ್ಟಿಯಿಂದ) ಬೇರೆಯವರು ಆಚರಿಸಬೇಕಾದುದನ್ನು (ಹೆಚ್ಚು ಮಹಿಮೆಯು ಉಳ್ಳದ್ದೆಂದು ಕಂಡುಬಂದರೂ ಸಹ) ಆಚರಿಸುವುದಕ್ಕಿಂತಲೂ ಅವನವನ ಧರ್ಮವನ್ನು ಆಚರಿಸುವುದೇ

ಅವನವನ ಧರ್ಮ ಆಚಾರಗಳೇ ಅತ್ಯಂತ ಶ್ರೇಷ್ಠ

ಶ್ರೇಷ್ಠವು. ಹುಟ್ಟಿಗನುಸಾರವಾಗಿ ಹುಟ್ಟಿ ೩ ೩೫ ; ೧೮ ೪೭
ದೊಡನೆ ಪರಿಣಾಮ ಪದ್ಧತಿಯ ಕ್ರಮದಲ್ಲಿ ಬಂದಿರುವ ಕೆಲಸವು ಬೇರೆ ಬೇರೆ ದೃಷ್ಟಿಗಳಿಂದ ನೋಡಿದಾಗ, ದೋಷದಿಂದ ಕೂಡಿದೆಯೆಂದು ತಿಳಿಯಬಹುದಾದರೂ ಅದನ್ನು ಬಿಡಲೇಕೂಡದು. ಅವನವನ ಹುಟ್ಟು ೧೮ ೪೮
ವರ್ತನೆ ಮೊದಲಾದ ಧರ್ಮಗಳ ಕಟ್ಟಿಗೆ ಒಳಪಟ್ಟಿರುವ ಕೆಲಸಗಳನ್ನು ಎಸಗುತ್ತಿದ್ದರೆ ದೋಷವು ಅಥವಾ ಪಾಪವು ಎಂದಿಗೂ ಉಂಟಾಗುವುದಿಲ್ಲ. ಏಕೆಂ ೧೮ ೪೭
ದರೆ ಬೆಂಕಿಯು ಹೊಗೆಯಿಂದ ಸುತ್ತಲ್ಪಡುವಂತೆ ಅವನವನ ಧರ್ಮದ ಅಥವಾ ಬೇರೆಯವರ ಧರ್ಮದ ಸಮಸ್ತ ಕೆಲಸಗಳೂ ಒಂದಲ್ಲ ಮತ್ತೊಂದು ದೋಷದಿಂದ ಬಳಸಲ್ಪಟ್ಟುದು ಆಗಿಯೇ ಇರುತ್ತದೆ.* ೧೮ ೪೮

ಪ್ರಜಾಪತಿಯು ದೇವತಾ ಪ್ರೀತಿಗಾಗಿ ದ್ರವ್ಯಸಮರ್ಪಣೆ ಮಾಡುವ ವಿವಿಧ ಸೇವಾರೂಪವಾದ ಯಜ್ಞಗಳನ್ನೂ ಮತ್ತು ಪ್ರಜೆಗಳನ್ನೂ ಏಕಕಾಲದಲ್ಲಿ ಸೃಷ್ಟಿಸಿ

ಶ್ರೋತ್ರಿಯಬ್ರಾಹ್ಮಣ ವಸ್ತುಗಳೇ ಆಗಿರುವುವು. ಆದುದರಿಂದ ಬ್ರಾಹ್ಮಣಧರ್ಮಾನುಯಾಯಿಗಳೆಲ್ಲಾ ಮೊದಲು ಬ್ರಾಹ್ಮಣರು, ಅನಂತರ ಸ್ವಭಾವ (ವರ್ತನೆ) ಗುಣಗಳ ಶತಾಂಶರೀತ್ಯಾ ಆಯಾ ವರ್ತನೆಯುಳ್ಳವರೆಂದೂ, ವರ್ಣಸೃಷ್ಟಿಯು ಸಾನುವಿನ ಪರಿಣಾಮ ಫಲವೇ ಹೊರತು, ಬೇರೆ ಅಲ್ಲವೆಂದೂ ಮನದಟ್ಟು (ಮನನ) ಮಾಡಿಕೊಳ್ಳುವುದು ಅತ್ಯಾವಶ್ಯಕ.

* ನೆಳಲು ಬೆಳಕಿನ ಬಳಿಯಲ್ಲಿರುವಂತೆ ದೋಷವು ಕೆಲಸದೊಡನೆ ಇದ್ದೇ ಇರುವುದು. ಜ್ಞಾನದಿಂದ ಸಂಸ್ಕೃತವಾಗಿ ಅಜ್ಞಾನವು ನಿವಾರಣೆಯಾಗುವವರೆಗೂ ಅವನವನ ಅವಸ್ಥೆ ಮತ್ತು ಸನ್ನಿವೇಶ ಧರ್ಮಗಳ ಮಿತಿಯಲ್ಲಿರುವುದು ಕ್ಷೇಮಕರ.

ಜನ್ಮಕಾಲದಲ್ಲಿ ಅಪ್ಪಣೆ ಮಾಡುವುದೇನೆಂದರೆ * :–"ಈ ಯಜ್ಞವು'–'ಕೆಲಸವು' ಪ್ರಜೆಗಳಿಗೆ ಬೇಕುಬೇಕಾದ ಇಷ್ಟಾರ್ಥಗಳನ್ನು ಕೊಡತಕ್ಕುದಾಗಿದೆ. ಇದರಿಂದ

ನಾನುವಿನ ನಾಮರೂಪಧಾರಿಗಳಾದ ದೇವತೆಗಳು ಮತ್ತು ಮಾನವರು ಇವರ ಪರಸ್ಪರ ಸಹಾಯ

ಪ್ರಜೆಗಳು ಅವರವರ ಇಷ್ಟಾರ್ಥಗಳನ್ನು ಸಾಧಿಸಿಕೊಳ್ಳಬೇಕು; † ನಾನುವಿನ ರೂಪರಾದ ದೇವತೆಗಳನ್ನು ೩ ೧೦
ಸಂತೋಷಪಡಿಸಲು ಮಾಡುವ ಈ ಯಜ್ಞದಿಂದ ಸಂತುಷ್ಟರಾದ ಆಯಾ ದೇವತೆಗಳು ಆರಾಧಕರನ್ನು ಪ್ರೀತಿಸಿ ಅವರವರ ಇಷ್ಟಾರ್ಥಗಳನ್ನು ಸಲ್ಲಿಸಲಿ; ಪ್ರಜೆಗಳೂ ದೇವತೆಗಳೂ ಒಬ್ಬರನ್ನೊಬ್ಬರು ಹೀಗೆ ಸಂತೋಷಪಡಿಸಿಕೊಂಡು ಪರಮ ಪುರುಷಾರ್ಥವಾದ ಆತ್ಮಲಾಭವನ್ನು ಅಂದರೆ ಸ್ವಸ್ವರೂಪಜ್ಞಾನಾನಂದವನ್ನು ಪಡೆಯಬಹುದು; ಯಜ್ಞ ಕೆಲಸಗಳಿಂದ ಸಂತುಷ್ಟರಾದ ದೇವತೆಗಳು ಪ್ರಜೆ ೩ ೧೧
ಗಳಿಗೆ ಬೇಕಾದ ಪ್ರಾಪಂಚಿಕ ಭೋಗ್ಯವಸ್ತುಗಳನ್ನೂ ಸಹ ಕೊಡುತ್ತಾರೆ"—
ಎಂಬುದಾಗಿ. ೩ ೧೨

ಈ ಲೋಕದಲ್ಲಿ ಕೆಲಸದ ಫಲವನ್ನು ಬಯಸಿ ಅದಕ್ಕೆ ತಕ್ಕಂತೆ ದೇವತೆಗಳನ್ನು ಆರಾಧನೆಮಾಡುವ ಮಾನವರಿಗೆ ಬಹುಬೇಗನೆ ಮಾಡಿದ ಕೆಲಸಕ್ಕೆ

ಕೆಲಸಕ್ಕೆ ತಕ್ಕ ಫಲ

ತಕ್ಕ ಫಲವು ಸಿದ್ಧಿಸುವುದು.§ ತಿನ್ನುವ ಅನ್ನ ೪ ೧೨
(ಆಹಾರಪದಾರ್ಥ) ದಿಂದ ಪ್ರಾಣಿಗಳೆಲ್ಲಾ ಬದುಕುವುವು. ಮಳೆಗೆ ಸಂಬಂಧಪಟ್ಟ ಪರ್ಜನ್ಯದೇವತೆಯಿಂದ (ಮಳೆಯಾಗಿ) ಆಹಾರಪದಾರ್ಥಗಳು ಸಿದ್ಧವಾಗುವುದಕ್ಕೆ ಅವಕಾಶವಾಗುತ್ತದೆ. ಯಜ್ಞದಿಂದ ಪರ್ಜನ್ಯದೇವತೆಯು ಪ್ರಸನ್ನನಾಗಿ (ಮಳೆಗರೆಯುತ್ತಾನೆ); ವಿಧವಿಧವಾದ ಕೆಲಸಗಳಿಂದ ಯಜ್ಞವು
ಸಾಧ್ಯವಾಗುವುದು. ಬ್ರಾಹ್ಮಣಧರ್ಮ ಮತ್ತು ಆಚಾರಗಳನ್ನೂ ವ್ಯವಹಾರ ೩ ೧೪
ಗಳನ್ನೂ (Civil matters) ತಿಳಿಸುವ ಪ್ರಮಾಣ ಸಿದ್ಧಾಂತ ವಾಕ್ಯವಿಧಾನಗಳಿಂದ ಕೆಲಸವು ನಡೆಯಬೇಕಾಗಿರುವುದು. ಅಕ್ಷರನಾದ ಪರಮಾತ್ಮನಿಂದ ನಾನುವಿನ ವ್ಯಂಜಕವಾದ ಪರಾ, ಪಶ್ಯಂತೀ ಮೊದಲಾದ ನಾದ ಅಥವಾ ವಾಕ್

ನಾನು ಮತ್ತು ದೇವತಾ ಕೆಲಸ

ಶಕ್ತಿಯ ಪರಿಣಾಮರೂಪವೇ ಬ್ರಾಹ್ಮಣಧರ್ಮ ಸಿದ್ಧಾಂತವಾಕ್ಯಗಳು. ಆದುದರಿಂದ ಸರ್ವಾಂತರ್ಯಾಮಿಯಾಗಿ ಸರ್ವವ್ಯಾಪಕನಾದ ಮತ್ತು ಆನಂದಮಯನಾದ ನಾನುವು ಯಜ್ಞ

---

* ಇದು ಮತ್ಸ್ಯಾವತಾರದ ಗುಟ್ಟು. ಪ್ರತಿಯೊಂದು ಪ್ರಾಣಿಯು ಹುಟ್ಟುವಾಗಲೇ ಭಗವಂತನು ಹುಟ್ಟುವ ವ್ಯಕ್ತಿಗೆ ಹೇಳುವ ಉಪದೇಶದ ಮಾತು :—" ಆತ್ಮಲಾಭಾನ್ನ ಪರಂ ವಿದ್ಯತೇ" ಆತ್ಮಲಾಭಕ್ಕಿಂತ ಶ್ರೇಷ್ಠವಾದ ಬೇರೇ ಪುರುಷಾರ್ಥಪ್ರಾಪ್ತಿ ಯಾವುದೂ ಇರುವುದಿಲ್ಲ.

† ಇದು ಕೂರ್ಮಾವತಾರದ ಅಥವಾ ಅಮೃತಮಥನದ ರಹಸ್ಯ.

§ ಕೂರ್ಮಾವತಾರದ ಗುಟ್ಟು.

ಕೆಲಸದಲ್ಲಿ ಶಾಶ್ವತವಾಗಿ ನೆಲೆಸಿರುವನು. ಈ ವಿಧವಾಗಿ ಚಕ್ರದಂತೆ ೩ ೧೫
ಪರಂಪರೆಯಾಗಿ ಒಂದನ್ನೊಂದು ಸಂಬಂಧಿಸಿಕೊಂಡು ಒಂದರ ಆಧಾರದಿಂದ ಮತ್ತೊಂದು ಆಗಬೇಕಾಗಿರುವ ಕೆಲಸವೆಂಬ ಚಕ್ರವನ್ನು ಯಾವ ವ್ಯಕ್ತಿಯು ಅನುಸರಿಸಿ ನಡೆಯುವುದಿಲ್ಲವೋ ಅವನು (ಅವಳು)† ಪಾಪದಿಂದ ತುಂಬಿದ ಆಯುಸ್ಸುಳ್ಳವನಾಗಿ (ಳಾಗಿ) ಇಂದ್ರಿಯಗಳನ್ನು ತೃಪ್ತಿಪಡಿಸುವುದರಲ್ಲೇ ಆಸಕ್ತರಾಗಿ ವ್ಯರ್ಥವಾಗಿ ಜೀವಿಸುವವರಾಗುತ್ತಾರೆ. ೩ ೧೬

ಕೆಲಸವೆಂಬ ಚಕ್ರ

ದ್ರವ್ಯಗಳಿಂದ ಸಾಧಿಸಬಹುದಾದ ವಾಪೀಕೂಪತಟಾಕಾದಿ ನಿರ್ಮಾಣಗಳೇ ಮೊದಲಾದ ದ್ರವ್ಯ ಯಜ್ಞಗಳನ್ನು ಮಾಡುವವರು; ತಪಸ್ಸಿನಿಂದ ಸಾಧಿಸಬಹುದಾದ ತಪೋಯಜ್ಞವನ್ನು ಮಾಡುವವರು; ಯೋಗದಿಂದ ಸಾಧಿಸಬಹುದಾದ ಯೋಗ ಯಜ್ಞಗಳನ್ನು ಮಾಡುವವರು; ಸ್ವಾಧ್ಯಾಯದಿಂದ ಸಾಧಿಸಬಹುದಾದ ಸ್ವಾಧ್ಯಾಯ ಯಜ್ಞವನ್ನು ಮಾಡುವವರು; ಜ್ಞಾನದಿಂದ ಸಾಧಿಸಬಹುದಾದ ಜ್ಞಾನ ಯಜ್ಞವನ್ನು ಮಾಡುವವರು; ಹೀಗೆ ಅವರವರ ಹುಟ್ಟು, ವರ್ತನೆ, ಸಂಸ್ಕೃತಿ, ಕುಟುಂಬ, ಸಂಪ್ರದಾಯ, ಜಾತಿ, ಕುಲ, ದೇಶಧರ್ಮಗಳು, ಕಾಲ, ಮರ್ಯಾದೆ ಮೇಲಾಗಿ ಶ್ರೀಗುರುಹಿರಿಯರ ಅಪ್ಪಣೆಯಂತೆ ಬೇರೆ ಬೇರೆ ವಿಧವಾದ ಯಜ್ಞಕಾರ್ಯಗಳನ್ನು ಮಾಡುವ ಇಂದ್ರಿಯನಿಗ್ರಹವುಳ್ಳವರು–(ಯತಿಗಳು)–ಬಹಳ ತೀವ್ರವಾದ ವ್ರತಗಳನ್ನು ಕೈಗೊಳ್ಳುತ್ತಾರೆ. ೪ ೨೮

ವಿವಿಧ ಯಜ್ಞಗಳು

ಅವರವರ ದೇಹದಲ್ಲಿ ಪ್ರಾಣವಾಯುವಿನ ಮತ್ತು ಅಪಾನವಾಯುವಿನ ಸಂಚಾರ ಕ್ರಮವನ್ನು ತಿಳಿದು ಅವುಗಳನ್ನು ವಶಪಡಿಸಿಕೊಂಡು ಪೂರಕ, ಕುಂಭಕ ಮತ್ತು ರೇಚಕ ಕ್ರಮಗಳಿಂದ ಕೂಡಿದ ಪ್ರಾಣಾಯಾಮದಲ್ಲಿ ಆಸಕ್ತರಾಗಿ ಕೆಲವರು ಪ್ರಾಣವಾಯುವನ್ನು ಅಪಾನವಾಯುವಿನಲ್ಲಿ ಹೋಮ* ಮಾಡುತ್ತಾರೆ (ಕೂಡಿ

---

† ಸ್ತ್ರೀಯರಿಗೆ ಅನ್ವಯಿಸುವಂತೆ ಸ್ತ್ರೀ ಪ್ರತ್ಯಯಗಳನ್ನು ಊಹಿಸಿರಿ.

* ಹೋಮವೆಂದರೆ ದೇವತೋದ್ದೇಶದಿಂದ ಸಮರ್ಪಿಸುವ ದ್ರವ್ಯವನ್ನು ದೇವತಾಸ್ವರೂಪವಾದ ಪಂಚಭೂತಗಳಲ್ಲಿ ಒಂದಾದ ಅಗ್ನಿಯಲ್ಲಿ ಮಂತ್ರಪೂರ್ವಕವಾಗಿ ಸೇರಿಸುವುದರಿಂದ, ದ್ರವ್ಯವು ತೇಜೋರೂಪವನ್ನು ಹೊಂದಿ, ತೇಜೋರೂಪರಾದ ದೇವತೆಗಳಿಗೆ ವಿನಿಯೋಗಿಸಲ್ಪಡುವುದು. ಹೋಮವು ಪ್ರತ್ಯಕ್ಷವಾದ ಅಗ್ನಿಯಲ್ಲಿ ಮಾತ್ರವಲ್ಲದೆ, ತೇಜಶ್ಶಕ್ತಿರೂಪವಾದ ಯಾವ ಪದಾರ್ಥದಲ್ಲಿಯಾದರೂ ನೆರವೇರಬಹುದು. ಪೂಜೆ ಎಂದರೂ ದ್ರವ್ಯಸಮರ್ಪಣೆ. ಹೋಮವೆಂದರೆ ತೇಜೋದ್ರವ್ಯದಲ್ಲಿ ದ್ರವ್ಯವನ್ನು ದೇವತಾಪ್ರೀತಿಗಾಗಿ ಸಮರ್ಪಿಸುವಿಕೆ. ಉಪಾಸನೆಯೆಂದರೆ ಮನಸ್ಸನ್ನು ದೇವರ ಪ್ರೀತಿಗೆ ಜಪಾದಿಗಳಲ್ಲಿ ತೊಡಗುವಂತೆ ಮಾಡುವುದು (ಸೇರಿಸುವುದು, ಸಮರ್ಪಿಸುವುದು). ಯೋಗದಂತೆ ಹೋಮವೂ ಕೂಡುವಿಕೆಯನ್ನು ಸೂಚಿಸುವುದು. ಹೊಲ ಮೊದಲಾದ ಕ್ಷೇತ್ರಗಳಲ್ಲಿ ಬೀಜಾವಾಪ ಮಾಡುವುದೂ

ಸುತ್ತಾರೆ.) ಮತ್ತು ಅಪಾನವಾಯುವನ್ನು ಎಳೆದು ಪ್ರಾಣವಾಯುವಿನಲ್ಲಿ ಹೋಮ ಮಾಡುತ್ತಾರೆ (ಸೇರಿಸುತ್ತಾರೆ.) ಈ ಸಂಯೋಜನ ವಿಭಜನೆಗಳೆಂಬ ಯಜ್ಞ ದಿಂದ ನಾಡಿಗಳು ಶುದ್ಧಿಯಾಗಿ ಸ್ವಸ್ವರೂಪಜ್ಞಾನಾನಂದಾನುಭವಕ್ಕೆ ಕಾರಣ ವಾಗಿ ಆತ್ಮಲಾಭವುಂಟಾಗುವುದು. ಮತ್ತೆ ಕೆಲವರು ಆಹಾರನಿಯಮ ಳ ೨೯
ಗಳಿಂದ ಪ್ರಾಣವಾಯುಗಳನ್ನು ಪ್ರಾಣವಾಯುಗಳಲ್ಲಿ ಹೋಮಮಾಡುಳ ೩೦

ಹೋಮವೇ. ಮಕ್ಕಳ ತೊದಲು ನುಡಿಗಳು ಕುಟುಂಬದವರ ಕಿವಿಗಳಲ್ಲಿಯೂ, ಹಿರಿಯರ ಮತ್ತು ಉಪಾಧ್ಯಾಯರ ಉಪದೇಶಗಳು ಕಲಿಯುವವರ ಕಿವಿಗಳಲ್ಲಿಯೂ, ಆಶ್ರಿತರಾದವರ ಕ್ಲೇಶಗಳ ಪರಿಹಾರಕ್ಕಾಗಿ ಪ್ರಯತ್ನಿಸುವ ನ್ಯಾಯವಾದಿಗಳ ವಾದಗಳು ಶ್ರೋತೃಗಳ–ನ್ಯಾಯಾಧಿಪತಿಗಳ–ಕಿವಿಗಳಲ್ಲಿಯೂ, ಇನಿಯನ ಮತ್ತು ಇನಿಯಳ ಪ್ರೇಮ ವಚನವು ಪರಸ್ಪರ ಅವರವರ ಕಿವಿಗಳಲ್ಲಿಯೂ, ದೇವರನಾಮಗಳು ಭಕ್ತರ ಕಿವಿಗಳಲ್ಲಿಯೂ ಶ್ರೀ ಗುರುನಾಥನ ಉಪದೇಶಾಮೃತವು ಶಿಷ್ಯನ ಕರ್ಣಗಳಲ್ಲಿಯೂ ಹೋಮಮಾಡಲ್ಪಡುವುವು. ಜ್ಞಾನಪ್ರಚಾರಕ್ಕೆ ಸುಸಾಧನವಾದ ಪುಸ್ತಕಗಳನ್ನು ಪಾಠಕರ ಕೈಸೇರಿಸುವ ಮುದ್ರಣಕಾರರು ಮಾಡುವ ಬರಹದ ಸೀಸದ ಮೊಳೆಗಳನ್ನು ಜೋಡಿಸುವಿಕೆಯೂ ಸಹ ಹೋಮವಲ್ಲದೆ ಮತ್ತೇನು? ಸ್ರುಕ್ ಸ್ರುವಗಳಂತಿರುವ ಲೇಖಿನಿಯ ಪವಿತ್ರವಾದ ಬರಹಗಳೂ ಲೇಖನವೆಂಬ ಹೋಮದ ಫಲವಾಗಿದೆ. ಸ್ತ್ರೀಯರ ಅಡಿಗೆ ಕೆಲಸಗಳೂ ಕ್ಷುದ್ರೋಗನಿವಾರಕರ ಊಟಗಳೂ ಸಹ ಹೋಮವೆಂದು ರೂಢಿಯಲ್ಲಿದ್ದೇ ಇದೆ. ಭಿಕ್ಷುಕರ ಜೋಳಿಗೆಯಲ್ಲಿ ನೀಡುವ ಭಿಕ್ಷೆಯೂ ಹೋಮವೇ. ನವಿಲು, ಶುಕಗಳೇ ಮೊದಲಾದುವುಗಳ ಸೌಂದರ್ಯವು ಪ್ರೇಕ್ಷಕರ ನೇತ್ರಗಳೆಂಬ ಅಗ್ನಿಕುಂಡದಲ್ಲಿ ಹೋಮವಾಗುವುದು. ದೇಶ ಮತ್ತು ಮಾನಗಳ ರಕ್ಷಣೆಗಾಗಿ ನಡೆವ ಯುದ್ಧದಲ್ಲಿ ಆಗುವ ರಕ್ತಪಾತವೂ ಹೋಮವೇ. ಹೀಗೆಯೇ ಆಯಾ ಸಂದರ್ಭಗಳಿಗನುಸಾರವಾಗಿ ಊಹಿಸಿಕೊಳ್ಳಬಹುದು. ಆಗ್ನಾಯ್ಯಧಾನದಂತೆ 'ಗರ್ಭಾಧಾನವೆಂಬ ಪುತ್ರೋತ್ಪತ್ತಿಗೆ ಕಾರಣವಾದ ಕೆಲಸವೂ ಹೋಮ' ವೆಂಬ ಭಾವನೆಯಿಂದ 'ನಾನು'ವಿನ ಪ್ರೀತಿಗಾಗಿ ಸಂಸರ್ಗಾದಿ ಕಾರ್ಯವನ್ನೆಸಗುವುದೂ ಹೋಮವೇ ಎಂದು ಹೇಳಿದರೆ ಹೋಮದ ವೈಭವ, ವೈಶಾದ್ಯ ಮತ್ತು ಕರ್ಮಪ್ರಪಂಚದಲ್ಲಿ ಅದರ ಸ್ಥಾನಮಾನಗಳು ಅಮಿತವಾಗಿವೆಯೆಂದು ಊಹಿಸಿ ತಿಳಿದುಕೊಳ್ಳಬೇಕಾಗುವುದು. ಈ ದೃಷ್ಟಿಯಿಂದ ದೇವಾಲಯಗಳಲ್ಲಿಯೂ ಸಹ ಸಂಸರ್ಗಸೂಚಕ ಚಿತ್ರಗಳಿಂದ ಸಂಸರ್ಗದ ಮತ್ತು ಸೃಷ್ಟಿಯ ಮತ್ತು ಯೋಗದ ಪರಮಾರ್ಥವನ್ನು ಪ್ರಕಾಶಪಡಿಸಿರುತ್ತಾರೆ. ಇಂದ್ರಿಯಗಳಿಂದ ಆಗುವ ಕೆಲಸಗಳೆಲ್ಲವೂ ಹೋಮ-ವಾ-ಯಾಗವೆಂದು ಯೋಗದ ದೃಷ್ಟಿಯಿಂದ ಭಾವಿಸಿ ನಡೆಸಿದರೆ ಪ್ರಪಂಚವೆಲ್ಲವೂ ಯೋಗಮಯ, ಹೋಮಮಯ, ತಪೋಮಯವಾಗಿ ಶಾಶ್ವತವಾದ ಆನಂದಘನಾನುಭವಕ್ಕೆ ಕಾರಣವಾಗುವುದರಲ್ಲಿ ಸಂಶಯವಿಲ್ಲ. ದ್ವೇಷಾಸೂಯೆಗಳು ದೂರ ಹೋಗುವುವು. ಅತಿ ಮುಖ್ಯವಾಗಿ ಮೇಲ್ಕಂಡಂತೆ ಭಾವನೆಗಳುಳ್ಳ ಸ್ತ್ರೀ ಪುರುಷರಿಗೆ ಮನಶ್ಶಾಂತಿಯು ನೆಲೆಗೊಂಡು ದಾರಿದ್ರ್ಯದುಃಖ ಸಮುದ್ರವನ್ನು ದಾಟಿ ಶಾಶ್ವತ ಸುಖ ಪ್ರಾಪ್ತಿಯಾಗುವುದು ಖಂಡಿತ.

ತ್ತಾರೆ. ಈ ವಿಧವಾದ ಯಜ್ಞದಿಂದಲೂ ನಾಡಿಯು ಶುದ್ಧವಾಗಿ, ಮನಸ್ಸು ಸ್ವಚ್ಛವಾಗಿ ಆತ್ಮಲಾಭ (ಪರಮ ಪುರುಷಾರ್ಥ) ಪ್ರಾಪ್ತಿಯುಂಟಾಗುತ್ತದೆ. ಮತ್ತೆ ಕೆಲವರು ಶ್ರವಣಾದಿ ಇಂದ್ರಿಯಗಳನ್ನು ನಿಗ್ರಹ (ಹಿಡಿತ) ಎಂಬ ಅಗ್ನಿಯಲ್ಲಿ ಹೋಮ (ಸಮರ್ಪಣೆ) ಮಾಡುತ್ತಾರೆ. ಇನ್ನು ಕೆಲವರು ಶಬ್ದವೇ ಮೊದಲಾದ
ವಿಷಯಗಳನ್ನು ಇಂದ್ರಿಯಗಳೆಂಬ ಅಗ್ನಿಯಲ್ಲಿ ಹೋಮ ಮಾಡುತ್ತಾರೆ. ೪ ೨೬
ಬೇರೆ ಕೆಲವರು ಇಂದ್ರಿಯಗಳ ಎಲ್ಲಾ ವಿಧವಾದ ಕೆಲಸಗಳನ್ನೂ, ಪ್ರಾಣವಾಯುವಿನ ಕೆಲಸಗಳನ್ನೂ ಆತ್ಮಜ್ಞಾನದಿಂದ ಬೆಳಗಲ್ಪಟ್ಟ ಶರೀರ ಮತ್ತು ಇಂದ್ರಿಯಗಳ ನಿಗ್ರಹದ ಮೂಲಕ ಪಡೆಯಬೇಕಾದ ಆತ್ಮಲಾಭವೆಂಬ ಅಗ್ನಿಯಲ್ಲಿ ಹೋಮ
(ಸಮರ್ಪಣೆ) ಮಾಡುತ್ತಾರೆ. ಆತ್ಮಲಾಭವನ್ನು ಹೊಂದಿದ ಕೆಲವು ೪ ೨೭
ಯೋಗಿಗಳು ನಾನುವೇ ಯಜ್ಞ ಅಥವಾ ಯಜ್ಞವೇ ನಾನು ಎಂದು ಭಾವಿಸಿ ಯಜ್ಞವನ್ನೇ ಸಾಕ್ಷಾತ್ಕರಿಸಿಕೊಳ್ಳಲು ಯತ್ನಿಸುತ್ತಾರೆ. ಕೆಲವರು ನಾನುವಿನ ಪ್ರೀತಿಗಾಗಿ ಮಾಡುವ ದ್ರವ್ಯಸಮರ್ಪಣೆಯ ವಿಧಾನದಿಂದ ವೇದದಲ್ಲಿ ಉಕ್ತವಾಗಿರುವಂತೆ ಅವರವರ ಕೆಲಸಗಳನ್ನು ನಾನುವಿನ ರೂಪವಾದ ಅಗ್ನಿಯಲ್ಲಿ
ಹೋಮ (ಸಮರ್ಪಣೆ) ಮಾಡುತ್ತಾರೆ. ವಿಶ್ವದ ಎಲ್ಲಾ ಕಡೆಗಳಲ್ಲಿಯೂ ೪ ೨೫
ಮುಖವುಳ್ಳ ನಾನುವನ್ನು ವಿಶ್ವರೂಪನೆಂಬ ಒಂದೇ ಸಮಷ್ಟಿ ರೂಪದಲ್ಲಿಯೂ ಅಥವಾ ಬೇರೆಬೇರೆಯಾಗಿ ವ್ಯಷ್ಟಿ ರೂಪಗಳಲ್ಲಿಯೂ ತಿಳಿದು ಜ್ಞಾನಯಜ್ಞದಿಂದ ನಾನುವಿನ ಪ್ರೀತಿಗೆ ದ್ರವ್ಯಸಮರ್ಪಣಾಕಾರ್ಯವನ್ನು ಮಾಡುತ್ತಾ ಉಪಾಸನೆ
ಮಾಡುತ್ತಾರೆ. ೯. ೧೫

ಈ ಮೇಲೆ ಹೇಳಿದಂತೆ ಯಜ್ಞಮಾಡುವವರೆಲ್ಲರೂ ಯಜ್ಞದ ಗುಟ್ಟನ್ನು ತಿಳಿದವರಾಗಿ, ಯಜ್ಞದಿಂದ ಪಾಪವನ್ನು ಕಳೆದುಕೊಂಡು, ಪರಮಾತ್ಮನ ಒಲು
ಮೆಗೆ ಪಾತ್ರರಾಗುತ್ತಾರೆ. ಇಲ್ಲಿ ವಿವರಿಸಿರುವುದಲ್ಲದೆ ಇನ್ನೂ ಅನೇಕ ಬಗೆ ೪ ೩೦
ಯಾದ ಯಜ್ಞಗಳು ಮತ್ತು ಯಜ್ಞವಿಧಾನಗಳು ಬ್ರಹ್ಮಮುಖದಿಂದ ಅಂದರೆ ಬ್ರಾಹ್ಮಣಧರ್ಮ ಪ್ರತಿಪಾದಕ ಸಿದ್ಧಾಂತ ವಾಕ್ಯಗಳ ಮೂಲಕ ಬೆಳಕಿಗೆ ಬಂದಿವೆ. ಇವೆಲ್ಲವೂ ಹಿಂದೆ ಹೇಳಿದಂತೆ ಮನಸ್ಸು, ವಾಕ್ ಮತ್ತು ಶರೀರಗಳ ಕೆಲಸಗಳಿಂದ ಆಗಬೇಕಾಗಿರುತ್ತವೆ. 'ಕರ್ಮ'–(ಕೆಲಸ–ಗೆಯ್ಮೆಯ) ದ ತೊಡಕಾದ ವಿಷಯವನ್ನು ಈ ರೀತಿ ವಿಸ್ತಾರವಾಗಿ ತಿಳಿದುಕೊಳ್ಳುವುದರಿಂದ ಕೆಲಸದ ಸೆರೆಯಿಂದ
ಬಿಡುಗಡೆಯುಂಟಾಗುತ್ತದೆ. ನಾನುವಿಗೆ ಸಮರ್ಪಿಸುವ ಕೆಲಸವೂ ೪ ೩೨
'ಬ್ರಹ್ಮ', ಸಮರ್ಪಿಸಲ್ಪಡುವ ಹವಿಸ್ಸೆಂದು ಹೇಳಲ್ಪಡುವ ವಸ್ತುವೂ 'ಬ್ರಹ್ಮ', ಸಮರ್ಪಣೆಗೆ ಆಶ್ರಯವಾದ ಅಗ್ನಿಯೂ 'ಬ್ರಹ್ಮ', ಸಮರ್ಪಿಸುವ ವ್ಯಕ್ತಿಯೂ 'ಬ್ರಹ್ಮ'. ಹೀಗೆ 'ಬ್ರಹ್ಮವೇ'–'ಕೆಲಸ', 'ಕೆಲಸವೇ' 'ಬ್ರಹ್ಮ'–ಎಂದು ಬ್ರಹ್ಮ ಮತ್ತು ಕೆಲಸ

ಬ್ರಹ್ಮ, ಕರ್ಮಗಳ ಏಕತ್ವ

ಇವೆರಡೂ 'ಒಂದೇ' ಎಂದು ಭಾವಿಸುವವನು ಶಾಶ್ವತ ಬ್ರಹ್ಮಪದವಿಯನ್ನೇ
ಪಡೆಯುತ್ತಾನೆ.§ ೪ ೨೪

ಓಂ, ತತ್ ಮತ್ತು ಸತ್—ಎಂಬದಾಗಿ 'ಬ್ರಹ್ಮವು ಮೂರು ವಿಧವಾದ
ಕುರುಹುಗಳಿಂದ ಪ್ರಕಾಶವಾಗುತ್ತದೆ. ಈ ಕುರುಹುಗಳ ತೋರಿಕೆಯಿಂದಲೇ
ವೇದಗಳೂ, ಯಜ್ಞಗಳೂ ಸಹ ಕ್ರಮುಗೊಳಿಸಲ್ಪಟ್ಟಿರುತ್ತವೆ;
ಮತ್ತು ಇದರಿಂದ ಬ್ರಾಹ್ಮಣ ಧರ್ಮಾನುಯಾಯಿಗಳೂ
ಸಹ, ಕ್ರಮ ಮತ್ತು ವಿಧಾನಗಳನ್ನು ತಿಳಿಯಲು ಅನು
ಕೂಲವಾಗಿರುತ್ತದೆ. ಆದುದರಿಂದ ಬ್ರಾಹ್ಮಣ ಧರ್ಮ ಪ್ರತಿಪಾದಕ ೧೭ ೨೩
ಪ್ರಮಾಣವಾಕ್ಯಗಳಿಂದ ವಿಧಾನವಾಗಿರುವ, ಬ್ರಾಹ್ಮಣಧರ್ಮಾನುಯಾಯಿಗಳು
ಮಾಡಬೇಕಾದ ಯಜ್ಞ, ದಾನ ಮತ್ತು ತಪಸ್ಸಿನ ಕೆಲಸಗಳೆಲ್ಲವೂ ಎಲ್ಲಾ
ಸಂದರ್ಭಗಳಲ್ಲಿಯೂ 'ಓಂ' ಉಚ್ಚಾರಣೆಯ ಮೂಲಕವಾಗಿಯೇ ಮೊದಲಾಗು
ತ್ತವೆ. ಮೋಕ್ಷಾಪೇಕ್ಷೆಯುಳ್ಳವರು ಮಾಡುವ ವಿವಿಧವಾದ ಯಜ್ಞ ೧೭ ೨೪
ಮತ್ತು ತಪಸ್ಸಿನ ಕೆಲಸಗಳನ್ನೂ, ದಾನದ ಕೆಲಸಗಳನ್ನೂ—ಫಲವನ್ನು ಕೋರದೆ
'ತತ್'—ಎಂಬ ಬ್ರಹ್ಮ ಪ್ರತಿಪಾದಕ ಶಬ್ದೋಚ್ಚಾರಣೆಯ ಪೂರ್ವಕ ನೆರವೇರಿ
ಸುತ್ತಾರೆ. 'ಹುಟ್ಟುತ್ತದೆ,' 'ಇರುತ್ತದೆ,' 'ನಿಜವಾದುದು,' ಅಥವಾ ೧೭ ೨೫
'ಒಳ್ಳೆಯದು'—ಎಂಬ ಅರ್ಥಗಳಲ್ಲಿ 'ಸತ್' ಎಂಬ ಬ್ರಹ್ಮಪ್ರತಿಪಾದಕ ಶಬ್ದವು
ಅನ್ವಯವಾಗುವುದು. ಮಂಗಳಕರವಾದ ಕೆಲಸಗಳನ್ನು ಹೇಳುವಾಗಲೂ ಮತ್ತು
ಘನವಾದ ಕೆಲಸಗಳನ್ನು ಹೇಳುವಾಗಲೂ 'ಸತ್' ಎಂಬ ಬ್ರಹ್ಮ ವಚನವು
ಸೇರಿಸಲ್ಪಡುತ್ತದೆ. ಯಜ್ಞ ದಾನ ತಪಸ್ಸುಗಳಲ್ಲಿ ಕಾಣಬರುವ ಸ್ಥಿತಿ ೧೭ ೨೬
ಅಥವಾ ವರ್ತನೆಯು 'ಸತ್' ಎಂಬದಾಗಿ ಹೇಳಲ್ಪಡುತ್ತದೆ. ಅಲ್ಲದೆ, ಯಜ್ಞ,
ದಾನ ಮತ್ತು ತಪಸ್ಸುಗಳಿಗೆ ಸಂಬಂಧಪಟ್ಟ ಕೆಲಸಗಳೆಲ್ಲವೂ 'ಸತ್' ಎಂಬ
ಬ್ರಹ್ಮ ವಾಚಕ ಶಬ್ದ ಪೂರ್ವಕವಾಗಿಯೇ ಹೇಳಲ್ಪಡುವುವು. ಅಸಡ್ಡೆ ೧೭ ೨೭
ಯಿಂದ ಹೋಮ ಮಾಡಿದ ಮತ್ತು ದಾನ (ಕೊಡಿಗೆ) ಮಾಡಿದ ಕೆಲಸಗಳು,
ತಪಿಸಿದ ತಪಸ್ಸು ಮತ್ತು ಮಾಡಿದ ಎಲ್ಲಾ ಕೆಲಸಗಳೂ ಶಾಸ್ತ್ರವಿಧಾನಗಳ
ಮರ್ಯಾದೆ (ಎಲ್ಲೆ-ನಿಬಂಧನೆ-ಕಟ್ಟು) ಯಂತೆ ನಡೆದಿದ್ದರೂ 'ಬ್ರಹ್ಮ' ವಚನಕ್ಕೆ
ವಿರೋಧವಾಗಿರುವುದರಿಂದ 'ಅಸತ್' ಎಂದು ಎಣಿಸಲ್ಪಡುವುವು. ಅಂತಹ
ಕೆಲಸಗಳು ಈ ಲೋಕದಲ್ಲಿಯೂ ಫಲದಾಯಕವಲ್ಲ; ಲೋಕಾಂತರದಲ್ಲಿಯೂ
ಸಹಾಯಕವಾಗುವುದಿಲ್ಲ. ೧೭ ೨೮

ಬ್ರಹ್ಮಸೂಚಕ ಪದಗಳು

---

§ ೪-೨೪ ಬ್ರಹ್ಮಶಬ್ದಸ್ಥಾನದಲ್ಲಿ 'ನಾನು' ಶಬ್ದವನ್ನೇ ಜೋಡಿಸಬಹುದಾಗಿದ್ದರೂ, ಈ ಶ್ಲೋಕದಲ್ಲಿ ಉಕ್ತವಾದ ಶಬ್ದವನ್ನೇ ಭಾಷಾಶೈಲಿಯ ದೃಷ್ಟಿಯಿಂದ ಸೇರಿಸಿದೆ,

ಎಲ್ಲಾ ವಿಧವಾದ ಯಜ್ಞಗಳಿಗೂ ಪ್ರಭುವು ‘ನಾನು’ ಮತ್ತು ಯಜ್ಞಭೋಕ್ತೃವೂ ‘ನಾನು.’ ಯಜ್ಞ ಮತ್ತು ತಪಸ್ಸುಗಳ ಭೋಕ್ತೃವೂ, ೯ ೨೪

ಯಜ್ಞದಿಂದ ಮನಶ್ಶಾಂತಿ

ಎಲ್ಲಾ ಲೋಕಗಳಿಗೂ ಈಶ್ವರನೂ, ಎಲ್ಲಾ ಯಜ್ಞಗಳಿಗೂ ಒಳ್ಳೆಯದನ್ನುಂಟುಮಾಡುವ ಸ್ನೇಹಿತನಂತಿರುವವನೂ ‘ನಾನು’—ಎಂದು ತಿಳಿದು ಮನಶ್ಶಾಂತಿಯನ್ನು ಹೊಂದಬೇಕು. ದೇವತಾ ಪ್ರೀತಿಗಾಗಿ ಸಮರ್ಪಿಸಿದ ಯಜ್ಞ ದ್ರವ್ಯವನ್ನು ನಾನು ೫ ೨೯ ವಿನ ನಾಮರೂಪಧಾರಿಗಳಾದ ಮನುಷ್ಯಾದಿಗಳಿಗೆ ಹಂಚಿದ ಮೇಲೆ ಮಿಗುವ,

ಯಜ್ಞ ಫಲ

ಅಮೃತಕ್ಕೆ ಸಮಾನವಾದ ಹವಿಸ್ಸು (ಪ್ರಸಾದ) ಗಳನ್ನು ಭೋಗಿಸುವವರು ಸಮಸ್ತ ಪಾಪಗಳಿಂದಲೂ ಬಿಡಲ್ಪಡುತ್ತಾರೆ. ಮತ್ತು ಶಾಶ್ವತವಾದ ಬ್ರಹ್ಮವನ್ನೂ ಪಡೆಯುತ್ತಾರೆ. ೩ ೧೩ ; ೪ ೩೧

ಶರೀರವೇ ‘ನಾನು’ ಎಂದು ತಿಳಿದು, ಇಂದ್ರಿಯತೃಪ್ತಿಗೆ ಅಂದರೆ ಹೊಟ್ಟೆ ತುಂಬಿಕೊಳ್ಳುವುದಕ್ಕೋಸ್ಕರವೇ ಅನ್ನಾದಿಗಳನ್ನು ಸಿದ್ಧಪಡಿಸಿಕೊಳ್ಳುವ ಪಾಪಿಗಳು ಪಾಪವನ್ನೇ ಭೋಜನ ಮಾಡುವವರಾಗುತ್ತಾರೆ (ಅನುಭವಿಸುತ್ತಾರೆ) ೩ ೧೩ ನಾನುವಿನ ಪ್ರೀತಿಗಾಗಿ ದ್ರವ್ಯಾದಿಗಳನ್ನು ಸಮರ್ಪಿಸದೆ ಭೋಗಿಸುವವರಿಗೆ ಈ

ಯಜ್ಞ–ದೇವತಾ ಕೆಲಸ–ವಿಲ್ಲದವನಿಗೆ ಇಹಪರಗಳಿಲ್ಲ

ಲೋಕದ ಸುಖವು (ಜೀವನ ಸಿದ್ಧಿಯು) ಇರುವುದಿಲ್ಲ. ಅಂದಮೇಲೆ ಲೋಕಾಂತರದ (ಪರಲೋಕದ) ಅಂದರೆ ಆತ್ಮಲೋಕ ಪ್ರಾಪ್ತಿಯ ಮಾತೇ ಇರಲಾರದು. ಪ್ರಪಂ ೪ ೩೧ ಚದ ಸೃಷ್ಟಿ ಸ್ಥಿತಿ ಲಯಗಳ ಕಟ್ಟಲೆಗಳಿಗನುಸಾರವಾಗಿ, ಹಿಂದೆ ಹೇಳಿದ ‘ಜೀವನ ಚಕ್ರ’ ಕ್ರಮದಲ್ಲಿ ದೇವತೆಗಳೆಂದು ಹೇಳಲ್ಪಡುವ ‘ನಾನುವಿನ’ ನಾಮರೂಪ

ದೇವತಾ ಕೆಲಸ ಮಾಡದವನು ಕೃತಘ್ನನು

ಧಾರಿಗಳು ಭೋಗ ಪದಾರ್ಥಗಳನ್ನು ಪ್ರಾಣಿಗಳು ಬಳಸುವುದಕ್ಕಾಗಿ ಒದಗಿಸಿಕೊಡುತ್ತಾರೆ. ಹೀಗೆ ದೊರಕಿದ ಪದಾರ್ಥಗಳನ್ನು ಕೃತಜ್ಞತೆಗಾಗಿ (ಕೃತಜ್ಞತಾ ಸೂಚನೆಗಾಗಿ)* ಯಜ್ಞ ಕೆಲಸಗಳ ಮೂಲಕ ದೇವತೆಗಳಿಗೆ ಸಮರ್ಪಿಸದೇನೆಯೇ ಅನುಭವಿಸುವವನು ಕಳ್ಳನೆನಿಸುವನು. ಆದುದರಿಂದ ನಾನುವಿನ ಪ್ರೀತಿಗಾಗಿ ಮಾಡುವ ೩ ೧೨ ಮತ್ತು ಯಜ್ಞವೆಂದು ತಿಳಿದು ಎಸಗುವ ಕೆಲಸಗಳು ಹೊರತು ಉಳಿದ ಸಂದರ್ಭಗಳಲ್ಲಿ ಮಾಡುವ ಕೆಲಸಗಳು ಈ ಲೋಕವನ್ನು (ಅಂದರೆ ಜನಗಳನ್ನು) ಬಂಧನಕ್ಕೆ

---

* “ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆದವರಂತೆ ಕಾಣಿರೋ ಹರಿಯ ಕರುಣದೊಳಾದ ಭಾಗ್ಯವ ಹರಿಸಮರ್ಪಣೆಮಾಡಿ ಬದುಕಿರೊ ” ಎಂಬುದನ್ನು ಜ್ಞಾಪಿಸಿಕೊಳ್ಳಿರಿ.

(ಸೆರೆಗೆ, ಹುಟ್ಟುಸಾವುಗಳಿಗೆ) ಗುರಿಮಾಡುವುವು. ೩೯

ದೇವತಾ ಕೆಲಸಗಳು ಬಂಧನಕ್ಕೆ ಕಾರಣವಲ್ಲ

ನಾನುವಿನ ಪರಿಣಾಮರೂಪವಾಗಿ ಅನುಗೃಹೀತವಾಗಿರುವ ಮತ್ತು ಅನುಭವ ಜ್ಞಾನಮಯವಾದ ಬ್ರಾಹ್ಮಣ ಧರ್ಮವನ್ನು ತಿಳಿಸುವ ಶಬ್ದರಾಶಿಗಳಾದ ವೇದಗಳು ಸತ್ತ್ವಾದಿ ಮೂರು ಗುಣಗಳಿಗೂ

ದೇವತಾ ಕೆಲಸಗಳನ್ನು

ಮತ್ತು ಅವುಗಳ ಸಂಯೋಗಜನ್ಯ ಭೇದಗಳಿಗೂ ಸಂಬಂಧ

ವಿವರಿಸುವ ಪ್ರಮಾಣ ಗ್ರಂಥಗಳು

ಪಟ್ಟ ಅನೇಕ ವಿಷಯಗಳಿಂದ ಅಡಕವಾಗಿರುವುವು. * ೨ ೪೫

ಋಗ್ಯಜುಸ್ಸಾಮ ವೇದಗಳಲ್ಲಿ [ಪ್ರತಿಯೊಂದರಲ್ಲಿಯೂ ಅಥರ್ವ ವೇದವು ಅಂತರ್ಗತವಾಗಿರುವುದನ್ನು ನೆನಪಿನಲ್ಲಿಡಬೇಕು.] ಪಾರಂಗತರೂ,

ಯಜ್ಞದಿಂದ ಶಾಶ್ವತ ಮತ್ತು ಅಲ್ಪಕಾಲ ಸುಖಗಳ ಪ್ರಾಪ್ತಿ

ಪುರುಷಾರ್ಥವಾದ ಮೋಕ್ಷಕ್ಕೆ (ಕಷ್ಟದಿಂದ ಬಿಡುಗಡೆ=ಶಾಶ್ವತ ಸುಖಾನುಭವಕ್ಕೆ) ಸಾಧನವಾದ 'ನಾನು' ವಿನ ಅರಿವನ್ನು ಪಡೆಯಲು ಅವಕಾಶವಾಗುವಂತೆ ದೇಹೇಂದ್ರಿಯಗಳನ್ನೂ ಮತ್ತು ಮನಸ್ಸನ್ನೂ ಮತ್ತು ಶರೀರದ ನಾಡಿಗಳನ್ನೂ ಶುದ್ಧಿ ಮಾಡಿ ಶಾಂತಿಯನ್ನು ಕೊಡುವ ಯಜ್ಞಶೇಷವಾದ 'ಸೋಮ' ವೆಂಬ ರಸವನ್ನು ಪಾನ ಮಾಡುವವರೂ ಮತ್ತು ಅದರಿಂದಲೇ ಸಮಸ್ತ ಪಾಪಗಳನ್ನೂ ಕಳೆದುಕೊಂಡು ಪವಿತ್ರರಾದವರೂ ಯಜ್ಞ ಕೆಲಸಗಳಿಂದ 'ನಾನು' ವನ್ನು ಸಂತುಷ್ಟಿಗೊಳಿಸುತ್ತಾರೆ. ಮತ್ತು ಸಂದರ್ಭಾನುಸಾರ ಅವರವರ ಹುಟ್ಟು, ಸಂಸ್ಕೃತಿಯ ಅಂತಸ್ತು, ವರ್ತನೆ ಮೊದಲಾದವುಗಳಿಗೆ ಒಳಪಟ್ಟು ದೇಹೇಂದ್ರಿಯ ಸುಖಗಳನ್ನೂ ಬಯಸಿ ಬೇಡುತ್ತಾರೆ. ಇದರ ಫಲವಾಗಿ ಪುಣ್ಯದಿಂದುಂಟಾಗುವ, ದೇವೇಂದ್ರ ಲೋಕವೆನಿಸುವ ಮತ್ತು ಭೋಗಗಳಿಗೆ ತವರುಮನೆಯಾದ ಸ್ಥಳಸನ್ನಿವೇಶಗಳನ್ನು ಪಡೆಯುತ್ತಾರೆ. † ಮತ್ತು ದೇವಲೋಕವೆಂದು ಹೇಳಲ್ಪಡುವ ಉತ್ತಮ ಸನ್ನಿವೇಶಗಳಲ್ಲಿ ದೇವಾರ್ಹವಾದ ಅಂದರೆ ಅತ್ಯುತ್ಕೃಷ್ಟವಾದ ವಿಷಯಸುಖಗಳನ್ನು

---

* ಚತುರ್ವಿಧ ಪುರುಷಾರ್ಥಗಳನ್ನೂ, ಅವುಗಳನ್ನು ದೊರಕಿಸಿಕೊಳ್ಳುವ ದಾರಿಗಳನ್ನೂ ಮತ್ತು ಬ್ರಾಹ್ಮಣ ಧರ್ಮಾನುಯಾಯಿಗಳ ಪ್ರತಿಯೊಬ್ಬರ ಹುಟ್ಟು, ಸಂಸ್ಕೃತಿ ಮೊದಲಾದ ವರ್ತನೆಗಳಿಗನುಸಾರವಾಗಿ ಬಗೆಬಗೆಯಾಗಿರುವ, ಪ್ರಪಂಚದಲ್ಲಿರುವ ಮತ್ತು ಸಮಸ್ತ ಚರಾಚರ ವಸ್ತುಗಳಿಗೆಲ್ಲಾ ಅನ್ವಯಿಸಬಹುದಾಗಿರುವ ಬ್ರಾಹ್ಮಣಾಚಾರಗಳನ್ನೂ ತಿಳಿದುಕೊಳ್ಳಬಹುದು. ಮತ್ತು ಕಾರ್ಯಕ್ಷೇತ್ರದಲ್ಲಿ ಸ್ವಧರ್ಮಾನುಷ್ಠಾನ ಕ್ರಮದಲ್ಲಿ ಇಟ್ಟುಕೊಳ್ಳಲೂ ಬಹುದು.

† ಯಜ್ಞ ಕೆಲಸವನ್ನು ಮಾಡುವ ಒಂದು ಜನ್ಮದ ದೇಹವಿರುವಾಗಲಾಗಲೀ ಅಥವಾ ಬೇರೆ ಜನ್ಮದ ದೇಹದಲ್ಲಿಯಾಗಲೀ ಇದು ಸಂಭವಿಸಬಹುದು.

ಅನುಭವಿಸುತ್ತಾರೆ. ಈ ರೀತಿ ಪುಣ್ಯಕ್ಕೆ ತಕ್ಕಂತೆ ವಿಶಾಲವಾದ ವಿಷಯ ೯ ೨೦
ಸುಖಾನುಭವ ಲೋಕದಲ್ಲಿ ಉತ್ತಮವಾದ ಸುಖಗಳನ್ನು ಅನುಭವಿಸಿ, ಪುಣ್ಯವು ಮುಗಿದ ನಂತರ ಸಾಮಾನ್ಯ ಜನರು ವಾಸಿಸುವ ಸ್ಥಳ ಸನ್ನಿವೇಶಗಳನ್ನು ಹೊಕ್ಕು* ಹುಟ್ಟುಸಾವುಗಳಿಗೆ ಒಳಗಾಗುತ್ತಾರೆ. ಹೀಗೆ, ಬಯಕೆಗಳನ್ನು ಬೇಡುವವರು ಅವುಗಳಿಗೆ ತಕ್ಕ ಕೆಲಸಗಳನ್ನೇ ವೇದ† ಗಳಿಂದ ಆರಿಸಿಕೊಂಡು ಅದರಂತೆ ನಡೆದು, ಅತ್ಯಲ್ಪ ಕಾಲದವರೆಗೆ ಪ್ರಾಪ್ತವಾಗಿ ಅವಧಿ ಮುಗಿದ ಮೇಲೆ ಕೊನೆಗಾಣುವ ಕೋರಿಕೆಗಳನ್ನು ಈಡೇರಿಸಿಕೊಳ್ಳುತ್ತಾರೆ. ಅವರವರ ಹುಟ್ಟು ೯ ೨೧
ಗುಣಾದಿಗಳ ಕಟ್ಟಿಗೆ ಸಿಕ್ಕಿದವರೂ ಮತ್ತು ಆಯಾ ಗುಣಕರ್ಮವರ್ತನೆಯ ಮೇರೆ ಉಂಟಾಗುವ ಬಯಕೆಗಳಿಂದ ಸೆಳೆಯಲ್ಪಟ್ಟ ಮನಸ್ಸುಳ್ಳ ಜನಗಳೂ, ಆಯಾ ಬಯಕೆಗಳ ಪ್ರಾಪ್ತಿಗೆ ಸಂಬಂಧಪಟ್ಟ ನಿಯಮಗಳಂತೆ ನಡೆದುಕೊಂಡು ಅವುಗಳ ಬೇರೆ ಬೇರೆಯಾದ ಅಭಿಮಾನದೇವತೆಗಳ ಆಶ್ರಯವನ್ನು ಹೊಂದುತ್ತಾರೆ. ೭ ೨೦

ಬಯಕೆಗಾಗಿ ಮಾಡಿದ ದೇವತಾ ಕೆಲಸಗಳ ಫಲದ ಅವಧಿ

ಶ್ರದ್ಧೆಯೊಡಗೂಡಿ ಇಷ್ಟಾರ್ಥ ಪ್ರಾಪ್ತಿಗೆ ತಕ್ಕಂತೆ ಬೇರೆ ಬೇರೆ ದೇವತೆಗಳನ್ನು ಆರಾಧಿಸುವ ಭಕ್ತರು ಪರೋಕ್ಷವಾಗಿ ಯಜ್ಞದ ಕಟ್ಟಳೆಗಳನ್ನು ಮೀರಿಯೂ ನಾನುವನ್ನೇ ಆರಾಧಿಸುವವರಾಗಿರುತ್ತಾರೆ. ೯ ೨೩
ದೇವ ದೇವತೆಗಳನ್ನು ಭಕ್ತಿಯಿಂದ ಆರಾಧಿಸುವವರು–ದೇವ ದೇವತೆಗಳನ್ನೇ ಪಡೆಯುತ್ತಾರೆ. ಪಿತೃದೇವತೆಗಳನ್ನೇ ಭಕ್ತಿಯಿಂದ (ಪ್ರಧಾನವಾಗಿ) ಆರಾಧಿಸುವವರು–ಪಿತೃದೇವತೆಗಳ ಆಶ್ರಯವನ್ನೇ ಹೊಂದುತ್ತಾರೆ. ದೇವಸೇವಕರಾದ ಭೂತದೇವತೆಗಳನ್ನು ಪ್ರೀತಿಯಿಂದ ಪೂಜಿಸುವವರು ಭೂತದೇವತೆಗಳ ಆಶ್ರಯವನ್ನೇ ಪಡೆಯುತ್ತಾರೆ. ನಾನುವನ್ನು ಆರಾಧಿಸುವ ಭಕ್ತರು ೯ ೨೫
ನಾನುವನ್ನೇ ಪಡೆಯುತ್ತಾರೆ. ಸಾತ್ವಿಕಗುಣವು ೭ ೨೩
ಹೆಚ್ಚಾಗಿರುವವರು ದೇವ ದೇವತೆಗಳನ್ನೂ, ರಾಜಸಗುಣವು ಹೆಚ್ಚಾಗಿರುವವರು

ಸರ್ವದೇವರ ಆರಾಧನೆಯೂ ತತ್ವತಃ 'ನಾನು'ವಿಗೇ ಸೇರತಕ್ಕದ್ದು

ಗುಣಾನುಸಾರವಾಗಿ ಬೇರೆ ಬೇರೆ ಮೂರ್ತಿಗಳ ಆರಾಧನೆ

---

* ಹಿಂದಿನ ಪುಟದಲ್ಲಿ ವಿವರಿಸಿರುತ್ತದೆ.

† ಷಡಂಗಸಮೇತವಾದುವುಗಳಲ್ಲದೆ, ಸ್ಮೃತೀತಿಹಾಸ ಪುರಾಣಾದಿ ಗ್ರಂಥಗಳೂ, ಸಂಪ್ರದಾಯವೂ, ಆಯಾ ಕಾಲದ ಹಿರಿಯರ ವಚನಗಳೂ ಮತ್ತು ಅವರವರ ಶ್ರೀಗುರುನಾಥರ ಅಪ್ಪಣೆಯೂ ವೇದವೆಂಬ ಶಬ್ದದ ಅರ್ಥದಲ್ಲಿ ಅಡಕವಾಗಿರುವುವು. ಆಪಸ್ತಂಬ ಧರ್ಮಸೂತ್ರಮಂಜರಿ ಪುಟ ೧–೨.

ಯಕ್ಷರಕ್ಷಸ್ಸುಗಳೆಂಬ ದೇವತೆಗಳನ್ನೂ ; ತಾಮಸಗುಣದವರು 'ಪ್ರೇತ' * ಗಳೆಂಬ
ಜೀವಗಳನ್ನೂ ಮತ್ತು ಭೂತದೇವತೆಗಳನ್ನೂ* ಪೂಜಿಸುತ್ತಾರೆ. ಯಾರು ಯಾರು
(ಎಷ್ಟೆಷ್ಟರ) ಮಟ್ಟಿನ ಭಕ್ತಿಭಾವನೆಗಳಿಂದ ನಾನುವನ್ನು ಆಶ್ರಯಿಸಿರು ೧೭ ೪
ತ್ತಾರೆಯೋ ಅವುಗಳಿಗೆ ತಕ್ಕಂತೆ ಅವರಿಗೆ ಒಲಿಯತಕ್ಕವನು 'ನಾನು'.
ಹೇಗೆ ಹೇಗೆ (ಯಾವ ದೃಷ್ಟಿಯಿಂದ) ನೋಡಿದರೂ ಮನುಷ್ಯನು ನಾನುವಿನ
ದಾರಿಯನ್ನೇ ಹಿಡಿದು ನಡೆಯುತ್ತಾನೆ.† ೪ ೧೧

ಯಾವ ಯಾವ ಭಕ್ತರು ಯಾವ ಯಾವ ನಾಮರೂಪಗಳಿಂದ (ಮೂರ್ತಿ
ಗಳಿಂದ) ನಾನುವನ್ನು ಶ್ರದ್ಧೆಯಿಂದ ಆರಾಧಿಸುವುದಕ್ಕೆ ಅಪೇಕ್ಷೆಮಾಡುತ್ತಾರೋ,

ಭಕ್ತರ ಕೋರಿಕೆಗಳಿಗನುಗುಣವಾಗಿ ಶ್ರದ್ಧೆಯಿಂದ ಮಾಡಿದ ಆರಾಧನೆಗೆ ಕ್ಷಿಪ್ರಫಲ

ಅವರವರ ಕದಲದಂತಿರುವ ಶ್ರದ್ಧೆಯನ್ನೇ ದೃಢಪಡಿಸಿ ಆಯಾ
ಮೂರ್ತಿಗಳನ್ನೇ ಧರಿಸುವವನು 'ನಾನು'. ಈ ವಿಧ ೭ ೨೧
ವಾಗಿ ದೃಢವಾದ ಭಕ್ತಿ ಶ್ರದ್ಧೆಗಳಿಂದ ಕೂಡಿಕೊಂಡು ಆಯಾ
ಮೂರ್ತಿಯ ಪೂಜೆಯನ್ನು ನೆರವೇರಿಸಿದ ಬಳಿಕ ನಾನುವಿ
ನಿಂದ ವಿಧಾಯಕವಾದ ಆಯಾ ಇಷ್ಟಾರ್ಥಗಳನ್ನು ಹೊಂದುತ್ತಾರೆ. ೭ ೨೨
ಆದರೆ ಅಂತಹ ಕುಗ್ಗಿದ (ಅಲ್ಪ) ಬುದ್ಧಿಯುಳ್ಳವರು§ ಹೊಂದುವ (ಅವರ) ಫಲವು
ಕೊಂಚಕಾಲದಲ್ಲಿಯೇ ಕೊನೆಗಾಣುವುದು. ೭ ೨೩

ಈ ಪ್ರಪಂಚದಲ್ಲಿ ಪ್ರಾಣಿಗಳ ಸೃಷ್ಟಿಯು ಪಾರಮಾರ್ಥಿಕವಾದ ಜ್ಞಾನಪ್ರಕಾಶ
ಪ್ರಧಾನವಾದುದು ; ಮತ್ತು ಪ್ರಾಪಂಚಿಕವಾದ ಅವಿದ್ಯಾಭೋಗಪ್ರಧಾನವಾ

ದೈವೀಸಂಪತ್ತು ಮತ್ತು ಅಸುರೀಸಂಪತ್ತು

ದುದು ಎಂದು ಎರಡು ತೆರನಾಗಿರುವುದು. ಪಾರ ೧೬ ೬
ಮಾರ್ಥಿಕ ಜ್ಞಾನಪ್ರಕಾಶವಾದ 'ದೈವೀಸಂಪತ್ತು' ಹುಟ್ಟು
ಸಾವೆಂಬ ಕಷ್ಟದದೆಸೆಯಿಂದ ಬಿಡುಗಡೆ ಹೊಂದಿಸುವುದು.

---

* ಜಡದೇಹವನ್ನು ಬಿಟ್ಟು ಕೆಲಸದ ಫಲಾನುಗುಣವಾಗಿ ಬೇರೇ ದೇಹವನ್ನಾಗಲೀ, ಲೋಕವನ್ನಾಗಲೀ ಪಡೆಯದೆ ಆಗತಾನೇ ಬಿಟ್ಟ ಜಡದೇಹಕ್ಕೆ ಪರಿಚಿತರಾದ ಲೋಕದವರ ಆಶ್ರಯವನ್ನು ಅಪೇಕ್ಷಿಸುವ ಜೀವರಾಶಿಗಳಾದ ಪ್ರೇತಗಳು ; ಶರೀರಧಾರಣೆಯೂ ಇಲ್ಲದೆ, ಮೋಕ್ಷವೂ ಇಲ್ಲದೆ ಹೆಚ್ಚು ಕಾಲ ಇರುವ ಜೀವರಾಶಿಗಳಾದ ಭೂತಗಣಗಳೂ ದೇವತೆಗಳು ಎನಿಸಿಕೊಳ್ಳುತ್ತವೆ.

† ಇದೇ ಸರ್ವ ಮುಕ್ತಿಗೆ (Universalism) ಆಧಾರವಾಗಿರುವುದು. ಗುಣಗಳ ಮತ್ತು ದೇಹೇಂದ್ರಿಯಗಳ ಕಟ್ಟಿಗೆ ಒಳಪಟ್ಟು, ವಿವಿಧ ಸುಖದುಃಖಗಳನ್ನು ಅನುಭವಿಸು ತ್ತಿದ್ದರೂ, ದೇಹಿಯಾದ ನಾನುವು–ಗುಣ, ದೇಹೇಂದ್ರಿಯಗಳು ಮತ್ತು ಕೆಲಸ ಇವುಗಳ ಸೆರೆ ಯಿಂದ ತಪ್ಪಿಸಿಕೊಳ್ಳಲು ಅಜಪಾಮಂತ್ರದ ಮೂಲಕ ಅನುಸಂಧಾನ ಮಾಡುತ್ತಿರುತ್ತಾನೆಂಬದಾಗಿ ಸರ್ವಸಮತೆಯುಳ್ಳ ಯೋಗಿಗಳು ನಿರಂತರವಾದ ನಿಶ್ವಾಸೋಚ್ಛ್ವಾಸಗಳನ್ನು ವರ್ಣಿಸಿರುತ್ತಾರೆ.

§ ಅಂದರೆ ಶಾಶ್ವತ ಸುಖದ ಶ್ರೇಷ್ಠತೆಯನ್ನು ತಿಳಿಯಲಾರದವರು ಎಂದರ್ಥ.

ಪ್ರಾಪಂಚಿಕವಾದ ಅವಿದ್ಯಾಭೋಗದ 'ಆಸುರೀ ಸಂಪತ್ತು', ಹುಟ್ಟು ಸಾವೆಂಬ
ಕಷ್ಟದ ಸೆರೆಗೆ ಸೇರಿಸುವುದು—ಎಂದು ಗೊತ್ತಾಗಿದೆ. ಅಂಜಿಕೆಯಿಲ್ಲದಿರು ೧೬ ೫
ವುದು, ಅಂತಃಕರಣದ ಶುಚಿಯಿಂದ ವ್ಯವಹಾರದಲ್ಲಿ ಮೋಸವಿಲ್ಲದಿರುವಿಕೆ;

ದೈವೀಸಂಪತ್ತಿಗೆ ಕಾರಣವಾದ ಲಕ್ಷಣಗಳು

ಗುರುವಿನ ಒಲುಮೆಯಿಂದ ಆತ್ಮಲಾಭದಲ್ಲಿ ನಿಶ್ಚಯಬುದ್ಧಿಯನ್ನು ಹೊಂದುವುದು; ಅನ್ನಾದಿಗಳನ್ನು ಕೊಡುವುದು; ಬಹಿರಿಂದ್ರಿಯಗಳಲ್ಲಿ ಹತೋಟಿ; ನಾನು—ವಿಚಾರಗಳನ್ನೊಳಗೊಂಡ ಅವರವರ ಮನಸ್ಸಿನ ಪರಿಪಾಕದ ಅಂತಸ್ತಿಗೆ ಸಲ್ಲುವ ವಿಚಾರಗಳನ್ನು ತಿಳಿಯಲು ಮತ್ತೆ ಮತ್ತೆ ಪಠನಾದಿಗಳನ್ನು ಮಾಡುವುದು; ತಪಸ್ಸು; ಸರಳವಾಗಿರುವಿಕೆ; ತೊಂದರೆಯನ್ನುಂಟುಮಾಡದಿರುವುದು; ದಿಟವನ್ನು ಹೇಳು ೧೬ ೧
ವುದು; ಸಿಟ್ಟಿಲ್ಲದಿರುವುದು; ಪ್ರಾಪಂಚಿಕವಸ್ತುಗಳ ಮೇಲಿನ ಮೋಹವೇ ಮೊದಲಾದುವನ್ನು ಬಿಟ್ಟುಬಿಡುವುದು; ಮನಸ್ಸಿನ ಸಮಾಧಾನ; ಚಾಡಿಹೇಳದಿರುವುದು; ಪ್ರಾಣಿಗಳಲ್ಲಿ ದಯೆ; ವಿಷಯ—ವಾ—ಪದಾರ್ಥಗಳು ಸಮೀಪದಲ್ಲಿದ್ದಾಗ್ಗೂ ಅವುಗಳನ್ನು ಅನುಭವಿಸಬೇಕೆಂಬ ಆಸೆಯನ್ನು ದೂರಮಾಡುವುದು; ಮನಸ್ಸನ್ನು ಕದಲಿಸದಿರುವುದು; ಮೃದುವಾಗಿ (ಸುಲಭನಾಗಿ) ಇರುವುದು; ನಾಚಿಕೆಯಿಂದ ಕೂಡಿರುವುದು; ಇಂದ್ರಿಯಗಳ ತೃಪ್ತಿಗೆ ಬೇಕಾದ ಪದಾರ್ಥಗಳಲ್ಲಿ ಚಪಲ (ಆಸೆ) ಇಲ್ಲದಿರುವುದು; ವ್ಯಕ್ತಿತ್ವದ ಹೊಳಪು; ಪ್ರಾಗಲ್ಭ್ಯ ೧೬ ೨
(ಹೆಚ್ಚಾದ ವ್ಯಾಪನೆಗಳು);* ತಪ್ಪು ಮನ್ನಿಸುವಿಕೆ; ಹಿಡಿದ ಕೆಲಸವನ್ನು ಕೊನೆಯವರೆಗೂ ಸಾಧಿಸುವ ಧೈರ್ಯವೆಂಬ ಶಕ್ತಿ; ಚೊಕ್ಕಟವಾಗಿರುವುದು; ಮೋಸಮಾಡದಿರುವುದು ಮತ್ತು ಅವರವರಲ್ಲಿ ಬಹಳ ಹೆಚ್ಚಾದ ಗೌರವಬುದ್ಧಿಯನ್ನು ಇಡದಿರುವುದು (ಹೆಮ್ಮೆಯನ್ನು ಬಿಟ್ಟಿರುವುದು) ಇವೆಲ್ಲವೂ ಸತ್ಕುಲದಲ್ಲಿ ಹುಟ್ಟಿದವರಿಗೆ ದೈವೀಸಂಪತ್ತನ್ನುಂಟುಮಾಡುತ್ತವೆ. ಸತ್ಕುಲದಲ್ಲಿ ಹುಟ್ಟಿ ಅಭಿಜಾತ ೧೬ ೩
ನೆನಿಸುವನು ದೈವೀಸಂಪತ್ತಿನ ವಿಷಯದಲ್ಲಿ ಸ್ವಲ್ಪವೂ ಕೊರತೆಯನ್ನಿಟ್ಟುಕೊಳ್ಳಬಾರದು. ೧೬ ೫

ಮೇಲ್ಕಂಡಂತೆ ದೈವೀಸಂಪತ್ತು ವಿಸ್ತಾರವಾಗಿ ಹೇಳಲ್ಪಟ್ಟಿತು. ಅವಿದ್ಯಾ
ಭೋಗ ಸಾಧನ ಸಂಪತ್ತನ್ನು ಈಗ ವಿವರಿಸಲಾಗುವುದು:—ಹೆಚ್ಚುಗಾರಿಕೆಗೆ ೧೬ ೬
ಧರ್ಮದ ಕೆಲಸಗಳನ್ನು ಮಾಡುವ ದಂಭ; ಕೊಬ್ಬುಗಾರಿಕೆ (ಸೊಕ್ಕು); ಅವನವನಲ್ಲಿ ತುಂಬಾ ಪ್ರೀತಿ; ಸಿಟ್ಟು; ಕಠಿಣವಾಗಿರುವಿಕೆ; ತಪ್ಪು ತಿಳಿವಳಿಕೆ ಅಥವಾ ತಿಳಿವಳಿಕೆಯಿಲ್ಲದಿರುವುದು ಇವು ಸತ್ಕುಲಪ್ರಸೂತನಿಗೆ ಪಾರಮಾರ್ಥಿಕ ಜ್ಞಾನವನ್ನು ಮರೆಮಾಡುವ ಆಸುರೀಸಂಪತ್ತನ್ನುಂಟುಮಾಡುವುದಾಗಿರುವುದು. ೧೬ ೪

* ಹೆಚ್ಚಾಗಿ ಎಲ್ಲರಲ್ಲಿಯೂ ಹೊಂದಿಕೊಳ್ಳುವ ಗುಣ.

ಪ್ರಾಪಂಚಿಕವಾದ ಅವಿದ್ಯಾಭೋಗಗಳಲ್ಲಿ ಮನಸ್ಸಿಟ್ಟು ಅಸುರವರ್ತನೆಯ§ ಜನ
ಗಳು ಶ್ರೇಯಸ್ಸನ್ನುಂಟುಮಾಡುವ ಕೆಲಸಗಳನ್ನು ಹಿಡಿಯುವುದನ್ನಾಗಲೀ
ಮತ್ತು ಕೀಳುಸ್ಥಿತಿಗೆ ತಳ್ಳುವ ಕೆಲಸದಿಂದ ಹಿಂದೆಗೆಯುವುದನ್ನಾಗಲೀ, ತಿಳಿದಿರು
ವುದಿಲ್ಲ. ಶುಚಿಯಾಗಿರುವಿಕೆಯಾಗಲೀ, ಪಾರಮಾರ್ಥಿಕ ಮತ್ತು ವ್ಯಾವಹಾರಿಕ
ಶಾಸ್ತ್ರಗಳಲ್ಲಿ ಕಂಡ ಆಚಾರವಾಗಲೀ ಮತ್ತು ದಿಟವಾಗಲೀ ಅಂತಹ ಜನಗಳಲ್ಲಿ
ಕಂಡುಬರುವುದಿಲ್ಲ. ೧೬ ೭

ನಾಸ್ತಿಕರ ತಿಳಿವಳಿಕೆ ಮತ್ತು ದುಷ್ಟವಾದ ವರ್ತನೆಯ ಕೆಲಸಗಳು

ಈ ಪ್ರಪಂಚಕ್ಕೆ ಬೇರೇ ಅಧಿಪತಿಯಿಲ್ಲವೆಂತಲೂ, ಧರ್ಮ ಅಥವಾ ಆಚಾರ
ಗಳ ಕಟ್ಟು (ನಿಯಮ) ಗಳಿಂದ ಈ ಪ್ರಪಂಚವು ನೆಲೆಗೊಳಿಸಲ್ಪಟ್ಟಿಲ್ಲವೆಂತಲೂ
ಮತ್ತು ಪ್ರಮಾಣಗಳಾದ ಶಾಸ್ತ್ರಾದಿ ಶಬ್ದರಾಶಿಗಳಲ್ಲಿ ಹೇಳು
ವುದೆಲ್ಲಾ ಸುಳ್ಳು ಎಂತಲೂ ಹೇಳುತ್ತಾರೆ. ಅಪೇಕ್ಷೆ
(ಬಯಕೆ) ಯ ಕಾರಣದಿಂದ ಪದಾರ್ಥಗಳ ಸಂಸರ್ಗ (ಒಂದ
ನ್ನೊಂದು ಕೂಡುವಿಕೆ) ದಿಂದ ಪ್ರಪಂಚದಲ್ಲಿ ಕಾಣುವುದೆಲ್ಲಾ
ಮುಂದರಿಯುವುದಲ್ಲದೆ ಇದಕ್ಕೆ ಕಾರಣಭೂತವಾದುದು ಯಾವುದೂ ಬೇರೆ ಇಲ್ಲ
ವೆಂದು ಅವರು ವಾದಿಸುತ್ತಾರೆ. ಈ ಅಭಿಪ್ರಾಯಾನುಗುಣವಾದ ಮನೋ ೧೬ ೮
ವರ್ತನೆಯನ್ನು ಹಿಡಿದು, ಅವರವರನ್ನು ಅವರವರೇ ಕೆಡಿಸಿಕೊಂಡು, ವಿವೇಕ
ಸಾಲದೆ, ಕೇಡನ್ನುಂಟುಮಾಡುವವರಾಗಿ, ಹಿಂಸೆಯ ಕೆಲಸಗಳನ್ನು ಮಾಡಿ
ಪ್ರಪಂಚವನ್ನು ಹಾಳುಮಾಡುವವರಾಗುತ್ತಾರೆ. ತೃಪ್ತಿಪಡಿಸುವುದಕ್ಕೆ ೧೬ ೯
ಆಗದೇ ಇರುವ ಬಯಕೆಯನ್ನು ಹಿಡಿದು, ತೋರಣೆಗೆ ಕೆಲಸವಮಾಡುವ ದಂಭ,-
ಅವರವರಲ್ಲಿ ಹೆಚ್ಚು ಗೌರವಬುದ್ಧಿ ಮತ್ತು ಕೊಬ್ಬುಗಾರಿಕೆಗಳಿಂದ ಕೂಡಿದವರಾಗಿ

ಆಸುರಸಂಪತ್ತಿನ ಜನರ ವರ್ತನೆಗಳು

ಮೊಸಳೆಗಳಂತಿರುವ ಕೆಟ್ಟಕೆಲಸಗಳನ್ನು ಒಳ್ಳೆಯವುಗಳೆಂಬ
ಭ್ರಾಂತಿಯಿಂದ ಕೈಹಿಡಿದು ಮತ್ತು ಶುಚಿಯಿಲ್ಲದ ಅಪೇಯ
ಪಾನಾದಿ ವ್ರತಗಳನ್ನು ಕೈಕೊಂಡು ನಡೆಯುತ್ತಾರೆ. ೧೬ ೧೦

---

§ ಅಸುರ=ರಾಕ್ಷಸರೆಂಬದಾಗಿ ಪ್ರತ್ಯೇಕವಾದ ಜಾತಿ ಇರುವುದಿಲ್ಲ. ಪುರಾಣೇತಿಹಾಸ ಗ್ರಂಥಗಳಲ್ಲಿರುವ ಇಂತಹವರ್ಣನೆಗಳನ್ನು ಪಾರಿಭಾಷಿಕವಾಗಿವೆಯೆಂದು ತಿಳಿಯಬೇಕೇ ಹೊರತು, ಅಕ್ಷರಶಃ ನಿಜಾಂಶವೆಂದು ತಿಳಿಯಲಾಗದು.' ಜೀವನಕ್ರಮದಲ್ಲಿ ಧನ, ರೂಪ, ಶಕ್ತಿ ಮತ್ತು ಅಧಿಕಾರ ಮೊದಲಾದ ಉತ್ತಮ ಗುಣಗಳಲ್ಲಿ ಅತಿಶಯವನ್ನು ಪಡೆದು, ದುರುಪಯೋಗಮಾಡಿಕೊಳ್ಳುವುದೇ ರಾಕ್ಷಸತ್ವ. ಈ ರಾಕ್ಷಸತ್ವಕ್ಕಾಗಲೀ, ಇದಕ್ಕೆ ವಿರೋಧವಾಗಿ ಮೆರೆಯುವ ದೇವತ್ವಕ್ಕಾಗಲೀ ಪ್ರತಿಯೊಂದು ಚರಾಚರವಸ್ತುವೂ ಅವಕಾಶವನ್ನು ಹೊಂದಿದೆಯೆಂದು ಹೇಳಬೇಕು. ಒಂದು ವಸ್ತುವಿನಲ್ಲಿಯೇ ಕಾಲದೇಶಾನುಗುಣವಾಗಿ ಎರಡೂ ಇರಬಹುದು. ಆದುದರಿಂದ ಮನೆಯ ಒಳಗಾಗಲೀ, ಹೊರಗಾಗಲೀ ; ರಾಕ್ಷಸರೂ, ದೇವತೆಗಳೂ ತುಂಬಿರುವರೆಂದು ತಿಳಿಯಬೇಕು.

ವಿನಾಶವೇ (ಸಾವೇ) ಕೊನೆಯ ಫಲವಾಗಿ ಉಳ್ಳ ಅಳತೆಯಿಲ್ಲದಷ್ಟು ಆಲೋಚನೆ
ಯನ್ನು ಹೊಂದಿ, "ಬಯಕೆಯ ವಿಷಯಗಳನ್ನು ಅನುಭವಿಸುವುದೇ ಶ್ರೇಷ್ಠವಾ
ದುದು" ಎಂಬ ಸಿದ್ಧಾಂತವನ್ನು ಮಾಡಿಕೊಂಡು, ನೂರಾರು ವಿಧಗಳಾದ ೧೬ ೧೧
ಆಸೆಗಳೆಂಬ ಹಗ್ಗಗಳಿಂದ ಕಟ್ಟಿಹಾಕಲ್ಪಟ್ಟವರಾಗಿ ಆಸೆ ಮತ್ತು ಸಿಟ್ಟುಗಳಲ್ಲಿ*
ಮುಳುಗಿ ಅವರವರ ಬಯಕೆಗಳನ್ನು ಈಡೇರಿಸಿಕೊಳ್ಳುವುದಕ್ಕಾಗಿ ನ್ಯಾಯಕ್ಕೆ
ವಿರೋಧವಾಗಿ ಅನ್ಯಾಯದಿಂದಲಾದರೂ ದ್ರವ್ಯವನ್ನು ಕೂಡಿಹಾಕಲು ಇಚ್ಛಿಸು
ತ್ತಾರೆ. "ಈಗ ಇದನ್ನು ಪಡೆದದ್ದಾಯಿತು", "ಈ ಇಷ್ಟಾರ್ಥವನ್ನು ೧೬ ೨೨
ಇನ್ನುಮೇಲೆ ಪಡೆಯಲಾಗುವುದು", "ಈ ಪದಾರ್ಥವು ಬಳಿಯಲ್ಲಿದೆ", "ಈ
ಪದಾರ್ಥವನ್ನು ಇನ್ನುಮುಂದೆ ಪಡೆಯುವೆನು", "ಈ ಹಗೆಯನ್ನು ೧೬ ೧೩
ಕೊಂದುಹಾಕಿದೆನು", "ಇತರ ಹಗೆಗಳನ್ನು ಕೊಲ್ಲುವೆನು", "ಈಶ್ವರನಾಗಿ
ದ್ದೇನೆ", "ಭೋಗಿಯಾಗಿದ್ದೇನೆ", "ಸಿದ್ಧಿಯನ್ನು ಹೊಂದಿ ಸಿದ್ಧನೆನಿಸಿದ್ದೇನೆ",
"ಬಲಿಷ್ಠನಾಗಿದ್ದೇನೆ", "ಸುಖಿಯೂ ಆಗಿದೇನೆ" ಎಂತಲೂ; ೧೬ ೧೪
"ತುಂಬಾ ಜನದ್ರವ್ಯಸಹಾಯವುಳ್ಳವನಾಗಿದ್ದೇನೆ", "ಸತ್ಕುಲಪ್ರಸೂತನಾಗಿ
ದ್ದೇನೆ" ಎಂತಲೂ ಗಳುಹುವವರಿಗೆ ಸಮಾನರು ಯಾರಿರುತ್ತಾರೆ? "ದೇವತೆಗಳ
ಪ್ರೀತಿಗಾಗಿ ದ್ರವ್ಯಸಮರ್ಪಣೆಯಾಗುವ ಯಜ್ಞಗಳನ್ನು ಮಾಡುವೆನು; ಅನ್ನಾದಿ
ದ್ರವ್ಯಗಳನ್ನು ದಾನಮಾಡುವೆನು; (ಕೊಡಿಗೆಗಳನ್ನು ಕೊಡುವೆನು); ಸಂತೋಷ
ಪಡುವೆನು–ಎಂಬಿವೇ ಮೊದಲಾದ ರೀತಿಗಳಲ್ಲಿ ಬಾಳಿಕೆಯ ಗುಟ್ಟಿನ ತಿಳಿವಳಿಕೆ
ಯಿಲ್ಲದಿರುವಿಕೆಯಿಂದ ಭ್ರಾಂತರಾಗಿ ನಾನಾರೀತಿಯಲ್ಲಿ ತಪ್ಪುತಿಳಿವಳಿ ೧೬ ೧೫
ಕೆಯ ಮನಸ್ಸುಳ್ಳವರಾಗಿ, ಭ್ರಮೆಯೆಂಬ ಬಲೆಯಿಂದ ಸುತ್ತುವರಿಯಲ್ಪಟ್ಟು
ಬಯಕೆಗಳನ್ನು ಅನುಭವಿಸುವುದರಲ್ಲಿಯೇ ತೊಡಗಿದವರಾಗಿ, ಅಶುಚಿಯಾದ,
ತುಚ್ಛವೂ ನೀಚವೂ ಆದ ಸ್ಥಿತಿಯಲ್ಲಿ ಬಿದ್ದು ನರಳುತ್ತಾರೆ. ಅವರಷ್ಟ ೧೭ ೧೬
ಕ್ಕವರೇ ಮನ್ನಣೆ ಮಾಡಿಕೊಂಡು ಹಿರಿಯರನ್ನೂ ಲೆಕ್ಕಿಸದೆ, ಹಣ, ದೊಡ್ಡಸ್ತಿಕೆ
ಮತ್ತು ಸೊಕ್ಕುಗಳಿಂದ ಕೂಡಿ, ಪಾರಮಾರ್ಥಿಕ ಮತ್ತು ವ್ಯಾವಹಾರಿಕ ಶಾಸ್ತ್ರಗಳ
ನಿಯಮ ಅಥವಾ ಕಾಯಿದೆಗಳನ್ನು ಮೀರಿ, ತೋರಣೆಯ ದಂಭದಿಂದ ಹೆಸರಿಗೆ
ಮಾತ್ರ ಕರೆಯಲ್ಪಡುವ ಯಜ್ಞಕೆಲಸಗಳನ್ನು ಮಾಡುತ್ತಾರೆ. ದಂಭ, ೧೬ ೧೭
ದೊಡ್ಡವನೆಂಬ ಭಾವನೆ ಇವುಗಳಿಂದ ಕೂಡಿ ಹೊಸದಾಗಿ ಪಡೆಯಬೇಕಾದ ವಸ್ತು
ಗಳ ಮೇಲಿನ ಬಯಕೆ ಮತ್ತು ಪಡೆದಿರುವ ವಸ್ತುಗಳ ಮೇಲಿನ ಪ್ರೇಮ, ಬಲ
ಇವುಗಳಿಂದ ಕೂಡಿದವರಾಗಿ, ತತ್ವಜ್ಞಾನವಿಲ್ಲದವರು ಶರೀರದಲ್ಲಿನ ಇಂದ್ರಿಯ

---

* ಆಸೆಯು ಈಡೇರದಿದ್ದರೆ ಅದು ಸಿಟ್ಟಿನಲ್ಲಿ ಪರಿಣಮಿಸುವುದು.

ಗಳನ್ನೂ ಅಂಗಗಳನ್ನೂ ಕಷ್ಟಕ್ಕೀಡುಮಾಡಿ, ದೇಹದಲ್ಲಿರುವ-ನಾನುವನ್ನು ಸಹ ತೊಂದರೆಗೊಳಿಸಿ (ಅಂದರೆ ತೊಂದರೆಯ ಅನುಭವಕ್ಕೆ ಗುರಿಮಾಡಿ), ಧರ್ಮಶಾಸ್ತ್ರ ಗಳು ಮೊದಲಾದ ನಿಯಮಗಳನ್ನು ಹೇಳುವ ಶಬ್ದರಾಶಿಗಳಲ್ಲಿ ಹೊಗಳಲ್ಪಡದ (ಹೇಳಲ್ಪಡದ) ಮತ್ತು ಬಹಳ ಅಂಜಿಕೆಯನ್ನುಂಟುಮಾಡುವ ತಪಸ್ಸನ್ನು ಆಚರಿ ಸುತ್ತಾರೆ. ದೇಹೇಂದ್ರಿಯಗಳ ಬಲ, ಸೊಕ್ಕು, ಇಚ್ಛೆ ಮತ್ತು ಮುನಿಸು ೧೭ ೫
ಇವುಗಳಿಗೆ ತುತ್ತಾಗಿ (ಅಧೀನರಾಗಿ), ಬೇರೆಯವರ ಮತ್ತು ಅವರವರ ೧೬ ೧೮
ಶರೀರದಲ್ಲಿರುವ ದೇಹಿಯನ್ನು (ನಾನುವನ್ನು) ಹಗೆತನದಿಂದ ನೋಡಿ, (ಭಾವಿಸಿ) ವಿವೇಕವನ್ನು ಕಳೆದುಕೊಂಡವರಾಗಿ ಶರೀರದಲ್ಲಿ ರಕ್ತಮಾಂಸಾದಿಗಳಿಗೆ ಕಾರಣ ವಾದ ಭೂಮಿ, ನೀರು ಮೊದಲಾದ ಐದು ತತ್ವಗಳನ್ನೇ ಬಲಾತ್ಕಾರವಾಗಿ ಭೇದಿಸಿ ಹೊರಪಡಿಸಿ ಶರೀರದಲ್ಲಿ ದೇಹಿಯಾದ ನಾನುವನ್ನೂ ಸಹ ಧರಿಸಲ್ಪಟ್ಟ ಶರೀರ ದಿಂದ ಬಲಾತ್ಕಾರವಾಗಿ ಬೇರ್ಪಡಿಸುವಷ್ಟು ಹಿಂಸಿಸುವ ಮತ್ತು ಅಸೂಯೆ ಯಿಂದ ಕೂಡಿದವರೇ "ಅಸುರ ಕೆಲಸಗಳಿಗೆ ಸಂದ ಹಿಂಸೆಯೇ ಮುಖ್ಯವಾದ ಆಶಯವಾಗಿ-ಉಳ್ಳ-ಅಸುರರು-ರಾಕ್ಷಸರು" ಎಂದು ತಿಳಿಯಬೇಕು. ೧೭ ೬

ಹುಟ್ಟುಸಾವುಗಳೆಂಬ ಪರಂಪರೆಯ ಸಂಸಾರದಲ್ಲಿರುವ ಜನಗಳಲ್ಲಿ ನೀಚ ರಾದ, ಕ್ರೂರಿಗಳಾಗಿ ಹಗೆತನವನ್ನು ತೋರಿಸುವ ಮತ್ತು ಅಮಂಗಳವನ್ನೆಸಗುವ

ಆಸುರೀಸಂಪತ್ತಿನವರ ಕೀಳು ಸ್ಥಿತಿ

ಜನರನ್ನು ಆಸುರಸಂಬಂಧವಾದ ಜನ್ಮಗಳಲ್ಲಿ ಯಾವಾಗಲೂ
ಇರುವಂತೆ ತಳ್ಳು*ವವನು 'ನಾನು.' ಇಂತಹ ೧೬ ೧೯
ಮೂಢರು ಪ್ರತಿಜನ್ಮಗಳಲ್ಲಿಯೂ ಅಸುರಯೋನಿಗಳನ್ನೇ ಪಡೆದು ನಾನುವನ್ನು ಪಡೆಯದೇನೇ ಕೊನೆಗೆ ನೀಚವಾದ ಸ್ಥಿತಿಗೆ ಇಳಿಯು ತ್ತಾರೆ. ೧೬ ೨೦

ಗುಣಗಳ ಮಧ್ಯೆ ಸಿಕ್ಕಿರುವ ನಾನುವನ್ನು ನಾನುವಿನಿಂದ (ನಾನುವಿನ ಜ್ಞಾನದಿಂದ) ಮೇಲಕ್ಕೆತ್ತಬೇಕು.* ಆನನ್ದಗೊಳಿಸಬೇಕು. ನಾನುವನ್ನೆಂದಿಗೂ

ದೇಹಿಯಾದವನು ಉತ್ತಮಫಲಪ್ರಾಪ್ತಿಗೆ ಯತ್ನಿಸಬೇಕು

ದುಃಖಾನುಭವಕ್ಕೀಡುಮಾಡಬಾರದು. ಬದ್ಧನಾದ ನಾನು ವಿಗೆ ಸ್ವಸ್ವರೂಪಜ್ಞಾನ-ನಿತ್ಯಾನಂದಾನುಭವ-ದ ದೇಹಿ ನಾನುವೇ ನೆಂಟನು,- ಮತ್ತು ದೇಹಿಯಾದ ನಾನುವಿಗೆ ಸ್ವಸ್ವರೂಪಜ್ಞಾನಾನುಭವವಿಲ್ಲದ ಬದ್ಧ ನಾನುವೇ ಹಗೆಯು.
೬ ೫

—ಓಂ ತತ್ಸತ್—

ಎಂಬುದಾಗಿ ಶ್ರೀಮದ್ಭಗವದ್ಗೀತಾ ವಿಷಯ ವಿಭಜನಸಂಯೋಜನಪೂರ್ವಕ ಸಂಪುಟೀಕೃತ ಗೀತಾಕೃತಿಯಲ್ಲಿ 'ಕರ್ಮ' ಎಂಬ ನಾಲ್ಕನೆಯ ಕನ್ನಡ ಪ್ರಬಂಧವು.

---

* ಇದು ವರಹಾವತಾರದ ಗುಟ್ಟನ್ನು ತಿಳಿಸುವುದು.

॥ ಶ್ರೀಃ ॥

ಶ್ರೀ ಯೋಗಾನಂದ ಗುರುಭ್ಯೋನಮಃ

ಸಂಪುಟೀಕೃತ ಶ್ರೀಮದ್ಭಗವದ್ಗೀತಾ ಶ್ಲೋಕಪ್ರಬಂಧಗಳ ಕನ್ನಡ ಗದ್ಯಾನುವಾದ ಪ್ರಬಂಧಗಳು

ಐದನೆಯ ಪ್ರಬಂಧವು

ಯೋಗ

[ಜನ್ಮವೆತ್ತಿದ ಪ್ರತಿಯೊಂದು ವ್ಯಕ್ತಿಯೂ ಹುಟ್ಟುಸಾವುಗಳನ್ನು ಹೋಗಲಾಡಿಸಿಕೊಳ್ಳಲು ಶಾಶ್ವತ ಸುಖವನ್ನು ಪಡೆಯಬೇಕು. ಶಾಶ್ವತ ಸುಖವೇ ಸ್ವಸ್ವರೂಪಜ್ಞಾನ—ಆತ್ಮಜ್ಞಾನ. ಅವಿದ್ಯೆಯಿಂದ ಕವಿಯಲ್ಪಟ್ಟವರು ಪಡೆಯಬೇಕಾದುದು, 'ಆತ್ಮಜ್ಞಾನ' ಅಂದರೆ 'ನಾನು' ವಿನ ಜ್ಞಾನ.]

(ಅಖಂಡವಾದ ಪೂರ್ಣವಾದ ನಾನುವು ಪ್ರಕೃತಿಗುಣಗಳ ಉಪಾಧಿ (ದೇಹಾದಿ) ಗಳಲ್ಲಿ, ಹುಟ್ಟು, ವರ್ತನೆ ಕೆಲಸಗಳ ವಾಸನೆಗೆ ತಕ್ಕಂತೆ ಚೈತನ್ಯನಾಗಿಯೂ ಮತ್ತು ಸಾಕ್ಷಿಯಾಗಿಯೂ ಪ್ರಕೃತಿಯ ಭೋಗಗಳನ್ನು ಅನುಭವಿಸುತ್ತಾನೆ. ದೇಹೇಂದ್ರಿಯಾದಿಗಳಿಂದ ಆವರಿಸಲ್ಪಟ್ಟ ಸಂಘಾತ ನಾನುವಿನ ಉಪಾಧಿಗಳು ಬಲವಾದಷ್ಟೂ ಸ್ವಸ್ವರೂಪಜ್ಞಾನದ ನಿತ್ಯಾನಂದವು ಮರೆಯಾಗಿರುತ್ತದೆ. ಆದುದರಿಂದ 'ಅದನ್ನು' ಪಡೆಯಬೇಕಾದ ಆವಶ್ಯಕತೆಯಿರುತ್ತದೆ.

ಆತ್ಮವನ್ನು ಪಡೆಯುವುದೇ 'ಯೋಗ;' "ಆತ್ಮಲಾಭಾನ್ನ ಪರಂ ವಿದ್ಯತೇ" ಎಂಬದಾಗಿ ಆಪಸ್ತಂಬ ಮಹರ್ಷಿಗಳು ಅಪ್ಪಣೆಕೊಡಿಸಿರುತ್ತಾರೆ. 'ಆತ್ಮಲಾಭವೇ ಜೀವನದ ಗುರಿ'*—ಎಂಬುದು ಪೂರ್ವೋತ್ತರ ಮೀಮಾಂಸಗಳೆರಡನ್ನೂ ಸರಿದೂಗುವುದಾಗಿದೆ. ಅಧ್ಯಾತ್ಮವಿಷಯವು, ವೇದದ ಶಿರಸ್ಸು ಅಥವಾ ವೇದದ ಕೊನೆ (ವೇದಾಂತ) ಯಲ್ಲಿ ಜೋಡಿಸಿರುವ ಉಪನಿಷತ್ತುಗಳಲ್ಲಿ ಮಾತ್ರವೇ ಅಲ್ಲ; ವೇದಗಳ ಅಂತ ಎಂದರೆ ತಿರುಳು ಅಥವಾ ರಹಸ್ಯವು ವೇದಗಳ ಪ್ರತಿಯೊಂದು ವಾಕ್ಯದಲ್ಲಿಯೂ ಅಡಗಿದೆ. ಅಧ್ಯಾತ್ಮ ವಿಷಯವು-ಸಂಹಿತೆ, ಬ್ರಾಹ್ಮಣ, ಉಪನಿಷತ್ತು ಮತ್ತು ಷಡಂಗಗಳು—ಇವುಗಳನ್ನೆಲ್ಲಾ ಮಣಿಗಳಂತೆ ಪೋಣಿಸುವ ದಾರದಂತಿರುವುದು.)

---

* ಆಪಸ್ತಂಬ ಧರ್ಮಸೂತ್ರ ಮಂಜರೀ ಪುಟ ೪ ಪಂಕ್ತಿ ೭.

ಶ್ರೀ

ರಹಸ್ಯಗಳಲ್ಲೆಲ್ಲಾ ಅತ್ಯಂತ ರಹಸ್ಯವಾದ ಮತ್ತು ಶ್ರೇಷ್ಠವಾದ ಮಾತು
ಗಳನ್ನು ಲಾಲಿಸಬೇಕು; ಅಂತರಂಗಪೂರ್ವಕವಾಗಿ, ಇಷ್ಟರಾದವರಿಗೆ ಹಿತವು
ಉಂಟಾಗಲೆಂದು ಈ ಯೋಗರಹಸ್ಯ*ವನ್ನು ಹೇಳಲಾಗುವುದು :—೧೮ ೬೪
ನಾನುವಿನಲ್ಲಿ ನಟ್ಟಮನಸ್ಸುಳ್ಳವನಾಗಿ, ನಾನುವನ್ನೇ ಆಶ್ರಯಿಸಿ, ಆತ್ಮಲಾಭದಲ್ಲಿ
ಗುರಿಯನ್ನಿಟ್ಟು, ಸ್ವಲ್ಪವೂ ಸಂಶಯವಿಲ್ಲದೆ 'ನಾನುವನ್ನು' ಚೆನ್ನಾಗಿ ತಿಳಿಯ
ಬಹುದಾದ ಕ್ರಮವನ್ನು ಲಾಲಿಸಬೇಕು. ಜೀವತತ್ವವು ಈ ಜೀವಲೋಕ ೭ ೧
ದಲ್ಲಿ ನಾನುವಿನ ಸನಾತನವಾದ ಒಂದು ಅಂಶವಾಗಿರುವುದು; ಶರೀರದಲ್ಲಿರುವ ಐದು
ಇಂದ್ರಿಯಗಳನ್ನೂ ಆರನೆಯದಾದ ಮನಸ್ಸನ್ನೂ ಸಹ ಆಳುವುದಾಗಿ ಜೀವ(ಪ್ರಾಣಿ)
ನೆನಿಸಿಕೊಂಡಿರುವುದು. ಈಶ್ವರನಾದ ನಾನುವು ಯಾವ ಶರೀರವನ್ನು ೧೫ ೭
ಪಡೆಯುತ್ತಾನೆಯೋ ಅಥವಾ ಯಾವ ಶರೀರವನ್ನು ಬಿಡುತ್ತಾನೆಯೋ ಆಗ—
ವಾಯುವು ಬೇರೆ ಬೇರೆ ಸ್ಥಳಗಳಲ್ಲಿರುವ ಹೂವುಗಳಿಂದ ವಾಸನೆಯನ್ನು ತೆಗೆದು
ಕೊಂಡು ಹೋಗುವಂತೆ, ಈ ಆರು ಇಂದ್ರಿಯಗಳನ್ನೂ ಜತೆಯಲ್ಲಿ ಹಿಡಿದು
ಕೊಂಡೇ ಹೋಗುತ್ತಾನೆ. ಕಿವಿ, ಕಣ್ಣು, ಚರ್ಮ, ನಾಲಿಗೆ, ಮೂಗು ೧೫ ೮
ಮತ್ತು ಮನಸ್ಸುಗಳೆಂಬ ಇಂದ್ರಿಯಗಳ ಆಶ್ರಯದಲ್ಲಿ ನಾನುವು ವಿಷಯವನ್ನು
ಸೇವಿಸುತ್ತಾನೆ. ಶರೀರವನ್ನು ಬಿಟ್ಟುಬಿಡುತ್ತಿರುವಾಗಲೂ ಮತ್ತು ಶರೀರ ೧೫ ೯
ದಲ್ಲಿರುವಾಗಲೂ, ಸುಖದುಃಖಗಳನ್ನು ಅನುಭವಿಸುತ್ತಿರುವಾಗಲೂ ಮತ್ತು
ಗುಣಗಳೊಡನೆ ಕೂಡಿಕೊಂಡಿರುವಾಗಲೂ ಜ್ಞಾನವೆಂಬ ಕಣ್ಣುಗಳುಳ್ಳವರು
ಶಾಸ್ತ್ರಪ್ರಮಾಣಾದಿಗಳಿಂದ ನಾನುವನ್ನು ಸಾಕ್ಷಾತ್ಕರಿಸಿಕೊಳ್ಳುವರೇ ಹೊರತು,
ಸ್ವಲ್ಪವೂ ತಿಳಿವಳಿಕೆಯಿಲ್ಲದ ಸಾಧಾರಣ ಜನರು ನೋಡಲಾರರು. ೧೫ ೧೦

---

* ಯೋಗ = ಬಹಿರ್ವಿಕಾಸಪರಿಣಾಮವು ಸ್ವರೂಪದಲ್ಲಿ ಕೂಡುವುದು. (evolution and involution) ಯೋಗ = ಒಂದುಗೂಡುವುದು ; ಕರ್ಮವು ಜ್ಞಾನದೊಡನೆ ಸೇರುವುದೂ ಯೋಗವೇ ; ಜ್ಞಾನವು ಕರ್ಮದಲ್ಲಿ ವ್ಯಕ್ತವಾಗುವುದೂ ಯೋಗವೇ. ಯೋಗ=ಪಡೆಯದಿರುವುದನ್ನು ಪಡೆಯುವುದು. ಅದ್ವೈತಂ ಸುಖದುಃಖಯೋರನುಗುಣಂ ಸರ್ವಾಸ್ವವಸ್ಥಾಸು ಯದ್ವಿಶ್ರಾಮೋ ಹೃದಯಸ್ಯ ಯತ್ರ ಜರಸಾ ಯಸ್ಮಿನ್ನಹಾರ್ಯೋ ರಸಃ। ಕಾಲೇನಾವರಣಾತ್ಯಯಾತ್ಪರಿಣತೇ ಯತ್ಪ್ರೇಮಸಾರೇ ಸ್ಥಿತಂ ಭದ್ರಂ ತಸ್ಯ ಸುಮಾನುಷಸ್ಯ ಕಥಮಪ್ಯೇಕಂ ಹಿ ತತ್ಪ್ರಾಪ್ಯತೇ ॥ —ಯೋಗಿಗಳಲ್ಲಿ ಅಗ್ರಗಣ್ಯನಾಗಿ ಯೋಗದ ರಹಸ್ಯಗಳನ್ನು ಗ್ರಂಥಗಳಲ್ಲಿ ಪ್ರತಿಪಾದಿಸಿರುವ ಭವಭೂತಿ ಮಹಾ ಕವಿಯು ಇಲ್ಲಿ ವರ್ಣಿಸಿರುವ ದಾಂಪತ್ಯದ ವಿವರಣೆಯಿಂದ 'ಯೋಗ'—ವಾ—'ಆತ್ಮಲಾಭ' ಎಂಬುದರ ಅರ್ಥವನ್ನು ವಿಶದವಾಗಿ ಸ್ವಲ್ಪಮಟ್ಟಿಗೆ ಮನಗಾಣಿಸಿಕೊಳ್ಳಬಹುದು.

ಆತ್ಮಲಾಭವನ್ನು ಸಾಧಿಸುವವರು ಪ್ರಯತ್ನಪಟ್ಟು ಬುದ್ಧಿಯ ಆಶ್ರಯದ
ನಾನುವಿನಲ್ಲಿರುವ ನಾನುವನ್ನು ನೋಡಬಲ್ಲರು. ನಾನುವಿನ ಪ್ರಾಪ್ತಿಗಾಗಿ
ಇಂದ್ರಿಯಗಳ ನಿಗ್ರಹವೆಂಬ ಸಂಸ್ಕೃತಿಯಿಲ್ಲದ ಅವಿವೇಕಿಗಳು ಪ್ರಯತ್ನ
ಪಟ್ಟರೂ ದೇಹಿಯಾದ ನಾನುವನ್ನು ನೋಡಲಾರರು. ಯೋಗದ ೧೫ ೧೧
ದಾರಿಯಲ್ಲಿರುವ ಮಾಯೆ ಎಂಬ ಶಕ್ತಿಯಿಂದ ಬಳಸಲ್ಪಟ್ಟ ‘ನಾನು’ ಎಲ್ಲರಿಗೂ
ಕಾಣುವುದಿಲ್ಲ. ನಾನುವಿನ ಅರಿವಿಲ್ಲದ ಸಾಮಾನ್ಯ ಜನರು ಹುಟ್ಟುಸಾವುಗಳಿಲ್ಲದ
ನಾನುವನ್ನು ತಿಳಿಯುವುದಿಲ್ಲ. ಹಿಂದೆ ಯಾವ ಸಾತ್ತ್ವಿಕ, ರಾಜಸ, ೭ ೨೫
ತಾಮಸ ಭಾವಗಳು ಹೇಳಲ್ಪಟ್ಟವೋ ಆ ಮೂರು ವಿಧವಾದ ಗುಣ ೭ ೧೨
ಗಳಿಂದ ಕೂಡಿದ ಭಾವಗಳಿಂದ ಅಂದರೆ ಮನೋವರ್ತನೆಗಳಿಂದ ಜಗತ್ತೆಲ್ಲವೂ
ಕವಿಯಲ್ಪಟ್ಟಿರುವುದರಿಂದ, ಸಾತ್ತ್ವಿಕಾದಿ ಗುಣಭಾವಗಳಿಗಿಂತ ಬೇರೆಯಾದ,
ನಾಶರಹಿತನಾದ ಮತ್ತು ಸಾಕ್ಷಿಯಾದ ‘ನಾನುವನ್ನು’ ತಿಳಿಯಲಾಗುವುದಿಲ್ಲ.
೭ ೧೩

ಗುಣ ಮತ್ತು ಕರ್ಮಗಳ ವಿಭಜನೆಯ ರಹಸ್ಯವನ್ನು ತಿಳಿದವನು “ವಿಷಯ
(ಪದಾರ್ಥ) ಗಳಲ್ಲಿನ ಗುಣಗಳನ್ನು ಇಂದ್ರಿಯಗಳ ಗುಣಗಳು ಸೇರುತ್ತವೆ”
ಎಂದು ತಿಳಿದು ಸಾಕ್ಷಿಯಾಗಿರುವ ದೇಹಿ ನಾನುವನ್ನು ಅವುಗಳೊಡನೆ ಸೇರಿಸುವು

‘ನಾನು’—ಗುಣಗಳಿಂದ ಬೇರೆ

ದಿಲ್ಲ. ವಿಚಾರಶೀಲನು, ಗುಣಗಳಿಗಿಂತ ಬೇರೆಯಾದ ೩ ೨೮
ಗೆಯ್ಮೆಗಾರನು ಅಥವಾ ಕೆಲಸಗಾರನು ಇಲ್ಲವೆಂದು ಯಾವಾಗ
ಕಾಣುತ್ತಾನೋ—ಆಗ ಗುಣಗಳಿಗಿಂತ ಬೇರೆಯಾಗಿರುವ
ಶ್ರೇಷ್ಠನಾದ ನಾನುವನ್ನು ತಿಳಿಯುವುದಲ್ಲದೆ ನಾನುವಿನ–ಸ್ಥಿತಿ–ಧರ್ಮವನ್ನೇ
ಹೊಂದುತ್ತಾನೆ. ನಾನುವಿನ ಮಾಯೆಯು ಗುಣಗಳಿಂದ ತುಂಬಿದುದು;೧೪ ೧೯
ದೈವೀಶಕ್ತಿಯು; ಮತ್ತು ಹಿಂದು ಹಿಂದಿನ ಕಾಲದಲ್ಲಿ–ವಾ–ಹುಟ್ಟುಗುಣಗಳಲ್ಲಿ
ನಡೆದ ಕೆಲಸದ ಫಲರೂಪವಾಗಿರುವುದು; ಇದನ್ನು ಮೀರಲಸದಳವು. ನಾನು
ವನ್ನು ಮರೆಹೊಂದಿ ಆಶ್ರಯಿಸುವವರು ಮಾತ್ರ ಈ ಮಾಯಾ ಶಕ್ತಿಯನ್ನು ಗೆಲ್ಲ
(ದಾಟ) ಬಲ್ಲರು. ದೇಹಿಯು ದೇಹದಲ್ಲುಂಟಾಗುವ ಮೂರು ಗುಣ ೭ ೧೪
ಗಳನ್ನೂ ದಾಟಿದ ಮೇಲೆ, ಹುಟ್ಟು ಸಾವುಗಳ ನೋವುಗಳಿಂದ ಬಿಡಲ್ಪಟ್ಟು
ಶಾಶ್ವತ ಸುಖವನ್ನು ಹೊಂದುತ್ತಾನೆ. ೧೪ ೨೦

ಲೋಕಕ್ಕೆಲ್ಲಾ ಒಡೆಯನಾದ ನಾನುವು, ಲೋಕದ ಕೆಲಸಗಳಾವುದನ್ನೂ
ರಚಿಸುವುದಿಲ್ಲ. ಅದರಿಂದಲೇ ಗೆಯ್ಮೆಗಾರತನವೂ ‘ನಾನು’ ವಿಗಿರುವುದಿಲ್ಲ.

ಕೆಲಸಕ್ಕೆಲ್ಲಾ ಪ್ರಕೃತಿಯೇ ಕಾರಣವು ‘ನಾನು’ ಅಲ್ಲ

ನಡೆದ ಕೆಲಸಗಳನ್ನು ಅವುಗಳ ಫಲಗಳೊಡನೆ ಸೇರಿಸುವ
ವನೂ ‘ನಾನು’ ವಲ್ಲ. ಸ್ವಭಾವ ಎಂದರೆ ವ್ಯಕ್ತಿಯ ಹುಟ್ಟು
ಸಂಸ್ಕೃತಿ ಮೊದಲಾದವುಗಳ ಸಂಘಾತವೇ ‘ಪ್ರಕೃತಿ’ ಎಂಬ

ಹೆಸರಿನಿಂದ ಕೆಲಸಗಳಲ್ಲಿ ತೊಡಗುವುದು ಮತ್ತು ಫಲದೊಡನೆ ಸೇರಿಸುವುದು. ೫ ೧೪
ನಾನುವು ಯಾವ ಒಬ್ಬ ವ್ಯಕ್ತಿಯ ಪಾಪವನ್ನೂ ವಹಿಸಿಕೊಳ್ಳುವುದಿಲ್ಲ; ಪುಣ್ಯ

ವ್ಯಕ್ತಿಯ ಪುಣ್ಯ ಪಾಪ ಗಳಿಗೆ 'ನಾನು' ಬಾಧ್ಯನಲ್ಲ

ವನ್ನೂ ಅಂಗೀಕರಿಸುವುದಿಲ್ಲ. ನಾನುವಿನ ಅರಿವು ಅವಿದ್ಯೆ
ಯಿಂದ ಮುಚ್ಚಲ್ಪಟ್ಟಿರುವುದು. ಆದುದರಿಂದ ಪ್ರಾಣಿಗಳೆಲ್ಲಾ
ಭ್ರಾಂತರಾಗುತ್ತಾರೆ. ಎಂತಹ ಸಂದರ್ಭಗಳಲ್ಲಿಯೂ ೫ ೧೫
ಕೂಡ ಮಾಡಲ್ಪಡುವ ಲೋಕದ ಕೆಲಸಗಳೆಲ್ಲವೂ ಪ್ರಕೃತಿಯಿಂದ ಮತ್ತು ಪ್ರಕೃತಿಯ

ವ್ಯಕ್ತಿಗಳು ಪ್ರಕೃತಿಯನ್ನೇ ಹಿಂಬಾಲಿಸುವುವು

ಗುಣಗಳಿಂದ ನಡೆಯುತ್ತವೆ. ಪ್ರಾಣಿಗಳು ೩ ೨೭; ೩ ೨೯
ಪ್ರಕೃತಿಯನ್ನೇ ಅನುಸರಿಸಿ ಧರ್ಮಾಧರ್ಮಗಳ ಫಲದ
ಸಂಸ್ಕಾರದ ಆಧಾರದಿಂದ ನಡೆಯುತ್ತವೆ. ಕರ್ತೃ, ೩ ೩೩
ಕರ್ಮ ಮತ್ತು ಕ್ರಿಯೆಗಳ ರಹಸ್ಯವು ಹೀಗೆ ಚಿತ್ರಿತವಾಗಿರುವಾಗ ಯಾರು
'ಕೇವಲ' ನಾದ ನಾನುವನ್ನು ಕರ್ತೃ ಎಂಬದಾಗಿ ತಿಳಿಯುತ್ತಾನೋ ಅಂತಹ
ಕೆಟ್ಟ ಮನಸ್ಸುಳ್ಳವನು, ಇಂದ್ರಿಯನಿಗ್ರಹಾದಿಗಳಿಲ್ಲದೆ ಅವಿವೇಕದಿಂದ ನಾನುವಿನ
ನಿಜಾಂಶವನ್ನು ತಿಳಿಯಲಾರನು. ಹೆಮ್ಮೆಯೆಂಬ ಕೆಟ್ಟಗುಣದಿಂದ ೧೮ ೧೬
ಮುಚ್ಚಿಹೋಗಿರುವ 'ನಾನುವಿನ ಅರಿವು'ಳ್ಳವನು, ನಾನುವು ಕೆಲಸಮಾಡುವವ
ನೆಂದು ತಿಳಿಯುತ್ತಾನೆ. ಹೀಗೆ ಪ್ರಕೃತಿಯ ಗುಣಗಳ ಪ್ರಭಾವದಿಂದ ೩ ೨೭
ವಿವೇಕವನ್ನು ಕಳೆದುಕೊಂಡಿರುವವರು, ಗುಣಗಳ ಕರ್ಮಗಳಲ್ಲಿ ನಟ್ಟ ಮನಸ್ಸು
ಳ್ಳವರಾಗುತ್ತಾರೆ. ೩ ೨೯

ಇಂದ್ರಿಯಗಳಿಗೆ ಬೇಕಾಗುವ ಪದಾರ್ಥಗಳನ್ನು ಎಡೆಬಿಡದೆ ಆಲೋಚಿಸುತ್ತಿರುವ ಮನುಷ್ಯನಿಗೆ ಅವುಗಳಲ್ಲಿಯೇ ಮನಸ್ಸು ನಾಟಿಹೋಗುವುದು. ಇದರ

ಬಯಕೆಗಳೇ ಅವನತಿ ಕಾರಣ

ಫಲವಾಗಿ ಅವುಗಳನ್ನು ಪಡೆಯಬೇಕೆಂಬ ಇಚ್ಛೆಯುಂಟಾಗುವುದು. ಬಯಕೆಗಳನ್ನು ಹೊಂದುವುದರಲ್ಲಿ ಇರಬಹುದಾದ ಹೆಚ್ಚುಕಡಿಮೆಗಳಿಂದ ಮನಸ್ಸಿನ ಭಾವವು ಬದಲಾಯಿಸಿ
ಇಚ್ಛೆಯೇ ಸಿಟ್ಟಾಗಿ ಪರಿಣಮಿಸುವುದು. ಸಿಟ್ಟಿನಿಂದಲೇ ವಿವೇಕವು ೨ ೬೨
ಅಳಿದು ಕ್ರಮತಪ್ಪಿ ನಡೆಯುವಿಕೆಯುಂಟಾಗುತ್ತದೆ. ಈ ಕ್ರಮತಪ್ಪಿ ನಡೆ
ಯುವಿಕೆಯಿಂದ ಭ್ರಾಂತಿಯುಂಟಾಗುತ್ತದೆ. ಬುದ್ಧಿಭ್ರಮಣೆಯ ಫಲವಾಗಿ
ಕುಗ್ಗಿಹೋದ ಜ್ಞಾಪಕಶಕ್ತಿಯೇ ಮೊದಲಾದ ಮನಸ್ಸಿನ ವ್ಯಾಪಾರಗಳಿಂದ
ಒಳ್ಳೆಯದು ಕೆಟ್ಟದ್ದು ಎಂಬಿವುಗಳನ್ನು ವಿಮರ್ಶಿಸಿ ತಿಳಿಯುವ ನಿರ್ಣಯ
ಶಕ್ತಿಯು ಹಾಳಾಗಿಹೋಗಿ ಕೊನೆಗೆ ಕೇಡುಂಟಾಗುತ್ತದೆ. ರಜೋಗುಣ
ದಿಂದುಂಟಾಗುವ ಈ ಆಸೆಯು, ಈ ಮುನಿಸು, ದೊಡ್ಡ ದೊಡ್ಡದಾದ ೨ ೬೩
ಪಾಪಕೆಲಸಗಳನ್ನು ಮಾಡುವುದು ಮತ್ತು ಎಷ್ಟೆಷ್ಟು ಹೆಚ್ಚಾಗಿ ವಿಷಯ
ಪದಾರ್ಥಗಳನ್ನು ಅನುಭವಿಸಿದರೂ ತೃಪ್ತಿಯನ್ನು ಹೊಂದದಿರುವುದು; ಇವೇ–
ನಾನುವಿನ ಅರಿವಿಗೆ ಶತ್ರುಗಳೆಂದು ತಿಳಿಯಬೇಕು. ಹೊಗೆಯು ೩ ೩೭

ಬೆಂಕಿಯನ್ನು ಸುತ್ತಿಕೊಳ್ಳುವಂತೆ, ಕೊಳೆಯು ಕನ್ನಡಿಯ ಮೇಲೆ ಹರಡಿಕೊಳ್ಳುವಂತೆ ಮತ್ತು ಮಾಂಸದಪೊರೆಯ ಚೀಲವು ಗರ್ಭವನ್ನು ಸುತ್ತಲೂ ಆವರಿಸಿಕೊಂಡಿರುವಂತೆ–ಆಸೆಯು ಜಗತ್ತನ್ನೇ ಆವರಿಸಿಕೊಂಡಿರುವುದು. ವಿವಿಧ ೩ ೩೮
ರೂಪುಗಳುಳ್ಳ, ಇಷ್ಟವನ್ನು ಪೂರ್ತಿಗೊಳಿಸಲು ಕಷ್ಟವಾದ, ಬೆಂಕಿಯಂತಿರುವ ಮತ್ತು ನಾನುವಿನ ಅರಿವುಳ್ಳವನಿಗೆ ಅಥವಾ ನಾನುವಿನ ಅರಿವನ್ನು ಹೊಂದಬೇಕೆಂದಿರುವವನಿಗೆ ಎಡೆಬಿಡದ ಶತ್ರುವಾದ–ಈ ಆಸೆಯಿಂದ ಜ್ಞಾನವು ಮುಚ್ಚಲ್ಪಟ್ಟಿರುವುದು. ಇಂದ್ರಿಯಗಳು, ಮನಸ್ಸು ಮತ್ತು ಬುದ್ಧಿ ಇವುಗಳು ೩ ೩೯
ಆಸೆಯ ವಾಸಸ್ಥಾನಗಳೆಂದು ಹೇಳಲ್ಪಟ್ಟಿದೆ. ಜ್ಞಾನವನ್ನು ಬಳಸಿ ಕವಿದು

ಆಸೆಯ ಆಶ್ರಯಸ್ಥಾನಗಳು

ಕೊಂಡು ಈ ಆಸೆಯು ಇಂದ್ರಿಯ, ಮನಸ್ಸು ಮತ್ತು ಬುದ್ಧಿಗಳ ಮೂಲಕ ದೇಹಿಯಾದ ನಾನುವನ್ನು ಮೋಹಗೊಳಿಸುತ್ತದೆ. ಬಯಕೆ ಮತ್ತು ಹಗೆತನಗಳಿಂದ ಉಂಟಾದ ೩ ೪೦
ಭ್ರಮೆಯನ್ನುಂಟುಮಾಡುವ ಜೋಡಿವರ್ತನೆಗಳಿಂದ (ದ್ವಂದ್ವಗಳಿಂದ) ಸಮಸ್ತ ಪ್ರಾಣಿಗಳೂ ಸೃಷ್ಟಿಕಾಲದಲ್ಲಿ ಪೂರ್ಣಭ್ರಮೆಯನ್ನು ಹೊಂದುತ್ತವೆ. ೭ ೨೭
ಬಯಕೆ, ಸಿಟ್ಟು ಮತ್ತು ಅತಿಯಾಸೆಗಳೆಂಬದಾಗಿ ನರಕದ (ಕೀಳುಸ್ಥಿತಿಯ)

ನರಕದ ಬಾಗಿಲುಗಳು

ಬಾಗಿಲುಗಳು ಮೂರುವಿಧವಾಗಿವೆ. ಇವು ದೇಹಿಯಾದ ನಾನುವು ಕೇಡನ್ನು ಅನುಭವಿಸುವಂತೆ ಮಾಡುವುವು. ೧೬ ೨೧

ನರಕಕ್ಕೆ ಬಾಗಿಲುಗಳಾದ ಈ ಮೂರು ಕೆಟ್ಟಗುಣಗಳಿಂದ ಬಿಡಲ್ಪಟ್ಟ ಮನುಷ್ಯನು ನಾನುವಿನ ಸ್ವರೂಪಜ್ಞಾನ ಸಾಧಕಗಳಾದ ಒಳ್ಳೆಯ ಕೆಲಸಗಳನ್ನು

ಶ್ರೇಯಸ್ಸಿಗೆ ದಾರಿ

ಮಾಡಿ, ಅನಂತರ ಶಾಶ್ವತಸುಖವನ್ನೀಯುವ ಜ್ಞಾನನಿಷ್ಠೆಯನ್ನು ಹೊಂದುತ್ತಾನೆ. ಯಾರು ನಾನುವಿನಿಂದ ೧೬ ೨೨
(ನಾನುವಿನ ಜ್ಞಾನದಿಂದ) ನಾನುವನ್ನು ಗೆಲ್ಲುತ್ತಾರೋ (ನಾನುವಿನ ಸ್ವರೂಪ ಜ್ಞಾನಾನಂದವನ್ನು ಅನುಭವಿಸುವರೋ) ಆ ನಾನುವಿನ ನಾಮರೂಪಧಾರಿಗಳಾದವರಿಗೆ ನಾನುವೇ ನೆಂಟನು. ನಾನುವನ್ನು ಅಥವಾ ನಾನುವಿನ ಜ್ಞಾನವನ್ನು ದೂರೀಕರಿಸುವವರ ಹಗೆತನದ ವಿಷಯದಲ್ಲಿ ನಾನುವೂ ಸಹ ಶತ್ರುವಿನಂತೆಯೇ ಇರಬೇಕು. ಇಂದ್ರಿಯಗಳು ಪಂಚಭೂತತತ್ವಗಳಿಗಿಂತಲೂ ೬ ೬
ಮೇಲು. ಇಂದ್ರಿಯಗಳಿಗಿಂತ ಮನಸ್ಸು ಶ್ರೇಷ್ಠವು. ಮನಸ್ಸಿಗೆ ಮೇಲಾಗಿರುವುದು ಬುದ್ಧಿಯು. ಬುದ್ಧಿಗಿಂತಲೂ ಮೇಲಾಗಿರುವುದು 'ತತ್' ಎಂಬ ಶಬ್ದ

ತತ್ವಗಳ ಸೋಪಾನ– ಬುದ್ಧಿಯ ಶ್ರೇಷ್ಠತೆ

ದಿಂದ ನಿರೂಪಿತವಾಗಿರುವ 'ನಾನು'. ಈ ಜಗತ್ತಿನಲ್ಲಿ ೩ ೪೨
"ನಾನು ಎಂಬುದಾವುದು? ನಾನು ಅಲ್ಲದ್ದು ಯಾವುದು?" ಎಂಬುದನ್ನು ವಿಮರ್ಶಿಸಿ ನಿರ್ಣಯಿಸುವ ಶಕ್ತಿ ಎಂಬ ಬುದ್ಧಿಯೊಂದೇ ಮುಖ್ಯವಾದುದು. ಇಂದ್ರಿಯನಿಗ್ರಹಾದಿಗಳಿಲ್ಲದಿರುವುದರಿಂದ ವಿವೇಕವು ಹೋಗಿ ನಿರ್ಣಯಶಕ್ತಿಯಿಲ್ಲದವರಿಗೆ 'ಬುದ್ಧಿ' ಎಂದು ಕರೆಯಲ್ಪಡುವ

ವೃತ್ತಿಗಳು ಕೊನೆಯಿಲ್ಲದಷ್ಟು ಬಹುವಿಧಗಳಾಗಿರುವುವು. ಬ್ರಾಹ್ಮಣಧರ್ಮ ೨ ೪೧
ಪ್ರತಿಪಾದಕಗಳಾದ ವೇದಗಳೆಂಬ ಶಬ್ದರಾಶಿಗಳ ಮೇಲಿನ ಚರ್ಚೆಯಲ್ಲಿ ಆಸ
ಕ್ತರೂ, ಶಬ್ದಗಳಿಗೆ ಉಪರಿಪ್ಲವವಾದ ಅರ್ಥಗಳು ಹೊರತು, ಬೇರೆ ಯಾವುದೂ
ತತ್ವಾರ್ಥವಿಲ್ಲವೆಂದು ಬುದ್ಧಿಪರಿಪಾಕವಿಲ್ಲದೆ ವಾದಮಾಡುವವರೂ; ಇಚ್ಛೆಯೇ
ಪ್ರಧಾನವಾಗಿ ಉಳ್ಳವರಾಗಿ ಸಾಧಾರಣ ವಿಷಯ ಸುಖಾನುಭವವನ್ನುಂಟು
ಮಾಡುವ ಸನ್ನಿವೇಶ (ಸ್ವರ್ಗ) ಗಳಲ್ಲಿ ಮನಸ್ಸು ಕೊಡುತ್ತಾರೆ; ಹುಟ್ಟುವುದು
ಮೊದಲಾದ ಕೆಲಸದ ಫಲಗಳನ್ನೇ ಕೊಡುವುದಾಗಿಯೂ, ಅತ್ಯಂತ ಆಡಂಬರ
ಗಳಿಂದ ತುಂಬಿದ್ದಾಗಿಯೂ ಇರುವ, ಪ್ರಾಪಂಚಿಕವಸ್ತುಗಳ ಭೋಗಗಳನ್ನೂ
ಐಶ್ವರ್ಯವನ್ನೂ ಪಡೆಯುವ ದಾರಿಯನ್ನು ಕುರಿತು ಅರಳಿದ ಹೂವುಗಳಂತೆ
ಕೋಮಲವಾದ ಮತ್ತು ಮನಸ್ಸನ್ನು ಸೆಳೆಯುವ ಮಾತುಗಳನ್ನು ಆಡುತ್ತಾರೆ;
ಐಹಿಕಭೋಗಪ್ರಾಪ್ತಿಗೆ ಸಂಬಂಧಪಟ್ಟ ಇಂತಹ ಉಪನ್ಯಾಸಾದಿಗಳಿಗೆ ಮನ
ಸೋತು, ಭೋಗ ಮತ್ತು ಐಶ್ವರ್ಯಗಳಲ್ಲಿ ನಾಟಿದ ಮನಸ್ಸುಳ್ಳವರಿಗೆ ನಿರ್ಣಯಶಕ್ತಿ
ರೂಪವಾದ ಬುದ್ಧಿಯು ಸಮಸ್ಥಿತಿ (ಸಮಾಧಿ) ಯಲ್ಲಿ ನಿಲ್ಲಲಾರದು. ೨ ೪೨,
ಬುದ್ಧಿಯು ಭ್ರಾಂತಿಯೆಂಬ ಕಲ್ಮಷವನ್ನು ತೊಳೆದುಹಾಕಿದಾಗ ತತ್ತ್ವ ೪೩, ೪೪
ನಿರ್ಣಯದ ವಿಷಯದಲ್ಲಿ ಮುಂದೆ ಕೇಳಬೇಕೆಂದಿರುವ ಮತ್ತು ಅದುವರೆಗೆ
ಕೇಳಿದ ಉಪದೇಶವಾಕ್ಯಗಳ ವಿಚಾರದಲ್ಲಿ ವೈರಾಗ್ಯವೂ, ಉದಾಸೀನಭಾವವೂ
ಉಂಟಾಗುವುವು. ೨ ೫೨

ಬುಡವು ಮೇಲಾಗಿಯೂ, ಕೊಂಬೆಗಳು ಕೆಳಮುಖವಾಗಿಯೂ ಇರುವ
ಅಳಿವಿಲ್ಲದುದನ್ನು ಅಶ್ವತ್ಥ * ವೆಂದು ಕರೆಯುತ್ತಾರೆ. ಬ್ರಾಹ್ಮಣಧರ್ಮ ಪ್ರತಿ
ಪಾದಕಗಳಾದ ಶಬ್ದರಾಶಿಗಳೇ ಅಶ್ವತ್ಥದ ಪರಿಣಾಮ ೧೫ ೧
ರೂಪವಾದ ಎಲೆಗಳು. ಅಶ್ವತ್ಥದ ಕೊಂಬೆಗಳು ಕೆಳಗೆ

ಅಶ್ವತ್ಥ-ನರ-ನಾಡಿ

ಮತ್ತು ಮೇಲೆ ಹೊರಡುವುವು. ಗುಣಗಳಿಂದ (ಸತ್ವರಜಸ್ತಮಾದಿಗಳಿಂದ) ಗುಣ
ಗಳನ್ನೆ ಅಂದರೆ ಹುರಿಗಳಂತೆ ಬೆಳೆಯುವುವು. ವಿಷಯಗಳೆಂಬ ಚಿಗುರುಗಳುಳ್ಳವು.
ಬೇರುಗಳು ಕೆಳಮುಖವಾಗಿ ಹಬ್ಬುವುವು. ಹಿಂದು ಹಿಂದಿನ ಕೆಲಸದ ಫಲದ ವಾಸನೆ
ಗನುಸಾರವಾಗಿ ಈ ಮಾನವ ಪ್ರಪಂಚದಲ್ಲಿ ಕೆಲಸವನ್ನು ಮಾಡತೊಡಗಲು
ಸಹಾಯಮಾಡುವುವು. † ಈ ಅಶ್ವತ್ಥಕ್ಕೆ ಆಕಾರವಿಲ್ಲ. ಬುಡವಿಲ್ಲ. ೧೫ ೨

---

* ಪುಟ ೧೨೩ ಟಿಪ್ಪಣಿ.

† ಜಗತ್ತಿಗೆ ದೇಹವೆಂಬ ಯಂತ್ರವೇ ಮೂಲವಾದುದು. ದೇಹದಲ್ಲಿ ಪ್ರಧಾನವಾದುದು, ಮಿದುಳಿರುವ ಉತ್ತಮಾಂಗವು. ಪುಣ್ಯ ಪಾಪ ಕೆಲಸಗಳೆಲ್ಲ ನಡೆಯಲು ಸಹಾಯವಾಗುವ ಈ

ತುದಿಯಿಲ್ಲ ಮತ್ತು ಒಂದು ಗೊತ್ತಾದ ನೆಲೆಯಿಲ್ಲ; § ಮೂಲವು ಮಾತ್ರ ಬಲ
ವಾಗಿ ನಿಲ್ಲಿಸಲ್ಪಟ್ಟಿರುವ ಈ ಅಶ್ವತ್ಥ ವೃಕ್ಷವನ್ನು ತಿಳಿದವನು, ಬ್ರಾಹ್ಮಣ ೧೫ ೩
ಧರ್ಮ ಪ್ರತಿಪಾದಕಗಳಾದ ಶಬ್ದ ರಾ ಶಿ ಗ ಳ ರಹಸ್ಯವನ್ನು ತಿಳಿದವನಾಗು
ತ್ತಾನೆ. ಈ ಅಶ್ವತ್ಥವನ್ನು 'ಅಸಂಗ'—'ಬೆರೆಯದಿರುವಿಕೆ' * ಎಂಬ ೧೫ ೧
ಆಯುಧದಿಂದ ಮೊದಲು ಭೇದಿಸಬೇಕು. ಅನಂತರ † ಯಾವ ಸ್ಥಾನ ೧೫ ೩
ವನ್ನು ಸೇರಿದರೆ ಹಿಂದಿರುಗಿಬರಬೇಕಾಗಿರುವುದಿಲ್ಲವೋ ಅಂತಹ ಶಾಶ್ವತ ಸುಖ
ಸ್ಥಾನವನ್ನು ಹುಡುಕಿ, ಶೋಧಿಸಿ ಪಡೆಯಲು ಯತ್ನಿಸಬೇಕು. ೧೫ ೪

ಕೆಲಸದ ಫಲವನ್ನು ಬಿಟ್ಟು ಶಾಶ್ವತ ಸುಖಲಾಭದಲ್ಲಿ ಮನಸ್ಸನ್ನು ನಿಲ್ಲಿಸಿದರೆ (ಸತ್ವಶುದ್ಧಿ, ನಾಡೀಶುದ್ಧಿಯಾಗಿ) ಸ್ಥಿರವಾದ ಶಾಂತಿಯನ್ನು ಪಡೆಯುವನು. ಹಾಗೆ ಶಾಶ್ವತ ಸುಖಲಾಭದ ಮೇಲೆ ಮನಸ್ಸಿಡದೆ, ಕೇವಲ ಇಂದ್ರಿಯಗಳ

ಅಸಂಗ-ಯೋಗ

ಬಯಕೆಗೆ ಒಳಪಟ್ಟು ಕೆಲಸದ ಫಲದ ಮೇಲೆ ಮನಸ್ಸಿ
ಟ್ಟರೆ, ಕೆಲಸದ ಫಲಕ್ಕೆ ಕಟ್ಟುಬೀಳಬೇಕಾಗುವುದು. ೫ ೧೨

ಬುದ್ಧಿಯನ್ನು ಆತ್ಮಲಾಭದಲ್ಲಿ ನಿಲ್ಲಿಸಿ ಕೆಲಸ ಮಾಡುವುದು ಉತ್ಕೃಷ್ಟಮಾರ್ಗವು. ಇದರ ದೃಷ್ಟಿಯಿಂದ ಫಲದ ಮೇಲೆ ಮನಸ್ಸಿಟ್ಟು ಮಾಡುವ ಕೆಲಸವು ತುಂಬಾ ಕೀಳಾದುದು. ಫಲದ ಕಾರಣದಿಂದ ಕೆಲಸಕ್ಕೆ ತೊಡಗುವವರು ಅಲ್ಪರು, ನೀಚರು ಎಂದೆಣಿಸಲ್ಪಡುವರು. ಆದುದರಿಂದ ಫಲಾಪೇಕ್ಷೆಯನ್ನು ಬಿಟ್ಟು, ಆತ್ಮಲಾಭವನ್ನು ದೊರಕಿಸುವ ನಿರ್ಣಯಶಕ್ತಿರೂಪವಾದ ಬುದ್ಧಿಯನ್ನು ಆಶ್ರಯಿಸಬೇಕು. ೨ ೪೯

ಪ್ರಪಂಚದಲ್ಲಿ ಕಾಣುವ ಪ್ರಕೃತಿವ್ಯಾಪಾರಗಳನ್ನು ಪರಿಶೀಲಿಸಿ ನೋಡಿದರೆ ಸಾಮಾನ್ಯವಾಗಿ—ಮನುಷ್ಯನಿಗೆ ಕೆಲಸಕ್ಕೆ ತೊಡಗಲು (ಅಧಿಕಾರ) ಅವಕಾಶ

ಮನುಷ್ಯರು ಕೆಲಸದ ಫಲಕ್ಕೆ ಅಧಿಕಾರಿಗಳಲ್ಲ

ವಿದೆಯೇ ಹೊರತು, ಅದರ ಫಲದ ಮೇಲಿನ ಅಧಿಕಾರವೆಂದಿಗೂ ಇರುವುದಿಲ್ಲ. ಮನುಷ್ಯರು ಮಾಡುವ ಕೆಲಸದ ಫಲಕ್ಕೆ ಅವರೇ ಕಾರಣರಾಗಬಾರದು. * ಮತ್ತು ಕೆಲಸ ಮಾಡದಿರುವಿಕೆಯಲ್ಲಿ ಮನಸ್ಸು ಕೊಡಬಾರದು. ೨ ೪೭

ನರಮಂಡಲವನ್ನು ಶುದ್ಧಿಗೊಳಿಸಿ ಪುಣ್ಯ ಪಾಪ ಕೆಲಸಗಳ ಫಲದ ಬಾಧೆಯು ದೇಹಿಗೆ ಇಲ್ಲದಿರುವಂತೆ ಮಾಡುವ ವಿಚಾರವನ್ನು ಅಂದರೆ ಯೋಗವನ್ನು ವಿವರಿಸುವ ಸಂದರ್ಭದಲ್ಲಿ ಅಶ್ವತ್ಥ (Spinalcord) ವೆಂಬ ನರಮಂಡಲದ ವಿಚಾರವು ಇಲ್ಲಿ ಹೊಗಳಲ್ಪಟ್ಟಿರುವುದು.

§ ಬಹು ಸೂಕ್ಷ್ಮವಾಗಿರುವುದರಿಂದ ಕಣ್ಣಿಗೆ ಕಾಣಲಾರದು ಎಂಬುದರಲ್ಲಿ ತಾತ್ಪರ್ಯ.

* ಇದೇ ನಾಡೀ ಶುದ್ಧಿಗೆ ಮೂಲ ಕಾರಣ.

† ಇದು ನರಸಿಂಹಾವತಾರದ ಗುಟ್ಟು, ಇದರಿಂದ ಭೇದಜ್ಞಾನವು ನಾಶವಾಗುವುದು. ಇದೆಲ್ಲವೂ ಅವತಾರ ರಹಸ್ಯದಲ್ಲಿ ಹೇಳಲ್ಪಡುವುವು.

* ಪ್ರಕೃತಿಯ ಗುಣಗಳಿಂದ ಬದ್ಧನಾದ ದೇಹಿಯ ದೇಹದ ನರಮಂಡಲದ ವ್ಯಾಪಾರಗಳು ಸದಾ ನಡೆಯುತ್ತಲೇ ಇರುತ್ತವೆ. ಪ್ರಕೃತಿಯಿಂದ ಆಗುವ ಕೆಲಸಗಳ ಫಲಕ್ಕೆ ಪ್ರಕೃತಿಯೇ ಕಾರಣವು.

ಕೆಲಸವೆಂದರೇನು? ಕೆಲಸವಲ್ಲದ್ದು ಅಥವಾ ಕೆಲಸವಿಲ್ಲದಿರುವಿಕೆ ಯಾವುದು?
ಎಂಬುದನ್ನು ತಿಳಿಯಲು ಪಂಡಿತರಿಗೂ ಕಷ್ಟ; ಅವರೂ ಸಹ ಭ್ರಾಂತರಾಗಿರು
ತ್ತಾರೆ. ಆಯಾ ಸನ್ನಿವೇಶ ಸಂದರ್ಭಗಳಿಗನುಗುಣವಾಗಿ ಕೆಲಸದಲ್ಲಿ ಕೆಲಸ ೪ ೧೭
ವಿಲ್ಲದಿರುವಿಕೆಯನ್ನೂ ನೋಡಿ ತಿಳಿಯಬೇಕು. ಕೆಲಸವಿಲ್ಲದಿರುವಿಕೆಯಲ್ಲಿ ಕೆಲಸ
ವನ್ನು ಸಹ ನೋಡಿ ಗೊತ್ತುಮಾಡಿಕೊಳ್ಳಬೇಕು. ಹೀಗೆ ಕರ್ಮದ ರಹಸ್ಯವನ್ನು
ತಿಳಿಯುವವನೇ-ಸಾಮಾನ್ಯ ಜನಗಳ ಮಧ್ಯೆ ಬುದ್ಧಿಶಾಲಿಯೂ; ಕೆಲಸದ
ಗುಟ್ಟನ್ನು ತಿಳಿದು, ದೋಷಗಳಿಗೆ ಇಂಬುಗೊಡದೆ, ಕೆಲಸಗಳನ್ನು ಪೂರ್ಣವಾಗಿ,
ನಿರ್ದೋಷವಾಗಿ ಮಾಡುವವನೂ ಆಗುತ್ತಾನೆ. ಆತ್ಮಜ್ಞಾನಕ್ಕೆ ಮನ ೪ ೧೮
ಗೊಟ್ಟಿರುವ (ಬುದ್ಧಿಯೋಗದ) ವಿವೇಕಶಾಲಿಗಳು ಕೆಲಸಗಳಿಂದ ಉಂಟಾಗುವ

ಅಸಂಗದಿಂದ ಶಾಶ್ವತ ಸುಖಪ್ರಾಪ್ತಿ

ಫಲವನ್ನು ತೊರೆದು ಹುಟ್ಟುಸಾವುಗಳ ಸೆರೆಯಿಂದ ಬಿಡುಗಡೆ
ಹೊಂದಿ ಉತ್ತಮವಾದ (ಅಜ್ಞಾನರೋಗ ರಹಿತವಾದ) ಪದವಿ
ಯನ್ನು ಹೊಂದುತ್ತಾರೆ. ಆತ್ಮಲಾಭವನ್ನುಂಟು ೨ ೫೧
ಮಾಡುವ ಬುದ್ಧಿಯಿಂದ ಕೂಡಿದವನಾಗಿ ಕೆಲಸಗಳ ಕಟ್ಟುಗಳಿಂದ ತಪ್ಪಿಸಿಕೊಳ್ಳ
ಬೇಕು. ೨ ೩೯

ಯೋಗಕ್ಕೆ (ಆತ್ಮಲಾಭಪ್ರಾಪ್ತಿಗೆ) ತೊಡಗಿದವನ ಕೆಲಸಗಳು ಪೂರ್ತಿ
ಯಾಗಿ ನೆರವೇರದೆ ಇದ್ದಾಗ್ಗೂ ಮಾಡಿದಷ್ಟಕ್ಕೆ ಫಲವಿಲ್ಲದಿಲ್ಲ; ಮತ್ತು ಮಾಡ

ಯೋಗಾರಂಭಕ್ಕೆ ಯಾರೂ ಹಿಂದು ಮುಂದು ನೋಡ ಬೇಕಾಗಿಲ್ಲ

ಬಾರದ ಕೆಲಸವನ್ನು ಮಾಡುವುದರಿಂದ ಉಂಟಾಗುವ
ದೋಷವೂ ಇರುವುದಿಲ್ಲ. ಈ ಆತ್ಮಜ್ಞಾನ ಯೋಗಧರ್ಮದ
ಒಂದು ಸಣ್ಣ ಅಂಶವೂ ಕೂಡ, ದೊಡ್ಡ ಕಷ್ಟದಿಂದ ಪಾರು
ಮಾಡುವುದು. ಆತ್ಮಲಾಭದಲ್ಲಿ ಬೆರೆಯದವನಿಗೆ, ಆತ್ಮ ೨ ೪೦
ಸ್ವರೂಪ ವಿಚಾರದಮೇಲೆ ಅಭಿನಿವೇಶ (ಬುದ್ಧಿ) ಉಂಟಾಗುವುದಿಲ್ಲ ಮತ್ತು
ಅಂಥವನಿಗೆ ಒಳ್ಳೆಯ ಮನೋವರ್ತನೆಯೂ ಇರುವುದಿಲ್ಲ. ಮನಸ್ಸಿನಲ್ಲಿ ಸದ್ವರ್ತನೆ
ಯಿಲ್ಲದಿರುವವನಿಗೆ ಸುಖವೆಲ್ಲಿಂದ ಬಂದೀತು? ೨ ೬೬

ಯೋಗ:—

ಪಡೆಯದೇ ಇರುವ ಯಾವ ವಸ್ತುವನ್ನು ಪಡೆದರೆ ಅದಕ್ಕಿಂತಲೂ ಅತಿ
ಶಯವಾದ ಲಾಭವು ಎಂದರೆ ಪಡೆಯಬೇಕಾದ ವಸ್ತುವು ಇರುವುದಿಲ್ಲವೆಂದು

ಯೋಗಲಕ್ಷಣ

ತಿಳಿಯಲಾಗುವುದೋ ಮತ್ತು ಯಾವುದನ್ನು ಹಿಡಿದು ಆಶ್ರ
ಯಿಸಿದರೆ ಎಂತಹ ಬಲವಾದ ದುಃಖದಿಂದ(ನೋವಿನಿಂದ)ಲೂ
ಮನಸ್ಸು ಕದಲುವುದಿಲ್ಲವೋ ಅಂತಹ ಅತ್ಯುತ್ತಮವಾದ ಲಾಭವೇ ಆತ್ಮಲಾಭ
ಅಥವಾ ಯೋಗವೆನಿಸುವುದು.* ದುಃಖಸಂಯೋಗ(ದುಃಖದೊಡನೆ ಬೆರೆ ೬ ೨೨

---

* ಯೋಗ ಎಂದರೆ 'ಕೂಡುವುದು' ಎಂಬ ಶಬ್ದಾರ್ಥವೂ ಈ ಅರ್ಥಕ್ಕೇ ಹೊಂದಿ

ಯುವಿಕೆ) ದಿಂದ ಪೂರ್ಣವಾಗಿ ಬಿಡಲ್ಪಟ್ಟದ್ದೇ ಯೋಗವೆನಿಸುವುದೆಂದು ತಿಳಿಯಬೇಕು. ದೃಢವಾದ ಮತ್ತು ಸ್ವಲ್ಪವೂ ಕೊರತೆ (ಕೊರಗು) ಇಲ್ಲದ ಮನಸ್ಸಿನಿಂದ ಅಂತಹ ಯೋಗವು ಕೂಡಲ್ಪಡಬೇಕು. 'ಬ್ರಹ್ಮ' ಪದಾರ್ಥವು ದೋಷವಿಲ್ಲ ೬ ೨೩
ದುದು; ವಿಕಾರವಿಲ್ಲದುದು; ವಿಷಯಾನುಭವಗಳಲ್ಲಿ ವಿಕಾರವಿಲ್ಲದೆ ತ್ರಿಕಾಲದಲ್ಲಿಯೂ ಒಂದೇ ವಿಧವಾಗಿರುವುದರಿಂದ 'ಸಮ'ವೆಂದು ಹೇಳಲ್ಪಡುವುದು. ೫ ೧೯

"ಸಮ"="ಬ್ರಹ್ಮ"= "ನಾನು"; "ಸಮತ್ವ"="ಯೋಗ"

ಸಮವಾಗಿರುವಿಕೆ – ಸಮಸ್ಥಿತಿಯೇ – ಬ್ರಹ್ಮವೆಂದು ೨ ೪೮,
ಹೇಳಲ್ಪಡುತ್ತದೆ. ಯೋಗವು ಕೆಲಸಮಾಡುವುದರಲ್ಲಿ ಮಂಗಳಕರವು.† ೨ ೫೦

ಈ ಪ್ರಪಂಚದಲ್ಲಿ ತತ್ತ್ವಜ್ಞಾನಾಭ್ಯಾಸವೇ ಮುಖ್ಯವಾಗಿ ಉಳ್ಳ ಸಾಂಖ್ಯ ಯೋಗಿಗಳಿಗೆ ಜ್ಞಾನಯೋಗದಿಂದಲೂ, ಕೆಲಸದ ಅಭ್ಯಾಸವೇ ಪ್ರಧಾನವಾಗಿರುವ

ಯೋಗದ ಪ್ರಧಾನ ಭಾಗಗಳು ಎರಡು

ಸಾಮಾನ್ಯಯೋಗಿಗಳಿಗೆ ಕರ್ಮಯೋಗದಿಂದಲೂ ಪರಮ ಪುರುಷಾರ್ಥಸಾಧನೆಯ ಪರಿಸಮಾಪ್ತಿಯಾಗುವುದರಿಂದ ಆತ್ಮಲಾಭ (ಯೋಗ) ನಿಷ್ಠೆಯು ಎರಡು ತೆರನಾಗಿರುವುದೆಂದು ಪುರಾತನಕಾಲದಲ್ಲಿಯೇ ನಾನುವಿನಿಂದ ಹೇಳಲ್ಪಟ್ಟಿದೆ. ೩ ೩

(1) ಕೆಲವರು ತೈಲಧಾರೆಯಂತೆ ಎಡೆಬಿಡದೆ ನಾನುವಿನ ಧ್ಯಾನಮಾಡುವುದರ ಮೂಲಕ ಪೂರ್ಣ ನಾನುವನ್ನು ದೇಹಿಯುಲ್ಲಿಯೂ, ಅಥವಾ ದೇಹಿ ನಾನು

ಯೋಗಾಭ್ಯಾಸದ ಬಗೆಗಳು

ವನ್ನು ಪೂರ್ಣ ನಾನುವಿನಲ್ಲಿಯೂ ಸಾಕ್ಷಾತ್ಕರಿಸುವರು. (2) ಕೆಲವರು ಆತ್ಮಸಾಕ್ಷಾತ್ಕಾರಕ್ಕೆ ಕಾರಣವಾದ ಬುದ್ಧಿಯನ್ನುಂಟುಮಾಡುವ ಇಂದ್ರಿಯನಿಗ್ರಹವೇ ಮೊದಲಾದ ವರ್ತನೆಗಳಿಂದ ಆತ್ಮಬುದ್ಧಿಯನ್ನು ಹೊಂದಿ ಆತ್ಮಜ್ಞಾನಿಗಳಾಗುತ್ತಾರೆ. (3) ಮತ್ತೆ ಕೆಲವರು ಆತ್ಮ=ನಾನು, ಅನಾತ್ಮ=ನಾನುವಲ್ಲದ್ದು–ಎಂಬುವುಗಳನ್ನು ತತ್ತ್ವಜ್ಞಾನದ ಅಭ್ಯಾಸ ಮತ್ತು ವಿವೇಕಗಳಿಂದ ಶೋಧಿಸಿ ನಾನುವಿನಲ್ಲಿ ಮನಸ್ಸಿಟ್ಟು ನಾನುವಿನ ಅಪರೋಕ್ಷಾನುಭವವನ್ನು ಹೊಂದುವರು. (4) ಕೆಲವರು ಕುಂಡಲಿನೀ ಸಾಕ್ಷಾತ್ಕಾರಕ್ಕೆ ಸಹಾಯಕವಾದ ನಾಡೀ ಶುದ್ಧಿಯೇ ಫಲವಾಗಿ ಉಳ್ಳ ಹಠ

ಕೊಳ್ಳುವುದು. ಆದರೆ ಯೋಗ ಎಂದರೆ ಮೂಗು ಹಿಡಿದು ಕೂತುಕೊಳ್ಳುವುದು ಎಂಬದಾಗಿ ಕೆಲವು ಸಾಮಾನ್ಯ ಜನರು ತಿಳಿದಿರುವರು. ಇದನ್ನು ಅವರೇ ವಿಮರ್ಶೆಮಾಡಿ ತಿದ್ದಿಕೊಳ್ಳಬೇಕು.

† 'ಕೌಶಲ'=ಜಾಣ್ಮೆ ಎಂಬದಾಗಿ ಅರ್ಥಮಾಡಿರುತ್ತಾರೆ. ಯೋಗವು ನಿಪುಣತನವನ್ನೇನೂ ತೋರಿಸುವುದಿಲ್ಲ. ಅದು ಒಂದು ಉಪಾಯ-ವಾ-ಯುಕ್ತಿಯೂ ಅಲ್ಲ. ಕೌಶಲ=ಕ್ಷೇಮ ಎಂಬದಾಗಿ ನಿಘಂಟುಗಳಲ್ಲಿವೆ. ಈ ಅರ್ಥವೇ ಸಂದರ್ಭಗರ್ಭಿತವಾಗಿ ಸಮಂಜಸವಾಗಿದೆ.

ಯೋಗಾಭ್ಯಾಸಗಳಿಂದ ಸ್ವಸ್ವರೂಪಜ್ಞಾನಾನಂದವನ್ನು ಪಡೆಯುವರು. (5)
ಇನ್ನು ಕೆಲವರು ಕೆಲಸದ ಫಲದಮೇಲಿನ ಆಸೆಯಿಲ್ಲದೆ, ನಾನುವಿನಲ್ಲಿ ಮನಸ್ಸಿಟ್ಟು
ಮಾಡುವ ಕೆಲಸಗಳನ್ನು ನಾನುವಿನಲ್ಲೇ ಸಮರ್ಪಿಸಿ ಜ್ಞಾನನಿಷ್ಠೆ ಹೊಂದಿ–
ತನ್ಮೂಲಕ–ಸ್ವಸ್ವರೂಪಜ್ಞಾನಾನಂದವನ್ನು ಅನುಭವಿಸುವರು. (6) ೧೩ ೨೪
ಬೇರೆ ಕೆಲವರು ಸರ್ವತೋಮುಖವಾದ ನಾನುವನ್ನು ವಿಶ್ವರೂಪವೆಂಬ ಒಂದೇ
ಸಮಷ್ಟಿರೂಪದಲ್ಲಿಯೂ ಅಥವಾ ಆದಿತ್ಯಚಂದ್ರಾದಿ ವ್ಯಷ್ಟಿರೂಪದಿಂದ ಬೇರೆಬೇರೆ
ಯಾಗಿಯೂ ಜ್ಞಾನವೆಂಬ ಈಶ್ವರಾರ್ಪಣಮಾಡುವ* ಯಜ್ಞದಿಂದ ಆರಾಧಿಸಿ
ನಾನುವನ್ನು ಸೇವಿಸುತ್ತಾರೆ. (7) ಇನ್ನೊಂದು ಬಗೆಯಾಗಿ ಯಾವನು ೯ ೧೫
ಬೇರೆಬೇರೆ ವಿಧವಾದ ವರ್ತನೆಗಳನ್ನು ದೂರೀಕರಿಸಿ ಕ್ಷಣಕಾಲವೂ ಮನಸ್ಸನ್ನು
ಹೊಲಗೆಡಿಸದೆ ಭಕ್ತಿಯಿಂದ ಮನಸ್ಸನ್ನು ನಾನುವಿನಲ್ಲಿ ಎಡೆಬಿಡದೆ ನಿಲ್ಲಿಸಿ
ನಾನುವನ್ನು ಸೇವಿಸುತ್ತಾನೋ ಅವನು ಜನನಮರಣಗಳಿಗೆ ಕಾರಣಗಳಾದ ಗುಣ
ಗಳನ್ನು ದಾಟಿ (ಗೆದ್ದು) ಬ್ರಹ್ಮಭಾವವನ್ನು ಪಡೆಯಲು ಅರ್ಹನಾಗುವನು.
(8) ಇದೊಂದನ್ನೂ ಅರಿಯದವರು ತಿಳಿದವರಿಂದ ಕೇಳಿ ತಿಳಿದು ೧೪ ೨೬
ಕೊಂಡು ಅಂದರೆ ಉಪದೇಶವನ್ನು ಪಡೆದು ಈಶ್ವರಾರಾಧನೆ ಮಾಡುತ್ತಾರೆ. ಹೀಗೆ
ಕೇಳ್ಮೆಯೆಂಬ ಉಪದೇಶದಲ್ಲಿ ಶ್ರದ್ಧೆಯುಳ್ಳವರಾಗಿ ನಾನುವನ್ನು ಸೇವಿಸುವವರು
ಕೇಡನ್ನು ಹೋಗಲಾಡಿಸಿಕೊಳ್ಳುವವರಾಗಿರುತ್ತಾರೆ.† ೧೩ ೨೫

ಸಾಂಖ್ಯಕರ್ಮ ಯೋಗಗಳ ಪರಸ್ಪರ ತೋಲನ, ಕರ್ಮ ಯೋಗವೇ ಶ್ರೇಷ್ಠ

ಮಾಡುವ ಕೆಲಸಗಳನ್ನು ಪರಮಾತ್ಮನಲ್ಲಿ ಒತ್ತಟ್ಟಿಗಿಟ್ಟು ನಾನುವಿನಲ್ಲಿ ಮನಸ್ಸಿಡುವುದನ್ನು ತಿಳಿಸುವ ಸಂನ್ಯಾಸ ಯೋಗವೂ; ಮಾಡುವ ಕೆಲಸಗಳನ್ನು ಬಿಡದೆ, ಮನಸ್ಸನ್ನು ನಾನುವಿನಲ್ಲಿ ನಿಲ್ಲಿಸಿ, ಕೆಲಸಗಳ ಫಲದ ಅಪೇಕ್ಷೆಯನ್ನು ತೊರೆದು ಕೆಲಸ ಮಾಡುವುದನ್ನು ತಿಳಿಸುವ ಕರ್ಮಯೋಗವೂ–ಇವೆರಡೂ ಕಷ್ಟದಿಂದ ಬಿಡುಗಡೆ ಹೊಂದಿಸತಕ್ಕವು. (ಶುಭವನ್ನುಂಟುಮಾಡತಕ್ಕವು.) ಇವೆರಡು

---

* ವ್ರತಪೂಜಾದಿಗಳಲ್ಲಿ ಕೊನೆಯಲ್ಲಿ ಈಶ್ವರಾರ್ಪಣಮಾಡುವುದಕ್ಕೆ "ಪರಸ್ಮೈ ನಾರಾಯಣಾಯ ಇತಿ ಸಮರ್ಪಯಾಮಿ"–ಎಂಬದಾಗಿ ಪಠಿಸುವ ವಾಕ್ಯವನ್ನು ನೆನಪಿಗೆ ತಂದುಕೊಳ್ಳಬಹುದು.

† (1) ತುರೀಯಾಶ್ರಮದವರು. (2) ಆಸಹಾಯರಾದ ವೃತ್ತಿಯನ್ನವಲಂಬಿಸಿದ ಸಾಧಾರಣ ಗೃಹಸ್ಥರು. (3) ಸಾಂಖ್ಯರು. (4) ಯೋಗಿಗಳು. (5) ಶ್ರೌತಸ್ಮಾರ್ತ ಕರ್ಮಪರಾಯಣರು. (6) ಸಾಧಾರಣ ವ್ರತ ಪೂಜಾನಿರತರಾದ ಗೃಹಸ್ಥರು. (7) ಬೇರೇ ವೃತ್ತಿಯಿಲ್ಲದ ಸಂಸ್ಕಾರ ವಿಶೇಷದಿಂದ ಭಕ್ತಿಯನ್ನು ಹೊಂದಿ ಕೃತಕೃತ್ಯರಾಗುವವರು. (8) ಉಪದಿಷ್ಟರಾಗಿ ಸದ್ವೃತ್ತಿಯಲ್ಲಿದ್ದು ಆಚಾರಸಂಪನ್ನರಾಗುವವರು.

ಪದ್ಧತಿಗಳಲ್ಲಿ ಕೆಲಸಗಳನ್ನೇ ಒತ್ತಟ್ಟಿಗಿಟ್ಟು ಕೇವಲ ಜ್ಞಾನದಿಂದ ಆತ್ಮಲಾಭವನ್ನು ಹೊಂದುವುದನ್ನು ಹೇಳುವ ಪದ್ಧತಿಗಿಂತಲೂ, ಕೆಲಸಗಳನ್ನೂ ಫಲಾಪೇಕ್ಷೆ ಇಲ್ಲದೆ ಮಾಡಿ, ಆತ್ಮಲಾಭವನ್ನು ಹೊಂದುವುದನ್ನು ಹೇಳುವ ಪದ್ಧತಿಯೇ
ಶ್ರೇಷ್ಠವು. ಸಾಂಖ್ಯಯೋಗವೇ ಬೇರೆ, ಕರ್ಮಯೋಗವೇ ಬೇರೆ ಎಂಬ ೫ ೨
ದಾಗಿ ಸಾಮಾನ್ಯ ಜನರು ತಿಳಿಯುವರೇ ಹೊರತು ಪಂಡಿತರು ಎಂದಿಗೂ ಹಾಗೆ ಭಾವಿಸುವುದಿಲ್ಲ. ಈ ಎರಡು ಪದ್ಧತಿಗಳಲ್ಲಿ ಆಯಾ ಸನ್ನಿವೇಶಗಳಿಗೆ ತಕ್ಕಂತೆ ಯಾವುದೊಂದನ್ನು ನಿಷ್ಠೆಯಿಂದ ಆಶ್ರಯಿಸಿದರೂ ಎರಡು ಪದ್ಧತಿಗಳ ಅನು
ಷ್ಠಾನದಿಂದ ಉಂಟಾಗುವ ಯೋಗದ ಫಲವೇ ದೊರೆಯುವುದು. ಯಾವ ೫ ೪
ಪರಮ ಪದವಿಯನ್ನು ಸಾಂಖ್ಯಯೋಗಿಗಳು ಪಡೆಯಬಹುದೋ ಅದನ್ನೇ ಕರ್ಮಯೋಗಿಗಳೂ ಪಡೆಯುತ್ತಾರೆ. ಆದುದರಿಂದ ಸಾಂಖ್ಯ (ಆತ್ಮಜ್ಞಾನ) ಮತ್ತು ಕರ್ಮ (ಕೆಲಸ) ಯೋಗಗಳೆರಡೂ 'ಒಂದೇ' * ಎಂದು ತಿಳಿಯುವವರೇ ಯೋಗ
ಜ್ಞರೆನಿಸಿಕೊಳ್ಳುತ್ತಾರೆ. ಕೆಲಸಗಳನ್ನು ಒತ್ತಟ್ಟಿಗಿಡುವುದನ್ನು ಹೇಳುವ ೫ ೫
ಸಾಂಖ್ಯಯೋಗವೇ ಕೆಲಸಗಳನ್ನು ಫಲಾಪೇಕ್ಷೆಯಿಲ್ಲದೆ ಮಾಡುವ ಕರ್ಮಯೋಗವೆಂದು ತಿಳಿಯಬೇಕು. ಏಕೆಂದರೆ:—'ಫಲಾಪೇಕ್ಷೆಗಾಗಿ ಕೆಲಸ ಮಾಡುತ್ತೇನೆ' ಎಂಬ ಮನಸ್ಸಿನ ಸಂಕಲ್ಪವನ್ನು ಅಂದರೆ ನಿಶ್ಚಯವಾದ ಮನೋವರ್ತನೆ
ಯನ್ನು ಒತ್ತಟ್ಟಿಗಿಟ್ಟ ಹೊರತು ಕರ್ಮಯೋಗಿಯೆನಿಸುವುದಿಲ್ಲ. ೬ ೨

ಬಯಕೆಗಳನ್ನು ಈಡೇರಿಸಿಕೊಳ್ಳಲು ಮಾಡುವ ಕೆಲಸಗಳನ್ನು ಮೀಸಲಾಗಿ ಬೇರೆ ಇಡುವುದೇ 'ಒತ್ತಟ್ಟಿಗಿಡುವುದು' ಎಂದು ಪಂಡಿತರು ತಿಳಿಯುತ್ತಾರೆ.

ಒತ್ತಟ್ಟಿಗಿಡುವಿಕೆ —ತೊರೆಯುವಿಕೆ

ಎಲ್ಲಾ ವಿಧವಾದ ಕೆಲಸಗಳ ಫಲವನ್ನು ಬಿಡುವುದೇ 'ತೊರೆ
ಯುವಿಕೆ' ಎಂದು ವಿವೇಕಿಗಳು ಹೇಳುತ್ತಾರೆ. ೧೮ ೨
ಕೆಲಸವು ದೋಷದಿಂದ ಕೂಡಿದುದು. ಆದುದರಿಂದ ಕೆಲಸವು ಪೂರ್ಣವಾಗಿ ತೊರೆಯಲ್ಪಡತಕ್ಕದ್ದು ಎಂದು ಕೆಲವು ಜನ ಬುದ್ಧಿಶಾಲಿಗಳು ಆಡುತ್ತಾರೆ. ಯಜ್ಞ, ದಾನ ಮತ್ತು ತಪಸ್ಸು ಇವುಗಳಿಗೆ ಸಂಬಂಧಪಟ್ಟ ಕೆಲಸ
ಗಳನ್ನು ತೊರೆಯಕೂಡದೆಂದು ಕೆಲವರು ಹೇಳುತ್ತಾರೆ ತೊರೆಯುವಿಕೆ ೧೮ ೩
ಎಂಬ ವಿಷಯದಲ್ಲಿ ನಿರ್ಣಯವು ಈ ರೀತಿ ಇರುವುದು. ಯಜ್ಞ, ದಾನ ೧೮ ೪
ಮತ್ತು ತಪಸ್ಸಿನ ಕಾರ್ಯಗಳನ್ನು ತೊರೆಯದೆ ಮಾಡಲೇಬೇಕು. ಯಜ್ಞ, ದಾನ, ತಪಸ್ಸುಗಳೆಂಬ ಕಾರ್ಯಗಳು ಬುದ್ಧಿಶಾಲಿಗಳಾದವರಿಗೂ ಪವಿತ್ರವಾಗಿರು
ವುವು. ಕೆಲಸ ಮತ್ತು ಅದರ ಫಲ–ಇವುಗಳೊಡನೆ ಬೆರೆಯದೆ ಕೆಲಸ ೧೮ ೫

---

* ನೃಸಿಂಹಾವತಾರ ರಹಸ್ಯ.

ವನ್ನೆಸಗಬೇಕೆಂಬ ಅಭಿಪ್ರಾಯವೇ ನಾನುವಿಗೆ ಶ್ರೇಷ್ಠವು. ಆವಶ್ಯಕವಾಗಿ ೧೮ ೬
ಮಾಡಬೇಕೆಂದು ಗೊತ್ತಾಗಿರುವ ಕೆಲಸಗಳ ಒತ್ತಟ್ಟಗಿಡುವಿಕೆಯು ಸಮಂಜಸ
ವಾಗಿರುವುದಿಲ್ಲ. ಬೇಕಿಲ್ಲದುದು, ಬೇಕಾದುದು ಮತ್ತು ಇವೆರಡು ಬಗೆಗಳ ೧೮ ೭
ಬೆರಕೆ–ಎಂಬದಾಗಿ ಕೆಲಸದ ಫಲವು ಮೂರುತೆರನಾಗಿ ಇರುವುದು. ಈ ವಿಧ
ವಾದ ಫಲವು ಆಯಾ ಕೆಲಸಕ್ಕನುಗುಣವಾಗಿ, ತೊರೆಯದಿರುವವರಿಗೆ ಸಂಬಂಧಿ
ಸುವುದೇ ಹೊರತು, ಒತ್ತಟ್ಟಗಿಟ್ಟಿರುವವನಿಗೆ ಎಂದಿಗೂ ಅಂಟುವುದಿಲ್ಲ. ೧೮ ೧೨
ಮಾಡುವವನ ಕೆಲಸವು ಬಂಧನವನ್ನುಂಟುಮಾಡುವ ದೋಷದಿಂದ ಪೂರ್ಣ
ವಾಗಿ ಬಿಡಲ್ಪಟ್ಟಿರುವುದು. ಯೋಗದಲ್ಲಿ ತೊಡಗಿ ಮೇಲು ಮೇಲಕ್ಕೆ ೪ ೨೩
ಏರುತ್ತಿರುವ ಸಾಧಕನಿಗೆ ಕೆಲಸವು ಕಾರಣವೆನಿಸುವುದು. ಯೋಗಪ್ರಾಪ್ತಿಯಾಗಿ

ಸಾಧನೆಯಲ್ಲಿ ಕೆಲಸದ ಸ್ಥಿತಿ

ಯೋಗಾರೂಢನಾದ ಅದೇ ಸಾಧಕನಿಗೆ ಕೆಲಸದಿಂದ ವಿರಾ
ಮವು – ವಿಶ್ರಾನ್ತಿಯು – ಸ್ವಸ್ವರೂಪಜ್ಞಾನಾನಂದಾನುಭವಕ್ಕೆ
ಕಾರಣವಾಗುತ್ತದೆ. ನಾನುವಿನಲ್ಲೇ ಮನಸ್ಸನ್ನಿಟ್ಟು ನಾನು ೩
ವಿನಿಂದಲೇ ಸಮಾಧಾನ ಹೊಂದಿ, ನಾನುವಿನಲ್ಲಿಯೇ ಆನಂದವನ್ನು ಹೊಂದಿರುವ
ಮನುಷ್ಯನು ಮಾಡಬೇಕಾದ ಕೆಲಸವು ಯಾವುದೂ ಇರುವುದಿಲ್ಲ; ೩ ೧೭
ಮಾಡಿದ ಅಥವಾ ಮಾಡದೇ ಇರುವ ಕೆಲಸಗಳಿಂದ ಅಂತಹವನಿಗೆ ಏನೂ ಆಗ
ಬೇಕಾಗಿರುವುದಿಲ್ಲ. ಮತ್ತು ಯಾವ ವಿಧವಾದ ಪುರುಷಾರ್ಥಸಾಧನೆಯೂ,
ಅವನಿಗಿರುವುದಿಲ್ಲವಾಗಿ ಚರಾಚರ ವಸ್ತುಗಳ ಹಂಗಿಗೆ ಒಳಪಡಬೇಕಾಗಿರು
ವುದಿಲ್ಲ. ಈ ವಿಚಾರವು ಸಾಂಖ್ಯ (ತತ್ತ್ವಜ್ಞಾನ) ಯೋಗಕ್ಕೆ ಸಂಬಂಧ ೩ ೧೮
ಪಟ್ಟದ್ದಾಗಿ ಹೇಳಲ್ಪಟ್ಟಿದೆ. ಬುದ್ಧಿಯೋಗಕ್ಕೆ ಸಂಬಂಧಪಟ್ಟ ಈ ಕೆಳಗಿನ
ವಿಚಾರವನ್ನು ಲಾಲಿಸಬೇಕು. ೨ ೩೯

"ಕೆಲಸಗಳಾವುವೂ ನಾನುವನ್ನು ಮುಟ್ಟುವುದಿಲ್ಲ. ಕೆಲಸಗಳ ಫಲದ
ಮೇಲಿನ ಬಯಕೆಯೂ ನಾನುವಿಗೆ ಇರುವುದಿಲ್ಲ"–ಎಂಬದಾಗಿ ತಿಳಿಯುವವನು

ಬುದ್ಧಿ–ಕರ್ಮ–ಯೋಗದ ಮುಖ್ಯತತ್ತ್ವ

ಕೆಲಸಗಳಿಂದ ಕಟ್ಟಿಹಾಕಲ್ಪಡುವುದಿಲ್ಲ (ಬಂಧನಕ್ಕೊಳಗಾ
ಗುವುದಿಲ್ಲ). ಕೆಲಸದ ಫಲದೊಡನೆ ಬೆರೆಯುವುದನ್ನು ೪ ೧೪
ತೊರೆದು, ಯಾವಾಗಲೂ ತೃಪ್ತನಾಗಿ ಯಾವ ಹಂಗೂ ಇಲ್ಲ
ದವನು ಕೆಲಸದಲ್ಲಿ ತೊಡಗಿದರೂ ಅವನು ಯಾವುದನ್ನೂ ಮಾಡಿದವನಾಗುವು
ದಿಲ್ಲ. ಊಟ ಉಪಚಾರವೇ ಮೊದಲಾದ ಹಾರೈಕೆಗಳೇನೂ ಇಲ್ಲದೆ ೪ ೨೦
ನಾನುವಿನ ಪ್ರಾಪ್ತಿಗಾಗಿ ಅಂತಃಕರಣವನ್ನೂ, ಮನಸ್ಸು ಮತ್ತು ಇಂದ್ರಿಯ
ಗಳನ್ನೂ ಸ್ವಾಧೀನದಲ್ಲಿಟ್ಟುಕೊಂಡು ದಾನ† (ಕೊಡಿಗೆ) ಗಳನ್ನು ತೆಗೆದು

---

† ದಾನವೆಂದರೆ–ಫಲದ ಅಪೇಕ್ಷೆಯಿಂದ ಅಥವಾ ಕೆಲಸ ನಡೆಯಬೇಕೆಂಬ ಉದ್ದೇಶ ದಿಂದ ಕೊಡತಕ್ಕ ಸಮಸ್ತವಿಧವಾದ ವೇತನ (ಹಣ ಅಥವಾ ದ್ರವ್ಯವನ್ನು ಸಲ್ಲಿಸುವಿಕೆ) ಗಳು.

ಕೊಳ್ಳುವುದನ್ನು ಪೂರ್ಣವಾಗಿ ತೊರೆದು, ಶರೀರಕ್ಕೆ ಸಂಬಂಧಿಸಿದ ಕೆಲಸವನ್ನು
ಮಾತ್ರ ಮಾಡುವವನು ಕರ್ಮ (ಕೆಲಸ) ದ ಸೆರೆಯನ್ನು ಹೊಂದುವುದಿಲ್ಲ.* ೪ ೨೧
'ಮಾಡಿದೆನು' ಎಂಬ ಮನಸ್ಸಿನಭಾವನೆಯಿಲ್ಲದೆಯೂ ಮಾಡಿದ ಕೆಲಸವನ್ನು
ಬುದ್ಧಿಗೆ ಅಂಟಿಸಿಕೊಳ್ಳದೆಯೂ ಇರುವ ವ್ಯಕ್ತಿಯು ಈ ಪ್ರಪಂಚಗಳನ್ನೆಲ್ಲಾ
ಕೊಂದುಹಾಕಿದರೂ ಕೊಂದುಹಾಕಿದಂತೆ ಆಗುವುದಿಲ್ಲ. ಮತ್ತು ಕೆಲಸದ ಸೆರೆಗೂ
ಒಳಪಡುವುದಿಲ್ಲ.* ಯಾವನ ಕೆಲಸಗಳೆಲ್ಲವೂ ಬಯಕೆ, ಮನಸ್ಸಿನ ೧೮ ೧೭
ಸಂಕಲ್ಪ ಅಂದರೆ ಮಾಡಬೇಕೆಂಬ ಮನಸ್ಸಿನ ನಿರ್ಣಯ ಇವುಗಳಿಂದ ಬಿಡಲ್ಪಟ್ಟ
ದ್ದಾಗಿ ನಡೆಯುವುವೋ ಅವನು 'ನಾನುವಿನ ಅರಿವು' ಎಂಬ ಬೆಂಕಿಯಿಂದ
ಕೆಲಸಗಳೆಲ್ಲವನ್ನೂ ಸುಟ್ಟುಹಾಕಿರುವ ಪಂಡಿತನು–ಎಂಬದಾಗಿ ಮೇಧಾವಿಗಳು
ಹೇಳುತ್ತಾರೆ: ೪ ೧೯

ಆತ್ಮಲಾಭದ ಗೋಜು ಇಲ್ಲದೇನೇ ಬ್ರಹ್ಮ–ನಾನುವನ್ನು ಪಡೆಯುವುದ
ಕ್ಕಾಗಿ ಪ್ರಾಪಂಚಿಕವನ್ನು ಒತ್ತಟ್ಟಿಗಿಡುವುದು ಬಲು ಕಷ್ಟ. ಆತ್ಮಲಾಭವನ್ನು
ಹಿಡಿದ ಸಾಧಕನು ನಾನುವಿನ ಪ್ರಾಪ್ತಿಗಾಗಿ ಶುದ್ಧವಾದ ಆಚಾರಾದಿಗಳುಳ್ಳ ೫ ೬
ವನು; ನಾನುವನ್ನು ಉಚಿತರೀತಿಯಲ್ಲಿ ಗೆದ್ದಂತೆ ಪಡೆದಿರುವವನು; ಇಂದ್ರಿಯ
ಗಳನ್ನು ಗೆದ್ದಿರುವವನು; ನಾನುವಿನ ಪ್ರಾಪ್ತಿಗಾಗಿ ಸಮಸ್ತ ಚರಾಚರವಸ್ತು
ಗಳನ್ನೂ ನಾನುವೆಂದೇ ಭಾವಿಸುವವನು–ಇಂತಹವನು ಯಾವ ಕೆಲಸ ಮಾಡಿ
ದರೂ ಅದರಿಂದ ಲೇಪಿಸಲ್ಪಡುವುದಿಲ್ಲ.* ೫ ೭

ಸಂನ್ಯಾಸಿಯೇ ಯೋಗಿಯು; ಯೋಗಿಯೇ ಸಂನ್ಯಾಸಿಯು

ಹಗೆತನವನ್ನು ತೋರಿಸದೆಯೂ (ಹೊಂದದೆಯೂ) ಕೋರಿಕೆಗಳನ್ನಿಟ್ಟು
ಕೊಳ್ಳದೆಯೂ ಇರುವವನು ಜೀವಿತಕಾಲದಲ್ಲಿ ಯಾವ ಆಶ್ರಮ ಅಥವಾ ಸ್ಥಿತಿ
ಯಲ್ಲಿದ್ದರೂ–ಸದಾ "ಕೆಲಸಗಳನ್ನು ಒತ್ತಟ್ಟಿಗಿಟ್ಟಿರುವ
ಸಂನ್ಯಾಸಿ" ಯೆಂದು ತಿಳಿಯಬೇಕು. ಕೆಲಸದ ಫಲದ ೫ ೩
ಗೋಜನ್ನು ಬಿಟ್ಟು ಆಚರಿಸಬೇಕಾದ ಕೆಲಸಗಳನ್ನು ಎಸಗು
ವವನು ಕೆಲಸಗಳನ್ನು ಒತ್ತಟ್ಟಿಗಿಟ್ಟ ಸಂನ್ಯಾಸಿಯೂ ಮತ್ತು
ಕೆಲಸಮಾಡುವ ಯೋಗಿಯೂ ಆಗಿರುತ್ತಾನೆ. ಗೃಹಸ್ಥನ ಕೆಲಸಗಳಿಗೆ ಆಧಾರ
ವೆಂದು ಗೊತ್ತಾಗಿರುವ ಅಗ್ನಿಯು ಇಲ್ಲದವನೇ ಸಂನ್ಯಾಸಿಯೆಂದಾಗಲೀ ಅಥವಾ
ವ್ಯಾವಹಾರಿಕ ಕೆಲಸಗಳು ಇಲ್ಲದವನೇ ಸಂನ್ಯಾಸಿಯೆಂದಾಗಲೀ ತಿಳಿಯಬೇಕಾ
ಗಿಲ್ಲ. ೬ ೧

---

* ಕೃಷ್ಣಾವತಾರದ ರಹಸ್ಯ.

ಯೋಗಸಾಧನಗಳು :—

ಈ ಪ್ರಪಂಚದಲ್ಲಿ ನಾನುವಿನ ಅರಿವಿಗೆ ಸಮಾನವಾಗಿ ಪವಿತ್ರವಾಗಿರುವುದು
ಮತ್ತೊಂದಿಲ್ಲ. ಸಮಸ್ತ ವಿಧವಾದ ಪಾಪಗಳನ್ನು ಮಾಡಿದವರಲ್ಲೆಲ್ಲಾ ೪ ೩೮
ಅತಿ ನಿಕೃಷ್ಟನಾಗಿ, ಪಾಪ ಕೆಲಸಗಳನ್ನು ಮಾಡುವುದರಲ್ಲಿ ಮೊದಲನೆಯವನಾ
ದರೂ 'ಆತ್ಮಜ್ಞಾನ' ವೆಂಬ ದೋಣಿಯ ಸಹಾಯದಿಂದ

ಅರಿವು ಮತ್ತು ಅರಿವಿನ ಮಹಿಮೆ

ಸಮುದ್ರದಂತಿರುವ ಸಮಸ್ತ ವಿಧವಾದ ಪಾಪಗಳನ್ನೂ ಸಹ
ದಾಟಿ ಬಿಡಬಹುದು. (ಹೋಗಲಾಡಿಸಿಕೊಳ್ಳಬಹುದು). ೪ ೩೬
ಉರಿಯುವ ಬೆಂಕಿಯು ಸೌದೆಗಳನ್ನು ಸುಟ್ಟು ಬೂದಿ ಮಾಡುವಂತೆ, ಜ್ಞಾನ
ವೆಂಬ ಬೆಂಕಿಯು ಬಂಧನಕ್ಕೆ ಕಾರಣವಾದ, ಎಲ್ಲಾ ವಿಧವಾದ, ಹಿಂದೆ ಮಾಡಿದ
ಮತ್ತು ಈಗ ಮಾಡಿದ (ಈಗ ಮಾಡುವ) ಕೆಲಸಗಳನ್ನು ಸಹ ಸುಟ್ಟುಹಾಕುವುದು.
ನಾನುವಿನ ಈ ವಿಧವಾದ ಮಹಿಮೆಯುಳ್ಳ ಅರಿವನ್ನು, ಕಾಲವು ಪಾಕ ೪ ೩೭
ವಾದಾಗ ನಾನುವಿನಲ್ಲಿ ಯೋಗಸಿದ್ಧಿಯನ್ನು ಹೊಂದುವವನಾಗಿ ಸ್ವತಂತ್ರವಾಗಿ
ಪಡೆಯುತ್ತಾನೆ. ಸಡ್ಡೆಯುಳ್ಳವನು, ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟು ೪ ೩೮
ಕೊಂಡು ನಾನುವಿನ ಅರಿವಿನಲ್ಲಿಯೇ ಮನಸ್ಸಿಟ್ಟಿದ್ದರೆ ನಾನುವಿನ ಅರಿವನ್ನು
ಪಡೆಯುತ್ತಾನೆ. ಹೀಗೆ ನಾನುವಿನಿಂದ ನಾನುವಿನ ವಿಷಯದಲ್ಲಿ ತಿಳಿ ೪ ೩೯
ವಳಿಕೆಯ ಮರೆಯು ತೊಲಗಿಹೋಗಿರುವವರಿಗೆ ಸೂರ್ಯನಂತಿರುವ ಅರಿವು,
ಪರವಸ್ತುವಾದ 'ತತ್' ಎಂದು ಹೇಳಲ್ಪಡುವ ನಾನುವನ್ನು ಬೆಳಗಿ ತೋರಿ
ಸುತ್ತದೆ. ಆತ್ಮಜ್ಞಾನವನ್ನು ಪಡೆದ ಕೂಡಲೇ ಅತಿಶಯವಾದ ಶಾಂತಿ ೫ ೧೬
ಯುಂಟಾಗುವುದು. ಸಂಸ್ಕೃತಿಗನುಗುಣವಾಗಿ ಅನೇಕ ಸಲ ಹುಟ್ಟು ೪ ೩೯
ಸಾವುಗಳನ್ನು ಅನುಭವಿಸಿದ ಮೇಲೆ ಕೊನೆಗೆ, ನಾನುವಿನ ಅರಿವುಳ್ಳವನು, ನಾನು
ವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ. 'ಸರ್ವವೂ ವಾಸುದೇವನಿಂದ ತುಂಬಿ
ಕೊಂಡಿದೆ' ಎಂದು ಭಾವಿಸುವ, ನಾನುವಿನ ಅಪರೋಕ್ಷಾನುಭವಕ್ಕೆ ಯತ್ನಿಸುವು
ದೆಂಬ ಮಹಿಮೆಯುಳ್ಳವನು ಕೇವಲ ವಿರಳ. ಕ್ಷೇಮ, ಅಂಜಿಕೆ ಮತ್ತು ೭ ೧೯
ಸಿಟ್ಟುಗಳನ್ನು ತೊಡೆದು ಹಾಕಿ, ನಾನುವಿನಿಂದ (ನಾನುವಿನ ಅರಿವಿನಿಂದ)
ತುಂಬಲ್ಪಟ್ಟವರಾಗಿ ನಾನುವನ್ನೇ ಆಶ್ರಯಮಾಡುವ ಜನರನೇಕರು ಜ್ಞಾನವೆಂಬ
ತಪಸ್ಸಿನಿಂದ ಶರೀರಶುದ್ಧಿ, ನಾಡೀಶುದ್ಧ್ಯಾದಿಗಳನ್ನು ಹೊಂದಿ ನಾನುವಿನ ಸ್ಥಿತಿ
ಯನ್ನೇ ಹೊಂದಿದವರಾಗಿರುತ್ತಾರೆ. ೪ ೧೦

ಪ್ರಾಣಿಗಳ ವ್ಯಕ್ತಿತ್ವಕ್ಕೆ ತಕ್ಕಂತೆ ಶ್ರದ್ಧೆಯೆಂಬ ಅಕ್ಕರೆಯೊಡಗೂಡಿದ
ನಂಬಿಕೆಯು ಜನ್ಮವೆತ್ತಿದ ಎಲ್ಲಾ ಪ್ರಾಣಿಗಳಲ್ಲಿಯೂ ಇರುವುದು. ದೇಹಿಯಾದ
ನಾನುವು ಅಕ್ಕರೆ ಮತ್ತು ನಂಬಿಕೆಗಳಿಂದ ತುಂಬಿದವನು.

ಶ್ರದ್ಧೆ, ಭಕ್ತಿ ಮತ್ತು ಅವುಗಳ ಮಹಿಮೆ

ಆದುದರಿಂದ ನಾನುವಿನಲ್ಲಿ ನಂಬಿಕೆಯಿಂದ ವರ್ತಿಸುವವನು
ನಾನುವೇ ಆಗುತ್ತಾನೆ. ಯಾವನಲ್ಲಿ ಚರಾಚರವಸ್ತು ೧೭ ೩

ಗಳೆಲ್ಲವೂ ಅಡಕವಾಗಿ ಇವೆಯೋ, ಯಾವನು ಎಲ್ಲವನ್ನೂ ವ್ಯಾಪಿಸಿ ಹರಡಿಕೊಂಡು ತುಂಬಿಕೊಂಡು ಇರುತ್ತಾನೆಯೋ ಅಂತಹ ಪರಮಪುರುಷನೆನಿಸುವ ನಾನುವು ಬೇರೇಕಡೆ ತಿರುಗಿಸಲ್ಪಡದಿರುವ ಅಕ್ಕರೆ (ಭಕ್ತಿ)* ಯಿಂದಲೇ ಪಡೆಯಲ್ಪಡತಕ್ಕವನು. ಬೇರೆಕಡೆ ಇಡದೆ, ನಾನುವಿನಲ್ಲಿ ಮಾತ್ರವೇ ನಿಲ್ಲಿಸಿರುವ ೮ ೨೨
ಭಕ್ತಿಯಿಂದ ವಿಶ್ವರೂಪನಾದ ನಾನುವನ್ನು ತಿಳಿಯುವುದಕ್ಕೂ, ವಿಶ್ವರೂಪದರ್ಶನ ಮಾಡುವುದಕ್ಕೂ ಮತ್ತು ತತ್ವವನ್ನು ಪರಿಶೋಧಿಸಿ ಹುಡುಕಿ ಮುಖ್ಯತತ್ತ್ವವಾದ ನಾನುವನ್ನು ಕಂಡುಹಿಡಿದು ಅಲ್ಲಿಯೇ ಐಕ್ಯವಾಗುವುದಕ್ಕೂ ವಿಶ್ವರೂಪದ ನಾನುವು ಸಾಧ್ಯನು. ತತ್ತ್ವಶಾಸ್ತ್ರದ ಮರ್ಯಾದೆಯಂತೆ ನಾನುವು ಎಷ್ಟು ೧೧ ೫೪
ರವನು? ಎಂಬದಾಗಿ ನಾನುವಿನ ವಿಷಯಗಳನ್ನು ಭಕ್ತಿಯಿಂದ ಯಾವನು ಗೊತ್ತುಮಾಡಿಕೊಳ್ಳುತ್ತಾನೋ† ಅವನು, ತತ್ತ್ವಶಾಸ್ತ್ರಾನುಗುಣವಾಗಿ ನಾನುವನ್ನು ಸಾಕ್ಷಾತ್ಕರಿಸಿದ ನಂತರ ನಾನುವಿನಲ್ಲೇ ಸೇರಿಹೋಗಬಹುದು. ೧೮ ೫೫

ಯಾರಿಂದ ಚರಾಚರ ವಸ್ತುಗಳು ಕೆಲಸಮಾಡಲು ತೊಡಗುವುವೋ ಯಾರಿಂದ ಇದೆಲ್ಲವೂ ತುಂಬಿ ಹರಡಲ್ಪಟ್ಟಿದೆಯೋ ಆ ನಾನುವನ್ನು ಅವನವನ

ಗೆಯ್ಮೆ_ಕೆಲಸ

ಕೆಲಸವೆಂಬ ಪೂಜೆಯಿಂದ ಸಂತೋಷಪಡಿಸಿದ ಮಾನವನು ಜ್ಞಾನಸಿದ್ಧಿಯನ್ನು ಪಡೆಯುತ್ತಾನೆ. ಅವನವನ ಕೆಲಸದಲ್ಲಿ ಮನ ೧೮ ೪೬
ಸ್ಸಿಟ್ಟು ನಡೆಯುವ ಮನುಷ್ಯನು ಈ ಜೀವಿತಕಾಲದಲ್ಲಿ ಪಡೆಯಬೇಕಾದ ಮತ್ತು ಜೀವಮಾನಾನಂತರ ದೊರೆಯಬೇಕಾದ ಸಿದ್ಧಿಯನ್ನು ಪಡೆಯುತ್ತಾನೆ.
ಇಂದ್ರಿಯನಿಗ್ರಹಾದಿಗಳುಳ್ಳ ಮತ್ತು ತೀಕ್ಷ್ಣವಾದ ವ್ರತಗಳನ್ನು ೧೮ ೫೪

ಅಂತಸ್ತಿಗೆ-ಅಧಿಕಾರಕ್ಕೆ ತಕ್ಕ ಗೆಯ್ಮೆಗಳು

ಕೈಗೊಳ್ಳುವ ಯೋಗಿಗಳು, ದ್ರವ್ಯಗಳಿಂದ ಸಾಧಿಸಬಹುದಾದ ವಾಪೀಕೂಪ ತಟಾಕಾರಾಮ ವಿದ್ಯಾಮಂದಿರಾನ್ನಸತ್ರಗಳೇ ಮೊದಲಾದ ಉಪಕಾರಕಾರ್ಯಗಳನ್ನು ನಾನುವಿನ ಪ್ರೀತಿಗಾಗಿ ಮಾಡುವವರು–ದ್ರವ್ಯಯಜ್ಞವನ್ನು ಮಾಡಿದವರಾಗುತ್ತಾರೆ; ನಾನುವಿನ ಪ್ರೀತಿಗಾಗಿ ತಪಸ್ಸನ್ನು ಸಮರ್ಪಿಸುವವರು ತಪೋಯಜ್ಞರು. ನಾನುವಿನ ಪ್ರೀತಿಗಾಗಿ ಹಠಯೋಗದಿಂದ–ಯಜ್ಞಮಾಡುವವರು ಎಂದರೆ ಶರೀರವನ್ನು ಲೆಕ್ಕಿಸದೆ ಅವರವರನ್ನೇ ನಾನುವಿನಲ್ಲಿ ಸಮರ್ಪಿಸುವವರು ಯೋಗಯಜ್ಞರು; § ನಾನುವಿನ ಪ್ರೀತಿಗಾಗಿ ನಾನುವಿನ ವಿಷಯಕ್ಕೆ ಸಂಬಂಧಪಟ್ಟ ವಿಷಯಗಳನ್ನು ಅಧ್ಯಯನ

---

* ಸ್ವಸ್ವರೂಪಾನುಸಂಧಾನವೇ ಭಕ್ತಿ. ಅಂದರೆ ನಾನುವಿನಲ್ಲಿ ಅಥವಾ ದೇವತಾನಾಮರೂಪಧಾರಿಯಾದ ನಾನುವಿನಲ್ಲಿ ಇರುವ_ಏಕಾಕಾರವಾಗಿರುವ ಮನೋವರ್ತನೆಯೇ ಭಕ್ತಿ.

† ತತ್ತ್ವಜ್ಞಾನವೂ ಸಹ ಭಕ್ತಿಯಿಂದಲೇ ನಡೆಯಬೇಕೆಂದು ಇದರಿಂದ ಸ್ಪಷ್ಟವಾಗುತ್ತದೆ.

§ ಆತ್ಮಮೇಧ-ಪುರುಷಮೇಧ-ಆತ್ಮಯಜ್ಞ ಅಥವಾ ಪುರುಷಯಜ್ಞವನ್ನು ಮಾಡುವವರು.

ಮಾಡಿ, ಆ ಅಧ್ಯಯನವನ್ನೇ ಸಮರ್ಪಿಸಿ ಹೋಮಮಾಡುವ ಸ್ವಾಧ್ಯಾಯ
ಯಜ್ಞರು ; ನಾನುವಿನ ಪ್ರೀತಿಗಾಗಿ ತತ್ತ್ವಜ್ಞಾನಾತ್ಮಜ್ಞಾನಗಳನ್ನು ಸಾಧಿಸಿ
ಜ್ಞಾನವನ್ನು ಸಮರ್ಪಿಸಿ ಹೋಮಮಾಡುವ ಜ್ಞಾನಯಜ್ಞರು ; ಅವರ ೪ ೨೮
ವರ ದೇಹದಲ್ಲಿ ಪ್ರಾಣವಾಯುವಿನ ಮತ್ತು ಅಪಾನವಾಯುವಿನ ಸಂಚಾರಕ್ರಮದ
ರಹಸ್ಯವನ್ನು ತಿಳಿದು, ಅವುಗಳ ಆಯಾ ಸಂಚಾರವನ್ನು ತಡೆದು, ಪೂರಕ
ಕುಂಭಕ ರೇಚಕಗಳೆಂಬ ರೂಢಿಯ ಕ್ರಮದಲ್ಲಿ ಹತೋಟಿಗೆ ತೆಗೆದುಕೊಂಡು
ಪ್ರಾಣಾಯಾಮಗಳಲ್ಲಿ ಆಸಕ್ತರಾದವರು ಪ್ರಾಣವಾಯುವನ್ನು ಅಪಾನವಾಯು
ವಿನಲ್ಲಿ ಸಮರ್ಪಿಸಿ ಹೋಮಮಾಡುತ್ತಾರೆ ಎಂದರೆ ಕೂಡಿಸುತ್ತಾರೆ.† ಹಾಗೆಯೇ
ಅಪಾನವಾಯುವನ್ನು ಪ್ರಾಣವಾಯುವಿನಲ್ಲಿ ಸಮರ್ಪಿಸಿ ಹೋಮ ಮಾಡುತ್ತಾರೆ
ಎಂದರೆ ಸೇರಿಸುತ್ತಾರೆ. ಮತ್ತೆ ಕೆಲವರು ಆಹಾರಸೇವನೆಯ ಪದ್ಧತಿ ೪ ೨೯
ಯನ್ನು ನಿಯಮಗಳಿಗೆ ಒಳಪಡಿಸಿ ಪಂಚಪ್ರಾಣಗಳನ್ನು ಆಯಾ ಪ್ರಾಣಾಗ್ನಿ
ಗಳಲ್ಲಿ ಸಮರ್ಪಿಸಿ ಹೋಮಮಾಡುತ್ತಾರೆ ; * ೪ ೩೦

ಇನ್ನು ಕೆಲವರು ಶ್ರವಣಾದಿ (ಕಿವಿಯೇ ಮೊದಲಾದ) ಇಂದ್ರಿಯಗಳನ್ನು–
'ಇಂದ್ರಿಯಗಳ ಹತೋಟಿ', 'ಹತೋಟಿಯಲ್ಲಿ ತಡೆದು ನಿಲ್ಲಿಸುವಿಕೆ'–ಎಂಬ
ಬೆಂಕಿಯಲ್ಲಿ ಸಮರ್ಪಿಸಿ ಹೋಮಮಾಡುತ್ತಾರೆ. ಇತರರು ಶಬ್ದವೇ ಮೊದಲಾದ
ವಿಷಯಗಳನ್ನು ಇಂದ್ರಿಯಗಳೆಂಬ ಬೆಂಕಿಯಲ್ಲಿ ಸಮರ್ಪಿಸಿ ಹೋಮಮಾಡು
ತ್ತಾರೆ. ಬೇರೇ ಕೆಲವರು ಇಂದ್ರಿಯಗಳ ಎಲ್ಲಾ ವಿಧವಾದ ಕೆಲಸಗಳನ್ನೂ ೪ ೨೭
ಪ್ರಾಣವಾಯುವಿನ ಕೆಲಸಗಳನ್ನೂ ಆತ್ಮಜ್ಞಾನದಿಂದ ಬೆಳಗಲ್ಪಟ್ಟ ನಾನುವಿನ
ಪ್ರೀತಿಗಾಗಿ ಶರೀರ ಮತ್ತು ಇಂದ್ರಿಯಗಳನ್ನು ಪಳಗಿಸುವುದರಿಂದ ಪಡೆಯಬಹು
ದಾದ ಆತ್ಮಲಾಭಯೋಗವೆಂಬ ಬೆಂಕಿಯಲ್ಲಿ ಸಮರ್ಪಿಸಿ ಹೋಮಮಾಡುತ್ತಾರೆ.
ಕೆಲವರು ಯೋಗಿಗಳು 'ಯಜ್ಞವೇ'–'ನಾನು' ಅಥವಾ 'ನಾನುವೇ' ೪ ೨೬
'ಯಜ್ಞ' ಎಂದರಿತು ದೇವತಾಸಂಬಂಧವಾದ ಜಪಪಾರಾಯಣಾದಿ ಯಜ್ಞ
ಗಳನ್ನೇ ಸೇವಿಸುತ್ತಾರೆ ; ಮತ್ತೆ ಕೆಲವರು ಯೋಗಿಗಳು ವೇದಗಳಲ್ಲಿ ಹೇಳಿರುವ
ವಿಧಾನಗಳಿಂದಲೇ ದೇವತಾಪ್ರೀತಿಗಾಗಿ ದ್ರವ್ಯಸಮರ್ಪಣೆಮಾಡುವ ಯಜ್ಞ
ವನ್ನು ಬ್ರಹ್ಮ (ನಾನು) ರೂಪವಾದ ಅಗ್ನಿಯಲ್ಲಿ ಸಮರ್ಪಿಸಿ ಹೋಮಮಾಡು
ತ್ತಾರೆ ; ಪ್ರಪಂಚದಲ್ಲಿ ಎಲ್ಲಾ ಕಡೆಗಳಲ್ಲಿಯೂ ಮುಖವುಳ್ಳ ನಾನುವನ್ನು ೪ ೨೫

---

† ಹೋಮವೆಂಬುದೂ ಯೋಗವೇ. ಇದರಿಂದ ನಾಡೀಶುದ್ಧಿಯೇ ಮೊದಲಾದ ಸಂಸ್ಕಾರಗಳು ಉಂಟಾಗುವುವು. ಪುಟ ೧೪೭ ಟಿಪ್ಪಣಿ ನೋಡಿ.

* ಇದು ಸತ್ವಶುದ್ಧಿಗೆ ಕಾರಣವಾಗುವುದು.

ವಿಶ್ವರೂಪವೆಂಬ ಒಂದೇ ಸಮಷ್ಟಿರೂಪದಲ್ಲಿಯೂ, ಅಥವಾ ಆದಿತ್ಯಚಂದ್ರಾದಿ ಬೇರೆಬೇರೆ ರೂಪಗಳಲ್ಲಿ ಬೇರೆಬೇರೆಯಾಗಿ ಅಂದರೆ ವ್ಯಷ್ಟಿರೂಪದಲ್ಲಿಯೂ, ಜ್ಞಾನಯಜ್ಞ*ದಿಂದ ನಾನುವನ್ನು ಪೂಜಿಸುವವರಾಗಿ ಕೆಲವು ಯೋಗಿಗಳು ಸೇವಿಸುತ್ತಾರೆ. ೯ ೧೫

ಈ ಮೇಲ್ಕಂಡಂತೆ ಯಜ್ಞವನ್ನು ಮಾಡುವವರು ಯಜ್ಞದ ಗುಟ್ಟನ್ನು ತಿಳಿದವರಾಗಿ, ಮಾಡುವ ಯಜ್ಞದಿಂದ ಪಾಪವನ್ನು ಕಳೆದುಕೊಂಡು ನಾನುವಿನ ಒಲುಮೆಗೆ ಪಾತ್ರರಾಗುತ್ತಾರೆ.† ೪ ೩೦

'ಓಮ್', 'ತತ್', 'ಸತ್' ಎಂಬದಾಗಿ ಬ್ರಹ್ಮವಾಚಕ ಶಬ್ದಗಳು ಮೂರುಬಗೆಯಾಗಿವೆ. ಸಮರ್ಪಣೆ ಎಂಬ ಕೆಲಸವೂ 'ಬ್ರಹ್ಮ'; ಸಮ ೧೭ ೨೩
ರ್ಪಿಸುವ ದ್ರವ್ಯವೂ ಬ್ರಹ್ಮ; ಸಮರ್ಪಣ ದ್ರವ್ಯಗಳನ್ನು ಹೋಮಮಾಡಿ ನಾನುವಿಗೆ ಸೇರಿಸುವ ತೇಜೋರೂಪದ ಆಶ್ರಯವಾದ ಅಗ್ನಿಯೂ

ಕೆಲಸ ಮತ್ತು ಬ್ರಹ್ಮಗಳ ಐಕ್ಯತೆ

'ಬ್ರಹ್ಮ'; ಹೋಮಮಾಡುವವನೂ 'ಬ್ರಹ್ಮ'; ಹೀಗೆ–ಕೆಲಸವೇ 'ನಾನು' ನಾನುವೇ 'ಕೆಲಸ' ಎಂದು ಕೆಲಸ ಮತ್ತು ಬ್ರಹ್ಮಗಳನ್ನು ಸರಿದೂಗಿ, ಸಮವಾಗಿ, ಒಂದಾಗಿ ಕಾಣುವವನು ಬ್ರಹ್ಮ
ವನ್ನೇ ಪಡೆಯಬೇಕಾಗಿರುತ್ತದೆ. ಆದುದರಿಂದ ಬ್ರಹ್ಮವಾದಿಗಳು ಎಂದರೆ ೪ ೨೪
ಆತ್ಮಲಾಭದ ಕರ್ಮಯೋಗಿಗಳು 'ಓಮ್' ಎಂದು ಮೊದಲು ಉಚ್ಚರಿಸಿ ಯಜ್ಞ
ದಾನ ತಪಸ್ಸುಗಳೇ ಮೊದಲಾದ ಕಾರ್ಯಗಳಲ್ಲಿ ತೊಡಗುತ್ತಾರೆ. ಮಾಡಿದ ೧೭ ೨೪
ಕೆಲಸಗಳೆಲ್ಲವನ್ನೂ ಫಲಾಪೇಕ್ಷೆಯಿಲ್ಲದೆ ನಾನುವಿನ ಪ್ರೀತಿಗೆಂದು ನಡೆಸುವಾಗ
'ತತ್' ಎಂಬ ಬ್ರಹ್ಮವಾಚಕ ಶಬ್ದವನ್ನು ಮೋಕ್ಷದ ಗುರಿಯುಳ್ಳವರು ಉಚ್ಚರಿ
ಸುತ್ತಾರೆ. 'ಓಮ್ ತತ್ಸತ್' ಎಂಬುದು ಕರ್ಮಯೋಗಿಗಳ ರಹಸ್ಯೋ ೧೭ ೨೫
ಕ್ತಿಯು.

ಕೆಲಸಗಳ ಫಲವನ್ನು ಅನುಭವಿಸುವವನು 'ನಾನು'; ಲೋಕಕ್ಕೆಲ್ಲಾ ಮಾಯಾಸಹಿತನಾದ ಒಡೆಯನು 'ನಾನು'; ಕೆಲಸಗಳಿಗೆಲ್ಲಾ ಸ್ನೇಹಿತನಂತೆ

ಕರ್ಮಯೋಗದ ಗುಟ್ಟು

ಸಾಕ್ಷಿಯಾಗಿರುವವನು 'ನಾನು'–ಎಂದು ತಿಳಿದು ಕೆಲಸಗಳನ್ನು ಆಚರಿಸುವವನು ಶಾಂತಿಯನ್ನು ಪಡೆಯುತ್ತಾನೆ.
ನಾನುವಿನ ಪ್ರೀತಿಗಾಗಿ ಸಮರ್ಪಿಸಿದ ನಂತರ ನಿಲ್ಲುವ ಅಥವಾ ದೊರೆ ೫ ೨೯

---

* ಈ ರೀತಿ ಸಾಕ್ಷಾತ್ಕರಿಸಿ ತಿಳಿಯುವುದೆಂಬ ಜ್ಞಾನವೇ ಯಜ್ಞ.

† ಈ ವಿವರಣೆಯಿಂದ ಪ್ರಪಂಚದಲ್ಲಿ ಏನೇನು ಕೆಲಸಗಳು ಯಾವಯಾವ ಚರಾಚರ ವಸ್ತುಗಳಿಂದ ನಡೆಯುತ್ತಿವೆಯೋ ಅವೆಲ್ಲವೂ ಪರಮಾತ್ಮನಸೇವೆಯೆಂಬುದು ಸ್ಪಷ್ಟವಾಗುತ್ತದೆ. ಯೋಗಮಾರ್ಗವನ್ನು ಹಿಡಿದವನು ಈ ಗುಟ್ಟನ್ನು ತಿಳಿದು ನಿತ್ಯಾನಂದವನ್ನೇ ಅನುಭವಿಸಲು ಅರ್ಹನಾಗುತ್ತಾನೆ.

ಯುವ ದ್ರವ್ಯವು ಅಮೃತಕ್ಕೆ ಸಮಾನವಾದುದು. ಇದನ್ನು ಅನುಭವಿಸುವವರು ಸರ್ವಪಾಪಗಳಿಂದಲೂ ಬಿಡಲ್ಪಟ್ಟು ಸನಾತನವಾದ ಬ್ರಹ್ಮವನ್ನು ಹೊಂದು ತ್ತಾರೆ. ಹೀಗೆ ಅವರವರ ಕೆಲಸಗಳಲ್ಲಿ ಆಸಕ್ತರಾದವರು ಉತ್ತಮ ೩ ೧೩ ೪ ೩೧
ವಾದ ಸಿದ್ಧಿಯನ್ನು ಹೊಂದಬಹುದು.* ೧೮ ೪೫

ಸಮಸ್ತ ಆಗುಹೋಗುಗಳೆಲ್ಲಾ ನಾನುವಿನ ಅಧ್ಯಕ್ಷತೆಯಲ್ಲಿ ನಡೆಯುವು ದೆಂತಲೂ ಮತ್ತು ಸರ್ವವೂ ನಾನುವಿನಿಂದ ಅಭಿವ್ಯಕ್ತವಾಗಿ ರೂಪುಗೊಳ್ಳುವು ದೆಂತಲೂ ತಿಳಿದು, ಶುದ್ಧವಾದ ಮನಸ್ಸಿನ ಭಾವನೆಯಿಂದ ಕೂಡಿದ ಪಂಡಿತರು ನಾನುವನ್ನು ಭಜಿಸುತ್ತಾರೆ. ನಾನುವನ್ನು 'ಕ್ಷರ', 'ಅಕ್ಷರ' ಮತ್ತು ೧೦ ೮
'ಉತ್ತಮ ಪುರುಷ' ಎಂಬ ಮೂರು ವಿಧವಾದ ಭಾವನೆಗಳಿಂದ ಪುರುಷಸ್ಥಿತಿ ಯನ್ನನುಸರಿಸಿ ತಿಳಿಯುವವನು ಎಲ್ಲವನ್ನೂ ತಿಳಿದವನಾಗುತ್ತಾನೆ. ಮತ್ತು ಮನಸ್ಸಿನ ವಿವಿಧವರ್ತನೆಗಳಿಂದಲೂ ಭಜನೆ ಮಾಡುತ್ತಾನೆ. ೧೫ ೧೯

ಭಜನೆಯು ಕೆಲಸದ ಲಕ್ಷಣ ಮತ್ತು ಬಗೆಗಳು

ನಾನುವಿನಲ್ಲಿ ಚಿತ್ತವನ್ನಿಟ್ಟು, ನಾನುವಿನಲ್ಲಿಯೇ ಪ್ರಾಣಗಳನ್ನು ಸೇರಿಸಿ (ಸಮರ್ಪಿಸಿ) ಭಕ್ತರಲ್ಲಿ ಒಬ್ಬರಿಗೊಬ್ಬರು ನಾನುವಿನ ಸಂಬಂಧವಾದ ತಿಳಿವಳಿಕೆ ಕೊಟ್ಟುಕೊಂಡು, ಸದಾ ನಾನುವಿನ ವಿಷಯವನ್ನೇ ಹೇಳುತ್ತಾ ತೃಪ್ತರಾಗಿ ಆನಂದದಿಂದಿರುತ್ತಾರೆ. ನಾನುವಿನ ಪ್ರಾ ೧೦ ೯
ಪ್ತಿಗೆ ಯತ್ನಿಸುವುದೆಂಬ ಮಹಿಮೆಯುಳ್ಳವರು (ಮಹಾತ್ಮರು) ಮನಸ್ಸನ್ನು ಯಾವಕಡೆಗೂ ತಿರುಗಿಸದೆ, ಜ್ಞಾನಕ್ಕೆ ಆಶ್ರಯ ವಾದ ದೈವೀಸಂಪತ್ತಿನ ಪ್ರಕೃತಿಯನ್ನಾಶ್ರಯಿಸಿ, ಚರಾಚರವಸ್ತುಗಳಿಗೆಲ್ಲಾ ಅಸ್ತಿ ಭಾರನಾದ ಅಳಿವಿಲ್ಲದ ನಾನುವನ್ನು ಭಜನೆ ಮಾಡುತ್ತಾರೆ. ಯಾವಾ ೯ ೧೩
ಗಲೂ ನಾನುವನ್ನು ಕೀರ್ತನೆ ಮಾಡುತ್ತಾ, ಪ್ರಯತ್ನಪಟ್ಟು ಗಟ್ಟಿಯಾದ ಮನಸ್ಸಿನಿಂದ ವ್ರತವನ್ನು ಹಿಡಿದು, ಭಕ್ತಿಯಿಂದ ನಾನುವನ್ನು ನಮಸ್ಕರಿಸುತ್ತಾ ಎಡೆಬಿಡದ ಮನಸ್ಸನ್ನು ನಾನುವಿನಲ್ಲಿ ಸೇರಿಸಿ ಸೇವಿಸುತ್ತಾರೆ. ನಾನು ೯ ೧೪
ವಿನ ಪ್ರೀತಿಗಾಗಿ ತಂದು ಸಮರ್ಪಿಸುವ ತುಲಸೀ ಬಿಲ್ವವೇ ಮೊದಲಾದ ಎಲೆ, ಹೂವು, ಹಣ್ಣು ಮತ್ತು ನೀರು ಮೊದಲಾದ ದ್ರವ್ಯಗಳನ್ನು ಭಕ್ತಿಪೂರ್ವಕ ನಾನು ವಿನ ಪ್ರಾಪ್ತಿಗಾಗಿ ಮನಸ್ಸು ಮತ್ತು ಇಂದ್ರಿಯಗಳನ್ನು ಶುದ್ಧವಾಗಿ ಇಟ್ಟು ಕೊಂಡಿರುವವನಿಂದ ಸಮರ್ಪಿತವಾದುವೆಂದು ಅನುಭವಿಸುವವನು 'ನಾನು'. ಅತ್ತಿತ್ತ ತಿರುಗಿಸದೆ ಒಂದೇ ಮನಸ್ಸಿನಿಂದ ನಾನುವನ್ನು ಧ್ಯಾನಿಸುತ್ತ ೯ ೩೬
ತೈಲಧಾರೆಯಂತೆ ಸ್ವಲ್ಪವೂ ಎಡೆಬಿಡದೆ ಪೂರ್ಣವಾಗಿ ನಾನುವಿನಲ್ಲಿ ಮನಸ್ಸು

* ಇದರಿಂದ ಕರ್ಮ–ಗೆಯ್ಮೆ–ಕೆಲಸವು ಯೋಗಕ್ಕೆ ಉತ್ತಮವಾದ ಸಾಧನವಾಗಿರು ವುದು. ಇದಕ್ಕೆ ಜ್ಞಾನ ಮತ್ತು ಭಕ್ತಿಗಳೆಂಬ ಯೋಗಸಾಧನಗಳು ಸಹಾಯಕಾರಿಗಳಾಗಿರುವುವು.

ಸೇರಿಹೋಗಿ ನಾನುವನ್ನು ಸೇವಿಸುವವರ ಯೋಗಕ್ಷೇಮ * ವಿಚಾರವನ್ನು ವಹಿಸು
ವವನು ನಾನು. ಮನಸ್ಸನ್ನು ಬೇರೇಕಡೆ ಚಲಿಸದೆ, ಎಡೆಬಿಡದೆ ನಾನು ೯ ೨೨
ವನ್ನು ತ್ರಿಕಾಲಗಳಲ್ಲಿಯೂ ಸ್ಮರಣೆಮಾಡುವ ನಿತ್ಯಯುಕ್ತನೆನಿಸಿದ ಯೋಗಿಗೆ
ಸುಲಭವಾಗಿ ದೊರೆಯುವವನು ‘ನಾನು’. ಹೀಗೆ ಸಂತತವಾಗಿ ನಟ್ಟ ೮ ೧೪
ಮನಸ್ಸಿನಿಂದ ಪ್ರೀತಿಪೂರ್ವಕವಾಗಿ ಭಜಿಸುವವರಿಗೆ ನಾನುವನ್ನು ಸೇರಲು

ಭಜನೆಯ ಕೆಲಸದಿಂದ ಜ್ಞಾನಪ್ರಾಪ್ತಿ–ಯೋಗಸಿದ್ಧಿ

ಅವಶ್ಯಕವಾಗಿ ಬೇಕಾಗುವ ನಾನುವಿನ ಸ್ವಸ್ವರೂಪಜ್ಞಾನಾ
ನಂದವನ್ನು ಬೀರುವ ‘ನಾನುವಿನ ಅರಿವು’ ಎಂಬ ಬುದ್ಧಿ
ಯೋಗವನ್ನು ಕೊಡುವವನು ನಾನು.† ಅವರ ೧೦ ೧೦
ಮೇಲಿನ ಮರುಕದಿಂದಲೇ ನಾನುವಿನ ರೂಪ ಅಥವಾ ಧರ್ಮ-
ವಾ-ವರ್ತನೆಗಳಲ್ಲಿ ನೆಲಸಿ ಪ್ರಜ್ವಲಿಸುವ ಜ್ಞಾನದ ಬೆಳಕಿನಿಂದ, ಜ್ಞಾನಕ್ಕೆ
ಉಂಟಾದ ಮರೆಯಿಂದ ಕವಿದಿರುವ ಅವರ ಕತ್ತಲೆಯನ್ನು ಹೋಗಲಾಡಿಸುವವನು
‘ನಾನು’. ೧೦ ೧೧

ಮಾಡುವ ಸಮಸ್ತ ಕೆಲಸಗಳನ್ನೂ ನಾನುವಿನಲ್ಲಿ ಒತ್ತಟ್ಟೆಗಿಟ್ಟು, ನಾನು
ವಿನ ಮೇಲಿನ ಆಸಕ್ತಿಯಿಂದ ಮತ್ತು ಕುಸಿದುಹೋಗದ ಯೋಗದಿಂದ ನಾನು
ವನ್ನೇ ಧ್ಯಾನಮಾಡುತ್ತಾ ಯಾರು ಸೇವಿಸುತ್ತಾರೋ, ನಾನುವಿನಲ್ಲಿ ೧೨ ೬
ಮನಸ್ಸನ್ನು ಒಳಹೊಗಿಸಿರುವ ಅಂತಹ ಯೋಗಿಗಳನ್ನು ಮೃತ್ಯುವಾದ (ಹುಟ್ಟು
ಸಾವು) ಸಂಸಾರಸಾಗರದಿಂದ ಮೇಲಕ್ಕೆತ್ತಿ ಪಾರುಮಾಡುವವನು ‘ನಾನುವು’.
ಎಲ್ಲಾ ಕೆಲಸಗಳನ್ನೂ ಯಾವಾಗಲೂ ನಾನುವಿನ ಆಶ್ರಯದಲ್ಲಿ ಮಾಡು ೧೨ ೭
ವವನು ನಾನುವಿನ ಪ್ರಸಾದದಿಂದ (ಒಲುಮೆಯಿಂದ) ಶಾಶ್ವತವಾದ ಅಳಿವಿಲ್ಲದ
ಪದವಿಯನ್ನು ಪಡೆಯುತ್ತಾನೆ. ೧೮ ೫೬

ಸಾಧಕ :—

ಯಾವುದೊಂದು ಪ್ರಾಣಿಯ ಮೇಲೂ ಹಗೆತನಮಾಡದಿರುವವನು ; ಎಲ್ಲಾ
ಪ್ರಾಣಿಗಳೊಡನೆ ಗೆಳೆತನದಿಂದಿರುವವನು ; ಪ್ರಾಣಿಗಳಮೇಲೆ ದಯೆ (ಕನಿಕರ)

ಸಾಧಕನ ಗುಣ-ವಾ-ವರ್ತನೆ

ವುಳ್ಳವನು ; ಪ್ರಪಂಚದ ವಸ್ತುಗಳನ್ನು ಶರೀರಸುಖಕ್ಕೆ
ಬೇಕಾದಷ್ಟು ಬಳಿಯಲ್ಲಿ ಇಟ್ಟುಕೊಂಡಿದೇನೆ ಎಂಬ ಭಾವನೆ
ಯಿಲ್ಲದಿರುವವನು ; ಹೆಮ್ಮೆಯಿಲ್ಲದಿರುವವನು ; ದುಃಖವೂ
ಸುಖವೂ ಇವುಗಳ ಅನುಭವವನ್ನು ಒಂದೇಸಮನಾಗಿ ಕಾಣುವವನು ; ಮನ್ನಿ

---

* ಯೋಗ :—(1) ಈ ಲೋಕದ ಜೀವನ ಸಿದ್ಧಿ. (2) ಮತ್ತು ಆತ್ಮಲಾಭ ಸಿದ್ಧಿ. ಕ್ಷೇಮ :—(1) ಲೋಕದ ಸುಖಜೀವನದ ಸಂರಕ್ಷಣ. (2) ಪ್ರಾಪ್ತವಾದ ಆತ್ಮಲಾಭ ಸಿದ್ಧಿಯ ಸಂರಕ್ಷಣ.

† ಇದು ವಾಮನಾವತಾರದ ರಹಸ್ಯ ಆತ್ಮನಿವೇದನ-ಯಜ್ಞ-ದ ಫಲ.

ಸುವ ಮನೋಭಾವವುಳ್ಳವನು; ಯಾವಾಗಲೂ ತೃಪ್ತಿ (ಸಂತೋಷ ೧೨ ೧೩
ಸಮಾಧಾನಗಳು) ಉಳ್ಳವನು ; ಆತ್ಮಲಾಭದ ಮಾರ್ಗದಲ್ಲಿ(ಯೋಗಮಾರ್ಗದಲ್ಲಿ)
ಇರುವವನು; ನಾನುವಿನ ಪ್ರಾಪ್ತಿಗಾಗಿ ಅಧೀನಕ್ಕೆ ಒಳಪಡಿಸಿದ ಇಂದ್ರಿಯಾದಿ
ಗಳುಳ್ಳವನು ; ಬದಲಾವಣೆ ಹೊಂದದೆ ದೃಢವಾದ ನಿರ್ಣಯವನ್ನು ಹೊಂದಿರು
ವವನು ; ನಾನುವಿನಲ್ಲಿ ಸಮರ್ಪಿಸಿದ ಮನಸ್ಸು ಮತ್ತು ಬುದ್ಧಿಗಳುಳ್ಳವನು;
ನಾನುವಿನ ಭಕ್ತನಾಗಿ ನಾನುವಿಗೆ ಬೇಕಾದವನು. ಯಾವ ಸಾಧಕನ ೧೨ ೧೪
ದೆಸೆಯಿಂದ ಪ್ರಪಂಚದ ಪ್ರಾಣಿಗಳಾವುವೂ ಮನಸ್ಸಿನ ಬೇಗೆಯನ್ನು ಹೊಂದದೆ
ಇರುವುವೋ, ಮತ್ತು ಯಾವ ಸಾಧಕನು ಪ್ರಾಣಿಗಳಿಗೆ ನೋವನ್ನುಂಟುಮಾಡು
ವುದಿಲ್ಲವೋ–ಯಾವನು ಸಂತಸ, ಕೋಪ ಮತ್ತು ಅಂಜಿಕೆಗಳಿಂದ ಬದಲಾವಣೆ
ಹೊಂದುವ ಮನೋಭಾವಗಳಿಂದ ಬಿಡಲ್ಪಟ್ಟಿರುತ್ತಾನೋ ಅಂತಹ ಸಾಧಕನು
'ನಾನು' ವಿಗೆ ಇಷ್ಟನಾದವನು. ಬಯಕೆಗಳಿಲ್ಲದವನು; ಮನಸ್ಸು, ೧೨ ೧೫
ಇಂದ್ರಿಯ ಮತ್ತು ದೇಹಗಳನ್ನು ಚೊಕ್ಕಟವಾಗಿಟ್ಟುಕೊಂಡಿರುವವನು; ಹಿಡಿದ
ಕೆಲಸವನ್ನು ನಿರ್ವಾಹಮಾಡುವ ಅಂದರೆ ನೆರವೇರಿಸುವ ಶಕ್ತಿಯುಳ್ಳವನು;
ಪ್ರಾಪಂಚಿಕವಾದ ವ್ಯವಹಾರ ಕಾರ್ಯಗಳಲ್ಲಿ ಆಸಕ್ತಿಯಿಲ್ಲದವನು; ಮನಸ್ಸಿನಲ್ಲಿ
ಕೊರತೆಯಿಲ್ಲದವನು; ಯಾವ ಕೆಲಸವನ್ನೇ ಆಗಲಿ ಮಾಡಬೇಕೆಂಬ ನಿಶ್ಚಯ
ವನ್ನು ತೊರೆದಿರುವವನು; ನಾನುವಿನಮೇಲೆ ತುಂಬಿದ ಅಕ್ಕರೆಯುಳ್ಳವನು;
ಸಂತಸಗೊಳ್ಳದೆಯೂ. ಹಗೆತನಮಾಡದೆಯೂ, ಕೊರಗದೆಯೂ ಮತ್ತು ಬಯ
ಸದೆಯೂ ಇರುವವನು; ಮತ್ತು ಒಳ್ಳೆಯದು ಕೆಟ್ಟದ್ದು ಎಂಬಿವೆರಡನ್ನೂ
ತೊರೆದಿರುವವನು–ಆದ–ನಾನುವಿನ ಭಕ್ತನು ನಾನುವಿಗೆ ಬೇಕಾದವನು. ೧೨ ೧೬
ಹಗೆ ಮತ್ತು ಗೆಳೆಯರಲ್ಲಿ ಒಂದೇ ಸಮನಾದ ಮನೋಭಾವವುಳ್ಳವನು; ೧೨ ೧೭
ಮನ್ನಣೆ (ಮಾನ) ಅಥವಾ ಪುರಸ್ಕಾರ ಮತ್ತು ತಿರಸ್ಕಾರ (ಅವಮಾನ) ಗಳ
ಲ್ಲಿಯೂ, ಚಳಿ, ಸೆಕೆ; ಸುಖ ಮತ್ತು ದುಃಖ ಇವುಗಳಲ್ಲಿಯೂ ಒಂದೇ ವಿಧವಾದ
ಭಾವನೆಯುಳ್ಳವನು; ಪ್ರಾಪಂಚಿಕ ವಿಷಯಗಳ ಗೋಜನ್ನು ತೊಲಗಿಸಿರುವ
ವನು; ಬೈಗಳು ಮತ್ತು ಹೊಗಳಿಕೆಗಳನ್ನು ಸಮನಾಗಿ ಕಾಣುವವನು; ಹೆಚ್ಚು
ಮಾತಾಡದೆ ಮೌನವನ್ನು ಹಿಡಿದವನು; ದೊರೆತಷ್ಟರಿಂದ ಸಂತಸಗೊಂಬುವ
ವನು; ನಾನುವು ಹೊರತು ಬೇರೇ ಮನೆ ಮೊದಲಾದ ಆಶ್ರಯವಿಲ್ಲದವನು;
ಕದಲದ ಮನಸ್ಸುಳ್ಳವನು ಮತ್ತು ಭಕ್ತಿಯಿಂದ ಕೂಡಿರುವವನು–ಆದ ಮಾನವ
ಸಾಧಕನು 'ನಾನು' ವಿನ ಒಲುಮೆಗೆ ಪಾತ್ರನು. ಆಚರಿ ೧೨ ೧೮ ; ೧೨ ೧೯
ಸಲ್ಪಡಬೇಕಾಗಿಯೂ, ಅಮೃತದಂತೆ ಹಿತವಾಗಿಯೂ ಇರುವ, ನಾನುವಿನ ಪ್ರೀತಿ
ಗಾಗಿ ಮಾಡಬೇಕಾದ, ಹಿಂದೆ ವಿವರಿಸಿದ ಯಜ್ಞವಿಧಾನಗಳಿಂದ ಮತ್ತು ನಡೆ
ವಳಿಗಳಿಂದ ಯಾರು ನಾನುವನ್ನು ಸೇವಿಸುತ್ತಾರೋ ಅಂತಹ ಅಕ್ಕರೆ ಮತ್ತು

ನಂಬಿಕೆಗಳುಳ್ಳ ಸಾಧಕರು ಶ್ರೇಷ್ಠರಾದ ನಾನುವಿನ ಭಕ್ತರಾಗಿ ನಾನುವಿಗೆ ತುಂಬಾ ಬೇಕಾದವರಾಗುತ್ತಾರೆ. ೧೨ ೨೦

ಕೆಟ್ಟ ನಡೆವಳಿಗಳುಳ್ಳವನಾದರೂ * ಯಾವನು ಬೇರೆ ಕಡೆ ಮನಸ್ಸಿಡದೆ ನಾನುವನ್ನೇ ಭಜಿಸುತ್ತಾನೆಯೋ ಅವನೂ ಸಹ ಸಾಧುವೆಂದೇ ತಿಳಿಯಬೇಕು. ಏಕೆಂದರೆ :— ಒಳ್ಳೆಯ ನಿಶ್ಚಯ ಬುದ್ಧಿಯಿಂದ ಸಾಧನ ಮಾರ್ಗವನ್ನು ಹಿಡಿದವ ನಾಗಿರುತ್ತಾನೆ. ಮತ್ತು ಬಲುಬೇಗನೆ ನಾನುವನ್ನು ೯ ೩೦

ಹೊರಗಿನ ವರ್ತನೆ ಕೆಟ್ಟದಾದರೂ ಒಳ್ಳೇ ಮನೋಧರ್ಮದಿಂದ ಸಾಧಕನಾಗಬಹುದು

ಧರ್ಮದಿಂದ ನೋಡುವವನಾಗಿ ಶಾಶ್ವತಸುಖ ಮತ್ತು ಶಾಂತಿಗಳನ್ನು ಹೊಂದುವವನಾಗುತ್ತಾನೆ; "ನಾನುವಿನ ಭಕ್ತರಾದ ಸಾಧಕರು ಎಂದಿಗೂ ಕೇಡನ್ನು ಹೊನ್ದುವುದಿಲ್ಲ" ಎಂಬುದನ್ನು ಚೆನ್ನಾಗಿ ಮನದಟ್ಟುಮಾಡಿಕೊಳ್ಳಬೇಕು. ೯ ೩೧

ಸಾಧನೆಯ ಪೂರ್ಣತೆ :—

ಸರ್ವ ಪ್ರಾಣಿಗಳಲ್ಲಿಯೂ 'ನಾನು' ಸಮನಾಗಿರುವವನು; ನಾನುವಿಗೆ ಹಗೆಯಾದುದಾಗಲೀ, ಇಷ್ಟವಾದುದಾಗಲೀ ಯಾವುದೂ ಇಲ್ಲ. ಆದರೆ ಯಾರು ನಾನುವನ್ನು ಭಕ್ತಿಯಿಂದ ಸೇವಿಸುತ್ತಾರೋ ಅವರು ನಾನುವಿನಲ್ಲಿರುವರು; ಮತ್ತು ಅವರಲ್ಲಿ ನಾನುವೂ ಪೂರ್ಣತೆಯಿಂದ ಪ್ರಕಾಶಿಸುವನು. ಚರಾಚರ ೯ ೨೯
ವಸ್ತುಗಳಲ್ಲೆಲ್ಲಾ ಇರುವ 'ನಾನು' ವನ್ನು 'ಒಂದು' ಎಂದೇ ತಿಳಿದು ಭಜನೆ ಮಾಡುವವನು ಎಂತಹ ನಡೆವಳಿಕೆಯನ್ನು ಹಿಡಿದು ನಡೆದರೂ ಯೋಗಿಯಾಗಿ ನಾನುವಿನ ಆಶ್ರಯದಲ್ಲಿರುತ್ತಾನೆ. ಯಾವ ಪ್ರಾಣಿಯನ್ನೂ ಹಗೆಯಾಗಿ ೬ ೩೧
ಭಾವಿಸದೆ ಇರುವವನು ನಾನುವನ್ನು ಹೊಂದುತ್ತಾನೆ. ಮತ್ತು ನಾನುವಿನಲ್ಲಿ ಅತಿಶಯವಾದ ಭಕ್ತಿಯಿಂದ ನಡೆದು ನಾನುವನ್ನೇ ಪಡೆಯುವುದರಲ್ಲಿ ಸಂಶಯ ವಿಲ್ಲ. ನಾನುವಿನಲ್ಲಿ ಮನಸ್ಸನ್ನು ಒಳಹೊಗಿಸಿ ನಾನುವನ್ನು ಎಡೆಬಿಡದೆ ೧೮ ೬೦
ಸೇರಿ ಸೇವೆ ಮಾಡುವವರು ಅತಿಶಯವಾದ ನಂಬಿಕೆಯಿಂದ ಕೂಡಿಕೊಂಡಿರುವವರಾಗಿ ಮತ್ತು ಯೋಗಿಶ್ರೇಷ್ಠರಾಗಿ ಭಾವಿಸಲ್ಪಡುವರು. ಕುಸಿದುಹೋಗದ ೧೨ ೨
ಭಕ್ತಿಯನ್ನು ಬೆಳಗಿ ಕಾಣುವ ಯೋಗದಿಂದ ನಾನುವನ್ನು ಸೇವಿಸುವವನು ಪ್ರಕೃತಿಯ ಗುಣಗಳನ್ನು ದಾಟಿ ನಾನುವಿನೊಡನೆ ಐಕ್ಯವಾಗಲು ಅರ್ಹನಾಗುತ್ತಾನೆ. ಯೋಗಿಗಳಲ್ಲೆಲ್ಲಾ ಯಾವನು ಪೂರ್ಣನಾನುವಿನಲ್ಲಿ ದೇಹಿ ೧೪ ೨೬
ಯಾದ ನಾನುವನ್ನು ಒಳಹೊಗಿಸಿ, ಶ್ರದ್ಧೆಯಿಂದ ಕೂಡಿ ನಾನುವನ್ನು ಸೇವಿಸು

---

* ಒಳ್ಳೆಯ ಮನೋಧರ್ಮವುಳ್ಳ ಭಕ್ತನ ಹೊರಗಿನ ವರ್ತನೆಯು ಆಚಾರ ವ್ಯವಹಾರ ಶಾಸ್ತ್ರ ದೃಷ್ಟಿಯಿಂದ ಕೆಟ್ಟದ್ದಾದರೂ ಅಥವಾ ಕೆಟ್ಟದ್ದಾಗಿ ಕಂಡುಬಂದರೂ ಆದೂ ಸಹ ಕಾಲಾನಂತರ ಮಾರ್ಪಾಡಾಗಿ ಅವನು ಸಾಧುಮಾರ್ಗವನ್ನು ಅವಲಂಬಿಸುವವನಾಗುತ್ತಾನೆ.

ತ್ತಾನೋ ಅವನು ಸಾಧಕರಲ್ಲಿ ಶ್ರೇಷ್ಠನೆಂದು ಅಭಿಪ್ರಾಯ. ಸಾಧಕನಾದ ೬ ೪೭
ವನು ತತ್ವಶಾಸ್ತ್ರವನ್ನು ತಿಳಿದು ಅದರಂತೆ "ನಾನುವು ಏನನ್ನೂ ಮಾಡುವವನಲ್ಲ"
ಎಂದು ಮನಗಾಣಬೇಕು. ಕಣ್ಣಿಂದ ನೋಡುವಾಗ, ಕಿವಿಯಿಂದ ಕೇಳುವಾಗ,
ಮುಟ್ಟಿನೋಡುವಾಗ, ವಾಸನೆ ಹಿಡಿಯುವಾಗ, ಊಟಮಾಡುವಾಗ, ನಡೆಯು
ವಾಗ, ಮಲಗುವಾಗ, ಉಸಿರಾಡುವಾಗ, ಮಾತಾಡುವಾಗ, ಮಲವಿಸರ್ಜನೆ ೫ ೮
ಮಾಡುವಾಗ, ಕಯ್ಯಿಂದ ಹಿಡಿದು ತೆಗೆದುಕೊಳ್ಳುವಾಗ, ಕಣ್ಣು ತೆರೆಯುವಾಗ
ಕಣ್ಣು ಮುಚ್ಚುವಾಗ–ಇವೇ ಮೊದಲಾದ ಸಂದರ್ಭಗಳಲ್ಲಿಯೂ ಸಹ ಇಂದ್ರಿಯ
ಗಳು ಅವುಗಳ ವಿಷಯಗಳೊಡನೆ ಕೂಡುತ್ತವೆ ಎಂದೇ ಬಗೆದು ಕೆಲಸಗಳ ೫ ೯
ನ್ನೆಲ್ಲಾ ನಾನುವಿನಲ್ಲಿ ಸಮರ್ಪಿಸಿ, ಫಲದ ಗೋಜನ್ನು ತೊರೆದು ಕೆಲಸಮಾಡು
ವವನು, ನೀರಿನಲ್ಲಿದ್ದರೂ ನೀರಿನೊಡನೆ ಅಂಟದ ತಾವರೆಯ ಎಲೆಯಂತೆ ಪಾಪ
ದಿಂದ (ಕೆಲಸದಿಂದ) ಅಂಟುವುದಿಲ್ಲ.* ೫ ೧೦

ಪುಣ್ಯಕೆಲಸವನ್ನು ಮಾಡಿದ ಜನಗಳು ನಾನುವನ್ನು ಭಜಿಸುತ್ತಾರೆ. ಇಂತಹ ಜನಗಳನ್ನು ಅವರವರ ಭಜನೆಯ ಕ್ರಮ ಮತ್ತು ಅಂತಸ್ತುಗಳಿಗನುಗುಣವಾಗಿ

ಸಾಧಕರು ನಾಲ್ಕುಬಗೆ

ನಾಲ್ಕುಬಗೆಯಾಗಿ ವಿಂಗಡಿಸಬಹುದು. ನೊಂದವನು, ತತ್ತ್ವ
ವನ್ನು ತಿಳಿಯಬೇಕೆಂಬ ಇಚ್ಛೆಯುಳ್ಳವನು, ಪುರುಷಾರ್ಥ
ಗಳನ್ನು ಸಂಪಾದಿಸಬೇಕೆಂದಿರುವವನು ಮತ್ತು ತತ್ತ್ವವನ್ನು ಚೆನ್ನಾಗಿ ತಿಳಿದ
ಜ್ಞಾನಿಯು–ಎಂಬ ಈ ನಾಲ್ಕುಬಗೆಯ ಭಜಕರಲ್ಲಿ ತತ್ವವನ್ನು ಕುರಿತು ಭಜಿಸುವ
ಜ್ಞಾನಿಯೇ ಸರ್ವೋತ್ತಮನು. ಜ್ಞಾನಿಯು ಖಚಿತವಾದ ಅರಿವಿನಿಂದ ೭ ೧೬
ನಾನುವಿನಲ್ಲಿಯೇ ಮನಸ್ಸಿಡುವವನು. ಮತ್ತು ನಾನು ಒಂದರಲ್ಲಿಯೇ ಭಕ್ತಿ
ಯುಳ್ಳವನು. ಜ್ಞಾನಿಯಾದವನಿಗೆ ಬೇಕಾಗಿರುವುದು 'ನಾನು' ವೇ. ನಾನುವಿಗೆ
ಬೇಕಾಗಿರುವವನು ಜ್ಞಾನಿಯೇ. ಒಟ್ಟಿನಲ್ಲಿ ಈ ಮೇಲೆ ಹೇಳಿದ ನಾಲ್ಕುಬಗೆಯ
ಸಾಧಕರು ಸಾಮಾನ್ಯರಾದ ಜನರಿಗಿಂತ ಮೇಲಾದವರೇ. ನಾನುವನ್ನು ತಿಳಿದ
ವನು ಮಾತ್ರ ಕೇವಲ 'ನಾನು ರೂಪ' ನಾಗಿಯೇ ಇರುತ್ತಾನೆ. ಏಕೆಂದರೆ—
ಜ್ಞಾನಿಯು ಚಿತ್ತವನ್ನು ನಾನುವಿನಲ್ಲಿಯೇ ನಿಲ್ಲಿಸಿ, ಸಮಾನವಿಲ್ಲದೇ ಇರುವ
ಮತ್ತು ಪರಮಶ್ರೇಯಸ್ಥಾನವೆನಿಸಿದ ನಾನುವನ್ನೇ ಆಶ್ರಯಿಸಿಕೊಂಡು ಇರು
ತ್ತಾನೆ. ೭ ೧೮

ಯೋಗದ ವಿಷಯಗಳನ್ನು ತಿಳಿಯದವರು ಇತರರಿಂದ ಕೇಳಿ ತಿಳಿದು

ಸಾಮಾನ್ಯ ಸಾಧಕರು

ಉಪಾಸನೆ ಮಾಡುತ್ತಾರೆ. ಕೇಳ್ಮೆಯಲ್ಲಿ–ಉಪದೇಶ ಹೊಂದು
ವುದರಲ್ಲಿ—ಆಸಕ್ತರಾದ, ಅಂತಹ ಉಪಾಸಕರೂ ಸಹ ಹುಟ್ಟು
ಸಾವು (ಸಂಸಾರ) ಎಂಬ ಮೃತ್ಯುವನ್ನು ಗೆಲ್ಲುತ್ತಾರೆ. ೧೩ ೨೫

---

* ಕೃಷ್ಣಾವತಾರದ ರಹಸ್ಯ.

ಗೊತ್ತಾದ ಗುರುತಿಗೆ ನಿಲುಕದ, ಮೂರ್ತಿ ಮತ್ತಾಗಿಲ್ಲದ, ಎಲ್ಲೆಡೆಯಲ್ಲೂ
ತುಂಬಿಕೊಂಡು ಹರಡಿರುವ, ಧ್ಯಾನಕ್ಕೂ ಸಹ ಮೀರಿರುವ, ಚಲನೆಯಿಲ್ಲದ,

ಅವ್ಯಕ್ತೋಪಾಸಕರು

ಮಾಯೆಯೊಳಗೆ ಸೇರಿ ಚೈತನ್ಯನೆನಿಸುವ, ಶಾಶ್ವತನಾದ
ಮತ್ತು ಅಕ್ಷರವೆಂಬ ನಾನುವನ್ನು ಯಾರು ಇಂದ್ರಿಯಗಳನ್ನು
ಚೆನ್ನಾಗಿ ಹತೋಟಿಯಲ್ಲಿಟ್ಟುಕೊಂಡು ಎಲ್ಲೆಡೆಯಲ್ಲಿಯೂ ಎಲ್ಲಾ ಕಾಲ
ಗಳಲ್ಲಿಯೂ ಬದಲಾವಣೆಯಿಲ್ಲದೆ ಒಂದೇಸಮನಾದ ಬುದ್ಧಿಯಿಂದ ಸೇವಿಸು
ತ್ತಾರೋ ಅವರೂ ಸಹ ಎಲ್ಲಾ ಚರಾಚರ ವಸ್ತುಗಳ ಶ್ರೇಯಸ್ಸಿನಲ್ಲಿ ಆಸಕ್ತರಾಗಿ
ರುತ್ತಾ ನಾನುವನ್ನೇ ಪಡೆಯುತ್ತಾರೆ. ಆದರೆ ನಾಮರೂಪವಿಲ್ಲದ ೧೨ ೩, ೧೨ ೪
ನಾನುವಿನಲ್ಲಿ ಚಿತ್ತವನ್ನು ಜೋಡಿಸುವವರಿಗೆ ಕಷ್ಟವು ಬಹಳ ಹೆಚ್ಚು. ದೇಹಿ
ಗಳು, ಗೋಚರವಾಗದೇ ಇರುವ ಗುರಿಯನ್ನು ಪಡೆಯುವುದು ಕಷ್ಟಸಾಧ್ಯವು. ೧೨ ೫
ನಾನುವಿನ—ಹಿಂದೆ ಚಿತ್ರಿಸಿದ—ಮಹಿಮೆಗಳನ್ನೂ ಮತ್ತು ನಾನುವಿನ ಯೋಗ
ಮಾರ್ಗಗಳನ್ನೂ ತತ್ವಜ್ಞಾನದ ಮೂಲಕ ತಿಳಿಯುವವನು ಸ್ವಲ್ಪವೂ ಕದಲದ
ಯೋಗದಿಂದ ನಾನುವಿನೊಡನೆ ಕೂಡುವುದರಲ್ಲಿ ಸಂದೇಹವಿಲ್ಲ. ೧೦ ೭

ಹತೋಟಿಯಲ್ಲಿರುವ ಚಿತ್ತವು ಯಾವಾಗ ನಾನುವಿನಲ್ಲಿಯೇ ಲಯವಾಗು
ವುದೋ ಆಗ ಸಾಧಕನು ಯುಕ್ತನೆಂತಲೂ ಮತ್ತು ಯಾವ ವಿಧವಾದ ಕೋರಿಕೆ
ಗಳು (ಆಸೆಗಳು) ಇಲ್ಲದವನೆಂತಲೂ ಹೇಳಲ್ಪಡುತ್ತಾನೆ. ಯಾವಾಗ ೬ ೧೮

ಯೋಗಾರೂಢ ಯೋಗಿ

ಇಂದ್ರಿಯಗಳಿಗೆ ಬೇಕಾದ ವಿಷಯಗಳಲ್ಲಿ ಮನಸ್ಸು ಕೂಡಿರು
ವುದಿಲ್ಲವೋ ಮತ್ತು ಯಾವಾಗ ಕೆಲಸಗಳಲ್ಲಿ ಬೆರೆಯುವು
ದಿಲ್ಲವೋ ಆಗ ಕೆಲಸಗಳನ್ನು ಮಾಡಬೇಕೆಂಬ ಮನಸ್ಸಿನ ನಿಶ್ಚಯವೆಂಬ ಸಂಕಲ್ಪ
ಗಳೆಲ್ಲವನ್ನೂ ಒತ್ತಟ್ಟಿಗಿಟ್ಟು ಯೋಗದ ಮೆಟ್ಟಲುಗಳನ್ನು ಏರಿ ಪೂರ್ಣ ಯೋಗಿ
ಯೆನಿಸುವನು. ನಾನುವಿನ ವಿಷಯದಲ್ಲಿ ನಿಶ್ಚಯವನ್ನು ಹೊಂದಿದ ಬುದ್ಧಿ ೬ ೪
ಯಿಂದ ನಾನುವಿನಲ್ಲಿ ಚಿತ್ತವನ್ನು ನಿಲ್ಲಿಸಿದವನು ಹುಟ್ಟು ಸಾವೆಂಬ ಸಂಸಾರಕ್ಕೆ
ಸಂಬಂಧಪಟ್ಟ ಪುಣ್ಯಪಾಪ ಕೆಲಸಗಳೆರಡನ್ನೂ ತೊಲಗಿಸುತ್ತಾನೆ. ೨ ೫೦

ಯೋಗಿಯ ಸಮತ್ವ ಬುದ್ಧಿ

ನಾನುವನ್ನು ಪ್ರಯತ್ನಗಳಿಂದ ಗೆದ್ದಂತೆ ತಿಳಿದು ಪೂರ್ಣ
ವಾದ ಮನಸ್ಸಮಾಧಾನ ಸ್ಥಿತಿಯನ್ನು ಹೊಂದಿರುವವನಲ್ಲಿ
ಶ್ರೇಷ್ಠನಾದ ನಾನುವು ಚಳಿ, ಸೆಕೆ; ಸುಖದುಃಖಗಳು ಮತ್ತು
ಮಾನಾವಮಾನಗಳು ಇವುಗಳಲ್ಲಿ ಯಾವ ಬದಲಾವಣೆಯನ್ನೂ ಹೊಂದದೆ,
ಒಂದೇ ಸಮನಾದ ಸಮಾಧಾನದಿಂದ ಅವುಗಳನ್ನನುಭವಿಸುತ್ತಾನೆ. ಹಗೆ ೬ ೭
ಗಳು ಮತ್ತು ಗೆಳೆಯರಲ್ಲಿ; ಮಾನಾವಮಾನಗಳಲ್ಲಿ ಮತ್ತು ಸೆಕೆ ಚಳಿಗಳಲ್ಲಿ ಅವು
ಗಳ ಗೋಜನ್ನು ತೊಲಗಿಸಿ ಎಲ್ಲವನ್ನೂ ಸಮನಾಗಿ ನೋಡುವವನೂ; ೧೨ ೧೮
ಉಪಕಾರಿಯಾದ ಗೆಳೆಯ; ಸ್ನೇಹಿತನು; ಹಗೆಯು; ಉದಾಸೀನನು; ಮಧ್ಯ

ಸ್ಥನು, ಹಗೆತನ ತೋರಿಸುವವನು ಮತ್ತು ನೆಂಟನು—ಇವರಲ್ಲಿಯೂ; ಈಶ್ವರನ ಭಜಕರಾದ ಸಾಧುಗಳಲ್ಲಿಯೂ ಮತ್ತು ಕೆಟ್ಟ ಕೆಲಸ ಮಾಡುವವರಲ್ಲಿಯೂ ಒಂದೇ ಸಮನಾದ ಮನೋಭಾವನೆಯುಳ್ಳವನೇ ಮೇಲಾದವನೆನಿಸಿಕೊಳ್ಳುತ್ತಾನೆ. ೬ ೯
ಬಯ್ಯುವಿಕೆ ಹೊಗಳಿಕೆಗಳನ್ನು ಸಮಾನವಾಗಿ ತಿಳಿಯುವವನೂ; ಹೆಚ್ಚು ಮಾತಾಡದೆ ಇರುವ ಮೌನಗುಣವನ್ನು ಹೊಂದಿದವನೂ, ದೊರೆತದ್ದರಿಂದಲೇ ತೃಪ್ತಿಪಡುವವನೂ; ಸುಖದುಃಖಗಳನ್ನು ಸಮಾನವಾಗಿ ಅನುಭವಿಸುವವನೂ; ೧೨ ೧೯
ಯಾವಾಗಲೂ ಅವನವನ ಮಿತಿಯಲ್ಲಿರುವವನೂ, ಮಣ್ಣು ಕಲ್ಲು ಚಿನ್ನಗಳನ್ನು ಸಮನಾಗಿ ಭಾವಿಸುವವನೂ; ಬೇಕಾದ ಮತ್ತು ಬೇಡವಾದವು ೧೪ ೨೪
ಗಳಲ್ಲಿ ಸಮನೂ; ಧೈರ್ಯ ಗುಣವುಳ್ಳವನೂ, ನಾನುವಿನ ವಿಷಯದಲ್ಲಿ ಮಾಡುವ ಗಾಂಪರ ತಿರಸ್ಕಾರಪುರಸ್ಕಾರಗಳನ್ನು ಒಂದೇ ವಿಧವಾಗಿ ಎಣಿಸುವವನೂ; ಮಾನ ಮತ್ತು ಅಪಮಾನಗಳಲ್ಲಿ ಸಮಭಾವನೆಯುಳ್ಳವನೂ; ಸ್ನೇಹಿತರ ೧೪ ೨೪
ಮತ್ತು ಶತ್ರುಗಳ ಕಡೆಯವರನ್ನು ಒಂದೇ ಸಮನಾಗಿ ಎಣಿಸುವವನೂ; ೧೪ ೨೫
ಅದಾಗಿಯೇ ದೊರೆತಷ್ಟರಲ್ಲಿ ಸಂತೋಷವನ್ನು ತಾಳುವವನೂ; ಚಳಿ ಮತ್ತು ಸೆಕೆಗಳೇ ಮೊದಲಾದ ಜೋಡಿ ಅನುಭವಗಳನ್ನು ಗೆದ್ದವನಾಗಿ (ದ್ವಂದ್ವಾತೀತನಾಗಿ) ಹೊಟ್ಟೇಗಿಚ್ಚಿಲ್ಲದವನೂ ಮತ್ತು ಮಾಡಿದ ಕೆಲಸದ ಫಲವಾಗುವಿಕೆ ಮತ್ತು ಫಲವಾಗದಿರುವಿಕೆಗಳೆಂಬ ಎರಡು ಸಂದರ್ಭಗಳಲ್ಲಿಯೂ ಹಿಗ್ಗದೆ ಅಥವಾ ಕುಗ್ಗದೆ ಒಂದೇ ಸಮನಾಗಿರುವವನೂ ಕೆಲಸಗಳನ್ನು ಮಾಡುತ್ತಿದ್ದರೂ ಅವುಗಳ ಸೆರೆಗೆ ಒಳಪಡುವುದಿಲ್ಲ. ೪ ೨೨

ಮಾಡುವ ಕೆಲಸಗಳನ್ನು ಮನಸ್ಸಿನಿಂದ ಒತ್ತಟ್ಟಗಿಟ್ಟು ಜಿತೇಂದ್ರಿಯನಾದ ದೇಹಿಯಾದ ನಾನುವು ಒಂಭತ್ತು ಬಾಗಿಲುಗಳಿರುವ ಈ ಶರೀರವೆಂಬ ಪಟ್ಟಣದಲ್ಲಿ ಏನನ್ನೂ ಮಾಡದೆಯೂ ಮತ್ತು ಮಾಡಿಸದೆಯೂ ಸಾಕ್ಷಿಭೂತನಾಗಿ ಸುಖವಾಗಿರುತ್ತಾನೆ. ೫ ೧೩

ಯೋಗಿಗಳ ಕೆಲಸ

ಶರೀರದಿಂದಲೂ, ಮನಸ್ಸು ಬುದ್ಧಿಗಳಿಂದಲೂ ಮತ್ತು ಕೇವಲ ಇಂದ್ರಿಯಗಳಿಂದಲೂ ನಾನುವಿನ ಸಲುವಾಗಿ ಕಲ್ಮಷದಿಂದ ಬಾಧಿತರಾಗದೆ ಶುದ್ಧವಾಗಿರಲು ಫಲದ ಗೋಜನ್ನು ಬಿಟ್ಟು ಯೋಗಿಗಳು ಕೆಲಸವನ್ನು ಮಾಡುತ್ತಾರೆ. ಕೆಲಸದ ಮತ್ತು ಫಲಗಳ ೫ ೧೧
ಗೋಜನ್ನು ಬಿಟ್ಟವನ, ಬಂಧನದಿಂದ ಬಿಡುಗಡೆ ಹೊಂದಿದವನ ಮತ್ತು ಆತ್ಮಜ್ಞಾನದಲ್ಲಿ ನಟ್ಟ ಮನಸ್ಸುಳ್ಳವನ ಯಜ್ಞ ಕಾರ್ಯಗಳು ನಾನುವಿಗೆ ಸಮರ್ಪಿತವಾಗಿ ಬಂಧನಕ್ಕೆ ಒಳಪಡಿಸುವುದಿಲ್ಲ. ಸಮಸ್ತ ಚರಾಚರ ವಸ್ತುಗಳಲ್ಲಿ ೪ ೨೩
ಹೆಚ್ಚು ಕಡಮೆ ಇಲ್ಲದೆ ಒಂದೇ ಸಮನಾಗಿರುವ, ಬದಲಾವಣೆ ಹೊಂದುವ ನಾಮರೂಪಗಳಲ್ಲಿ ಬದಲಾವಣೆ ಹೊಂದದೆಯೂ, ನಾಮರೂಪಗಳಿಲ್ಲದೆಯೂ ಇರುವ ಪರಮೇಶ್ವರನನ್ನು ತಿಳಿಯುವ ಸಾಧಕನು ನಾನುವಿನ ಅಪರೋಕ್ಷಾನುಭವವನ್ನು ಹೊಂದು

ಯೋಗಿಯ ಮನೋಭಾವ *

* ಯೋಗಿಯು ವ್ಯಾವಹಾರಿಕ ಯತ್ನದಲ್ಲಿ 'ನಾನು' ವಿಗೆ ನೋವಾಗದಂತೆ ನಡೆದುಕೊಳ್ಳುತ್ತಾನೆ.

ತ್ತಾನೆ. ಎಲ್ಲೆಡೆಗಳಲ್ಲಿಯೂ ಅಖಂಡವಾಗಿ ತುಂಬಿ ನೆಲೆಸಿರುವ ಈಶ್ವರ ೧೩ ೨೭
ನಾನುವನ್ನು ಸಮನಾಗಿ ನೋಡುವವನು, ಒಂದು ದೇಹದಲ್ಲಿನ ಸಾಕ್ಷಿಯಾದ ನಾನುವಿನಿಂದಮತ್ತೊಂದು ದೇಹದಲ್ಲಿರುವ ಸಾಕ್ಷಿಯಾದ ನಾನುವನ್ನು ತೊಂದರೆಗೊಳಿಸುವುದಿಲ್ಲ.ಅಲ್ಲದೆ ಕೊನೆಗೆ ಉತ್ತಮ ಪದವಿಯನ್ನು ಪಡೆಯುತ್ತಾನೆ. ೧೩ ೨೮
ಯಾವನು ಎಲ್ಲ ವಸ್ತುಗಳಲ್ಲಿಯೂ,ಎಲ್ಲೆಡೆಯಲ್ಲಿಯೂ ನಾನುವನ್ನು ಕಾಣುವನೋ; ಎಲ್ಲವನ್ನೂ ನಾನುವಿನಲ್ಲಿಯೇ ನೋಡುವನೋ ಅಂತಹ ಸಾಧಕನಿಗೆ ನಾನುವು ಮರೆಯಾಗುವುದಿಲ್ಲ. ಮತ್ತು ನಾನುವಿಗೆ ಸಾಧಕನೂ ಮರೆಯಾಗುವುದಿಲ್ಲ. ೬ ೩೦
ಯೋಗದ ಕ್ರಮದಿಂದ ಚಿತ್ತವನ್ನು ನಾನುವಿನಲ್ಲಿ ಸೇರಿಸಿರುವ ಸಾಧಕನು ಎಲ್ಲ ಕಡೆಗಳಲ್ಲಿ ಎಲ್ಲ ವಸ್ತುಗಳಲ್ಲಿ ಸಮನಾಗಿ ನಾನುವನ್ನು ನೋಡುತ್ತಾನೆ. ಸಾಕ್ಷಿಯ ರೂಪದಲ್ಲಿ ನಾನುವು ಪ್ರಾಣಿಗಳಲ್ಲಿರುವುದನ್ನೂ ಮತ್ತು ಅಖಂಡ ನಾನುವಿನಲ್ಲಿ ಪ್ರಾಣಿಗಳೆಲ್ಲಾ ಇರುವುದನ್ನೂ* ಮುಂದಟ್ಟುಮಾಡಿಕೊಂಡಿರುತ್ತಾನೆ. ೬ ೨೯
ನಾನುವಿಗೆ ಸಮಾನವಾಗಿರುವಿಕೆಯ ದೃಷ್ಟಿಯಿಂದ ಎಲ್ಲೆಡೆಯಲ್ಲಿ ಎಲ್ಲ ವಸ್ತುಗಳಲ್ಲಿ, ಸುಖ ಮತ್ತು ದುಃಖಗಳ ಅನುಭವಗಳಲ್ಲಿ ಸಮಭಾವದಿಂದ ನೋಡುವವನು ಉತ್ತಮನಾದ ಯೋಗಿಯಾಗುವನೆಂದು ಅಭಿಪ್ರಾಯ. ತತ್ತ್ವ ೬ ೩೨
ಜ್ಞಾನ ಮತ್ತು ಆತ್ಮಜ್ಞಾನದಿಂದ ತೃಪ್ತಿಪಡೆದು ನಾನುವನ್ನು ಸಾಕ್ಷಾತ್ಕರಿಸಿದವನು ಪ್ರಪಂಚದ ವ್ಯವಹಾರದಲ್ಲಿದ್ದೂ ಇಂದ್ರಿಯಗಳನ್ನು ಗೆದ್ದು, ಮಣ್ಣು ಕಲ್ಲು ಮತ್ತು ಚಿನ್ನಗಳ ವ್ಯತ್ಯಾಸವನ್ನು ನೋಡದೆ ಒಂದೇ ಸಮನಾಗಿ ಭಾವಿಸುವ ಸಾಧಕನು ಆತ್ಮಾಪರೋಕ್ಷಾನುಭವಕ್ಕೆ ಪಾತ್ರನೆನಿಸುವನು. ವಿದ್ಯಾ ೬ ೮
ವಿನಯಗಳಿಂದ ಕೂಡಿದ ವಿದ್ವಾಂಸರೆನಿಸಿದ ಉತ್ತಮ ಮಾನವರಲ್ಲಿಯೂ, ಬ್ರಾಹ್ಮಣ ಧರ್ಮಾನುಯಾಯಿಗಳಾದ ಸಾಮಾನ್ಯರಲ್ಲಿಯೂ, ಆಕಳು ಮೊದಲಾದ ಮಾನವನ ಜತೆಯಲ್ಲಿ ವಾಸಿಸುವ ಕಾಲ್ನಡೆಗಳಲ್ಲಿಯೂ ಆನೆಯೇ ಮೊದಲಾದ ಕಾಡುಮೃಗಗಳಲ್ಲಿಯೂ, ಹೀನಾಯವಾಗಿ ಎಣಿಸಲ್ಪಡುವ ನಾಯಿ ಮೊದಲಾದವುಗಳಲ್ಲಿಯೂ ಮತ್ತು ಕೀಳುವರ್ಗದ ಸ್ಥಿತಿಯ ಜನಗಳಲ್ಲಿಯೂ ನಾನುವಿನ ಅರಿವುಳ್ಳ ಪಂಡಿತರೆನಿಸಿದವರು ಸಮವನ್ನು ಅಂದರೆ ನಾನುವನ್ನು ನೋಡುವವರಾಗಿ ಎಲ್ಲವನ್ನೂ ಸಮವೆಂದು ಭಾವಿಸುತ್ತಾರೆ. ೫ ೧೮

ಯೋಗಸಿದ್ಧಿ :—

ಬ್ರಹ್ಮವು (ಪೂರ್ಣವಸ್ತುವು) ದೋಷಗಳಿಲ್ಲದೆ, ವಿಕಾರವಿಲ್ಲದೆ ಸಮವಾಗಿಯೇ ಇರುವುದು; ಸಮವೇ ಬ್ರಹ್ಮ; ಯಾರ ಮನಸ್ಸು ಸಮಸ್ಥಿತಿಯಲ್ಲಿ

---

* ನಾನುವು ವಿಶ್ವವ್ಯಾಪೀ.

ನಿಂತಿರುವುದೋ ಅಂತಹ ಯೋಗಿಗಳಿಂದ ಈ ಹುಟ್ಟು ಸಾವೆಂಬ ಸಂಸಾರವು
ಗೆಲ್ಲಲ್ಪಟ್ಟಿರುವುದು (ಸಂಸಾರದ ಬಾಧೆಗಳು ಅವರನ್ನು ಸೇರಲಾರವು.) ಆದುದ
ರಿಂದ 'ಸಮ' ಸಾಧನೆಯ ಯೋಗಿಗಳು 'ಸಮ' ದಲ್ಲಿ ಅಂದರೆ 'ಬ್ರಹ್ಮ'
ನಲ್ಲಿ (ಪೂರ್ಣ ನಾನುವಿನಲ್ಲಿ) ಯೇ ಇರುತ್ತಾರೆ. ಪೃಥಿವ್ಯಾದಿ ಧಾತು ೫ ೧೯
ಗಳಲ್ಲಿ ಮತ್ತು ಪ್ರಾಣಿಗಳಲ್ಲಿ ಬೇರೆ ಬೇರೆಯಾಗಿ ಕಾಣುವುದೆಲ್ಲಾ ನಾನುವೊಂದ
ರಲ್ಲಿಯೇ ಇರುವುದಾಗಿ ಯಾವಾಗ ವಿಸ್ತಾರವಾಗಿ ತಿಳಿಯುತ್ತಾನೋ ಆ
ಕೂಡಲೇ ಬ್ರಹ್ಮವನ್ನು ಹೊಂದುವವನಾಗುತ್ತಾನೆ. ಕೆಲಸಗಳನ್ನು ಮಾಡತೊಡ
ಗದೇ ಇದ್ದಮಾತ್ರದಿಂದಲೇ ಸಾಧಕನು 'ಕೆಲಸವಿಲ್ಲದಿರುವಿಕೆ' ಯನ್ನು ೧೩ ೩೦
ಅನುಭವಿಸಲಾರನು. ಹಾಗೂ ಕೆಲಸಗಳನ್ನು ಮಿಾಸಲಾಗಿ ಒತ್ತಟ್ಟಿಗಿಡುವುದ
ರಿಂದಲೂ, ಈ ಸಿದ್ಧಿಯುಂಟಾಗಲಾರದು. [ಪೂರ್ಣನಾನು ಎಂಬಲ್ಲಿ ಪೂರ್ಣ ೩ ೪
ಶಬ್ದವು ನಾನುವಿನ ಗುಣವಾಚಕ; ಪೂರ್ಣನಾನು= ನಾನು.]

ಎಲ್ಲಾ ಸಂದರ್ಭಗಳಲ್ಲಿಯೂ ಗೋಜನ್ನು ಬಿಟ್ಟಿರುವ ಬುದ್ಧಿಯುಳ್ಳವನಾಗಿ
ಬಯಕೆಗಳಿಂದ ಬಿಡಲ್ಪಟ್ಟಿರುವ ನಾನುವಿನ ಅರಿವನ್ನು ಪ್ರಯತ್ನಪೂರ್ವಕ
ಗೆದ್ದಂತೆ ಪಡೆದಿರುವ ಸಾಧಕನು ಮಿಾಸಲಾಗಿ ಒತ್ತಟ್ಟಿಗಿಡುವಿಕೆ ಎಂದರೆ
ಸಂನ್ಯಾಸವೆಂಬ ಸಮ್ಯಗ್ದರ್ಶನದಿಂದ ಕೆಲಸವಿಲ್ಲದಿರುವಿಕೆ (ನೈಷ್ಕರ್ಮ್ಯ) ಎಂಬ
ಅತ್ಯುತ್ಕೃಷ್ಟವಾದ ಸಿದ್ಧಿಯನ್ನು ಹೊಂದುತ್ತಾನೆ. ಹೀಗೆ ನೈಷ್ಕರ್ಮ್ಯ ೧೮ ೪೯
ಸಿದ್ಧಿಯಿಂದ ಬ್ರಹ್ಮಾನುಭವವಾಗುವುದನ್ನೇ ಸಂಗ್ರಹವಾಗಿ ತಿಳಿಯಬೇಕು. ಇದೇ
ತಿಳಿವಳಿಕೆಯ ಪರಮಾವಧಿಯು.—(ಪರಿಸಮಾಪ್ತಿಯು). ೧೮ ೫೦

ಪರಿಶುದ್ಧವಾದ ಚಿತ್ತದಿಂದ (ಬುದ್ಧಿಯಿಂದ) ನಾನುವಿನೊಡನೆ ಕೂಡಿ,
ಧೈರ್ಯದಿಂದ ನಾನುವನ್ನು ಹೊಂದುವುದಕ್ಕಾಗಿ ಇಂದ್ರಿಯಗಳನ್ನು ಪಳಗಿಸಿ,
ಶಬ್ದವೇ ಮೊದಲಾದ ವಿಷಯಗಳನ್ನು ಅನುಭವಿಸುತ್ತಾ, ಪಡೆದಿರುವ ವಸ್ತುಗಳ
ಮೇಲಿನ ಅಕ್ಕರೆಯನ್ನೂ ಹಗೆತನವನ್ನೂ ತೊಡೆದುಹಾಕಿ, ಜನಗಳ ೧೮ ೫೧
ಸಂಚಾರ ಹೆಚ್ಚಿಲ್ಲದ ಕಡೆಗಳಲ್ಲಿದ್ದುಕೊಂಡು ಪ್ರಾಣಧಾರಣೆಗೆ ತಕ್ಕಷ್ಟು ಮಾತ್ರ
ಆಹಾರವನ್ನು ತೆಗೆದುಕೊಳ್ಳುತ್ತಾ ಮಾತು, ಶರೀರ ಮತ್ತು ಮನಸ್ಸುಗಳನ್ನು
ಹತೋಟಿಯಲ್ಲಿಟ್ಟುಕೊಂಡು ಯಾವಾಗಲೂ ನಾನುವಿನ ಧ್ಯಾನದಲ್ಲಿಯೇ ಚಿತ್ತ
ವನ್ನು ನೆಲೆಗೊಳಿಸಿ ವೈರಾಗ್ಯವನ್ನು ಹಿಡಿದು, ಹೆಮ್ಮೆ, ಬಲ, ಸೊಕ್ಕು ೧೮ ೫೨
ಇಚ್ಛೆ ಮತ್ತು ಕೋಪ, ದಾನ ತೆಗೆದುಕೊಳ್ಳುವುದು ಇವುಗಳನ್ನೆಲ್ಲಾ ದೂರೀಕರಿಸಿ
'ನನ್ನದು' ಎಂಬ ಮಮಕಾರವನ್ನು ಬಿಟ್ಟು ಶಾಂತಚಿತ್ತನಾದವನು ಬ್ರಹ್ಮವೆನಿ
ಸುವುದಕ್ಕೆ ಅರ್ಹನಾಗುತ್ತಾನೆ. ಬ್ರಹ್ಮವೆನಿಸಿದ, ಪ್ರಸನ್ನನಾದ ನಾನು ೧೮ ೫೩
ವುಳ್ಳ ಯೋಗಿಯು ಕೊರಗುವುದೂ ಇಲ್ಲ, ಬಯಸುವುದೂ ಇಲ್ಲ. ಸರ್ವ ಚರಾ

ಚರ ವಸ್ತುಗಳಲ್ಲಿ 'ಸಮ'="(ಬ್ರಹ್ಮ") ಭಾವವನ್ನೇ ಹೊಂದಿದವನಾಗಿ ನಾನು
ವಿನಲ್ಲಿ ಅತ್ಯಂತ ಭಕ್ತಿಯನ್ನು ಹೊಂದುತ್ತಾನೆ. ಯಾವನು ಈ ವಿಧವಾದ ೧೮ ೫೪
ಭಕ್ತಿಯಿಂದ 'ನಾನುವು ಎಂತಹವನು' ಎಂಬುದನ್ನು ತತ್ತ್ವವಿಚಾರದ ಮೂಲಕ
ಗೊತ್ತುಹಿಡಿಯುತ್ತಾನೋ ಅವನು ತತ್ತ್ವಜ್ಞಾನವಾದ ಮೇಲೆ ನಾನುವನ್ನು
ಸಾಕ್ಷಾತ್ಕರಿಸಿ ಅಪರೋಕ್ಷಾನುಭವವನ್ನು ಹೊಂದುತ್ತಾನೆ. ನಾನುವಿ ೧೮ ೫೫
ನಲ್ಲೇ ಆಶ್ರಯವನ್ನು ಹೊಂದಿ ಯಾವಾಗಲೂ ಯಾವುದಾದರೂ ಕೆಲಸಗಳನ್ನು
ಮಾಡುತ್ತಿದ್ದರೂ ನಾನುವಿನ ಒಲುಮೆಯಿಂದ ಶಾಶ್ವತ ಸುಖವೂ ಮತ್ತು ನಾಶ
ವಿಲ್ಲದುದೂ ಆದ ಬ್ರಹ್ಮಾನಂದಪದವಿಯನ್ನು ಹೊಂದುತ್ತಾನೆ. ೧೮ ೫೬

ಮುಕ್ತಿ :—

ಇಂದ್ರಿಯನಿಗ್ರಹಾದಿ ಗುಣಗಳಿಂದ ಕೂಡಿ, ಸಂಯಮಿ ಎನಿಸಿದ ಯೋಗಿಯು
ಪ್ರಾಣಿಗಳಿಗೆಲ್ಲಾ ವಿಶ್ರಾಂತಿ ಕಾಲವಾದ ರಾತ್ರಿಯಲ್ಲಿ ಎಚ್ಚರವಾಗುತ್ತಾನೆ; ಮತ್ತು
ಪ್ರಾಣಿಗಳು ಎಚ್ಚರವಾಗಿರುವ ಕಾಲವು ಕಣ್ಣಿಂದ ನೋಡುತ್ತಿರುವ ಮುನಿಗೆ
ವಿಶ್ರಾನ್ತಿಕಾಲವಾದ ರಾತ್ರಿಯಾಗಿರುವುದು. ಇಂದ್ರಿಯ, ೨ ೬೯

ಜೀವನ್ಮುಕ್ತ

ಮನಸ್ಸು ಮತ್ತು ಬುದ್ಧಿ ಇವುಗಳನ್ನು ಹತೋಟಿಯಲ್ಲಿಟ್ಟು
ಕೊಂಡಿರುವ, ಸಂಸಾರದ ಕಷ್ಟದಿಂದ ಬಿಡುಗಡೆ ಹೊಂದುವ, ಮೋಕ್ಷಸ್ಥಿತಿಯಲ್ಲಿ
ಆಸಕ್ತನಾಗಿರುವ, ಮೌನವ್ರತವನ್ನು ಹಿಡಿದಿರುವ, ಬಯಕೆ, ಅಂಜಿಕೆ ಮತ್ತು
ಕೆಲಸಗಳನ್ನುಳಿದ ಯೋಗಿಯು ಸದಾ ಬದುಕಿರುವಾಗಲೇ ಸಂಸಾರದ ದೆಸೆಯಿಂದ
ಬಿಡಲ್ಪಟ್ಟು ಮುಕ್ತನೆನಿಸುವನು.* ಇಂದ್ರಿಯಗಳಿಗೆ ಬೇಕಾಗಿರುವ ೫ ೨೮
ಹೊರಗಿನ ವಸ್ತುಗಳಲ್ಲಿ ನಾನುವು ಬೆರೆಯದಿರುವಂತೆ ಯತ್ನಿಸಿದ ಯೋಗಿಯು
ಸ್ವಸ್ವರೂಪ ನಾನುವಿನಲ್ಲಿ ಹೊಂದುವ ಸುಖಾನಂದವನ್ನೇ, ಸಾಕ್ಷಿಯಾದ ನಾನು
ವನ್ನು ಯೋಗದಿಂದ ಬ್ರಹ್ಮನಲ್ಲಿ (ಪೂರ್ಣನಾನುವಿನಲ್ಲಿ) ಸೇರಿಸುವವನು ಶಾಶ್ವತ
ವಾಗಿ ಮತ್ತು ನಾಶವಿಲ್ಲದುದಾಗಿ ಅನುಭವಿಸುತ್ತಾನೆ. ಬಯಕೆ ೫ ೨೧
ಮತ್ತು ಸಿಟ್ಟುಗಳಿಂದ ಬಿಡಲ್ಪಟ್ಟ ಚಿತ್ತಸ್ವಾಧೀನವುಳ್ಳ, ನಾನುವಿನ ಅರಿವುಳ್ಳ
ಯತಿಗಳಾದ ಯೋಗಿಗಳಿಗೆ ಶಾಶ್ವತಸುಖ ಬ್ರಹ್ಮಾನಂದವು ಸನ್ನಿಹಿತವಾಗಿಯೇ
ಇರುವುದು. (ಬಳಿಯಲ್ಲೇ ಇರುವುದು.) ಹಾಗೆಯೇ ದೇಹಿಯಾದ ನಾನು ೫ ೨೬
ವಿನಲ್ಲಿ ಸುಖವನ್ನು ತಾಳಿದ, ದೇಹಿಯಲ್ಲಿಯೇ ಕ್ರೀಡಾದಿಗಳನ್ನು ಹೊಂದಿದ,
ಹಾಗೆ, ಒಳಗೆ ಇರುವ (ಒಳಗಿನ) ನಾನುವಿನ ಬೆಳಕನ್ನು ಅನುಭವಿಸಿದ
ಯೋಗಿಯು ಬ್ರಹ್ಮಸ್ವರೂಪನಾಗಿ ಶಾಶ್ವತ ಬ್ರಹ್ಮಾನಂದಸುಖ (ಅಪರೋಕ್ಷಾನು
ಭವ) ವನ್ನು ಹೊಂದುತ್ತಾನೆ. ಪಾಪವೆಂಬ ಕಲ್ಮಷಗಳು ಸವೆದುಹೋಗಿ ೫ ೨೪

---

* ಬೌದ್ಧಾವತಾರದ ರಹಸ್ಯ.

ರುವ 'ಎರಡು' ಅಥವಾ 'ಬೇರೆ ಬೇರೆ' ಎಂಬ ಭಾವನೆಯನ್ನು ತೊಡೆದು
ಹಾಕಿದ, ಆತ್ಮಲಾಭಕ್ಕಾಗಿ ಇಂದ್ರಿಯಾದಿಗಳನ್ನು ಹದಗೊಳಿಸಿರುವ ಸಮಸ್ತ
ಪ್ರಾಣಿಗಳ ಹಿತದಲ್ಲಿ ಸಂತೋಷವನ್ನು ಹೊಂದುವ ಋಷಿಗಳು ಎನಿಸಿದ ಯೋಗಿ
ಗಳು ಬ್ರಹ್ಮಾನಂದದ ಅಪರೋಕ್ಷಾನುಭವವನ್ನು ಹೊಂದುತ್ತಾರೆ. ಗೌರವ ೫ ೨೫
ಮತ್ತು ಭ್ರಮೆಗಳಿಲ್ಲದ, ಸಂಗದ ದೋಷವನ್ನು ತೊಲಗಿಸಿ ಗೆದ್ದಿರುವ, ಯಾವಾ
ಗಲೂ ನಾನುವನ್ನೇ ಚಿಂತಿಸುವ, ಬಯಕೆಗಳಿಂದ ಹಿಂತೆಗೆದಿರುವ, ಸುಖ
ದುಃಖಾದಿ ದ್ವಂದ್ವಾನುಭವಗಳಿಂದ ಬಿಡಲ್ಪಟ್ಟಿರುವ ಯೋಗಿಗಳು 'ತತ್' ಎಂಬ
ನಾಶರಹಿತವಾದ ನಾನುವಿನ ಸ್ಥಾನವನ್ನು ಸೇರುತ್ತಾರೆ. ಉತ್ಕೃಷ್ಟವಾದ ೧೫ ೫
ಶಾಂತಿಯನ್ನು ಹೊನ್ದಿರುವ ಮನಸ್ಸುಳ್ಳ, ರಜೋಗುಣವಡಗಿರುವ, ಕಲ್ಮಷವಿಲ್ಲದ
'ಬ್ರಹ್ಮ' ವೆನಿಸಿದ ಇಂತಹ ಯೋಗಿಯನ್ನು ಉತ್ತಮ ಸುಖವೇ ಆಶ್ರಯಿ
ಸುತ್ತದೆ. ಮುಪ್ಪು, ಸಾವು ಮೊದಲಾದವುಗಳಿಂದ ಬಿಡುಗಡೆಹೊಂದು ೬ ೨೭
ವುದಕ್ಕಾಗಿ ನಾನುವನ್ನು ಆಶ್ರಯಿಸಿ ಯತ್ನಿಸುವ ಸಾಧಕರು–'ತತ್' ಎಂಬ
ಬ್ರಹ್ಮವನ್ನೂ ಪೂರ್ಣವಾದ ನಾನುವಿನ ವಿಚಾರವನ್ನೂ ಸಮಸ್ತ ಕೆಲಸವನ್ನೂ
ತಿಳಿಯುವವರಾಗುತ್ತಾರೆ. ನಾನುವನ್ನು ಪ್ರಾಣಿಗಳಲ್ಲೆಲ್ಲಾ ಉತ್ಕೃಷ್ಟ ೭ ೨೯
ನೆಂತಲೂ, ದೇವತೆಗಳಿಗೆಲ್ಲಾ ಮೇಲಾದವನೆಂತಲೂ ಮತ್ತು ಯಜ್ಞಗಳಿಗೆಲ್ಲಾ
ಒಡೆಯನು ಎಂತಲೂ ಯಾರು ತಿಳಿಯುತ್ತಾರೋ ಅಂತಹ ಯೋಗಿಗಳು ಚಿತ್ತ
ವನ್ನು ನಾನುವಿನಲ್ಲಿಯೇ ನಟ್ಟವರಾಗಿ, ಕಳೇಬರವು ನಾನುವಿನಿಂದ ಬಿಟ್ಟು
ಹೋಗುವ ಕಾಲದಲ್ಲಿಯೂ ಸಹ ನಾನುವನ್ನು ತಿಳಿಯುತ್ತಾರೆ. ಶಾಶ್ವತ ೭ ೩೦
ಸುಖವೆಂಬ ಈ ಸ್ಥಿತಿಯು 'ಬ್ರಾಹ್ಮೀ' ಎಂದು ಹೇಳಲ್ಪಡುತ್ತದೆ. ಈ ಸ್ಥಿತಿ
ಯನ್ನು ಪಡೆದಮೇಲೆ ಭ್ರಾಂತಿಯಿರುವುದೇ ಇಲ್ಲ. ಬ್ರಹ್ಮಸ್ಥಿತಿಯಲ್ಲಿರುವವನು
ಜೀವಿತದ ಕೊನೆಗಾಲದಲ್ಲಿಯೂ ಬ್ರಹ್ಮಾಪರೋಕ್ಷಾನುಭವವನ್ನು ಹೊಂದುತ್ತಾನೆ.
೨ ೭೨

ಜೀವಮಾನದ ಕೊನೆಯಲ್ಲಿ ನಾನುವನ್ನೇನೆನೆಯುತ್ತಾ ಕಳೇಬರ–ವಾ–
ಶರೀರವನ್ನು ಬಿಟ್ಟು ಈ ಲೋಕದಿಂದ ಹೊರಡುವವನು ನಾನುವಿನ ಭಾವವನ್ನೇ

ಯೋಗಿಯ ವಿದೇಹ ಕೈವಲ್ಯ

ಹೊಂದುತ್ತಾನೆ. ಈ ವಿಷಯದಲ್ಲಿ ಸಂದೇಹವಿಲ್ಲ. ೮ ೫
ಜೀವಮಾನದ ಕೊನೆಯ ಕಾಲದಲ್ಲಿ ದೇಹಗಳು, ಮನುಷ್ಯರು,
ಪ್ರಾಣಿಗಳೇ ಮೊದಲಾದುವುಗಳ ಸ್ಥಿತಿಯನ್ನು ನೆನೆದುಕೊಳ್ಳು
ತ್ತಾ ಶರೀರವನ್ನು ತೊರೆಯುವವನು ಯಾವಾಗಲೂ ಮೇಲ್ಕಂಡ ಆಯಾ ಸ್ಥಿತಿ
ಯನ್ನೇ ಹೊಂದುತ್ತಾನೆ. ಯೋಗಶಾಸ್ತ್ರದಲ್ಲಿ ಹೇಳಿರುವನ್ತೆ ಶರೀರದಲ್ಲಿ ೮ ೬
ರುವ ಒಂಭತ್ತುಬಾಗಿಲುಗಳನ್ನು ಹಿಡಿತದಲ್ಲಿಟ್ಟುಕೊಂಡು, ಮನಸ್ಸನ್ನು ನಾನುವಿನ
ಕೇಂದ್ರವಾದ ಹೃದಯದಲ್ಲಿ ತಡೆದು ನಿಲ್ಲಿಸಿ, ಪ್ರಾಣವಾಯುವನ್ನು ತಲೆಯಬುರುಡೆ
(ಬ್ರಹ್ಮರಂಧ್ರ) ಯಲ್ಲಿ ನಿಲ್ಲಿಸಿ; ಯೋಗವನ್ನು ಹಿಡಿದು ಬ್ರಹ್ಮವಾಚಕ ೮ ೧೨

ಶಬ್ದವಾದ ("ಓಮ್")-ಪ್ರಣವವನ್ನು ಉಚ್ಚರಿಸುತ್ತಾ, ನಾನುವನ್ನು ನೆನೆ
ಯುತ್ತಾ ದೇಹವನ್ನು ಬಿಡುವವನು* ಉತ್ತಮಪದವಿಯನ್ನು ಪಡೆಯುತ್ತಾನೆ.
ಲೋಕವನ್ನು ಬಿಟ್ಟುಹೋಗುವ ಕಾಲದಲ್ಲಿ ಬೇರೇಕಡೆ ಮನಸ್ಸಿಡದೆ ಇರುವ, ೮ ೧೩
ರೂಢಿಯಾಗಿ ಬಂದಿರುವ ಯೋಗಕ್ರಮದಲ್ಲಿ ನಾನುವಿನೊಡನೆ ಕೂಡಿದ ಚಿತ್ತ
ದಿಂದ ಬೆಳಗುತ್ತಿರುವ ಕವಿಯೂ; ಪುರಾಣನೂ; ಆಳುವವನೂ; ಕಟ್ಟಳೆ ೮ ೮
ಗಳನ್ನು ಮಾಡುವವನೂ; ಅಣುವಿಗಿಂತಲೂ ಅಣುವಾಗಿರುವವನೂ; ಸರ್ವ
ವನ್ನೂ ಪರಿಪೋಷಿಸುವವನೂ; ಆಲೋಚನೆಗೆ ನಿಲುಕದ ರೂಪುಳ್ಳವನೂ;
ಕತ್ತಲೆಯಿಂದ ಬೇರೆಯಾಗಿ ಸೂರ್ಯನಂತೆ ಬೆಳಕುಳ್ಳವನೂ ಮತ್ತು ಉತ್ತಮ
ಪುರುಷನೂ ಆದ ನಾನುವನ್ನು ಯೋಗಬಲ ಭಕ್ತಿಗಳಿಂದ, ಕದಲದ ಮನಸ್ಸಿ ೮ ೯
ನಿಂದ, ಹುಬ್ಬುಗಳ ಮಧ್ಯೆ ಸರಿಯಾಗಿ ಪ್ರಾಣವನ್ನು ಒಳಹೊಗಿಸಿ, ನಿಲ್ಲಿಸಿ,
ಶರೀರವನ್ನು ಬಿಟ್ಟುಹೋಗುವವನು* ಆ ತೇಜೋಮಯನಾದ ಪರಮಪುರುಷನನ್ನೇ
ಹೊಂದುತ್ತಾನೆ. ೮ ೧೦

ಯೋಗಿಯ ಅಂತ್ಯ ಕಾಲಸ್ಥಿತಿ

ಯಾವ ಕಾಲದಲ್ಲಿ ಕಳೇಬರವನ್ನು ಬಿಟ್ಟು ಹೋದರೆ ಕರ್ಮಯೋಗಿಗಳು
ಹುಟ್ಟು ಸಾವುಗಳ-ಮನುಷ್ಯ-ಲೋಕಕ್ಕೆ ಹಿಂತಿರುಗುವುದಿಲ್ಲವೋ, ಯಾವ ಕಾಲ
ದಲ್ಲಿ ಕಳೇಬರವನ್ನು ಬಿಟ್ಟರೆ ತಿರುಗಿ ಹುಟ್ಟು ಸಾವುಗಳ
ಲೋಕಕ್ಕೆ ಬರುತ್ತಾರೆಯೋ ಅದು ಈ ರೀತಿ ವರ್ಣಿಸಲ್ಪ
ಟ್ಟಿದೆ:—ಅಗ್ನಿ (ಬೆಂಕಿ), ಹಗಲು, ಶುಕ್ಲಪಕ್ಷ ಮತ್ತು ೮ ೨೩
ಉತ್ತರಾಯಣಕಾಲದ ಆರುತಿಂಗಳು ಇವುಗಳಿಗೆ ಅಭಿಮಾನದೇವತೆಗಳ† ಕಾಲ
ದಲ್ಲಿ ಈ ಲೋಕವನ್ನು ಬಿಟ್ಟುಹೊರಡುವ, ಬ್ರಹ್ಮವನ್ನು ತಿಳಿದ ಯೋಗಿ ಜನರು
ಶಾಶ್ವತ ಬ್ರಹ್ಮಜ್ಯೋತಿಯನ್ನು ಹೊಂದುತ್ತಾರೆ. ಹೊಗೆ, ರಾತ್ರಿ, ಕೃಷ್ಣ ೮ ೨೪
ಪಕ್ಷ ಮತ್ತು ದಕ್ಷಿಣಾಯನದ ಆರು ತಿಂಗಳು ಈ ಅಭಿಮಾನದೇವತೆಗಳ† ಕಾಲ
ದಲ್ಲಿ ಲೋಕವನ್ನು ಬಿಟ್ಟ ಯೋಗಿಯು ಚಂದ್ರನ ಜ್ಯೋತಿಯನ್ನು ಸೇರಿ ಹಿಂತಿ
ರುಗಿ ಬರುತ್ತಾನೆ. ಅಗ್ನಿ, ಧೂಮ; ಹಗಲು, ರಾತ್ರಿ; ಶುಕ್ಲ, ಕೃಷ್ಣ; ೮ ೨೫
ಸಂವತ್ಸರದ ಉತ್ತರಾಯಣವೆಂಬ ಅರ್ಧಭಾಗ, ಸಂವತ್ಸರದ ದಕ್ಷಿಣಾಯನ
ವೆಂಬ ಅರ್ಧಭಾಗ ಇವೆಲ್ಲಾ ಬ್ರಹ್ಮಾಂಡದಲ್ಲಿ ಅನುಭವಕ್ಕೆ ಬರುವ ಕಾಲ
ವಾಚಕಗಳು. ಅಗ್ನಿ ಮತ್ತು ಧೂಮ (ಸೂರ್ಯ, ಛಾಯಾ)—ಗಳು ಆಲಂಕಾರಿ
ಕವಾಗಿ ಕಾಲಸೂಚಕಗಳು. ಇವುಗಳಲ್ಲಿ ಎರಡೆರಡು ಪದಾರ್ಥಗಳು ಸೇರಿ
ಬ್ರಹ್ಮಾಂಡದಲ್ಲಿ ಕಾಣುವ ಉರಿಯುವ ಬೆಂಕಿ (ಸೂರ್ಯ), ತಿಂಗಳು ಮತ್ತು ವರ್ಷ

---

* ಕಲ್ಕ್ಯವತಾರದ ರಹಸ್ಯ.

† ಈ ಅಭಿಮಾನದೇವತೆಗಳ ಕಾಲ—ಎಂದರೆ ಪ್ರಗತಿಯನ್ನುಂಟುಮಾಡುವ ಶಕ್ತಿಯನ್ನು ಹೊಂದಿದ ಕಾಲ ಅಥವಾ ಪಿಂಡಾಂಡದಲ್ಲಿ ಮನಸ್ಸಿನ ಸಮಯ—ವಾ—ಸಂದರ್ಭ.

ಗಳೆಂಬ ಪೂರ್ಣವಾದ ಕಾಲಪರಿಮಾಣಗಳನ್ನು ಹೇಳುತ್ತವೆ; ಮೊದಲು ಮೊದಲು ಹೇಳಿರುವ ಅಗ್ನಿ, ಹಗಲು, ಶುಕ್ಲ ಮತ್ತು ಉತ್ತರಾಯಣ * ಇವುಗಳು ಪಿಂಡಾಂಡದಲ್ಲಿ ಮನಸ್ಸಿನ ಕೇವಲ ಶುದ್ಧ ಅಥವಾ ಉತ್ತಮವಾದ ಜ್ಞಾನವನ್ನೂ, ಎರಡನೆ ಸಲ ಉಕ್ತವಾಗಿರುವ ಧೂಮ, ರಾತ್ರಿ, ಕೃಷ್ಣ ಮತ್ತು ದಕ್ಷಿಣಾಯನ, * ಇವುಗಳು ಪಿಂಡಾಂಡದಲ್ಲಿ ಮನಸ್ಸಿನ ಕಳಂಕ—ಪ್ರಾಪಂಚಿಕ—ವಾದ ಅಜ್ಞಾನ (ಮಾಯೆ)ವನ್ನೂ ತಿಳಿಸುವುವು.

ಬ್ರಹ್ಮವನ್ನು ತಿಳಿದ ಯೋಗಿಯು ಸಂಸ್ಕಾರ ಪರಿಪೂರ್ಣತೆಯಿಂದ ಮರಣಕಾಲದಲ್ಲಿಯೂ ಪೂರ್ಣನಾನುವಿನಲ್ಲಿ ಲೀನನಾಗಿ ಶಾಶ್ವತವಾದ ಬ್ರಹ್ಮಜ್ಯೋತಿಯನ್ನು ಪಡೆದು (ಸಂಸಾರಕ್ಕೆ) ಹಿಂತಿರುಗುವುದಿಲ್ಲ. ಬ್ರಹ್ಮವನ್ನು ತಿಳಿದ ಯೋಗಿಯು ಮರಣಕಾಲದಲ್ಲಿಯೂ ಪೂರ್ಣ ನಾನುವಿನಲ್ಲಿ ಲೀನನಾಗಲು ವಾಸನೆಯ ಬಲದಿಂದ ಕಳಂಕವುಂಟಾಗಿ ಶಾಶ್ವತ ಬ್ರಹ್ಮಜ್ಯೋತಿಯ ಪ್ರತಿಬಿಂಬವಾದ ಜ್ಯೋತಿ † ಯನ್ನು ಸೇರಿ ವಾಸನಾಕ್ಷಯಕ್ಕಾಗಿ ಪುನಃ ಜನ್ಮವನ್ನು ತಾಳುತ್ತಾನೆ. ೮ ೨೪, ೨೫

ಶುಕ್ಲಮಾರ್ಗ ಮತ್ತು ಕೃಷ್ಣಮಾರ್ಗ (ಬಿಳುಪು, ಕಪ್ಪು; ಒಳ್ಳೆಯದು, ಕೆಟ್ಟದ್ದು;) ಎಂಬ ಎರಡು ಮಾರ್ಗಗಳು ಜಗತ್ತಿನಲ್ಲಿ ಶಾಶ್ವತವಾಗಿವೆ ಎಂದು ತಿಳಿದುಬಂದಿವೆ. ಶುಕ್ಲಮಾರ್ಗದಿಂದ ಸಂಸಾರಕ್ಕೆ ಹಿಂತಿರುಗದಿರುವಿಕೆಯೂ, ಕೃಷ್ಣಮಾರ್ಗದಿಂದ ಹಿಂತಿರುಗುವಿಕೆಯೂ ಉಂಟಾಗುತ್ತವೆ. ಈ ಎರಡು ೮ ೨೬
ಮಾರ್ಗಗಳನ್ನೂ ತಿಳಿದ ಯೋಗಿಯು ಎಂದಿಗೂ ಭ್ರಮೆಪಡುವುದಿಲ್ಲ. ೮ ೨೭

ನಾನುವು ಉಪಾಧಿಗಳನ್ನು ಹೊಂದಿ ನಾಮರೂಪಗಳನ್ನು ಧರಿಸಿ ಹುಟ್ಟುವುದೂ; ದೇಹ, ಮನಸ್ಸು ಮತ್ತು ಇಂದ್ರಿಯಗಳ ಸಂಘಾತಗಳಿಂದ ಸಾಧುಪರಿತ್ರಾಣವೇ ಮೊದಲಾದ ಕೆಲಸಮಾಡುವುದೂ ಸಹ ಕೇವಲ ಜ್ಞಾನಕ್ಕೆ ಸಂಬಂಧ ಪಟ್ಟದ್ದು. ಇದನ್ನು ತತ್ತ್ವಶಾಸ್ತ್ರದೃಷ್ಟಿಯಿಂದ ನೋಡಿ ನಿಜಾಂಶ (ರಹಸ್ಯ) ವನ್ನು ತಿಳಿಯುವವನು ದೇಹವನ್ನು ತೊಲಗಿಸಿದ ಮೇಲೆ ಪುನಃ ಹುಟ್ಟುವುದಿಲ್ಲ ಮತ್ತು ನಾನುವನ್ನೇ ಸೇರುತ್ತಾನೆ. ನಾನುವನ್ನು ೪ ೯
ಪಡೆದು ಪರಮ ಶ್ರೇಷ್ಠವಾದ ನೈಷ್ಕರ್ಮ್ಯ ಸಿದ್ಧಿ ಮತ್ತು ಜ್ಞಾನಸಿದ್ಧಿಯೇ ಮೊದಲಾದ ಸಿದ್ಧಿಗಳನ್ನು ಪಡೆದ ಮಹಾತ್ಮರು ದುಃಖಕ್ಕೆ ಬೀಡಾದ, ಕ್ಷಣಿಕವಾದ ಮತ್ತೆಮತ್ತೆ ಹುಟ್ಟಿ ಸಾಯುವಿಕೆಯನ್ನು ಎಂದಿಗೂ ಹೊಂದುವುದಿಲ್ಲ. (ಸಂಸಾರ ಚಕ್ರಕ್ಕೆ ಸಿಕ್ಕುವುದಿಲ್ಲ.) (ಪ್ರಜಾಪತಿ) ಬ್ರಹ್ಮನ ಲೋಕವೊದಲ್ಗೊಂಡು ೮ ೧೫

* ಉತ್ತರ= ಮೇಲುತೆರನಾದ; ದಕ್ಷಿಣ= ಕೀಳುತೆರನಾದ.

† ಚಂದ್ರಶಬ್ದವು ಪ್ರತಿಬಿಂಬವೆಂಬ ಅರ್ಥವನ್ನು ಸೂಚಿಸುವುದೆಂದು ತಿಳಿಯಬೇಕು. ಚಾಂದ್ರಮಸ ಜ್ಯೋತಿಯು ಪೂರ್ಣ ಜ್ಯೋತಿಯ ಪ್ರತಿಬಿಂಬವಾದುದರಿಂದ ಶಾಶ್ವತವಲ್ಲ.

ಎಲ್ಲ ಲೋಕಗಳಲ್ಲಿರುವವರೂ ಮತ್ತೆಮತ್ತೆ ಹುಟ್ಟಿ ಸಾಯುವರು; ನಾನುವನ್ನು ಸೇರಿದವರು ಮಾತ್ರ ಮತ್ತೆಂದಿಗೂ ಹುಟ್ಟುವುದೇ ಇಲ್ಲ. ‘ತತ್’= ೮ ೧೬
ನಾನುವಿನಲ್ಲಿ ಸೇರಿದ ಬುದ್ಧಿಯುಳ್ಳ, “ತತ್”= ಪೂರ್ಣನಾನುವಿನಲ್ಲಿ ಐಕ್ಯವಾದ ಸಂಘಾತ ನಾನುವುಳ್ಳ, * “ತತ್”= ಬ್ರಹ್ಮನಲ್ಲಿ ಪರಿಸಮಾಪ್ತಿಯನ್ನು ಹೊಂದುವ, ‘ತತ್’ = ನಾನುವಿನಲ್ಲಿಯೇ ಆಸಕ್ತವಾದ ನಾನುವಿನ ಅರಿವಿನಿಂದ ಪಾಪವೆಂಬ ಕಲ್ಮಷವನ್ನು ತೊಳೆದು ಕೊಡವಿಹಾಕಿರುವ ಯೋಗಿಗಳು ಹುಟ್ಟುಸಾವುಗಳ ಲೋಕಕ್ಕೆ ಮತ್ತೆ ಬರದೆ ಇರುವಿಕೆಯ ಸ್ಥಿತಿಯನ್ನು ಹೊಂದುತ್ತಾರೆ. ೫ ೧೭

ಸಾಧಕರ ವಿರಳತೆ :—

ಸಹಸ್ರಾರು ಜನಗಳಲೊಬ್ಬನು ಆತ್ಮಸಿದ್ಧಿಗಾಗಿ ಯತ್ನಿಸುತ್ತಾನೆ. ಪ್ರಯತ್ನಮಾಡಿ ಸಿದ್ಧಿ ಹೊಂದಿದ ಬಹುಮಂದಿಗಳಲ್ಲಿ ಯಾವನೋ ಒಬ್ಬನು ಮಾತ್ರ ನಾನುವನ್ನು ತತ್ತ್ವಶಾಸ್ತ್ರಾನುಗುಣವಾಗಿ ತಿಳಿಯಬಲ್ಲನು. ಪುಣ್ಯ ೭ ೩
ಕೆಲಸಗಳನ್ನು ಮಾಡಿ ನಿಷ್ಪಾಪರಾದ ಜನಗಳು ದ್ವಂದ್ವಾನುಭವಗಳಿಂದ ಬಿಡುಗಡೆಯನ್ನು ಹೊಂದಿದವರಾಗಿ ಸ್ಥಿರವಾದ ನಿಯಮಗಳನ್ನು ಹಿಡಿದು ನಾನುವನ್ನು ಭಜಿಸುತ್ತಾರೆ. ೭ ೨೮

ಯೋಗಕ್ಕೆ ಅಧಿಕಾರಿಗಳು :—

ಆಯಾ ಯೋಗವಿಧಾನಕ್ಕೆ ತಕ್ಕಂತಹ ಆಹಾರ ವಿಹಾರಗಳನ್ನು ಕ್ರಮಪಡಿಸಿದವನಿಗೂ, ಮಾಡುವ ಕೆಲಸಗಳಿಗೆ ತಕ್ಕಂತೆ ಇಂದ್ರಿಯಗಳ ಕೆಲಸಗಳುಳ್ಳವನಿಗೂ ಮತ್ತು ಯೋಗವಿಧಾನಕ್ಕೆ ತಕ್ಕಹಾಗೆ ನಿದ್ದೆ ಮತ್ತು ಎಚ್ಚರಿಕೆ ಸ್ಥಿತಿಗಳನ್ನು ಅಳವಡಿಸಿಕೊಂಡಿರುವವನಿಗೂ—ಯೋಗವು ದುಃಖವನ್ನು ಹೋಗಲಾಡಿಸುವುದಾಗುತ್ತದೆ. ನಾನುವನ್ನು ಒಲಿಸಿಕೊಳ್ಳಲು ಮಾಡುವ ಇಂದ್ರಿಯ ೬ ೧೭
ನಿಗ್ರಹಾದಿ ಸಾಧನಗಳಿಂದ ಪ್ರಯತ್ನಮಾಡುವವನಿಂದ ಮಾತ್ರ ಎಚ್ಚರಿಕೆಯಿಂದ ಯೋಗವನ್ನು ಹೊಂದಲು ಸಾಧ್ಯವಾಗುತ್ತದೆ. ನಾನುವಿಗೆ ಸಮ್ಮತವಾದ ೬ ೩೬
ಮುಂದೆ ಹೇಳುವ ಯೋಗಾಭ್ಯಾಸ ಪದ್ಧತಿಯನ್ನು ತಪ್ಪದೆಯೂ, ಎಡೆಬಿಡದೆಯೂ, ಆಚರಣೆಗೆ ತಂದುಕೊಳ್ಳುವವರೂ; ಶ್ರದ್ಧೆಯಿಂದ ಕೂಡಿದವರೂ ಮತ್ತು ಅನ್ಯರ ಏಳಿಗೆಯನ್ನು ನೋಡಿ ಪೇಚಾಡದವರೂ—ಆದ ಜನರು ಪಾಪ ಕೆಲಸಗಳಿಂದ ಬಿಡಲ್ಪಟ್ಟು ಯೋಗಕ್ಕೆ ಅರ್ಹರಾಗುತ್ತಾರೆ. ಸ್ತ್ರೀಯರೂ, ಶ್ರೋತ್ರಿಯ ೩ ೩೧
ಬ್ರಾಹ್ಮಣರೂ, ಕ್ಷತ್ರಿಯ ಬ್ರಾಹ್ಮಣರೂ, ವೈಶ್ಯ ಬ್ರಾಹ್ಮಣರೂ ಮತ್ತು ಶೂದ್ರ

---

* (ಜೀವಬ್ರಹ್ಮೈಕ್ಯದ)

ಬ್ರಾಹ್ಮಣರೂ ಸಹ ಅವರವರ ವೃತ್ತಿ ದೋಷಗಳಿಂದ ಲಭಿಸಬಹುದಾದ ಪಾಪ
ಯೋನಿಯಲ್ಲಿ ಜನ್ಮ * ವೆತ್ತುವ ಮತ್ತು ನೀಚರೆನಿಸುವ ಸಂಭವವಿರುವಾಗ,
ಅವರು ನಾನುವನ್ನು ಆಶ್ರಯಿಸುವುದಾದರೆ ಪಾಪ ಮುಕ್ತರಾಗಿ ಉತ್ತಮ ಪದವಿ
ಯನ್ನು ಹೊಂದುತ್ತಾರೆ. ಹೀಗಿರುವಲ್ಲಿ ಪುಣ್ಯಕರ್ಮಗಳನ್ನು ಮಾಡಿದ ೯ ೩೨
ಭಕ್ತರಾದ ಶ್ರೋತ್ರಿಯ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಬ್ರಾಹ್ಮಣರೂ ಸಹ
ನಾನುವನ್ನು ಆಶ್ರಯಿಸಿ ಉತ್ತಮ ಲೋಕವನ್ನು ಹೊಂದುತ್ತಾರೆಂಬದಾಗಿ ಹೇಳ
ತಕ್ಕದ್ದೇನಿದೆ! † ೯ ೩೩

ಯೋಗಾನರ್ಹತೆ:—

ಮಿತಿಮೀರಿ ವಿಷಯ ಸುಖಗಳನ್ನು ಅನುಭವಿಸುವವನು ಯೋಗಕ್ಕೆ ಅರ್ಹ
ನಲ್ಲ. ಅಥವಾ ಅವುಗಳನ್ನು ಸಂಪೂರ್ಣವಾಗಿ ತೊರೆದವನಿಗೂ ಆ ಯೋಗ್ಯತೆ
ಇರಲಾರದು. ಮಿತಿಮೀರಿದ ನಿದ್ದೆಯಲ್ಲಿ ಆಸಕ್ತನಾಗಿರುವವನೂ, ಸದಾ ವಿಶ್ರಾನ್ತಿ
ಯಿಲ್ಲದೆ ಎಚ್ಚರಿಕೆಯಿಂದಿರುವವನೂ ಆತ್ಮಲಾಭ ಯೋಗಾಭ್ಯಾಸಕ್ಕೆ ಶಕ್ತನಾಗುವು
ದಿಲ್ಲ. ನಾನುವನ್ನು ಒಲಿಸಿಕೊಳ್ಳಲು ಆವಶ್ಯಕವಾದ ಇಂದ್ರಿಯ ನಿಗ್ರಹಾದಿ ೬ ೧೬
ಗಳಿಲ್ಲದವನಿಗೆ ಯೋಗವು ಲಭಿಸುವುದಿಲ್ಲವೆಂದೇ ನಾನುವಿನ ಅಭಿಪ್ರಾಯ.೬ ೩೬
ಮರುಳನೂ, ಅಕ್ಕರೆ ಮತ್ತು ನಂಬಿಕೆಗಳನ್ನು ಇಡದವನೂ ಮತ್ತು ನಾನುವಿನ
ವಿಷಯದಲ್ಲಿ ಸಂಶಯಗಳುಳ್ಳವನೂ ಕೀಳುಸ್ಥಿತಿಯನ್ನು ಪಡೆಯುತ್ತಾನೆ. ೪ ೪೦
ನಾನುವಿಗೆ ಸಮ್ಮತವಾದ ಯೋಗವಿಧಾನಗಳನ್ನು ಅಸೂಯೆಯಿಂದ ಯಾರು
ನಡೆವಳಿಕೆಯಲ್ಲಿ ಇಟ್ಟುಕೊಳ್ಳುವುದಿಲ್ಲವೋ ಅಂತಹವರನ್ನು ಪೂರ್ಣವಾಗಿ ಅರಿವು
ಮುಚ್ಚಿ ಹೋದ ಕಗ್ಗತ್ತಲೆ ಎಂಬ ಮಂಕುತನದಿಂದ ಕೂಡಿದವರೆಂದೂ, ವಿವೇಕ
ಹೀನರೆಂದೂ ಮತ್ತು ಕೇಡಿಗರೆಂದೂ ತಿಳಿಯಬೇಕು. ೩ ೩೨

---

* ಕೆಲವರು ವೈಶ್ಯಾಃ ಎಂಬುದಕ್ಕೆ ಬದಲಾಗಿ ವೇಶ್ಯಾಃ ಎಂದು ಇರಬೇಕೆಂದು ಹೇಳುತ್ತಾರೆ. ಕೆಲವರು ಪಾಪಯೋನಿಗಳೆಂದರೆ ವೃತ್ತಿ ದೋಷಗಳಿಂದ ಕೀಳು ಸ್ಥಿತಿಯ ವೈಶ್ಯರಿಗೂ ಸ್ತ್ರೀಯರಿಗೂ ಸಂಬಂಧಪಟ್ಟ ವಿಷಯವೆಂದು ಹೇಳುತ್ತಾರೆ. ಇವೆರಡು ಅರ್ಥಗಳನ್ನೂ ದೂರ ಮಾಡಿ ಈ ಶ್ಲೋಕದಲ್ಲಿ ಮತ್ತು ಉತ್ತರ ಶ್ಲೋಕದಲ್ಲಿ ಎರಡೆರಡು ವರ್ಣಗಳನ್ನು ಸಾಮಾನ್ಯವಾಗಿ ಹೇಳಿ ಲಕ್ಷಣಾರ್ಥದಿಂದ ಉಳಿದ ಎರಡೆರಡು ವರ್ಣಗಳನ್ನು ಊಹಿಸಿಕೊಳ್ಳುವುದು ಉತ್ತಮ. ಪಾಪಯೋನಯಃ ಎಂಬುದೂ, ಪುಣ್ಯಾಃ ಭಕ್ತಾಃ ಎಂಬುದೂ ಸಹ, ಪ್ರಕೃತದ ಕೆಲಸದ ಫಲವನ್ನು ಹೇಳುತ್ತದೆಂದು ಭಾವಿಸಬೇಕು.

† ಇದರಿಂದ ಇವರೆಲ್ಲರೂ ಯೋಗವನ್ನು ಆರಂಭಿಸಲು ಅಭ್ಯಂತರವಿಲ್ಲವೆಂಬುದು ಸ್ವತಸ್ಸಿದ್ಧವಾಗಿರುತ್ತದೆ.

ಯೋಗಕ್ಕೆ ಅನರ್ಹರು

ಮನುಷ್ಯರಲ್ಲಿ ಕೀಳಾದವರೆನಿಸಿದ; ಹಿಂಸೆಯೇ ಮುಖ್ಯವಾದ ಕೆಲಸಗಳುಳ್ಳ; ತಿಳಿವಳಿಕೆಯು ಮಾಯೆಯಿನ್ದ ಮುಚ್ಚಿಕೊಂಡು ಹೋಗಿರುವ; ಪ್ರಾಪಂಚಿಕ ಭೋಗ, ಹಿಂಸೆಗಳಲ್ಲಿ ನಿರತರಾಗಿರುವುದರಿಂದ ಆಸುರರೆನಿಸಿ ಕೊಂಡಿರುವ; ಮನೋವರ್ತನೆಯನ್ನೇ ಅನುಸರಿಸಿದ, ತುಚ್ಛ ವಾದ ಆಸೆಯುಳ್ಳ, ಕೀರ್ತಿರದ ಕಾರ್ಯಗಳನ್ನು ಎಸಗುವ, ಕೀಳಾದ ಅರಿ ೭ ೧೫ ವುಳ್ಳ, ವಿವೇಕವಿಲ್ಲದ ದಡ್ಡರು ರಾಕ್ಷಸಿಯಂತೆ ಭಯವನ್ನುಂಟುಮಾಡುವ; ಕೆಟ್ಟ ಕೆಲಸದಲ್ಲಿ ತೊಡಗಿಸುವ; ಪ್ರಾಪಂಚಿಕ, ಹಿಂಸಾಕಾರ್ಯಗಳನ್ನು ಮಾಡುವಂತೆ ಪ್ರೇರಿಸುವ ಮತ್ತು ಭ್ರಮೆಗೊಳಿಸುವ ಪ್ರಕೃತಿ–ಮಾಯೆ–ಸನ್ನಿವೇಶಗಳನ್ನು ಹಿಂಬಾಲಿಸುವುದರಿಂದ ನಾನುವನ್ನು ಪಡೆಯಲಾರರು. ಶಾಸ್ತ್ರ ಪ್ರಮಾಣ ೯ ೧೨ ಮತ್ತು ಹಿರಿಯರ ಮಾತುಗಳು ದೊರೆಯದೆ ಇರುವುದರಿಂದ ಅನಿಶ್ಚಯವಾದ ಬುದ್ಧಿಯುಳ್ಳವರು ನಾನುವಿನ ಅಳಿವಿಲ್ಲದ, ಅಸಮಾನವಾದ ಶ್ರೇಷ್ಠವಾದ ಸ್ಥಿತಿ ಯನ್ನು ತಿಳಿಯಲಾರದೆ, ಇಂದ್ರಿಯ ಗೋಚರನಾಗದೆ ಅವ್ಯಕ್ತನಾಗಿರುವ ನಾನು ವನ್ನು ನಾಮರೂಪಗಳಿಂದ ಮೂರ್ತಿಮತ್ತಾದ ವ್ಯಕ್ತಪುರುಷನೆಂದೇ ತಿಳಿದಿರು ತ್ತಾರೆ. ಭೂತಗಳೆಲ್ಲಕ್ಕೂ ಮೇಲಾಗಿಯೂ ಅವುಗಳ ಒಡೆಯನಾಗಿಯೂ ಇರುವ ನಾನುವಿನ ಉತ್ಕೃಷ್ಟಸ್ಥಿಯ ಅರಿವು ಮುಚ್ಚಿಕೊಂಡಿರುವ ದಡ್ಡರು ನಾನುವನ್ನು ಕೇವಲ ಮನುಷ್ಯ ಶರೀರವನ್ನು ತಾಳಿದವನೆಂದೇ ತಿಳಿಯುತ್ತಾರೆ. ೯ ೧೧

ಯೋಗಿಗಳು ಮತ್ತು ಯೋಗಾನರ್ಹರು :—

ತತ್ತ್ವವನ್ನು ತಿಳಿಯದಿರುವ, ಕೆಲಸದ ಫಲವನ್ನು ಬಯಸುವ, ಇಂತಹ ಮಂಕುಬುದ್ಧಿಯುಳ್ಳವರನ್ನು ಪೂರ್ಣಜ್ಞಾನವುಳ್ಳವನು ಕರ್ಮಫಲತ್ಯಾಗಕ್ಕೆ ಸಂಬಂಧಪಟ್ಟ ಮಾತುಗಳಿಂದ ಚಂಚಲಕ್ಕೆ ಒಳಪಡಿಸಬಾರದು. ಅಭಿ ೩ ೨೯ ಮಾನದಿಂದ ಕೆಲಸಗಳೊಡನೆ ಮತ್ತು ಫಲಗಳೊಡನೆ ಬೆರೆತಿರುವ, ಅರಿವು ಮರೆ ಯಾಗಿರುವವರ, ಬುದ್ಧಿಯನ್ನು ಬದಲಾಯಿಸಲೂ ಯತ್ನಿಸಬಾರದು. ನಾನು ವಿನ ಅರಿವುಳ್ಳವನು ಕರ್ಮಫಲವನ್ನಪೇಕ್ಷಿಸದೆ ಮನಸ್ಸನ್ನು ನಾನುವಿನಲ್ಲಿ ಜೋಡಿಸಿ ಎಲ್ಲ ಕೆಲಸಗಳನ್ನೂ ಮಾಡುತ್ತಲೇ ದಾರಿತೋರಿಸುತ್ತ ಇರಬೇಕು. ಮತ್ತು ಅರಿವು ಮರೆಯಾಗಿರುವವರು ಕೆಲಸದ ಫಲದ ಆಸೆಯಿಂದ ಕೆಲಸಗಳನ್ನು ನೆರವೇರಿಸುವ ಹಾಗೆಯೇ, ತತ್ತ್ವವನ್ನು ತಿಳಿದ ವಿದ್ವಾಂಸನು ಲೋಕದಲ್ಲಿ ಧರ್ಮ ವನ್ನು ಪರಿಪಾಲಿಸುವುದಕ್ಕೂ ಜನಗಳ ಹಿತವನ್ನುಂಟುಮಾಡುವುದಕ್ಕೂ ಫಲದ ಮೇಲಿನ ಅಭಿಮಾನವನ್ನು ತೊರೆದು ಕೆಲಸಗಳನ್ನು ಮಾಡುವವನಾಗಬೇಕು.
೩ ೨೫

ಯೋಗಾಭ್ಯಾಸಕ್ಕೆ ಅನುವಾಗುವಿಕೆ :—

ಬ್ರಾಹ್ಮಣ ಧರ್ಮ ಮತ್ತು ಆಚಾರಗಳನ್ನು ಪ್ರತಿಪಾದಿಸುವ ನಾನುವಿನ ಪರಿಣಾಮದಿಂದಾದ ವೇದಗಳಲ್ಲಿ ಸತ್ತ್ವ, ರಜಸ್ಸು ಮತ್ತು ತಮೋಗುಣಗಳಿಗೆ

ಸಂಬಂಧಪಟ್ಟ ಧರ್ಮ ವಿಷಯಗಳು ಅಡಕವಾಗಿವೆ. ಧರ್ಮ ಸ್ವರೂಪವನ್ನು ಶುದ್ಧವಾದ ಮನಸ್ಸಿನಿಂದ ತಿಳಿದುಕೊಳ್ಳಬೇಕಾಗಿರುವುದರಿಂದ ಗುಣತ್ರಯಗಳಿಗೆ ಸಂಬಂಧಪಟ್ಟ ಮನೋವರ್ತನೆಗಳನ್ನು ದೂರೀಕರಿಸಬೇಕು. ಜೋಡಿ ಅನುಭವಗಳನ್ನು ಬೇರೆ ಬೇರೆಯಾಗಿ ಭಾವಿಸದೆ ಇರುವವನೂ, ಯಾವಾಗಲೂ ಶುದ್ಧವಾದ ಸಾತ್ವಿಕಸ್ಥಿತಿಯಲ್ಲಿರುವವನೂ ಮತ್ತು ಪಡೆಯದಿರುವ ಪ್ರಾಪಂಚಿಕ (ಸ್ಥಿತಿ) ವಿಷಯಗಳನ್ನು ಹೊಂದಬೇಕೆಂಬ ಮತ್ತು ಪಡೆದದ್ದನ್ನು ಕಾಪಾಡಿಕೊಳ್ಳಬೇಕೆಂಬ ಭಾವನೆ ಇಲ್ಲದವನೂ, ಮುಖ್ಯವಾಗಿ 'ನಾನು' ವನ್ನು ಹೊಂದುವುದರಲ್ಲಿ ಜಾಗರೂಕನೂ ಆಗಿ ಇರಬೇಕು. ನಾನುವನ್ನು ಕೀಳುಸ್ಥಿತಿಯ ಅನುಭವಕ್ಕೆ ಸಿಕ್ಕಿಸುವ ನರಕವೆಂಬ ಕೆಟ್ಟ ಅನುಭವಸ್ಥಿತಿಗೆ ಬಯಕೆ, ಸಿಟ್ಟು ೨ ೪೫

ಬಯಕೆ, ಸಿಟ್ಟು ಮತ್ತು ಅತಿಯಾಸೆಗಳನ್ನು ತೊರೆಯಬೇಕು

ಮತ್ತು ಅತಿಯಾಸೆಗಳೆಂಬ ಮೂರು ಬಾಗಿಲುಗಳಿರುವುವು. ನಾನುವನ್ನು ಉತ್ತಮ ಸುಖಾನುಭವದಲ್ಲಿ ಇರಿಸಬೇಕಾಗಿರುವುದರಿಂದ ಮನಸ್ಸಿನ ಮೇಲ್ಕಂಡ ಮೂರು ವಿಧವಾದ ಕೆಟ್ಟ ವರ್ತನೆಗಳನ್ನು ತೊರೆದು ಮತ್ತು ನರಕದ ಬಾಗಿಲುಗಳನ್ನು ಮುಚ್ಚಿ ದಾರಿಗೊಡದೆ ನರಕವನ್ನು ಅನುಭವಿಸದಂತೆ ಮಾಡಬೇಕು. ೧೬ ೨೧
ವಿಷಯಗಳೊಡನೆ ಬೆರೆಯುವುದರಿಂದ ಉಂಟಾಗುವ ಭೋಗಗಳು ಮೊದಲು ಮತ್ತು ಕೊನೆಯುಳ್ಳವುಗಳು. ಅಂದರೆ ಅಲ್ಪಕಾಲ ಮಾತ್ರ ಅನುಭವವನ್ನು ಕೊಡತಕ್ಕವು. ಮತ್ತು ಸುಖಾನುಭವವನ್ನುಂಟುಮಾಡಿದರೂ, ದುಃಖಕ್ಕೆ ಕಾರಣಗಳಾಗಿಯೇ ಇರುತ್ತವೆ. ಆದುದರಿಂದ ಪಂಡಿತರಾದವರು ಅಂತಹ ಕ್ಷಣಿಕ ಭೋಗಗಳಲ್ಲಿ ಸಂತೋಷ ಪಡಲು ಯತ್ನಿಸಬಾರದು. ಇವು ಇಂದ್ರಿಯ ೫ ೨೨
ಗಳೊಡನೆ ಕೂಡಿ ಅನುಭವವನ್ನು ಕೊಡುವ ಚಳಿ–ಸೆಕೆ; ಸುಖ ನೋವುಗಳನ್ನು

ವಿಷಯಾನುಭವವು ಕೆಡಕಿಗೆ ಮೂಲ

ಉಂಟುಮಾಡತಕ್ಕವುಗಳೇ. ಮತ್ತು ತಲೆದೋರಿ ಮರೆಯಾಗುವ ಗುಣಗಳುಳ್ಳ ಇವುಗಳು ಅನುಭವಾನಂತರ ಕೇಡನ್ನೇ ಉಂಟುಮಾಡತಕ್ಕವುಗಳು; ಹೆಚ್ಚು ಕಾಲ ಸುಖವನ್ನು ಕೊಡತಕ್ಕವುಗಳಲ್ಲ. ಆದುದರಿಂದ ಅವುಗಳನ್ನು ದಾಟಿ ಮುಂದೆ ಹೋಗುವುದಕ್ಕೆ ಯತ್ನಿಸಬೇಕು. ಸುಖ ಮತ್ತು ದುಃಖಗಳ ಅನುಭವಗಳನ್ನು ೨ ೧೪
ಒಂದೇ ಸಮನಾಗಿ ಭಾವಿಸಿರುವ ಧೈರ್ಯವುಳ್ಳ ಯಾವ ಪುರುಷನನ್ನು ಮೇಲ್ಕಂಡ ಜೋಡಿ ಅನುಭವಗಳು ನೋಯಿಸುವುದಿಲ್ಲವೋ ಅಂತಹ ಮನುಷ್ಯನು ಅಮೃತದಂತೆ ಹಿತವಾಗಿರುವ ಸ್ಥಿತಿಗೆ ಅರ್ಹನಾಗುತ್ತಾನೆ. ೨ ೧೫

ಇಂದ್ರಿಯಗಳು ಆಯಾ ವಿಷಯಗಳಿಗಿಂತ ಶ್ರೇಷ್ಠವೆನ್ನುತ್ತಾರೆ. ಇಂದ್ರಿಯಗಳಿಗಿಂತಲೂ ಅವುಗಳ ಮೇಲಿನ ತತ್ತ್ವವಾದ ಮನಸ್ಸು ಶ್ರೇಷ್ಠವು. ಮನಸ್ಸಿ

ಗಿಂತಲೂ ಮೇಲಾಗಿರುವುದು ಬುದ್ಧಿತತ್ತ್ವವು. ಬುದ್ಧಿತತ್ತ್ವಕ್ಕಿಂತಲೂ ಮೇಲಾಗಿರುವುದೇ 'ತತ್' ಎಂಬ 'ನಾನುವು'. ಈ ರೀತಿ ಯಾಗಿ ಬುದ್ಧಿಗಿಂತ ಮೇಲ್ಪಟ್ಟದ್ದಾಗಿ ಇರುವುದು "ಆತ್ಮ" (ನಾನುವು) ಎಂಬ ತತ್ತ್ವವು, ಎಂದರಿತು ಪೂರ್ಣನಾನುವನ್ನು ೩ ೪೨ ನಾನುವಿನ ಆಶ್ರಯದಿಂದ ಮತ್ತು ಅರಿವಿನಿಂದ ದೃಢವಾಗಿ ಗೊತ್ತುಮಾಡಿ ಕೊಂಡು, ಸಮಾಧಾನಪಡಿಸಲು (ತೃಪ್ತಿಪಡಿಸಲು) ಕಷ್ಟವಾದ ಇಚ್ಛೆಯರೂಪ ದಲ್ಲಿರುವ ಹಗೆಯನ್ನು ತೊಲಗಿಸಬೇಕು. ಆದುದರಿಂದ ಯೋಗಕ್ಕೆ ೩ ೪೩ ಮೊದಲು, ಇಂದ್ರಿಯಗಳನ್ನು ಹತೋಟಿಯಲ್ಲಿ ಇಟ್ಟುಕೊಂಡು ತತ್ತ್ವಜ್ಞಾನ ಮತ್ತು ನಾನುವಿನ ಅನುಭವಗಳನ್ನು ಹಾಳುಮಾಡುವ ಕೆಡುಕಾದ ಬಯಕೆ ಯನ್ನು ತಳ್ಳಿಹಾಕಬೇಕು. ಇಂದ್ರಿಯಕ್ಕೆ ಸಂಬಂಧಪಟ್ಟ 'ಬೇಕು' ೩ ೪೧ ಎಂಬ ಭಾವನೆ ಎಂದರೆ ಬಯಕೆ ಮತ್ತು 'ಬೇಡ' ಎಂಬ ಭಾವನೆ ಎಂದರೆ ಹಗೆತನ ಇವುಗಳು ಶಬ್ದ ಸ್ಪರ್ಶ ರೂಪ ರಸ ಗಂಧಗಳೆಂಬ ಇಂದ್ರಿಯ ವಿಷಯಗಳ ಕಡೆಗೇ ಗೊತ್ತಾಗಿಹೋಗಿ ಅಲ್ಲಿ ಆಶ್ರಯವನ್ನು ಹೊಂದುವವುಗಳು. ಬಯಕೆ ಮತ್ತು ಹಗೆತನಗಳೆಂಬ ಈ ಮನೋ ಭಾವನೆಗಳು ಸಾಧಕನ ಶ್ರೇಯೋ ಮಾರ್ಗಕ್ಕೆ ದಾರಿಹೋಕರಂತೆ ಅಡ್ಡಿಯಾಗಿ ಅಡ್ಡವಾಗಿ ಬಂದು ತಡೆಯುವವುಗಳು. ಆದುದರಿಂದ ಈ ರಾಗ ದ್ವೇಷಗಳಿಗೆ ಒಳಗಾಗಬಾರದು; ಮನಸ್ಸಿನಲ್ಲಿ ಇಂಬು ಗೊಡಲೂಬಾರದು. ೩ ೩೪

(ತತ್ತ್ವಸೋಪಾನ)

(ಮೊದಲನೆಯ ಮೆಟ್ಟಲು: ಇಂದ್ರಿಯಗಳ ಹತೋಟಿ)

ವಿಷಯಗಳನ್ನು ಭೋಗಿಸಬೇಕೆಂಬ ಮನಸ್ಸಿನ ವರ್ತನೆಯಿಂದ ಬೆಳೆಯುವ ಬಯಕೆಗಳನ್ನೆಲ್ಲವನ್ನೂ ಸ್ವಲ್ಪವೂ ಉಳಿಯದಂತೆ ತೊರೆದು ಮನಸ್ಸಿನಿಂದಲೇ ಇಂದ್ರಿಯಗಳನ್ನೆಲ್ಲಾ ಸರ್ವಪ್ರಕಾರದಲ್ಲಿಯೂ ಹತೋಟಿಯಲ್ಲಿಟ್ಟುಕೊಂಡು, ಕೊನೆಯವರೆಗೂ ಕೆಲಸವನ್ನು ಬಿಡದೆ ನೇರವೇರಿಸುತ್ತೇನೆಂಬ ಧೈರ್ಯಗುಣ ೬ ೨೪ ದಿಂದ ಕೂಡಿದ ನಿಶ್ಚಿತ ಬುದ್ಧಿಯಿಂದ, ಇಂದ್ರಿಯಗಳಿಗೆ ಬೇಕಾಗುವ ವಿಷಯು ಗಳೊಡನೆ ಬೆರೆಯುವುದನ್ನು ಸ್ವಲ್ಪಸ್ವಲ್ಪವಾಗಿ ಕಡಿಮೆಮಾಡಿಕೊಂಡು ಕ್ರಮವಾಗಿ ಸಮಾಧಾನಹೊಂದಬೇಕು. ಮನಸ್ಸನ್ನು ನಾನುವಿನಲ್ಲಿ ನಿಲ್ಲುವಂತೆ ಮಾಡಿ ನಾನುವನ್ನು ಹೊರತು ಮತ್ತಾವುದನ್ನೂ ಆಲೋಚಿಸಬಾರದು. ೬ ೨೫

(ಎರಡನೇ ಮೆಟ್ಟಲು: ಮನಸ್ಸಿನ ಹತೋಟಿ)

ಯಾವಾಗಲೂ ಚಲಿಸುತ್ತಲೇ ಇರುವ, ಒಂದು ಕಡೆ ನಿಲ್ಲ ದಿರುವ ಮನಸ್ಸು ಯಾವಯಾವ ವಿಷಯಗಳ ಸನ್ನಿವೇಶದ ಕಾರಣದಿಂದ (ಆಕರ್ಷಣದಿಂದ) ಅವುಗಳ ಕಡೆಗೆ ಹರಿದು ಮುಂದರಿದು ಹೋಗುವುದೋ, ಆಯಾ ವಿಷಯಗಳ ದೆಸೆಯಿಂದ ಅವುಗಳ

ಕಡೆಗೆ ಹೋಗದಂತೆ, ಅದನ್ನು ತಡೆದು ನಾನುವಿನ ಅಧೀನದಲ್ಲಿ ನಿಲ್ಲುವಂತೆ ಮಾಡಬೇಕು (ತಿರುಗಿಸಬೇಕು). ಯಾವಾಗಲೂ ಚಲಿಸುತ್ತಲೇ ಇರುವ ೬ ೨೬
ಮನಸ್ಸು ಹತೋಟಿಗೆ ಬರುವುದು ಕಷ್ಟವೆಂಬುದರಲ್ಲಿ ಸಂಶಯವಿಲ್ಲ. ಆದರೆ ಮತ್ತೆಮತ್ತೆ ಮಾಡುವ ಅಭ್ಯಾಸಕ್ರಮದ ರೂಢಿಯಿಂದಲೂ ಮತ್ತು ಪ್ರಾಪಂಚಿಕ ವಿಷಯಗಳಲ್ಲಿ ಉಂಟಾಗುವ ಬಯಕೆಯಿಲ್ಲದ ಸ್ಥಿತಿಯೆನಿಸುವ ವೈರಾಗ್ಯದಿಂದಲೂ ಮನಸ್ಸನ್ನು ಬಿಗಿಹಿಡಿದು ನಿಲ್ಲಿಸಬಹುದು. ೬ ೩೫

ಮೂರನೆಯ ಮೆಟ್ಟಲು: ಬಿಡುವುದು— ವೈರಾಗ್ಯ

ಪ್ರವಾಹ (ನದಿ) ಗಳಿಂದ ತುಂಬಲ್ಪಡುತ್ತಲೇ ಇರುವ, ಅತ್ತಿತ್ತ ಚಲಿಸದೆ ನೆಲೆಯಾಗಿನಿಂತಿರುವ ಸಮುದ್ರವನ್ನು, ನೀರಿನಪ್ರವಾಹಗಳು ಸೇರುತ್ತಿದ್ದರೂ ಯಾವ ರೀತಿ ಸಮುದ್ರದಲ್ಲಿ ಹೆಚ್ಚು ಕಡಿಮೆ (ಬದಲಾವಣೆ) ಗಳಿಗೆ ಸಾಧ್ಯವಿಲ್ಲವೋ ಆ ರೀತಿ, ಮನಸ್ಸಿನ ಬದಲಾವಣೆ ಮಾಡಲು ಸಾಧ್ಯವಿಲ್ಲದ ಹಾಗೆ ಬಯಕೆಗಳು ಯಾವ ಮನುಷ್ಯ ನನ್ನು ಸೇರುವುವೋ ಅವನೇ ಶಾಂತಿಯನ್ನು ಹೊಂದತಕ್ಕವನು. ಬಯಕೆಗಳನ್ನು ಬಯಸುವವನು ಎಂದಿಗೂ ಸುಖವನ್ನು ಹೊಂದಲಾರನು. ಎಲ್ಲಾ ೨ ೭೦
ವಿಧವಾದ ಬಯಕೆಗಳನ್ನೂ ಕೊಡವಿಹಾಕಿ, ಬಯಕೆಯು ಇಲ್ಲದೇ ಇರುವ, ಭೋಗ್ಯವಸ್ತುಗಳನ್ನು ಹೊಂದಿದ್ದೇನೆ ಎಂಬ ಭಾವನೆಯನ್ನು ಬಿಟ್ಟಿರುವ, ಹೆಮ್ಮೆ ಯಿಲ್ಲದ ಯಾವ ಮನುಷ್ಯನು ಕೆಲಸಗಳನ್ನು ನೆರವೇರಿಸುತ್ತಾನೋ ಅವನು ಶಾಂತಿಯನ್ನು ಹೊಂದುತ್ತಾನೆ. ನಾನುವಿನ ಅಧೀನಕ್ಕೆ ಒಳಪಟ್ಟಂತೆ ಇರುವ ೨ ೭೧
ಪ್ರಾಪಂಚಿಕ ವಿಷಯಗಳ ಮೇಲಿನ ಪ್ರೀತಿ ಮತ್ತು ಹಗೆತನಗಳಿಂದ ಸೋಕಲ್ಪಡ ದಿರುವ ಇಂದ್ರಿಯಗಳ ಮೂಲಕ ವಿಷಯಗಳನ್ನನುಭವಿಸುವ ನಾನುವಿಗೆ ವಿಧೇಯನಾಗಿರುವವನು* ಮನಸ್ಸಿನ ಸಮಾಧಾನವನ್ನು ಹೊಂದುತ್ತಾನೆ. ೨ ೬೪
ಈ ವಿಧವಾದ ಮನಸ್ಸಿನ ಸಮಾಧಾನದಿಂದ ಅವನ ಕಷ್ಟಗಳೆಲ್ಲಾ ಅಳಿಸಿ ಹೋಗು ವುವು. ಮತ್ತು ಚಿತ್ತವು ಸಮಾಧಾನಸ್ಥಿತಿಯಲ್ಲಿರುವವನಿಗೆ ನಿಶ್ಚಿತವಾದ ಬುದ್ಧಿಯು ಮಿತಿಯಲ್ಲಿರುತ್ತದೆ. ಈ ಕಳೇಬರವನ್ನು ಬಿಸುಡುವುದಕ್ಕೆ ಮೊದಲೇ ೨ ೬೫
ಬಯಕೆ ಮತ್ತು ಸಿಟ್ಟುಗಳಿಂದುಂಟಾಗುವ ಮತ್ತು ಮನಸ್ಸಿಗೆ ನೋವನ್ನುಂಟು ಮಾಡುವ ವಿಕಾರಗಳನ್ನು ಸಹಿಸಿಕೊಂಡು ಅಡಗಿಸಲು ಯಾವನು ಸಮರ್ಥ ನಾಗುತ್ತಾನೋ ಅವನು ಯೋಗದಿಂದ ನಾನುವನ್ನು ಪಡೆಯುವವನೂ ಮತ್ತು ಸುಖಿಯೂ ಆಗುತ್ತಾನೆ. ೫ ೨೩

ಮನಸ್ಸಿನಲ್ಲಿರುವ ಸಮಸ್ತ ವಿಧವಾದ ಆಸೆಗಳನ್ನೂ ತೊರೆದು, ನಾನುವಿ ನಿಂದ ನಾನುವಿನ ಪ್ರಾಪ್ತಿಗೆ ಸಹಾಯಕಾರಿಯಾದ ನಾನುವಿನಲ್ಲಿಯೇ ಅಂದರೆ,

---

* ನಾನುವಿನ ಉತ್ತಮಸ್ಥಿತಿಯ ಅನುಭವಕ್ಕೆ ತಕ್ಕ ನಿಯಮಗಳನ್ನು ಆಚರಿಸುವವನು.

ನಾಲ್ಕನೆಯ ಮೆಟ್ಟಲು ಸ್ಥಿತಪ್ರಜ್ಞತೆ (ಪ್ರಜ್ಞಾನ)

ನಾನುವಿನ ಪ್ರಾಪ್ತಿಯ ವಿಷಯದಲ್ಲಿಯೇ ತೃಪ್ತಿಯನ್ನು ಹೊಂದಿದಾಗ, ನಾನುವಿನಲ್ಲಿ ಬುದ್ಧಿಯನ್ನು ಮಿತಿಯಲ್ಲಿಟ್ಟು ಕೊಂಡಿರುವವನು-ಸ್ಥಿತಪ್ರಜ್ಞನು-ಎನಿಸಿಕೊಳ್ಳುತ್ತಾನೆ. ೨ ೫೫
ಆಮೆಯು ಅಂಗಗಳನ್ನು ಪೂರ್ಣವಾಗಿ ಒಳಕ್ಕೆ ಸೆಳೆದು ಅಡಗಿಸಿಕೊಳ್ಳುವಂತೆ ಇಂದ್ರಿಯಕ್ಕೆ ಬೇಕಾದ ವಿಷಯಗಳ ದೆಸೆಯಿಂದ ಇಂದ್ರಿಯಗಳನ್ನು ಹಿಂದಕ್ಕೆ ಸೆಳೆದು, ಅಧೀನದಲ್ಲಿಟ್ಟುಕೊಳ್ಳುವ ಶಕ್ತಿಯು ಬಂದಾಗ ಸ್ಥಿತಪ್ರಜ್ಞನಾಗು ವನು. ಚಟುವಟಿಕೆಯಾಗಿರುವ ಇಂದ್ರಿಯಗಳನ್ನು ಅನುಸರಿಸಿ ಯಾವನ ೨ ೫೮
ಮನಸ್ಸು ನಡೆಯುವುದೋ ಅವನ ಮನಸ್ಸು 'ನಾನುವಿನ ಮೇಲಿರುವ ಪ್ರಜ್ಞೆ' ಯನ್ನು—ಗಾಳಿಯು ಸಮುದ್ರದ ಮೇಲೆ ತೇಲುವ ಹಡಗನ್ನು ಗೊತ್ತಿಲ್ಲದ ಕಡೆಗೆ ಒಯ್ಯುವ ಹಾಗೆ ಚದುರಿಸುವುದು; ಆದುದರಿಂದ ಯಾವನು ಸರ್ವ ಪ್ರಕಾರ ೨ ೬೭
ದಲ್ಲೂ ವಿಷಯಗಳ ದೆಸೆಯಿಂದ ಇಂದ್ರಿಯಗಳನ್ನು ಹಿಡಿದೆಳೆದು ನಿಲ್ಲಿಸುವನೋ, ಅವನ ಪ್ರಜ್ಞೆಯು ಚೆನ್ನಾಗಿ ನೆಲೆಗೊಳ್ಳುವುದು. ಇಂದ್ರಿಯಗಳನ್ನು ೨ ೬೮
ಹತೋಟಿಯಲ್ಲಿಡಲು ಪ್ರಯತ್ನಪಡುವ ಪಂಡಿತನಾದ ಮನುಷ್ಯನ ಪ್ರಯತ್ನ ವನ್ನು ಸಹ ಎದುರಿಸುವವುಗಳಾಗಿ ನೋಡುನೋಡುತ್ತಾ ಇರುವ ಹಾಗೆಯೇ ಇಂದ್ರಿಯಗಳು ಮನಸ್ಸನ್ನು ಚದುರಿಸಿ ಬೇರೆ ಬೇರೇ ಕಡೆಗೆ ಒಯ್ಯುತ್ತವೆ. ೨ ೬೦
ಆದುದರಿಂದ ಅಂತಹ, ಎದುರಿಸುವ ಇಂದ್ರಿಯಗಳೆಲ್ಲವನ್ನೂ ಸಂಪೂರ್ಣವಾಗಿ ಹತೋಟಿಯಲ್ಲಿಟ್ಟುಕೊಂಡು ಚಿತ್ತವನ್ನು ನಾನುವಿನಲ್ಲಿ ನಿಲ್ಲಿಸಿ, ನಾನುವಿನಲ್ಲಿ ಆಸಕ್ತನಾಗಬೇಕು. ಹೀಗೆ ಇಂದ್ರಿಯಗಳನ್ನು ವಶದಲ್ಲಿಟ್ಟುಕೊಂಡಿರುವವನ ಪ್ರಜ್ಞೆಯು ಬದಲಾಯಿಸಲ್ಪಡದೆ ನೆಲೆಯಾಗಿ ನಿಂತಿರುತ್ತದೆ. ೨ ೬೧

ಯಾವುದೊಂದು ವಿಷಯದಲ್ಲಿಯೇ ಆಗಲಿ ಪ್ರೀತಿಯನ್ನಿಡದೆಯೂ, ಒಳ್ಳೆಯ ದಾದ ಮತ್ತು ಒಳ್ಳೆಯದಲ್ಲದ ಆಯಾ ಅನುಭವಗಳನ್ನು ಹೊಂದಿ ಒಳ್ಳೆಯದಾ ದಾಗ ಹಿಗ್ಗದೆಯೂ, ಒಳ್ಳೆಯದಲ್ಲದ್ದು ಒದಗಿದಾಗ ಬೇಡವೆಂಬ ಹಗೆತನವನ್ನು ತೋರಿಸದೆಯೂ ಇರುವವನ ಪ್ರಜ್ಞೆಯು ಚೆನ್ನಾಗಿ ನೆಲೆಗೊಳ್ಳುವುದು. ೨ ೫೭
ಕಷ್ಟಗಳೊದಗಿದಾಗ ಮನಸ್ಸಿನಲ್ಲಿ ನೋವನ್ನು ತಾಳದವನೂ, ಸುಖಾನುಭವ ಕಾಲದಲ್ಲಿ ಅದರ ಮೇಲಿನ ಇಚ್ಛೆಯನ್ನು ತಾಳದವನೂ, ಪಡೆದ ವಸ್ತುಗಳ ಮೇಲಿನ ಪ್ರೀತಿ, ಅಂಜಿಕೆ ಮತ್ತು ಸಿಟ್ಟುಗಳನ್ನು ಕೊಡವಿಹಾಕಿದವನೂ–ಮನ ಸ್ಸನ್ನು ನೆಲೆಗೊಳಿಸಿಕೊಂಡಿರುವ ಮುನಿಯೆನ್ನಿಸಿಕೊಳ್ಳುತ್ತಾನೆ. ೨ ೫೬

ಕೆಲಸದ ಇಂದ್ರಿಯಗಳನ್ನೆಲ್ಲಾ ಹಿಡಿದು ನಿಲ್ಲಿಸಿ, ಆಯಾ ಇಂದ್ರಿಯಗಳಿಗೆ ಬೇಕಾದ ವಿಷಯಗಳನ್ನು ಮಾತ್ರ ಮನಸ್ಸಿನಲ್ಲಿ ಜ್ಞಾಪಿಸಿಕೊಳ್ಳುತ್ತಾ ಇರುತ್ತಾ

ನೆಯೋ ಅಂತಹ, ಮಂಕುತನದಿಂದ ಕವಿದುಕೊಂಡಿರುವ ನಾನುವುಳ್ಳವನು ಕಪಟಿ ಯೆನಿಸಿಕೊಳುತ್ತಾನೆ. ಮನಸ್ಸಿನಿಂದ ಇಂದ್ರಿಯಗಳನ್ನು ಪಳಗಿಸಿ ಕೆಲಸ ೩ ೬
ಮತ್ತು ಫಲಗಳೊಡನೆ ಬೆರೆಯದೆ ಕೆಲಸದ ಇಂದ್ರಿಯಗಳಿಂದ ಕೆಲಸಕ್ಕೆ ತೊಡಗಿ ಕರ್ಮಯೋಗ ಪದ್ಧತಿಯಲ್ಲಿ ಕೆಲಸಗಳನ್ನು ಮಾಡುವವನು ಶ್ರೇಷ್ಠನೆನಿಸಿಕೊಳ್ಳು ತ್ತಾನೆ. ೩ ೭

ಕಾರಣಾಂತರಗಳಿಂದ ಆಹಾರವನ್ನು ತೆಗೆದುಕೊಳ್ಳದಿರುವ ದೇಹಿಯ ವಿಷ ಯಗಳ ಮೇಲಿನ ಪ್ರೀತಿಯನ್ನು ಮಾತ್ರ ದೇಹಿಯಲ್ಲಿ ನಿಲ್ಲಿಸಿ, ಸ್ಥೂಲವಾದ ವಿಷ ಯಗಳು ಮಾತ್ರ ಅವನಿಂದ ಹಿಂತಿರುಗಿ ಹೋಗುವುವು; ಆದರೆ ನಾನುವಿನ ದರ್ಶ ನಾನುಭವವಾದ ಮೇಲೆ ದೇಹಿಯ ವಿಷಯಗಳ ಮೇಲಿನ ಪ್ರೀತಿಯೂ (ರಸವೂ) ಕೂಡದೇಹಿಯನ್ನು ಬಿಟ್ಟು ಹೋಗುವುದು. ಹತೋಟಿಯಲ್ಲಿರುವ ಚಿತ್ತವು ೨ ೫೯
ನಾನುವಿನಲ್ಲಿಯೇ ನೆಲಸಿ ಐಕ್ಯವಾದಾಗ (ಕೂಡಿ ಹೋದಾಗ)* ಯಾವ ಬಯಕೆಗಳ ಮೇಲೂ ಪ್ರೀತಿಯಿಲ್ಲದವನೂ, ಯುಕ್ತನೂ (ಯೋಗಿಯೂ) ಎಂದೆನಿಸುವನು. ಜೋಡಿ ಅನುಭವಗಳ ವಿಷಯದಲ್ಲಿ ಬೇರೆ ಬೇರೆ ಭಾವನೆಯಿಲ್ಲದವನು ೬ ೧೮
ಸುಖವಾಗಿ ಸಂಸಾರ ಸೆರೆಯಿಂದ ಬಿಡುಗಡೆ ಹೊಂದುತ್ತಾನೆ. ಬೇಕಾದು ೫ ೩
ದನ್ನು ಹೊಂದಿ ಹಿಗ್ಗದೆ ಬೇಡವಾದುದು ಬಂದಾಗ ಮುಗ್ಗದೆ ಇರುವವನೂ; ಸ್ಥಿರ ಬುದ್ಧಿಯುಳ್ಳವನೂ ಮತ್ತು ಭ್ರಮೆಯಿಂದ ಪೂರ್ಣವಾಗಿ ಬಿಡಲ್ಪಟ್ಟವನೂ ಬ್ರಹ್ಮ (ನಾನು) ವನ್ನು ತಿಳಿದವನಾಗಿ ಬ್ರಹ್ಮನಲ್ಲಿಯೇ ಇರುವವನಾಗುತ್ತಾನೆ. ೫ ೨೦

ಮೂರು ಗುಣಗಳಿಗೆ ಸಂಬಂಧಪಟ್ಟ ವೇದಗಳಿಂದ (ವೇದಗಳ ವ್ಯಾಸಂಗ ದಿಂದ) ನೆಲೆಯು ಸಿಕ್ಕದೆ ಚದುರಿ ಹೋಗಿರುವ ಮನಸ್ಸು-ಯೋಗದ ತಿಳಿವಳಿಕೆಯ ದೆಸೆಯಿಂದ ಚಲಿಸದೆ ನಿಶ್ಚಿತವಾಗಿ ಸ್ಥಿರವಾಗಿ (ನೆಲೆಯಾಗಿ) ಸಮಸ್ಥಾನದಲ್ಲಿ ನಿಂತಾಗ ಯೋಗವು ದೊರೆಯುವುದು. ಹೀಗೆ ಇದುವರೆಗೂ ಹೇಳಿದಂತೆ ನಾನುವಿನ ಮತ್ತು ಯೋಗದ ಮಹಿಮೆಯನ್ನೂ ಮುಂದೆ ಹೇಳುವ ಯೋಗಾಭ್ಯಾಸಾದಿ ವಿಷಯ ಗಳನ್ನೂ ತತ್ತ್ವಶಾಸ್ತ್ರ ರೀತಿಯಿಂದ ತಿಳಿಯುವವನು ಅತ್ತಿತ್ತ ಚಲಿಸದೆ ಯೋಗ ಮಾರ್ಗವನ್ನು ಸೇರುತ್ತಾನೆ ಎಂಬುದರಲ್ಲಿ ಸಂದೇಹವಿಲ್ಲ. ೧೦ ೭

ಯೋಗಾಭ್ಯಾಸ ವಿವರಣೆ:—

'ನಾನುವಿನ' ಜ್ಞಾನಪ್ರಾಪ್ತಿಗೆ ತಕ್ಕಂತೆ ಚೊಕ್ಕಟವಾಗಿರುವ ಸ್ಥಳದಲ್ಲಿ ಕುಳಿತುಕೊಳ್ಳುವುದಕ್ಕೆ ಆಸರೆಯಾಗಿರುವ ಆಸನ (ಪೀಠ)ವನ್ನು ಕದಲದಂತೆ ಸರಿಯಾಗಿ ಸಿದ್ಧಪಡಿಸಿಕೊಂಡು ಸ್ಥಾಪಿಸಬೇಕು. ಅದು ತುಂಬ ಎತ್ತರವಾಗಿಯೂ

---

* ಭೇದಜ್ಞಾನವು ಬಿಟ್ಟುಹೋದಾಗ.

ಆಸನಾದಿ ವಿಧಿಗಳು

ಅಥವಾ ತೀರಾತಗ್ಗಾಗಿಯೂ ಇರಬಾರದು. ದರ್ಭೆಯಮೇಲೆ ಹುಲ್ಲೇಕರುವಿನ ಚರ್ಮವನ್ನು ಹರವಿ ಅದರ ಮೇಲೆ ಹತ್ತಿ ಯವಸ್ತ್ರವನ್ನು ಹಾಸಬೇಕು. ಮನಸ್ಸನ್ನು ನಾನುವಿನಲ್ಲಿಯೇ ಇರಿಸಿ, ೬ ೧೧
ಇಂದ್ರಿಯಗಳ ಅಥವಾ ದೇಹದ ಕೆಲಸಗಳನ್ನೂ ಚಿತ್ತವೃತ್ತಿಗಳನ್ನೂ ತಡೆದು (ಹದಕ್ಕೆ ತಂದುಕೊಂಡು) ; ಆಸನದ ಮೇಲೆ ಸಮನಾಗಿ ಕುಳಿತು ಆತ್ಮಲಾಭಕ್ಕೆ ಆಗಬೇಕಾದ ಸತ್ತ್ವವೇ ಮೊದಲಾದ ಶುದ್ಧಿಗಳನ್ನು ಹೊಂದುವುದಕ್ಕೆ ಯೋಗ ವಿಧಾನವನ್ನು ಕೈಗೊಳ್ಳಬೇಕು. ಶರೀರ, ತಲೆ ಮತ್ತು ಕತ್ತುಗಳ ೬ ೧೨
ನ್ನಲ್ಲಾಡಿಸದೆ ನೆಟ್ಟಗಿಟ್ಟು, ಸ್ಥಿರವಾಗಿ ಕುಳಿತು, ಸುತ್ತಮುತ್ತ ನೋಡದೆ, ಕಣ್ಣುಗಳ ನೋಟವನ್ನು ಮೂಗಿನತುದಿಯ ಸಮದಲ್ಲಿ ನಿಲ್ಲಿಸಿ ಅಥವಾ–ಹೊರಗಿನ ಸನ್ನಿವೇಶದಲ್ಲಿರುವ ವಿಷಯಗಳನ್ನು ದೂರಮಾಡಿ, ಕಣ್ಣುಗಳ ನೋಟ ೬ ೧೩
ವನ್ನು ಹುಬ್ಬುಗಳೆರಡರ ಮಧ್ಯೆ ನಿಲ್ಲಿಸಿ, – ಪ್ರಾಣವಾಯು ಮತ್ತು ಅಪಾನ ವಾಯುಗಳು, ಉಚ್ಛ್ವಾಸನಿಶ್ವಾಸಗಳು ಒಂದೇ ಸಮನಾದ ಕ್ರಮದಲ್ಲಿ ಮೂಗಿನ ಒಳಕ್ಕೆ ಮತ್ತು ಹೊರಕ್ಕೆ ಸಂಚರಿಸುವ ಹಾಗೆ ಕ್ರಮಪಡಿಸಿಕೊಂಡು ನಾನುವನ್ನು ನೋಡಬೇಕು. ಯಾವ ವಿಧವಾದ ಅಂಜಿಕೆಯನ್ನೂ ಹೊಂದದೆ, ೫ ೨೭
ನಾನುವಿನ ಪ್ರಾಪ್ತಿಗೆ ಪೂರ್ಣವಾದ ಶಾಂತಿಯನ್ನು ಅನುಭವಿಸುವ ಹಾಗೆ ಮಾಡಿ, ವೇದವೇ ಮೊದಲಾದ ಜ್ಞಾನಾರ್ಜನೆ ಮಾಡುವವರ ನಿಯಮದಲ್ಲಿ ಇದ್ದುಕೊಂಡು ಮನಸ್ಸನ್ನು ಬಿಗಿಯಾಗಿ ಹಿಡಿದು, ನಾನುವಿನಲ್ಲಿ ಚಿತ್ತವನ್ನು ಜೋಡಿಸಿ, ನಾನು ವಿನ ಆಸರೆಯಲ್ಲಿರುವವನಾಗಿ ಆತ್ಮಲಾಭಮಾರ್ಗವನ್ನು ಹಿಡಿಯಬೇಕು. ೬ ೧೫
ಚಿತ್ತವನ್ನು ಅಡಗಿಸಿ ನಾನುವಿನೊಡನೆ ಯೋಗವನ್ನು ಹೊಂದಿರುವ ಮನಸ್ಸಿನ ಸ್ಥಿತಿಯು, ಗಾಳಿಯಿಲ್ಲದಿರುವೆಡೆಯಲ್ಲಿಟ್ಟಿರುವ, ಕದಲದ ದೀಪದ ಸ್ಥಿತಿಗೆ ಸಮಾನ ವಾಗಿರುತ್ತದೆಂದು (ಹೋಲಿಸಿ) ಹೇಳಲ್ಪಟ್ಟಿದೆ ೬ ೧೯

ಯೋಗಮಾರ್ಗದಲ್ಲಿ ತೊಡಗಿರುವವನು ಗುಟ್ಟಾಗಿಯೂ, ಒಬ್ಬೊಂಟಿಗ ನಾಗಿಯೂ (ಒಬ್ಬಂಟಿಗನಾಗಿಯೂ) ನಾನುವಿನಲ್ಲಿರುವಂತೆ ಚಿತ್ತವನ್ನು ಹದಕ್ಕೆ ತಂದುಕೊಂಡು, ಆಹಾರಗಳ ಬಯಕೆಗಳನ್ನು ಬಿಟ್ಟು, ದಾನಗಳನ್ನು ತೆಗೆದು ಕೊಳ್ಳದೆ ಇದ್ದು ಯಾವಾಗಲೂ ನಾನುವಿನಲ್ಲಿಯೇ ಕೂಡಿರಬೇಕು. ೬ ೧೦
ಯೋಗಮಾರ್ಗವನ್ನು ಹಿಡಿದು ನಡೆಯುವುದರಿಂದ ತಡೆಯಲ್ಪಟ್ಟ ವೃತ್ತಿಯುಳ್ಳ ಚಿತ್ತವು, ಯಾವ ಸ್ಥಿತಿಯಲ್ಲಿ ಮತ್ತು ಎಲ್ಲಿ ಸಂತೋಷ–ಸಮಾಧಾನ–ಆನಂದ ವನ್ನು ಹೊಂದುವುದೋ, ಯಾವ ಸ್ಥಿತಿಯಲ್ಲಿ ಅಥವಾ ಎಲ್ಲಿ–ನಾನುವಿನ ಜ್ಞಾನ ದಿಂದ ನಾನುವನ್ನು ಸಾಕ್ಷಾತ್ಕರಿಸುತ್ತಾ ನಾನುವಿನಲ್ಲಿಯೇ ಆನಂದವನ್ನು ಹೊನ್ದು ವುದೋ ; ಯಾವಸ್ಥಿತಿಯಲ್ಲಿ ಮತ್ತು ಎಲ್ಲಿ ಇಂದ್ರಿಯಗಳ ಅನುಭವಕ್ಕೂ ೬ ೨೦

ಮೀರಿ ಬುದ್ಧಿಯಿಂದ ಮಾತ್ರ ಹಿಡಿಯ ಬಹುದಾದ (ಅನುಭವಿಸಬಹುದಾದ), ಮತ್ತು ಉತ್ಕೃಷ್ಟವಾದ ಪೂರ್ಣ ಸುಖವನ್ನು ತಿಳಿದು ಅನುಭವಿಸುತ್ತದೋ ಮತ್ತು ಯಾವ ಸ್ಥಿತಿಯಲ್ಲಿ ದೇಹಿಯಾದ ನಾನುವು ತತ್ತ್ವಶಾಸ್ತ್ರಾನುಗುಣವಾಗಿ ನಿಂತು ಕದಲುವುದಿಲ್ಲವೋ ಅಂತಹ ಸ್ಥಿತಿಯಲ್ಲಿ ಮತ್ತು ಅಂತಹ ಸನ್ನಿವೇಶ ದಲ್ಲಿದ್ದು ಯೋಗಮಾರ್ಗದಲ್ಲಿ ನಡೆದು, ನಾನುವನ್ನೇ ಯಾವಾಗಲೂ ಗುರಿ ೬ ೨೧
ಯಲ್ಲಿಟ್ಟುಕೊಂಡು, ಬಲವಾಗಿ ಹಿಡಿದು, ಮನಸ್ಸಿನ ಕೆಲಸಗಳನ್ನು ಕ್ರಮಪಡಿಸಿ ಕೊಂಡಿರುವ ಮತ್ತು ಸ್ವಲ್ಪವೂ ಕಲ್ಮಷವಿಲ್ಲದವನಾಗಿರುವ ಯೋಗಿಯು ನಾನು ವಿಗೆ ಸಂಬಂಧಪಟ್ಟ, "ಹುಟ್ಟುಸಾವುಗಳಿಂದ ಬಿಡುಗಡೆ" ಎಂಬ, ಶ್ರೇಷ್ಠವಾದ ನಿರ್ವಾಣವೆಂಬ ಶಾಂತಿಯನ್ನು ಹೊಂದುತ್ತಾನೆ. ಮತ್ತು ಸುಖವಾಗಿ ಬ್ರಹ್ಮಾ ಪರೋಕ್ಷಾನುಭವವೆಂಬ ಅತ್ಯಂತ ಶಾಶ್ವತವಾದ ಆನಂದವನ್ನೇ ಅನುಭವಿಸು ತ್ತಾನೆ. ೬ ೧೫ ; ೬ ೨೮

ಮೇಲೆ ಹೇಳಿರುವಂತೆ ಯೋಗಮಾರ್ಗಗಳಲ್ಲಿ ಯಾವುದಾದರೊಂದನ್ನಾದರೂ ಹಿಡಿದು ಸಾಧಿಸಿ ಚಿತ್ತವನ್ನು ಸಮಾಧಾನಕ್ಕೆ ತಂದುಕೊಂಡು ನಾನುವಿನಲ್ಲಿ ಚಿರ ಕಾಲ ನಿಲ್ಲಿಸಲು ಶಕ್ತಿಯಿಲ್ಲದಿದ್ದರೆ(1) ಮತ್ತೆಮತ್ತೆ ಸ್ವಲ್ಪವಾಗಿ, ಕ್ರಮಕ್ರಮವಾಗಿ ರೂಢಿಮಾಡಿಕೊಳ್ಳಬೇಕೆಂಬ ಅಭ್ಯಾಸಯೋಗದಿಂದ ಕಾಲಾನಂತರವಾದರೂ, ನಾನು ವನ್ನು ಪಡೆಯುವ ಇಚ್ಛೆಯಿಂದ ಯೋಗಾರಂಭಮಾಡಬೇಕು.

ಅಶಕ್ತರ ಸಾಧನೆ

ಈರೀತಿ ರೂಢಿಕ್ರಮದ ಅಭ್ಯಾಸಮಾರ್ಗವನ್ನು ಹಿಡಿದು ೧೨ ೯
ಯೋಗವನ್ನು ಸಾಧಿಸಲು ಸಾಮರ್ಥ್ಯವಿಲ್ಲದಿರುವ ಪಕ್ಷದಲ್ಲಿ (2) ನಾನುವಿಗೆ ಸಂಬಂಧಪಟ್ಟ, ನಾನುವಿನೊಡನೆ ಸೇರಿಸುವ, ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ ಮತ್ತು ಆತ್ಮನಿವೇದನ-ಗಳೆಂಬ ಒಂಭತ್ತುವಿಧವಾದ ನಾನುವಿನ ಸೇವಾಕಾರ್ಯಗಳಲ್ಲಿ ಯಾವುದೊಂದನ್ನಾದರೂ ಹಿಡಿದು, ಯೋಗಮಾರ್ಗಾನುಗುಣವಾಗಿ ಕೆಲಸಮಾಡುವವನಾಗಬೇಕು. ನಾನು ವಿನ ಪ್ರೀತಿಗಾಗಿ ಕೆಲಸಗಳನ್ನು ಮಾಡುವವನು ಯೋಗಸಿದ್ಧಿಯನ್ನು ಹೊಂದು ತ್ತಾನೆ. ಹಾಗೂ ಒಂದುವೇಳೆ ನಾನುವಿನೊಡನೆ ಸೇರಿಸುವ ಈ ಯೋಗ ೧೨ ೧೦
ಮಾರ್ಗವನ್ನು ಹಿಡಿದು ಕೆಲಸಗಳನ್ನು ಮಾಡಲು ಕೈಲಾಗದೆ ಹೋದರೆ (3) ನಾನುವನ್ನಾಶ್ರಯಿಸಲು ತಕ್ಕ ನಿಯಮಗಳುಳ್ಳವನಾಗಿ ಮಾಡುವ ಎಲ್ಲಾ ಕೆಲಸ ಗಳ ಫಲವನ್ನೂ ತೊರೆದು ಕೆಲಸಗಳನ್ನು ಎಸಗಬೇಕು. ೧೨ ೧೧

ನಾನುವಿನ ಪ್ರೀತಿಗಾಗಿ ದ್ರವ್ಯಗಳನ್ನು ಸಮರ್ಪಿಸಿ ಮಾಡುವ ಮತ್ತು ದ್ರವ್ಯಗಳಿಂದ ಸಾಧ್ಯವಾಗುವ ಯಜ್ಞಗಳಿಗಿಂತಲೂ, ನಾನುವಿನ 'ತಿಳಿವಳಿಕೆ'

(ಯೋಗ) ಯಜ್ಞಗಳ ತಾರತಮ್ಯ

ಎಂಬ ಮತ್ತು ನಾನುವಿನ ಪ್ರೀತಿಗಾಗಿ ಸಮರ್ಪಿಸುವ ಜ್ಞಾನ ಯಜ್ಞವೇ ಶ್ರೇಷ್ಠವು. ಈ ಲೋಕದಲ್ಲಿ ನಡೆಯುವ ಕೆಲಸ ಗಳೆಲ್ಲವೂ ನಾನುವಿನ ಅರಿವಿನಲ್ಲಿಯೇ ಪೂರ್ಣತೆಯನ್ನು ಹೊಂದುವುವು. ಮೇಲೆ ಹೇಳಿದ, ರೂಢಿಮಾಡಿಕೊಳ್ಳುವ ಅಭ್ಯಾಸ ೪ ೩೩ ಯಜ್ಞಕ್ಕಿಂತಲೂ, ನಾನುವಿನ ಅರಿವೆಂಬ ಯಜ್ಞವೇ ಶ್ರೇಷ್ಠವು. ನಾನುವಿನ ಅರಿವೆಂಬ ಯಜ್ಞಕ್ಕಿಂತಲೂ ನಾನುವನ್ನು ಧ್ಯಾನಿಸುವ ಯಜ್ಞವು ಮತ್ತೂ ಶ್ರೇಷ್ಠವು. ನಾನುವನ್ನು ಧ್ಯಾನಿಸುವ ಯಜ್ಞಕ್ಕಿಂತಲೂ ಮಾಡುವ ಕೆಲಸಗಳ ಫಲವನ್ನು ತೊರೆಯುವ ಯಜ್ಞವು * ಶ್ರೇಷ್ಠವು. ಫಲವನ್ನು ತೊರೆಯುವುದರಿಂದ ಮನಸ್ಸಿನ ಶಾಂತಿಯು ಉಂಟಾಗುವುದು ಮತ್ತು (ಇದರಿಂದ ಯೋಗಮಾರ್ಗಾವ ಲಂಬನೆಯು ಸುಲಭಸಾಧ್ಯವಾಗುತ್ತದೆ.) ೧೨ ೧೨

ಯೋಗಮಾರ್ಗದಿಂದ ತಪ್ಪಿನಡೆದವರೂ ಕೇಡಿಲ್ಲ ಮಾಡಿದ್ದಷ್ಟಕ್ಕೆ ಫಲವು ಇಲ್ಲದಿಲ್ಲ

ಶ್ರದ್ಧೆಯೊಡಗೂಡಿ ಯೋಗಮಾರ್ಗವನ್ನು ಹಿಡಿದ ಸಾಧಕನು ಇಂದ್ರಿಯಾದಿ ಗಳನ್ನು ಹತೋಟಿಯಲ್ಲಿಟ್ಟುಕೊಳ್ಳಲು ಕೈಲಾಗದೆ, ಯೋಗಮಾರ್ಗದಿಂದ ತಪ್ಪಿ ನಡೆಯುವ ಮನಸ್ಸುಳ್ಳವನಾಗಿ, ನಾನುವನ್ನು ಪಡೆಯುವ ದಾರಿಯಲ್ಲಿ ಭ್ರಮೆಯಿಂದ ಯೋಗಸಿದ್ಧಿಯನ್ನು ಪಡೆಯದೆ ಇದ್ದಾಗ್ಗೂ, ಅವನ ಆ ಜೀವಿತಕಾಲದಲ್ಲಿ ೬ ೩೭ ೬ ೩೮ ಯಾಗಲೀ, ಜೀವಿತ ಕಾಲಾನಂತರದಲ್ಲಿಯೇ ಆಗಲೀ ಆ ಸಾಧಕನಿಗೆ ಕೇಡುಂಟಾಗುವುದಿಲ್ಲ. ನಾನುವಿನೊಡನೆ ಸೇರಿಸುವ ಕಲ್ಯಾಣ ಕಾರ್ಯ ವನ್ನೆಸಗುವ ಯಾವನೊಬ್ಬನೂ ಕೀಳುಸ್ಥಿತಿಗೆ ಇಳಿಯುವುದಿಲ್ಲ. ಯೋಗ ೬ ೪೦ ಮಾರ್ಗದಿಂದ ಜಾರಿದವನು ಜೀವಮಾನಾನಂತರ, ಆ ಜೀವಮಾನದಲ್ಲಿ ಮಾಡಿದ ಪುಣ್ಯಕೆಲಸಗಳಿಗೆ ತಕ್ಕ ಉತ್ತಮವಾದ ಸ್ಥಳ ಸನ್ನಿವೇಶಗಳನ್ನು ಪಡೆದು ಕೆಲಸ ಗಳ ಫಲಕ್ಕೆ ತಕ್ಕಷ್ಟು ಕಾಲ ಅಲ್ಲಿ ವಾಸಮಾಡಿ ಶುಚಿಯಾಗಿರುವ ಶ್ರೀಮಂತರ ಮನೆಯಲ್ಲಿ (ವಂಶದಲ್ಲಿ) ಹುಟ್ಟುತ್ತಾನೆ. ಅಥವಾ ಮೇಧಾವಿಗಳೂ ೬ ೪೧ ಯೋಗಿಗಳೂ ಆದ ಬಡವರ ಮನೆಯಲ್ಲಿಯಾದರೂ ಹುಟ್ಟಬಹುದು. ಶ್ರೀಮಂತರ ಮನೆಯಲ್ಲಿ ಹುಟ್ಟುವುದಕ್ಕಿಂತ ಯೋಗಿಗಳಾಗಿರುವ ಬಡವರ ಮನೆಯಲ್ಲಿ ಹುಟ್ಟು ವುದೆಂಬ ಸ್ಥಿತಿಯನ್ನು ಪಡೆಯಲಸದಳವು. ಮತ್ತು ಬಹಳ ವಿರಳವು. ಏಕೆಂ ದರೆ:—ಈ ಸನ್ನಿವೇಶದಲ್ಲಿ ಹಿಂದಿನ ಜನ್ಮದ ದೇಹದಿಂದ ಯಾವ ೬ ೪೨ ಯೋಗಮಾರ್ಗಗಳನ್ನು ಅವಲಂಬಿಸಿದ್ದನೋ ಅದೇ ಬುದ್ಧಿಯೋಗವನ್ನು ಹೊಂದು

* ಫಲವನ್ನು ತೊರೆಯುವ ಯಜ್ಞವು ಎಂಬುದು ಸಾಮಾನ್ಯವೆಂದು ತೋರಿಬಂದರೂ ಉಳಿದ ಎಲ್ಲಾ ಯಜ್ಞಗಳ ಮರ್ಮವನ್ನು ಒಳಗೊಂಡಿರುತ್ತದೆ.

ಯೋಗಕ್ಕೆ ತೊಡಗಿದವನು ಕೊನೆಮುಟ್ಟದೇ ಇರುವುದಿಲ್ಲ

ತ್ತಾನೆ. ಅಲ್ಲದೆ ಯೋಗಸಂಸಿದ್ಧಿಗಾಗಿ ಹಿಂದೆ ಮಾಡಿದುದ
ಕ್ಕಿಂತಲೂ ಅತಿಶಯವಾಗಿ ಪ್ರಯತ್ನಮಾಡುವವ ೬ ೪೩
ನಾಗುತ್ತಾನೆ. ಒಂದುವೇಳೆ ಸನ್ನಿವೇಶಸ್ಥಿತಿಗಳಿಂದ ಮರೆ
ಯುವಂತಾಗಿದ್ದರೂ ಹಿಂದಿನ ಜನ್ಮಗಳಲ್ಲಿ ಮಾಡಿದ ಕೆಲಸ
ಗಳ ಫಲದ ವಾಸನೆ, ಕೆಲಸಗಳ ಪರಿಚಯ ಮತ್ತು ರೂಢಿ ಇವುಗಳ ಮಹಿಮೆ
ಯಿಂದ ಮೈಮರೆತವನಾಗಿ ಅವನು ಯೋಗಮಾರ್ಗದಲ್ಲಿ ಒಯ್ಯಲ್ಪಡುತ್ತಾನೆ.
ಯೋಗದ ವಿಚಾರವನ್ನು ತಿಳಿಯಲು ಇಚ್ಛೆಯುಳ್ಳವನಾಗಿ ಸಾಮಾನ್ಯ ಜನರಿಗೆ
ಮಾರ್ಗದರ್ಶಕಗಳಾದ ಬ್ರಹ್ಮರೂಪದ ಶಬ್ದ (ವೇದ) ಗಳು ಮೊದಲಾದ ಕರ್ಮಕ್ಕೆ
ಸಂಬಂಧಪಟ್ಟ ಸಿದ್ಧಾಂತವಾಕ್ಯಗಳನ್ನು ಮೀರಿ ಆತ್ಮಜ್ಞಾನದ ಮೆಟ್ಟಲನ್ನು
ಏರುವವನಾಗುತ್ತಾನೆ. ಅಂದಮೇಲೆ ಪ್ರಯತ್ನಪೂರ್ವಕವಾಗಿ ಯೋಗ ೬ ೪೪
ಮಾರ್ಗವನ್ನು ಹಿಡಿದು ಅಭ್ಯಾಸಮಾಡುವವನು ಕಲ್ಮಷಗಳನ್ನು ತೊಳೆದುಕೊಂಡು
ಶುದ್ಧಿಹೊಂದಿ, ಅನೇಕ ಜನ್ಮ*ಗಳನ್ನು ಪಡೆದಾದರೂ, ಸಿದ್ಧನೆನಿಸಿಕೊಂಡು
ಕೊನೆಗೆ ಶಾಶ್ವತವಾದ ಸ್ವಸ್ವರೂಪಜ್ಞಾನಾನಂದವನ್ನು ಅನುಭವಿಸಿ ಸಂಸಾರ
ದಿಂದ ಬಿಡುಗಡೆ ಹೊಂದಿಯೇ ಹೊಂದುತ್ತಾನೆ. ಹೀಗೆ ನಾನುವಿನ ಭಕ್ತನೆಂದಿಗೂ
ಕೆಡಕನ್ನು ಹೊಂದುವುದಿಲ್ಲ. ಈ ಯೋಗಮಾರ್ಗದಲ್ಲಿ ತೊಡಗಿದುದರಿಂದ ೬ ೪೫
ಕೇಡೇನೂ ಇಲ್ಲ; ಯೋಗಮಾರ್ಗದಲ್ಲಿ ಮುಂದರಿಯಲಾರದೆ ನಿಂತರೂ ೯ ೩೧

ಸಾಧಕನು ಕೆಡುವುದಿಲ್ಲ

ದೋಷವಿಲ್ಲ. ಈ ಯೋಗಮಾರ್ಗಧರ್ಮವು ಸ್ವಲ್ಪವಾದರೂ
(ಸ್ವಲ್ಪವಾಗಿ ಆಚರಿಸಲ್ಪಟ್ಟರೂ) ದೊಡ್ಡ ಕಷ್ಟ ಅಥವಾ ಅಂಜಿಕೆ
ಯಿಂದ ಅಂದರೆ ಸಂಸಾರವೆಂಬ ಮೃತ್ಯುವಿನ ಭಯದಿಂದ
ಪಾರುಮಾಡುವುದು ಮತ್ತು ಕಾಪಾಡುವುದು. ೨ ೪೦

ಯೋಗದ ಮತ್ತು ಯೋಗಿಯ ಮಹಿಮೆ

ವೇದವೇ ಮೊದಲಾದ ನಾನುವಿನ ವಿಷಯಗಳನ್ನು ತಿಳಿಸುವ ಗ್ರಂಥಗಳ ವ್ಯಾಸಂಗ, ಪಠನ, ಪಾರಾಯಣವೇ ಮೊದಲಾದ ಕೆಲಸಗಳಲ್ಲಿ ಯಾವ ಪುಣ್ಯ ಫಲವುಂಟೋ ಸಾಮಾನ್ಯವಾಗಿ ಯಜ್ಞಗಳೆಂಬ ಸ್ವಕರ್ಮಗಳನ್ನು ನಿರ್ವಹಿಸುವುದರಿಂದ ಯಾವ ಪುಣ್ಯವು ದೊರೆಯುವುದೋ, ಆಹಾರ ನಿಯಮಾದಿ ತಪಸ್ಸುಗಳಿಗೆ ಯಾವ ಪುಣ್ಯವು ಹೇಳಲ್ಪಟ್ಟಿದೆಯೋ ಮತ್ತು ದಾನವೇ ಮೊದಲಾದ ಒಳ್ಳೆಯ (ಉಪಕಾರ) ಕಾರ್ಯಗಳಿಂದ ಯಾವ ಪುಣ್ಯವನ್ನು ಪಡೆಯಲಾಗುವುದೋ ಅದೆಲ್ಲವನ್ನೂ ಮೀರಿಸುವ ಫಲವನ್ನು ಆತ್ಮಲಾಭ ಮಾರ್ಗವನ್ನು ತಿಳಿದಿರುವ

---

* ಒಂದೇ ಜೀವಮಾನದಲ್ಲಿ ಹೊಂದುವ, ಅನೇಕ ಜನ್ಮಗಳ ರಹಸ್ಯವು ತಿಳಿಯಲ್ಪಡತಕ್ಕದ್ದು.

ಯೋಗಿಯು ಹೊಂದುತ್ತಾನೆ. ಮತ್ತು ಅವನು ಉತ್ತಮವಾದ ಮೊದಲನೆಯ ಸ್ಥಾನವನ್ನು ಪಡೆಯುತ್ತಾನೆ. ೮ ೨೮

ಕರ್ಮಯೋಗಾನುಷ್ಠಾನದ ಆವಶ್ಯಕತೆ

ಈ ರೀತಿಯಾಗಿ ನಾನುವಿನ ಪ್ರೀತಿಗೆ ಮಾಡುವ ಕೆಲಸಗಳ ಗುಟ್ಟನ್ನು ತಿಳಿದುಕೊಂಡು ಕೆಲಸ ಮತ್ತು ಹುಟ್ಟುಸಾವುಗಳ ದೆಸೆಯಿಂದ ಪೂರ್ಣವಾಗಿ ಬಿಡುಗಡೆ ಹೊಂದಿ ಶಾಶ್ವತಾನಂದವನ್ನು ಅನುಭವಿಸಬೇಕೆಂಬ ಅಭಿಪ್ರಾಯವುಳ್ಳ ಹಿರಿಯರು ಕೆಲಸಗಳನ್ನು ಮಾಡಿರುತ್ತಾರೆ. ಆದುದರಿಂದ ಹಿರಿಯರುಗಳಿಂದ ಹಿಂದಿನ ಕಾಲದಲ್ಲಿ ಮಾಡಲ್ಪಟ್ಟ ಸಂಪ್ರದಾಯಾನುಸಾರ ಬಂದಿರುವ ಕೆಲಸಗಳನ್ನೇ ಮಾಡಬೇಕು. ೪ ೧೫
ಮತ್ತು ಕೆಲಸದ ಫಲದಲ್ಲಿ ಅಪೇಕ್ಷೆಯಿಡದೆ ಯಾವಾಗಲೂ ಆಚರಿಸಬೇಕಾದಷ್ಟು ಮಾತ್ರ ಕೆಲಸವನ್ನು ನೆರವೇರಿಸುವುದು. ಕರ್ಮಫಲಾಪೇಕ್ಷೆಯನ್ನು ಬಿಟ್ಟು ಕೆಲಸವನ್ನು ನೆರವೇರಿಸುವ ಮನುಷ್ಯನು ಉತ್ತಮ ಪದವಿಯನ್ನು ಹೊಂದುತ್ತಾನೆ. ಈ ಉತ್ತಮಸ್ಥಾನವು ಲಾಭವಾಗಬೇಕೆಂಬ ಉದ್ದೇಶದಿಂದ ಕೆಲಸದ ೩ ೧೯
ಫಲದ ಗೋಜಿನಿಂದ ಬಿಡಲ್ಪಟ್ಟವನಾಗಿಯೇ ಕೆಲಸಮಾಡಬೇಕು. ಆತ್ಮ ೩ ೯
ಲಾಭ ಕ್ರಮದಲ್ಲಿ ಕೆಲಸಗಳನ್ನು ಒತ್ತಟ್ಟಿಗಿಟ್ಟಿರುವವನನ್ನೂ, ನಾನುವಿನ ಜ್ಞಾನದಿಂದ ಸಂಶಯಗಳನ್ನು ತೊಡೆದುಹಾಕಿರುವವನನ್ನೂ ಮತ್ತು ನಾನುವನ್ನು ಜಾಗರೂಕತೆಯಿಂದ ಸೇವಿಸುವವನನ್ನೂ ಕೆಲಸಗಳು ಅವುಗಳ ಸೆರೆಯಲ್ಲಿ ೪ ೪೧
ಸೇರಿಸುವುದಿಲ್ಲ. ನಾನುವನ್ನು ಪಡೆಯುವ ಯೋಗಮಾರ್ಗದಲ್ಲಿದ್ದು ಫಲದ ಗೋಜನ್ನು ಬಿಟ್ಟು ಕೆಲಸಮಾಡುವುದು ಆವಶ್ಯಕವು. ತಪಸ್ಸು ಮಾಡು ೨ ೪೮
ವವರಿಗಿಂತಲೂ ಯೋಗಿಯಾದವನು ಮೇಲು; ಅಲ್ಲದೆ ತತ್ವವಿಷಯಗಳನ್ನು ತಿಳಿದವರಿಗಿಂತಲೂ ಶ್ರೇಷ್ಠನು ಎಂದು ಗೊತ್ತಾಗಿದೆ. ಮತ್ತು ಕೇವಲ ವಿಧಾನಗಳನ್ನು ಅನುಸರಿಸಿ ಸ್ವಕರ್ಮಗಳನ್ನು ಮಾಡುವವನಿಗಿಂತಲೂ ಯೋಗಾನುಷ್ಠಾನವುಳ್ಳ ಯೋಗಿಯೇ ಉತ್ತಮನು. ಆದುದರಿಂದ ಯೋಗಿಯಾಗುವುದು ಅತ್ಯಂತಾವಶ್ಯಕವು. ಆದುದರಿಂದ ಸಿದ್ಧಿ ಮತ್ತು ಅಸಿದ್ಧಿಗಳಲ್ಲಿ ಒಂದೇ ೬ ೪೬
ಸಮನಾದ ಭಾವನೆಯನ್ನು ಹೊಂದಿ ಯೋಗಮಾರ್ಗವನ್ನು ಹಿಡಿಯುವುದಕ್ಕೆ ಮನಸ್ಸುಮಾಡಿ ತೊಡಗಬೇಕು. ೨ ೫೦; ೨ ೪೮

ನಿಷ್ಕಾಮಕರ್ಮಯೋಗ ‘ ನಾನುವಿನ ಅರಿವಿನ ’ ಸಹಕಾರ :—

ಯೋಗಿಯನ್ನು ಕರ್ಮವು ಕಟ್ಟಿಗೆ ಒಳಪಡಿಸುವುದಿಲ್ಲವಾದುದರಿಂದ ಅಜ್ಞಾನದಿಂದ ಹೃದಯದಲ್ಲಿ ತೋರಿದ ಸಂಶಯವನ್ನೂ ಕ್ಲೈಬ್ಯವನ್ನೂ ಜ್ಞಾನ

ವನ್ನು ಪಡೆವ ಗಂಡಸುತನ*=ಶಕ್ತಿಯಿಲ್ಲದಿರುವಿಕೆಯನ್ನೂ-ನಾನುವಿನ ಅರಿವೆಂಬ ಆಯುಧದಿಂದ ಹೋಗಲಾಡಿಸಿಕೊಂಡು ನಿಷ್ಕಾಮಕರ್ಮದ ಯೋಗವನ್ನು ಹಿಡಿಯಲು ಎದ್ದು ಉಜ್ಜುಗಿಸಬೇಕು. ನಾನುವಿನಲ್ಲಿ ಮನಸ್ಸುಳ್ಳವನಾಗಬೇಕು. ೪ ೪೨
ನಾನುವಿನ ಭಕ್ತನಾಗಬೇಕು. ನಾನುವಿನ ಪ್ರೀತಿಗಾಗಿ ಸ್ವಕರ್ಮ ಯಜ್ಞಗಳನ್ನು ಮಾಡಬೇಕು. ನಾನುವಿಗೆ ನಮಸ್ಕಾರ ಮಾಡುವುದು. ನಾನುವಿನಲ್ಲಿಯೇ ಆಸಕ್ತನಾಗುವುದು. ಈ ರೀತಿಯಾಗಿನಾನುವನ್ನು ಚಿತ್ತದಿಂದ ಜೋಡಿಸಿದರೆ ನಾನುವನ್ನೇ ಪಡೆಯಬಹುದು. ನಾನುವಿಗೋಸ್ಕರ ಕೆಲಸಗಳನ್ನು ಮಾಡುವವನೂ, ೯ ೩೪

ಕರ್ಮಯೋಗಿಯ ಬ್ರಹ್ಮಾಪರೋಕ್ಷಾನುಭವ

ನಾನುವೇ ಶ್ರೇಷ್ಠವಾದವಸ್ತುವೆಂದು ಎಣಿಸಿರುವವನೂ ಮತ್ತು ನಾನುವಿನ ಭಕ್ತನೂ ಕೆಲಸದ ಗೋಜನ್ನು ಬಿಟ್ಟವನೂ ಆಗಿ ನಾನುವಿನಲ್ಲಿಯೇ ಮನಸ್ಸಿಡಬೇಕು. ನಾನುವಿನಲ್ಲಿ ಬುದ್ಧಿಯನ್ನು ಒಳಹೊಗಿಸಬೇಕು. ಹೀಗೆ ಮಾಡುವುದರಿಂದ ೧೧ ೫೫
ನಾನುವಿನಲ್ಲಿಯೇ ಸೇರಿ ಹೋಗಬಹುದು. ಈ ವಿಷಯದಲ್ಲಿ ಸಂಶಯವಿಲ್ಲ. ೧೨ ೮
ಕೆಲಸಗಳನ್ನೆಲ್ಲಾ ವಿವೇಕವೆಂಬ ಚಿತ್ತದಿಂದ ನಾನುವಿನಲ್ಲಿ ಒತ್ತಟ್ಟಿಗಿಟ್ಟು, ನಾನುವಿನಲ್ಲಿ ಆಸಕ್ತನಾಗಿ, ನಾನುವನ್ನು ಪಡೆಯಲು ಸಹಾಯವಾದ ಬುದ್ಧಿಯೋಗವನ್ನಳವಡಿಸಿಕೊಂಡು; ಯಾವಾಗಲೂ ನಾನುವಿನಲ್ಲಿಯೇ ಚಿತ್ತವುಳ್ಳವನಾಗಬೇಕು. ನಾನುವಿನಲ್ಲಿ ಚಿತ್ತವುಳ್ಳವನು ಸಮಸ್ತ ವಿಧವಾದ ದೈವಿಕ, ಆತ್ಮಿಕ ೧೮ ೫೭
ಮತ್ತು ಭೌತಿಕವಾದ ತೊಂದರೆಗಳನ್ನೂ ನಾನುವಿನ ಒಲುಮೆಯಿಂದಲೇ ದಾಟಿಹೋಗುವನು. ನಾನುವಿನಲ್ಲಿ ಮನಸ್ಸಿಡಬೇಕು, ನಾನುವಿನ ಭಕ್ತ ೧೮ ೫೮
ನಾಗಬೇಕು. ನಾನುವಿನ ಪ್ರೀತಿಗಾಗಿ ಯಜ್ಞಗಳನ್ನು ಮಾಡಬೇಕು. ನಾನುವಿಗೆ ನಮಸ್ಕಾರ ಮಾಡಬೇಕು. ಹೀಗೆ ಸದಾ ನಾನುವಿನಲ್ಲಿ ಆಸಕ್ತನಾದವನು ನಾನುವನ್ನೇ ಹೊಂದಬಹುದು. ಇದು ನಿಜ. ನಾನುವಿಗೆ ಬೇಕಾದ ಭಕ್ತರಿಗೋಸ್ಕರ ಪ್ರತಿಜ್ಞೆ ಮಾಡಿ ಹೇಳಲಾಗುವುದು. ಆದುದರಿಂದ ಎಲ್ಲಾ ೧೮ ೬೫

ಕರ್ಮಯೋಗಾನುಷ್ಠಾನದ ಪೂರ್ಣತೆ

ವೇಳೆಗಳಲ್ಲಿಯೂ ಯೋಗಯುಕ್ತನಾಗಿರಬೇಕಲ್ಲದೆ, ನಾನುವನ್ನೇ ನೆನೆಯುತ್ತಿರಬೇಕು. ಮತ್ತು ಸ್ವಕರ್ಮವನ್ನು ಮಾಡುತ್ತಿರಬೇಕು. (ಕ್ಷತ್ರಿಯ ಬ್ರಾಹ್ಮಣನಾದವನು ಧರ್ಮವನ್ನು ನೆಲೆಗೊಳಿಸಲು ಆವಶ್ಯಕವಾದಾಗ ಯುದ್ಧವನ್ನು ಮಾಡಬೇಕು.) ಮನಸ್ಸು ಮತ್ತು ಬುದ್ಧಿಗಳನ್ನು ನಾನುವಿನಲ್ಲಿ ಸಮರ್ಪಿಸಿದವನು ಸಂದೇಹವಿಲ್ಲದೆ ನಾನುವನ್ನೇ ಸೇರಿ ಹೋಗುತ್ತಾನೆ. ೮ ೭

* ಇದರಿಂದ ಸ್ತ್ರೀಯರನ್ನು ಬೇರ್ಪಡಿಸಿದೆ ಎಂದು ತಿಳಿಯಲಾಗದು. ಸ್ತ್ರೀ ದೇಹದಲ್ಲಿರುವ ದೇಹಿಯೂ ಪುರುಷನು.

ಸರ್ವವನ್ನೂ ಭಗವದರ್ಪಣ ಮಾಡುವುದು

ಮನಸ್ಸು, ಶರೀರ ಮತ್ತು ಮಾತುಗಳಿಂದ ಏನೇನನ್ನು ಮಾಡಬಹುದೋ ಇಂದ್ರಿಯಗಳಿಂದ ಏನೇನನ್ನು ಅನುಭವಿಸಬಹುದೋ, ಏನೇನನ್ನು ಅಗ್ನಿಯೇ ಮೊದಲಾದವುಗಳ ಮೂಲಕ ನಾನುವಿನ ಪ್ರೀತಿಗಾಗಿ ಹೋಮ ಮಾಡಬಹುದೋ, ಅನ್ನವೇ ಮೊದಲಾದ ವಸ್ತುಗಳನ್ನು ದಾನಮಾಡಬಹುದೋ ಮತ್ತು ಆಹಾರ ನಿಯಮಗಳೇ ಮೊದಲಾದ ಯಾವ ಯಾವ ತಪಸ್ಸುಗಳನ್ನು ಆಚರಿಸಬಹುದೋ–ಅವೆಲ್ಲವನ್ನೂ "ಕಾಯೇನ ವಾಚಾ ಮನಸೇಂದ್ರಿಯೈರ್ವಾ ಬುದ್ಧ್ಯಾತ್ಮನಾ ವಾ ಪ್ರಕೃತೇಃ ಸ್ವಭಾವಾತ್ ಕರೋಮಿ ಯದ್ಯತ್ ಸಕಲಂಪರಸ್ಮೈ ನಾರಾಯಣಾಯೇತಿ ಸಮರ್ಪಯಾಮಿ" ಅಥವಾ "ಯದ್ಯತ್‌ಕರ್ಮಕರೋಮಿ ತತ್ತದಖಿಲಂ ಶಂಭೋ ತವಾರಾಧನಮ್'' ಎಂದು ನಾನುವಿಗೆ ಸಮರ್ಪಿಸಬೇಕು. ಹೀಗೆ ಮಾಡು ೯ ೨೭
ವುದರಿಂದ ಶುಭ ಮತ್ತು ಅಶುಭ ಫಲಗಳುಳ್ಳ ಕರ್ಮಗಳ ಬಂಧನಗಳಿಂದ ಬಿಡಲ್ಪಟ್ಟು, ನಾನುವಿನಲ್ಲಿ ಒತ್ತಟ್ಟಿಗಿಡುವಿಕೆ ಮತ್ತು ಯೋಗಗಳಿಂದ ಕೂಡಿ, ಸೆರೆಗಳಿಂದ ಬಿಡುಗಡೆ ಹೊಂದಿ ನಾನುವನ್ನೇ ಸೇರುವವನಾಗಬಹುದು. ೯ ೨೮

ಕೊನೆಯಮಾತು :—

(ಅ) ಆಚರಿಸಬೇಕಾದುದೆಲ್ಲವನ್ನೂ ಎಂದರೆ ಎಲ್ಲಾ ಧರ್ಮಗಳನ್ನೂ ತೊರೆದು ಅವುಗಳಲ್ಲಿ ಸಾರಭೂತನಾದ ನಾನುವನ್ನು ಮರೆ ಹೋಗುವುದು. ಸಮಸ್ತವಿಧವಾದ ಪಾಪಗಳಿಂದ ಅಂತಹವನನ್ನು ಬಿಡುಗಡೆ ಹೊಂದಿಸುವವನು ನಾನು. * ೧೮ ೬೬
(ಆ) ಕೇವಲ ವಿಧಾನಗಳೇ ಪ್ರಧಾನವಾದ ಧರ್ಮಗಳನ್ನು ಅಂದರೆ ಸಾರಭೂತನಾದ ನಾನುವನ್ನು ದೂರೀಕರಿಸಿದ ಸಮಸ್ತ ಧರ್ಮಗಳನ್ನು ಮತ್ತು ಅವುಗಳ ಕೇವಲ ಆಡಂಬರ ವಿಧಾನಗಳನ್ನು ತೊರೆದು, ಅವುಗಳಲ್ಲೆಲ್ಲಾ ಸಾರಭೂತನೂ ಮತ್ತು ಧರ್ಮಗಳ ಹೊರಗಿನ ರೂಪವಿಧಾನಗಳ ಸ್ವರೂಪನೂ ಆದ ನಾನುವನ್ನೇ ಆಶ್ರಯಿಸಿ ಮರೆ ಹೊಗಬೇಕಾದುದು. † ನಾನುವನ್ನು ಮುಂದುಮಾಡಿದ ಅಂದರೆ

---

* ಸರ್ವ ಧರ್ಮಗಳನ್ನೂ ಸಂಕಲ್ಪಪೂರ್ವಕ ತ್ಯಾಗಮಾಡಬೇಕೆಂದಲ್ಲ. ನಾನುವಿನಲ್ಲಿ ಚಿರೆತಿರುವವನ ದೆಸೆಯಿಂದ ನಾನುವಿನಲ್ಲಿ ಸಂನ್ಯಸ್ತವಾದ ಸರ್ವ ಧರ್ಮಗಳೂ ಅವುಗಳಷ್ಟಕ್ಕೆ ಅವುಗಳೇ ತ್ಯಕ್ತವಾಗಿ ಹೋಗುವುವು. ಪ್ರಾರಬ್ಧ ದೇಹವಿರುವ ಪರ್ಯಂತ ಅಂದರೆ ಜೀವನ್ಮುಕ್ತ ಸ್ಥಿತಿ–ವಾ—ವಿದೇಹಕೈವಲ್ಯ ದೊರೆಯುವವರೆಗೂ ಕರ್ಮದ ಸೆರೆಯಿಂದ ಬಿಡುಗಡೆ ಹೊಂದಿಸಲು ಯತ್ನವು ಆವಶ್ಯಕ. ಧರ್ಮಗಳ ಸ್ಥೂಲವಾದ ನಾಮರೂಪಗಳಲ್ಲಿ ಉದಾಸೀನನಾಗಿ ಅವುಗಳಿಗೆಲ್ಲಾ ಮೂಲವಾದ ನಾನುವನ್ನೇ ಹೊಂದಬೇಕು. ನಾನುವಿನ ಆಶ್ರಯವಾದೊಡನೆ ನಾಮರೂಪಗಳಲ್ಲಿ ತ್ಯಾಗಬುದ್ಧಿ ಯುಂಟಾಗುವುದು.

† ನಾನುವನ್ನು ಆಶ್ರಯಿಸುವುದು ಎಂದರೆ ಯೋಗ. ಇದೂ ಧರ್ಮವೇ ; ಧರ್ಮಗಳ ವಿಧಾನ, ಹೊರಗಿನ ರೂಪ–ಆಡಂಬರ–ಗಳೂ ಸಹ ನಾನುವಿನ ನಾಮರೂಪಗಳೇ ಆಗಿರುವುವು.

ಪ್ರಧಾನವಾಗಿ ಎಣಿಸಿದ ಲಕ್ಷಣಗಳುಳ್ಳ ಧರ್ಮಗಳನ್ನು ಆಚರಿಸುವ ಶರಣಾಗತ ನನ್ನು ಸಮಸ್ತ ವಿಧವಾದ ಪಾಪಗಳಿಂದ ಬಿಡುಗಡೆ§ ಹೊಂದಿಸುವವನು ನಾನು. ೧೮ ೬೬

ಅನಿತ್ಯವೂ ಅಸುಖವೂ ಆದ ಈ ಲೋಕವನ್ನು ಪಡೆದು ನಾನುವನ್ನು ಭಜಿಸಲೇ ಬೇಕು. ಸಮಸ್ತ ಕೆಲಸಗಳನ್ನೂ ನಾನುವಿನ ವಿಷಯದ ಮೇಲೆ ಇರುವ, ೯ ೩೩ ಬುದ್ಧಿಯಿಂದ ನಾನುವಿನಲ್ಲಿ ಒತ್ತಟ್ಟಗಿಟ್ಟು, ಆಹಾರಾದಿಗಳಲ್ಲಿ ಬಯಕೆಯಿಲ್ಲದೆ, "ಪ್ರಾಪಂಚಿಕ ವಿಷಯಗಳು ನಾನುವಿಗೆ ಸಂಬಂಧಪಟ್ಟವೆ"—ಎಂಬ ಭಾವನೆ ಯನ್ನು ಬಿಟ್ಟು, ಶಂಕೆ ಮತ್ತು ಭಯಗಳನ್ನು ತೊರೆದು ಸ್ವಕರ್ಮವನ್ನು (ಕ್ಷತ್ರಿಯ ಬ್ರಾಹ್ಮಣನಾದವನು ಧರ್ಮಕ್ಕಾಗಿ ಮಾಡಬೇಕಾದ ಯುದ್ಧ ಇತ್ಯಾದಿ ಗಳನ್ನು) ಮಾಡಬೇಕು. ೩ ೩೦

ಇದುವರೆಗೂ ಹೇಳಿದ, ಶಾಶ್ವತವಾಗಿಯೂ ಅಳಿವಿಲ್ಲದೆಯೂ ಇರುವ—ಯೋಗವನ್ನು ವಿವಸ್ವಾನನಿಗೆ ಹೇಳಿದವನು 'ನಾನು.' ವಿವಸ್ವಾನನು-ಮನು

ಯೋಗದ ಇತಿಹಾಸ

ವಿಗೂ, ಮನುವು ಇಕ್ಷ್ವಾಕುವಿಗೂ ಹೇಳಿದನು. ಈ ೪ ೧ ರೀತಿಯಾಗಿ ಒಬ್ಬರಿಂದೊಬ್ಬರಿಗೆ ಪರಂಪರೆಯಾಗಿ ಹೇಳ ಲ್ಪಟ್ಟ ಯೋಗವನ್ನು ರಾಜರ್ಷಿಗಳೆಲ್ಲರೂ ಬಲ್ಲರು. ಬಹುಕಾಲವಾದುದರಿಂದ ಅದು ಈಗ ಗೋಚರವಾಗದೆ ಹೋಗಿರುತ್ತದೆ. ಹಿಂದೆ ಹೇಳಿದಂತೆ ಇದು ವರೆಗೂ ವಿವರಿಸಿ ಹೇಳಲ್ಪಟ್ಟುದೂ ಸಹ ಆ ಸನಾತನವಾದ ಯೋಗವೇ. ಭಕ್ತನೂ ಸಖನೂ ಆಗಿರುವವರಿಗೆ ಮಾತ್ರ ಉತ್ತಮವಾದ ಈ ಯೋಗ ರಹಸ್ಯವು ಸಾಕ್ಷಾತ್ತಾಗಿ ಹೇಳಲ್ಪಡುವುದು. ೪ ೩

ಓಂ ತತ್ಸತ್

ಎಂಬುದಾಗಿ ಶ್ರೀಮದ್ಭಗವದ್ಗೀತಾ ವಿಷಯ ವಿಭಜನಸಂಯೋಜನಪೂರ್ವಕ ಸಂಪುಟೀಕೃತ ಗೀತಾಕೃತಿಯಲ್ಲಿ 'ಯೋಗ' ಎಂಬ ಐದನೆಯ ಕನ್ನಡ ಪ್ರಬಂಧವು.

---

§ ಕರ್ಮಯೋಗ ಮಹಿಮೆಯ ರಹಸ್ಯ—ಪುಟ ೨೦೧ ಪಂಕ್ತಿ ೨೦-೨೨. ಸರ್ವ ಸಾರಭೂತನಾದ ನಾನುವನ್ನು ಮರೆಹೊಕ್ಕು, ಆಶ್ರಯಿಸಿ ಧರ್ಮಗಳನ್ನು ಆಚರಿಸಿದರೆ ಆಯಾ ಧರ್ಮಗಳ ಹೊರಗಿನ ರೂಪವಿಧಾನಗಳು—ಅವುಗಳಷ್ಟಕ್ಕೆ ಅವುಗಳೇ—ಕ್ರಮವನ್ನು ಹೊಂದಿ, ಆಚರಿಸಿದ ಧರ್ಮಗಳು ನಿರ್ದುಷ್ಟಗಳೂ ಪಾಪರಹಿತಗಳೂ ಯೋಗತತ್ತ್ವಪೂರಿತಗಳೂ ಆಗುವುವು.

ನಾನುವು ಧರ್ಮದ ಒಳಗಿನ ಮತ್ತು ಹೊರಗಿನ ರೂಪನಾದವನು; ಧರ್ಮ=ನಾನು; ನಾನು=ಧರ್ಮ ಎಂದು ತಿಳಿದು ಆಚರಿಸಿದ ಧರ್ಮವು ಪೂರ್ಣವಾಗುವುದು. ಮತ್ತು ಪಾಪ ಎಂದರೆ ಕೇಡು, ದೋಷ, ಭಯ, ಅಪವಾದ ಇತ್ಯಾದಿಗಳು ಪರಿಹಾರವಾಗುವುವು.

ಶ್ರೀ ಯೋಗಾನಂದ ಗುರವೇನಮಃ

ಸಂಪುಟೀಕೃತ ಶ್ರೀಮದ್ಭಗವದ್ಗೀತಾ ಶ್ಲೋಕಪ್ರಬಂಧಗಳ ಕನ್ನಡ ಗದ್ಯಾನುವಾದ ಪ್ರಬಂಧಗಳು

ಆರನೆಯ ಪ್ರಬಂಧವು

ಪ್ರಶ್ನೋತ್ತರಗಳು

ಪ್ರಶ್ನೆ :—'ತತ್'–'ಬ್ರಹ್ಮ'–ಎಂದರೇನು? ೮ ೧

ಉತ್ತರ :—ಪರಮಾಕ್ಷರವು ಬ್ರಹ್ಮವೆನಿಸುವುದು. 'ಬ್ರಹ್ಮ', 'ನಾನು'–ಎಂಬ ಪುರುಷ ಪದಾರ್ಥವು ಒಂದೇ ವಿಕಾರವನ್ನು ಹೊಂದುವ ವಸ್ತುಗಳರೂಪದ ಕ್ಷರಪುರುಷನೆಂದೂ, ಮಾಯೆಯೊಳಗೆ ಇದ್ದು ಮಾಯಾ ಎಂಬ ಅಕ್ಷರ ಪುರುಷನೆಂದೂ, ಶುದ್ಧನೂ ಪೂರ್ಣನೂ ನಿರಾಕಾರನೂ ಮತ್ತು ನಿರ್ಗುಣನೂ ಆದ ಪರಮಪುರುಷ–ವಾ–ಉತ್ತಮಪುರುಷನೆಂತಲೂ ಅನುಭವಸಿದ್ಧವಾಗಿದೆ. ೮ ೩
೧೫ ೧೬ ; ೧೫ ೧೭

'ಓಮ್' ಎಂಬ ಏಕಾಕ್ಷರ ವಾಚ್ಯವಾದುದು 'ಬ್ರಹ್ಮ' ೮ ೧೩

ಪ್ರಶ್ನೆ :—ಏನನ್ನು ಅಧ್ಯಾತ್ಮವೆನ್ನಬೇಕು? ೮ ೧

ಉತ್ತರ :—ನಾನುವಿನ (ಸ್ವ) ಸ್ಥಿತಿಯೇ (ಭಾವ)–ಅಧ್ಯಾತ್ಮ=ಸ್ವಭಾವವೆನಿಸುವುದು. [ಆತ್ಮ=ನಾನುವಿಗೆ ಸಂಬಂಧಪಟ್ಟ ವಿಷಯ : ಅಧ್ಯಾತ್ಮ.] ೮ ೩

ಪ್ರಶ್ನೆ :—ಕರ್ಮ=ಕೆಲಸ–ಎಂದರೇನು? ಅದಾವುದು? ೮ ೧

ಉತ್ತರ :—ವಸ್ತುಗಳ ಸ್ಥಿತಿ ಸೃಷ್ಟಿಗಳನ್ನುಂಟುಮಾಡುವುದೂ ಮತ್ತು ಸೃಷ್ಟಿಯನ್ನು ಕೊನೆಗಾಣಿಸುವುದೂ-ಕರ್ಮ=ಗೆಯ್ಮೆ=ಕೆಲಸವೆನಿಸುವುದು. ಹುಟ್ಟು ಸಾವುಗಳಿಗೆ ಕಾರಣವಾದುವುಗಳೇ ಕೆಲಸ. ೮ ೩

ಪ್ರಶ್ನೆ :—ಅಧಿಭೂತವೆಂದು ಹೇಳಲ್ಪಡುವುದಾವುದು? ೮ ೧

ಉತ್ತರ :—ಬದಲಾವಣೆ ಹೊಂದುವ ಚರಾಚರವಸ್ತುಗಳಲ್ಲೆಲ್ಲಾ ಮೇಲಾಗಿ ಶ್ರೇಷ್ಠವೆನಿಸುವ ಪುರುಷ ಪದಾರ್ಥವೇ ಅಧಿಭೂತವೆನಿಸುವುದು. ಇದೇ ಅಕ್ಷರ
ಪುರುಷ–ನಾನು. (ವಸ್ತುಗಳ ವಿಷಯವಾಗಿ ಹೇಳಲ್ಪಡುವುದು. ಎಂದರೆ ೮ ೪
ಯಾವುದರಿಂದ ಯಾವುದಕೋಸ್ಕರ ವಸ್ತುವು ಹೇಳಲ್ಪಡುವುದೋ ಅದು "ನಾನು")

ವಿಕಾರವನ್ನು ಹೊಂದುವ ವಸ್ತುಗಳ ಇರುವಿಕೆಯೇ ಕ್ಷರಪುರುಷನೆನಿಸಿಕೊಳ್ಳುವುದು. ೧೫ ೧೬

ಪ್ರಶ್ನೆ :—ಯಾವುದನ್ನು ಅಧಿದೈವವೆನ್ನುತ್ತಾರೆ? ೮ ೧

ಉತ್ತರ :—ದೇವತೆಗಳಲ್ಲೆಲ್ಲಾ ಮೇಲಾದ ನಾನುವೇ ಅಧಿದೈವ. ದೇವತೆಗಳೂ ಸಹ ಯಾವುದರಿಂದ ದೇವತ್ವವನ್ನು ಹೊಂದುವರೋ ಆ ಪರಮವಸ್ತುವಾದ ನಾನು ಅಧಿದೈವ. ಇದೇ ಪುರುಷ.–ಅಕ್ಷರಪುರುಷ- ಪರಮಪುರುಷ. ೮ ೪: ೧೫ ೧೭

ಪ್ರಶ್ನೆ :—ಈ ದೇಹದಲ್ಲಿ ಯಜ್ಞ (ಕೆಲಸ)ಗಳಿಗೆಲ್ಲಾ ಒಡೆಯನಂತೆ ಮೇಲೆ ಇರುವವನು ಯಾರು? ಮೇಲಾದುದು ಹೇಗೆ? ೮ ೨

ಉತ್ತರ :—ನಾನುವಿನ ಅಧ್ಯಕ್ಷತೆ–ಸಾಕ್ಷಿತ್ವವಿಲ್ಲದೆ ಕೆಲಸವಾವುದೂ ನಡೆಯದಿರುವುದರಿಂದಲೂ, ನಾನುವೇ ಭೋಕ್ತೃವಾದುದರಿಂದಲೂ–ನಾಮರೂಪಗಳಿಂದ ನಡೆವ ಕೆಲಸಗಳಿಗೆಲ್ಲಾ ಮೇಲ್ಪಟ್ಟು ಒಡೆಯನಾಗಿರುವವನು 'ನಾನುವು' ೮ ೪

ಪ್ರ :—ನಾನುವನ್ನು ಪಡೆಯುವುದಕ್ಕಾಗಿ ಕಟ್ಟಳೆಗಳನ್ನು ಅನುಸರಿಸಿ ಹಿಡಿತದಲ್ಲಿರುವವರು ಕಳೇಬರವನ್ನು ಬಿಟ್ಟು ಹೋಗುವಾಗ ನಾನುವನ್ನು ತಿಳಿಯುವುದು ಹೇಗೆ? ೮ ೨

ಉ :—(i) ಕಳೇಬರವನ್ನು ಬಿಟ್ಟು ಹೋಗುವ ಕೊನೆಗಾಲದಲ್ಲಿ ನಾನುವನ್ನೇ ನೆನೆಯುತ್ತಾ ಹೊರಹೊರಡುವವನು ನಾನುವಿನ ಧರ್ಮವನ್ನೇ ಹೊಂದುವುದರಲ್ಲಿ ಸಂದೇಹವಿಲ್ಲ. ಅನನ್ಯಚೇತರಾಗಿ ಸದಾ ಸ್ಮರಿಸುತ್ತಲೇ ಇರುವುದರಿಂದ ಅಂತ್ಯಕಾಲದಲ್ಲಿ ನಾನುವನ್ನು ತಿಳಿಯಬಹುದು (ii) ಶರೀರದಲ್ಲಿ ೮ ೫ ಬಾಗಿಲುಗಳಂತಿರುವ ಒಂಭತ್ತು ದ್ವಾರಗಳ ಕೆಲಸಗಳನ್ನು ಹಿಡಿತದಲ್ಲಿಟ್ಟುಕೊಂಡು ಮನಸ್ಸನ್ನು ಹಿಡಿದು ಹೃದಯದಲ್ಲಿ (ನಾನುವಿನ ಆಶ್ರಯವಾದ ಬುದ್ಧಿಯಲ್ಲಿ) ಸೇರಿಸಿ ಯೋಗಧಾರಣೆಯ ಮೂಲಕ ಪ್ರಾಣವನ್ನು ನಾನುವಿನ ಮೇಲೆ ನಿಲ್ಲಿಸಿ ೮ ೧೨ ಬ್ರಹ್ಮ ಸೂಚಕ ಶಬ್ದವಾದ 'ಓಮ್'–ಏಕಾಕ್ಷರವನ್ನು ಉಚ್ಚರಿಸುತ್ತಲೂ, ನಾನುವನ್ನು ಧ್ಯಾನಿಸುತ್ತಲೂ ದೇಹವನ್ನು ತೊರೆದು ಹೋಗುವವನು ಪರಮಪದವಿಯನ್ನು ತಿಳಿಯುತ್ತಾನೆ. ೮ ೧೩

ಪ್ರ :—ಎಡೆಬಿಡದೆ ನಾನುವನ್ನು ಸಾಕ್ಷಾತ್ಕರಿಸುವುದು (ಅಪರೋಕ್ಷಾನುಭವಮಾಡಿಕೊಳ್ಳುವುದು) ಹೇಗೆ? ೧೦ ೧೭

ಉ :—ಈ ಜಗತ್ತಿನಲ್ಲಿ ಕಾಣುವ ಚರಾಚರ ವಸ್ತುಗಳಲ್ಲಿ ನಾನುವನ್ನು ಹೊಂದದಿರುವುದೊಂದಾದರೂ ಇಲ್ಲ. ನಾನುವಿನ ಒಂದಂಶದಿಂದ ಈ ೧೦ ೩೯ ಜಗತ್ತೆಲ್ಲವನ್ನೂ ಧರಿಸಿ ಇರುವವನು 'ನಾನುವು'. ಆದುದರಿಂದ ೧೦ ೪೨ ಯಾವ ರೂಪದಲ್ಲಿಯಾದರೂ (ನಾನುವನ್ನು ಅನುಭವಿಸಬಹುದು; ಸಾಕ್ಷಾತ್ಕರಿಸಬಹುದು.)

ಪ್ರ :—ಯಾವಯಾವ ನಾಮರೂಪ ಸ್ಥಿತಿಗಳಲ್ಲಿ ನಾನುವನ್ನು ಧ್ಯಾನಿಸಬಹುದು ? ೧೦ ೧೭

ಉ :—ಚರಾಚರ ವಸ್ತುಗಳಲ್ಲಿ ಮಹಿಮೆಯುಳ್ಳದ್ದೂ, ಶಕ್ತಿಯುಳ್ಳದ್ದೂ ಮತ್ತು ಸಂಪತ್ತುಳ್ಳದ್ದೂ ಆಗಿ ಯಾವ ಯಾವುದು ಕಾಣಬರುವುದೋ ಅದೆಲ್ಲವೂ ನಾನುವಿನ ಅಂಶದಿಂದ ಉಂಟಾದುದೆಂದು ತಿಳಿದು ನಾಮರೂಪಗಳಲ್ಲಿ ನಾನುವನ್ನು ಧ್ಯಾನಿಸಬಹುದು. ೧೦ ೪೧

ಪ್ರ :—ನಾನುವಿನ ಮಹಿಮೆಗಳನ್ನು ವಿಸ್ತಾರವಾಗಿ ಹೇಳಬೇಕು (ಈ ಮಹಿಮೆಗಳನ್ನು ಕೇಳಿದಷ್ಟೂ ತೃಪ್ತಿಯಿರುವುದಿಲ್ಲ) ನಾನುವು ಪರ ೧೦ ೧೮
ಬ್ರಹ್ಮನೂ ಪರಂಧಾಮನೂ, ಪವಿತ್ರನೂ, ಪುರುಷನೂ, ಶಾಶ್ವತನೂ, ದಿವ್ಯನೂ, ಆದಿದೇವನೂ, ಅಜನೂ ಮತ್ತು ವಿಭುವೂ ಆಗಿದಾನೆ—ಎಂಬದಾಗಿ ಎಲ್ಲಾ ಋಷಿಗಳೂ, ದೇವರ್ಷಿಯಾದ ನಾರದನೂ ಹೇಳುತ್ತಾರೆ. ಅಸಿತನೂ, ೧೦ ೧೨
ದೇವಲನೂ ಮತ್ತು ವ್ಯಾಸನೂ-'ನಾನುವೇ' ಎಂದು ಈಗ ಹೇಳಲಾಗಿದೆ. ೧೦ ೧೩
ಶ್ರೀ ಕೃಷ್ಣನಿಂದ ಹೇಳಲ್ಪಟ್ಟ ಈ ವಿಷಯವೆಲ್ಲವೂ ನಿಜವೆಂದೇ ಭಾವಿಸಬೇಕು. ಪುರುಷೋತ್ತಮನೂ, ಭೂತಭಾವನನೂ, ಭೂತೇಶನೂ ಮತ್ತು ಜಗತ್ಪತಿಯೂ ಆದ ನಾನುವೇ ನಾನುವನ್ನು ನಾನುವಿನಿಂದ ತಿಳಿಯಬಹುದೇ ಹೊರತು ೧೦ ೧೫
ನಾನುವಿನ ಆಕಾರವನ್ನು ರೂಪವನ್ನು-ನಾಮರೂಪಗಳಾದ ದೇವತೆಗಳಾಗಲೀ, ದಾನವರಾಗಲೀ, ಯಾರೂ ಕಾಣರು. ಆದುದರಿಂದ ದಿವ್ಯವಾದ ಯಾವ ೧೦ ೧೪
ಮಹಿಮೆಗಳಿಂದ ನಾನುವು ಈ ಲೋಕಗಳನ್ನೆಲ್ಲಾ ತುಂಬಿ ಹರಡಿರುತ್ತಾನೋ-ಅಂತಹ-ನಾನುವಿನ ವಿಭೂತಿ-ಮಹಿಮೆಗಳನ್ನು ಸ್ವಲ್ಪವೂ ಬಿಡದೆ, ಪೂರ್ಣವಾಗಿ ಹೇಳಬೇಕು. ೧೦ ೧೬

ಉ :—ಅಹಹ! ನಾನುವಿನ ಮಹಿಮೆಗಳು ವಿಸ್ತಾರವಾಗಿರುವುವು; ಕೊನೆಯಿಲ್ಲದುವು; ಮುಖ್ಯವಾದ ಕೆಲವು ಮಹಿಮೆಗಳು ಮಾತ್ರ ಹೇಳಲ್ಪಡುವುವು :-
"ಸರ್ವಪ್ರಾಣಿಗಳ ಮುಖ್ಯಾಂಗವಾದ ಹೃದಯದಲ್ಲಿ (ಬುದ್ಧಿಯಲ್ಲಿ) ಇರುವ ೧೦ ೧೯
ಆತ್ಮ-ಬ್ರಹ್ಮನುನಾನುವು; ಎಲ್ಲಾ ಚರಾಚರ ವಸ್ತುಗಳ ಉತ್ಪತ್ತಿ ಸ್ಥಿತಿ ಮತ್ತು ಲಯಗಳು ನಾನುವು; ಸಮಸ್ತ ವಸ್ತುಗಳ ಉತ್ಪತ್ತಿಗೆ ಬೀಜವಾವುದೋ ೧೦ ೨೦
ಅದೆಲ್ಲವೂ ನಾನುವು; ಚರಾಚರ ವಸ್ತುಗಳಲ್ಲಿ ನಾನುವಿನಿಂದ ಹೊರಗಾದ ವಸ್ತುವಾವುದೂ ಇಲ್ಲ. ನಾನುವಿನ ದಿವ್ಯಮಹಿಮೆಗಳಿಗೆ ಕೊನೆ ಮೊದ ೧೦ ೩೯
ಲಿಲ್ಲ. ಪ್ರಪಂಚದಲ್ಲಿ ಮಹಿಮೆಯುಳ್ಳವೂ ಸಂಪತ್ತುಳ್ಳವೂ ಮತ್ತು ೧೦ ೪೦
ಉದ್ದಾಮಘನತೆಯುಳ್ಳವೂ ಏನೇನಿವೆಯೋ ಅವೆಲ್ಲವೂ ನಾನುವಿನ ಅಂಶದಿಂದುಂಟಾಗಿವೆ ಎಂದು ತಿಳಿಯಬೇಕು. ಈ ಜಗತ್ತೆಲ್ಲವನ್ನೂ ಹೊಕ್ಕು ೧೦ ೪೧
ಒಂದಂಶದಿಂದ ಧರಿಸಿರುವವನು ನಾನುವು" ೧೦ ೪೨

ಪ್ರ—ಜನಾರ್ದನ, ನಾನುವಿನ ಯೋಗದ ವಿಚಾರವಾಗಿ ವಿಸ್ತಾರವಾಗಿ ಹೇಳಬೇಕು. ೧೦ ೧೮

ಉ—ಅಳಿವಿಲ್ಲದ ಯೋಗವಿಚಾರವನ್ನು ವಿವಸ್ವಾನನಿಗೆ ಹೇಳಿದವನು
‘ನಾನುವು; ವಿವಸ್ವಾನನು ಮನುವಿಗೂ, ಮನುವು ಇಕ್ಷ್ವಾಕುವಿಗೂ ಹೇಳಿದರು.
ಹೀಗೆ ಒಬ್ಬರ ಮೂಲಕ ಮತ್ತೊಬ್ಬರಿಗೆ ಬಂದ ಯೋಗವನ್ನು ಎಲ್ಲಾ ೪ ೧
ರಾಜರ್ಷಿಗಳೂ ತಿಳಿದಿದ್ದರು. ಬಹುಕಾಲವಾದುದರಿಂದ ಈಚೆಗೆ ಯೋಗವು,
ಮಲಿನವಾಗಿ ಮರೆಯಾಗಿ ನಿಂತಿತು. ಹಿಂದೆಲ್ಲಾ ವಿವರಿಸಿ ಹೇಳಿದ ೪ ೨
ಆ ಸನಾತನ ಯೋಗವನ್ನೇ ಈಗ ಹೇಳಿದುದು. ಗುಟ್ಟಾಗಿ ಕಾಪಾಡಿಡಬೇಕಾದ
ವಸ್ತುಗಳಲ್ಲಿ ಉತ್ತಮವಾದ ಈ ರಹಸ್ಯವು, ಭಕ್ತರೂ, ಸ್ನೇಹಿತರಾಗಿ ವರ್ತಿಸುವ
ವರೂ ಆದವರಿಗೆ ಮಾತ್ರ ಹೇಳಲ್ಪಡುವುದು. ೪ ೩

ಪ್ರ—ಯೋಗವನ್ನು ಈಗ ಅರ್ಜುನನಿಗೆ ವಿವರಿಸಿ ಹೇಳುವ ಶ್ರೀಕೃಷ್ಣನಿಗೆ
ಬೇರೆ ಒಂದು ಜನ್ಮ; ವಿವಸ್ವಾನನಿಗೆ ಬೇರೊಂದು ಜನ್ಮ ಎಂದು ಹೇಳಿದರೆ ಶ್ರೀ
ಕೃಷ್ಣನೇ ಮೊದಲು ಹೇಳಿದುದೆಂಬುದನ್ನು ಹೇಗೆ ತಿಳಿಯಬೇಕು? ೪ ೪

ಉ—(1) ಶ್ರೀಕೃಷ್ಣನಿಗೂ ಅರ್ಜುನನಿಗೂ ಎಷ್ಟೋ ಜನ್ಮಗಳು ಕಳೆದು
ಹೋದುವು. ಅದೆಲ್ಲವನ್ನೂ ಶ್ರೀಕೃಷ್ಣನು ತಿಳಿದಿರುತ್ತಾನಲ್ಲದೆ ಅರ್ಜುನನು ತಿಳಿಯ
ಲಾರನು. (ಹಿಂದೆ ನಡೆದ) ಕಳೆದು ಹೋದ ವಿಷಯಗಳನ್ನೂ, ಈಗ ೪ ೫
ನಡೆಯುತ್ತಿರುವ ಮತ್ತು ಮುಂದೆ ನಡೆಯಬಹುದಾದ ವಿಷಯಗಳೆಲ್ಲವನ್ನೂ
ತಿಳಿದಿರುವವನು ‘ನಾನುವು.’ ನಾನುವನ್ನು ತಿಳಿದವರಾರೂ ಇಲ್ಲ. ೭ ೨೬
(2) ಅಳಿವಿಲ್ಲದ ನಾನುವು ಹುಟ್ಟದೆ ಇರುವವನಾದಾಗ್ಯೂ ಚರಾಚರ ವಸ್ತುಗಳ
ಒಡೆಯನಾದಾಗ್ಯೂ ನಾನುವಿನ ಮಾಯೆಯಿಂದ ಪ್ರಕೃತಿಮಾಯೆಯ ಆಧಾರವನ್ನು
ಹೊಂದಿ, ನಾಮರೂಪಗಳನ್ನು ಧರಿಸುವವನು ‘ನಾನುವು.’ ಯಾವ ಯಾವ ೪ ೬
ಕಾಲಗಳಲ್ಲಿ ಧರ್ಮಕ್ಕೆ ಹಾನಿಯುಂಟಾಗುವುದೋ ಆಯಾ ಕಾಲಗಳಲ್ಲಿ ನಾನು
ವನ್ನು ನಾಮರೂಪಗಳಿಂದ ಹುಟ್ಟಿಸುವವನು ನಾನುವೇ. (3) ಸಾಧು ೪ ೭
ಗಳನ್ನು ಕಾಪಾಡುವುದಕ್ಕೂ ಕೇಡಿಗರ ಅಳಿವಿಗೂ ಧರ್ಮವನ್ನು ಅದರ ನೆಲೆಯಲ್ಲಿ
ನಿಲ್ಲಿಸುವುದಕ್ಕೂ, ಆಗಾಗ್ಗೆ ನಾಮರೂಪಗಳನ್ನು ಹೊಂದುವವನು ‘ನಾನುವೇ.’
ನಾನುವಿನ ಪರಮೋತ್ಕೃಷ್ಟವಾದ ಮೇಲೆ ಹೇಳಿದ ಹುಟ್ಟು ಅಥವಾ ೪ ೮
ಜನ್ಮದ—ವಿಷಯವನ್ನೂ, ಕೆಲಸದ ಗುಟ್ಟನ್ನೂ—ತತ್ತ್ವಾರ್ಥ ದೃಷ್ಟಿಯಿಂದ ತಿಳಿ
ಯುವವನು ಈ ಕಳೇಬರವನ್ನು ತೊರೆದ ಮೇಲೆ ಪುನಃ ಹುಟ್ಟದೆ ನಾನುವನ್ನೇ
ಸೇರಿ ಹೋಗುತ್ತಾನೆ. (ಮೋಕ್ಷ ಹೊಂದುತ್ತಾನೆ) ೪ ೯

ಪ್ರ—ಇದುವರೆಗೂ ಸಮಂಜಸವಾಗಿ ಹೇಳಲ್ಪಟ್ಟ ಯೋಗಮಾರ್ಗದ ಸ್ಥಿರವಾದ ನೆಲೆಯನ್ನು ಮನಗಾಣುವುದು ಹೇಗೆ? ಎಂಬುದು ಚಿತ್ತಚಾಂಚಲ್ಯದ ದೆಸೆಯಿಂದ ತಿಳಿಯಲಿಲ್ಲ. ಮನಸ್ಸು ಚಂಚಲವು; ಬಲವುಳ್ಳದ್ದಾಗಿಯೂ ೬ ೩೩ ಮತ್ತು ಚಾಂಚಲ್ಯದಲ್ಲಿ ದೃಢವಾಗಿಯೂ ಇದ್ದು, ಅದನ್ನು ತಡೆಯುವುದಕ್ಕೆ ಯತ್ನಿಸುವವನನ್ನು ಅಲ್ಲಾಡಿಸಬಿಡಬಲ್ಲದು. ಗಾಳಿಯನ್ನು ತಡೆದು ನಿಲ್ಲಿಸುವುದು ಕಷ್ಟವಾಗಿರುವಂತೆ, ಮನಸ್ಸನ್ನು ಹಿಡಿದು ನಿಲ್ಲಿಸುವುದು ತುಂಬಾ ಕಷ್ಟವಾಗಿರುತ್ತದೆ. ೬ ೩೪

(ಈ ಸಮಸ್ಯೆಯನ್ನು ಪರಿಹರಿಸುವುದು ಹೇಗೆ?)

ಉ—ನಿಜ; ಮನಸ್ಸು ಚಂಚಲವಾದುದು; ಅದನ್ನು ಸ್ವಾಧೀನದಲ್ಲಿಟ್ಟುಕೊಳ್ಳುವುದು ಬಲುಕಷ್ಟ; ಹಾಗಾದರೂ ಮತ್ತೆ ಮತ್ತೆ ಮಾಡಿ ರೂಢಿ ಮಾಡಿಕೊಳ್ಳುವ ಅಭ್ಯಾಸ ಕ್ರಮದಿಂದಲೂ, ಬಳಿಯಲ್ಲಿರುವ ಇಂದ್ರಿಯಗಳಿಗೆ ಬೇಕಾದ ವಿಷಯಗಳ ಮೇಲಿನ ಪ್ರೇಮವನ್ನು ಬಿಡುವುದೆಂಬ ವೈರಾಗ್ಯದಿಂದಲೂ, ಕ್ರಮಕ್ರಮವಾಗಿ ಮನಸ್ಸನ್ನು ಬಿಗಿಹಿಡಿಯಬಹುದು. ೬ ೩೫

ಪ್ರ—ಶುದ್ಧನೂ, ನಿರ್ದೋಷಿಯೂ ಆದ ಪುರುಷನು (ನಾನುವು) ದೇಹದಲ್ಲಿರುವಾಗ ಸ್ವಭಾವಕ್ಕೆ ವಿರುದ್ಧವಾದ ಕೆಟ್ಟ ಕೆಲಸದ ಮೇಲೆ ಇಚ್ಛೆಯಿಲ್ಲದಿದ್ದರೂ, ಬಲಾತ್ಕಾರವಾಗಿ ಅಪ್ಪಣೆ ಮಾಡಲ್ಪಟ್ಟಂತೆ ಪಾಪವು ದೇಹದಿಂದ ನಡೆಯುವುದಕ್ಕೆ ಪ್ರೇರಿಸುವುದಾವುದು? ೩ ೩೬

ಉ—(1) ಇದೇ ಬಯಕೆ ಎಂಬುದು; ಇದೇ ಸಿಟ್ಟು ಎಂಬುದು; ರಜೋಗುಣದಿಂದ ಉಂಟಾದುದು; 'ಎಷ್ಟು ಅನುಭವಿಸಿದರೂ ಸಾಲದು'—ಎಂಬ ಕೆಟ್ಟ ಹಗೆಯಾದ ಈ ಬಯಕೆಯೇ, ಈ ಸಿಟ್ಟೇ ಪಾಪ ಕೆಲಸಕ್ಕೆ ಕಾರಣ. ಎಂದು ತಿಳಿಯಬೇಕು. ೩ ೩೭

(2) ಹೊಗೆಯು ಬೆಂಕಿಯನ್ನು ಸುತ್ತಿಕೊಳ್ಳುವಂತೆ ಕೊಳೆಯು (ಧೂಳು) ಕನ್ನಡಿಯ ಮೇಲೆ ಕುಳಿತು ಮುಚ್ಚಿಕೊಳ್ಳುವಂತೆ, ಮಾಂಸದ ಚೀಲವು ಗರ್ಭವನ್ನು ಬಳಸಿ ಮುಚ್ಚಿಕೊಳ್ಳುವಂತೆ ಈ ಬಯಕೆ ಎಂಬ ಹಗೆಯು ಅರಿವನ್ನು ಸುತ್ತಿ, ಮುಚ್ಚಿ ಮುಸುಕಿಕೊಂಡಿರುತ್ತದೆ. ೩ ೩೮

(3) ತಿಳಿವಳಿಕೆಗೆ ಯಾವಾಗಲೂ ಹಗೆಯಾಗಿರುವ, ತೃಪ್ತಿಪಡಿಸಲು ಸಾಧ್ಯವಾಗದ, ಬಯಕೆಯ ರೂಪದಲ್ಲಿರುವ ಬೆಂಕಿಯು ಅರಿವನ್ನು ಬಳಸಿ ಸುತ್ತಿಕೊಂಡಿದೆ. ೩ ೩೯

(4) ಇಂದ್ರಿಯಗಳು, ಮನಸ್ಸು ಮತ್ತು ಬುದ್ಧಿ ಎಂಬಿವು ಈ ಬಯಕೆಗೆ

ಇಂಬುಗೊಡತಕ್ಕವು. ಬಯಕೆಯು ಈ ಇಂದ್ರಿಯಾದಿಗಳ ಆಶ್ರಯದಲ್ಲಿದ್ದು ಅರಿವನ್ನು ಮುಚ್ಚಿಕೊಂಡು ದೇಹಿಯಾದ ನಾನುವನ್ನು ಭ್ರಮೆಗೊಳಿಸುತ್ತದೆ ೩ ४೦

ಪ್ರ—ಇಂದ್ರಿಯಗಳ ಹಿಡಿತದಿಂದ ಸಡಲಿದ, ಸಂಶಯದಿಂದ ಕೂಡಿದ ಮತ್ತು ಯೋಗಮಾರ್ಗದಿಂದ ಜಾರಿದ ಮನಸ್ಸುಳ್ಳವನು ಯೋಗ ಸಿದ್ಧಿಯನ್ನು ಪಡೆಯದೆ ಯಾವಸ್ಥಿತಿಯನ್ನು ಪಡೆಯುತ್ತಾನೆ? ಆತ್ಮಲಾಭದ ಮಾರ್ಗ ೬ ೩೭ ವನ್ನು ಹಿಡಿದು ಹೋಗುತ್ತಾ ಮಧ್ಯೆ ಮರುಳನಾಗಿ, ನೆಲೆಯಿಲ್ಲದೆ, ಯೋಗವೂ ದೊರೆಯದೆ, ಸಾಧಾರಣ ಜೀವಲೋಕದ ಸ್ವಕರ್ಮಾನುಷ್ಠಾನದ ಅನುಭವಗಳೂ ತಪ್ಪಿ, ಚೂರು ಚೂರಾಗಿ, ದಿಕ್ಕಾಪಾಲಾಗಿ ಚದುರಿದ ಮೋಡಗಳಂತೆ ಕೀಳುಸ್ಥಿತಿಗೆ ಇಳಿಯುತ್ತಾನೋ ಹೇಗೆ? ಎಂಬ ಈ ಸಂಶಯಗಳನ್ನು ಬುಡಸಮೇತ ೬ ೩೮ ಕಿತ್ತು ಒಗೆಯಬೇಕು. ಇದನ್ನು ತೊಡೆದು ಹಾಕಲು, ಗುರುವಿಂದಲ್ಲದೆ, ಬೇರೆ ಯಾರಿಂದಲೂ ಸಾಧ್ಯವಿಲ್ಲ. ೬ ೩೯

ಉ—(1) ಯೋಗ ಮಾರ್ಗದಿಂದ ಜಾರಿದವರು ಈ ಲೋಕದಲ್ಲಿಯಾಗಲೀ, ಕಳೇಬರವನ್ನು ಬಿಸುಟನಂತರ ಬೇರೇ ಸನ್ನಿವೇಶದಲ್ಲಿಯಾಗಲೀ ಎಂದಿಗೂ ಕೇಡನ್ನು ಹೊಂದುವುದಿಲ್ಲ. ಶ್ರೇಯಸ್ಸನ್ನುಂಟುಮಾಡುವ ಕಾರ್ಯಗಳನ್ನು ಎಸಗುವ ಯಾರೊಬ್ಬರೂ ಎಂದಿಗೂ ಕೆಡುಕಿಗೆ ಗುರಿಯಾಗಲಾರರು. ೬ ४೦

(2) ಮಾಡಿದಷ್ಟು ಪುಣ್ಯದಿಂದ ಪಡೆದ ಸನ್ನಿವೇಶಗಳನ್ನು ಸೇರಿ, ಬಹುಕಾಲ ಫಲವನ್ನನುಭವಿಸಿ, ಅನಂತರ ಕೊನೆಗೆ, ಶುಚಿಯಾದ ಶ್ರೀಮಂತರ ಮನೆಯಲ್ಲಿ ಹುಟ್ಟುತ್ತಾರೆ. ೬ ४೧

ಹಾಗೂ ಮೇಧಾವಿಗಳಾದ ಯೋಗಿಗಳ ಮನೆಯಲ್ಲಿ-ವಾ-ವಂಶದಲ್ಲಿ ಹುಟ್ಟಬಹುದು. ಹೀಗೆ ಬಡವರಾದರೂ ಯೋಗಿಗಳಾಗಿರುವವರ ಮನೆಯಲ್ಲಿ ಹುಟ್ಟುವುದು ತುಂಬಾ ಶ್ರೇಷ್ಠವಾದುದು. ಆದರೆ ಹೀಗಾಗುವುದು ವಿರಳ. ೬ ४೨

ಯೋಗಿಗಳ ಕುಲದಲ್ಲಿ ಹುಟ್ಟಿ, ಹಿಂದೆ ಮಾಡಿದ ಯೋಗಸಾಧನೆಯನ್ನು ಪಡೆಯುತ್ತಾನೆ. ಮತ್ತು ಸಿದ್ಧಿಗಾಗಿ ಹಿಂದೆ ಮಾಡಿದುದಕ್ಕಿಂತಲೂ ಹೆಚ್ಚಾಗಿ ಪ್ರಯತ್ನ ಮಾಡುತ್ತಾನೆ. ಸನ್ನಿವೇಶಗಳು ವಿರುದ್ಧವಾಗಿದ್ದರೂ-೬ ४೩ ಹಿಂದಿನ ಜನ್ಮದ ಯೋಗ ಮಾರ್ಗದ ರೂಢಿಯ ವಾಸನೆಯಿಂದ ಮೈಮರೆತಂತೆ ಯೋಗದ ದಾರಿಯಲ್ಲಿ ಹಠಾತ್ತಾಗಿ ಸೇರಿಸಲ್ಪಡುವನು. ಮತ್ತು ಯೋಗದ ವಿಷಯವನ್ನು ತಿಳಿಯಬೇಕೆಂಬ ಇಚ್ಛೆಯುಳ್ಳವನಾದರೆ ಶಬ್ದ ಬ್ರಹ್ಮ (ವೇದ) ವನ್ನು ಮೀರಿಸಿದ ಹೆಚ್ಚು ಜ್ಞಾನಾನುಭವಗಳನ್ನು ಹೊಂದಿ ವೇದಾತೀತನಾಗುತ್ತಾನೆ. ೬ ४४

(3) ಕಷ್ಟಪಟ್ಟು ಯತ್ನಮಾಡುವ ಯೋಗಿಯು ಕಲ್ಮಷಗಳನ್ನೆಲ್ಲಾ ತೊಳೆದುಕೊಂಡವನಾಗಿ ಅನೇಕ ಜನ್ಮಗಳಲ್ಲಿ * ಸಿದ್ಧಿಯನ್ನು ಹೊಂದಿ ಕೊನೆಗೆ ಉತ್ತಮ ಪದವಿಯನ್ನು ಹೊಂದುತ್ತಾನೆ. ೬ ೪೫

ಪ್ರ—ಶ್ರದ್ಧಾಳುಗಳಾಗಿದ್ದರೂ ಶಾಸ್ತ್ರನಿಯಮಗಳ ಮೇರೆಯನ್ನು ದಾಟಿ, ದೇವತಾಪ್ರೀತಿಗಾಗಿ ದ್ರವ್ಯ ಸಮರ್ಪಣೆಮಾಡುವವರ ಪೂರ್ಣತೆಯ ಮಾರ್ಗವು ಸತ್ತ್ವ ರಜಸ್ತಮಗಳಲ್ಲಿ ಯಾವುದಕ್ಕೆ ಸೇರುವುದು ? ೧೭ ೧

ಉ—(1) ದೇಹಿಗಳ ಆಯಾ ಸ್ಥಿತಿ, ಹುಟ್ಟು, ವರ್ತನೆಗಳಿಗನುಗುಣವಾಗಿ ಶ್ರದ್ಧೆಯು ಸಾತ್ತ್ವಿಕ ರಾಜಸ ಮತ್ತು ತಾಮಸಗಳೆಂಬದಾಗಿ ಮೂರು ವಿಧಗಳಾಗಿರುವುದು. (ಅವುಗಳಿಗೆ ತಕ್ಕಂತೆ ಫಲವು ದೊರೆತು ಗುಣಗಳ ಸೋಪಾನ ೧೭ ೨ ಗಳನ್ನು ಏರಿ ಶುದ್ಧ ಸಾತ್ತ್ವಿಕ ವರ್ತನೆಗೆ ಅವಕಾಶವು ದೊರೆತು ಸಿದ್ಧಿಯು ದೊರಯುವುದು.) (2) ಆದರೆ ಶಾಸ್ತ್ರನಿಯಮಗಳನ್ನು ಮೀರಿ ಬಯಕೆಯನ್ನು ಮುಂದು ಮಾಡಿ ಕೆಲಸಗಳನ್ನು ಮಾಡುವವನಿಗೆ ಸಿದ್ಧಿಯಾಗಲೀ ಸುಖವಾಗಲೀ ಮತ್ತು ಶ್ರೇಷ್ಠವಾದ ಸ್ಥಾನವಾಗಲೀ ದೊರೆಯಲಾರದು. ೧೬ ೨೩

ಪ್ರ—ದೇಹಿಯು ಯಾವ ಯಾವ ಬಗೆಯ ಗುರುತು (ಕುರುಹು) ಗಳಿಂದ ಮೂರು ಗುಣಗಳನ್ನೂ ದಾಟಿದವನು–ಎಂದು ಗೊತ್ತು ಮಾಡಬಹುದು? ಅಂತಹವರ ಆಚಾರ–ನಡತೆಗಳೇನು ? ಹೇಗೆ ಮೂರು ಗುಣಗಳನ್ನೂ ಮೀರಿ ಇರುವುದಕ್ಕೆ ಸಾಧ್ಯವಾದೀತು ? ೧೪ ೨೧

ಉ—(1) ಬೆಳಕನ್ನೂ (ಅರಿವನ್ನೂ), ಕೆಲಸ ಮಾಡತೊಡಗುವಿಕೆಯನ್ನೂ ಭ್ರಾಂತಿಯನ್ನೂ ಮತ್ತು ಕೆಲಸಕ್ಕೆ ತೊಡಗಿದುವುಗಳನ್ನೂ ಸಹ ಗುಣಾತೀತನು ಬೇಡವಾದವುಗಳೆಂದು ಬಗೆಯುವುದಿಲ್ಲ; ಮತ್ತು ಪ್ರಾಪಂಚಿಕ ವಿಷಯಗಳಿಂದ ಹಿಂತಿರುಗಿ ಆತ್ಮಲಾಭದಲ್ಲಿ ಗುರಿಯನ್ನಿಟ್ಟಿರುವವರನ್ನೂ ಪ್ರೀತಿಸಿ ಅಪೇಕ್ಷಿಸುವುದೂ ಇಲ್ಲ. ೧೪ ೨೨

(2) ವಿಷಯಗಳೊಡನೆ ಸೇರದೇನೂ, ಸೇರದೆ ಇರದೇನೂ; ಉದಾಸೀನನಾಗಿದ್ದುಕೊಂಡು, ಗುಣಗಳಿಂದ ಬದಲಾವಣೆ ಹೊಂದದೆ, "ಗುಣಗಳು ಗುಣಗಳೊಡನೆ ಇರುತ್ತವೆ. (ನಾನುವು ಯಾವುದಕ್ಕೂ ಸಂಬಂಧಿಸದೆ ಪೂರ್ಣನೂ ಶುದ್ಧನೂ ಆಗಿರುತ್ತಾನೆ.''—ಎಂದು ಉದಾಸೀನರಾಗಿರುವವರು ಗುಣಗಳಿಂದ ಎಳ್ಳಷ್ಟೂ ಅಲ್ಲಾಡಿಸಲ್ಪಡದೆ ಇರುತ್ತಾರೆ. ೧೪ ೨೩

(3) ಸುಖದುಃಖಾನುಭವಗಳನ್ನು ಒಂದೇ ಸಮನಾಗಿ ಕಾಣುವವನೂ; ನಾನುವಿನಲ್ಲಿ ಮನಸ್ಸನ್ನು ನಿಲ್ಲಿಸುವವನೂ ; ಮಣ್ಣು ಕಲ್ಲು ಚಿನ್ನಗಳನ್ನು ಒಂದೇ

* ಒಂದೇ ಬದುಕಿನಲ್ಲಿ ಈತರಹದ ಜ್ಞಾನದ ಜನ್ಮಗಳು ಅನೇಕ ವಿಧವಾಗಿ ಉಂಟಾಗಬಹುದು. ಪ್ರಾಣಿಗಳ ಗರ್ಭವಾಸವೇ ಆವಶ್ಯಕವಾಗಿ ಬೇಕಾಗಿಲ್ಲ.

ಸಮವಾಗಿ ಭಾವಿಸುವವನೂ; ಬೇಕಾದುದು ಮತ್ತು ಬೇಕಿಲ್ಲದುದು ಇವುಗಳನ್ನು ಸಮನಾಗಿ ಎಣಿಸುವವನೂ; ಧೈರ್ಯವುಳ್ಳವನೂ; ಬೈಗಳು ಹೊಗಳಿಕೆಗಳನ್ನೂ, ನಾನುವಿನ ಮೇಲಿನ ತಿರಸ್ಕಾರ ಪುರಸ್ಕಾರಗಳನ್ನೂ ಸಮವೆಂದು ತಿಳಿದುಕೊಳ್ಳುವವನೂ; ಗೌರವ ಮತ್ತು ಗೌರವವಿಲ್ಲದಿರುವಿಕೆ (ಆದರಣೆ ಮತ್ತು ೧೪ ೨೪ ಅನಾದರಣೆ) ಗಳಲ್ಲಿ ಸಮತೆಯುಳ್ಳವನೂ; ಗೆಳೆಯರು ಮತ್ತು ಹಗೆಗಳು ಇವರನ್ನೂ ಮತ್ತು ಇವರ ಕಡೆಯವರನ್ನೂ ಸಮವಾಗಿ ಆದರಿಸುವವನೂ ಮತ್ತು ಸಮಸ್ತ ವಿಧದಲ್ಲಿಯೂ ಕೆಲಸಗಳನ್ನು ಮಾಡಬೇಕೆಂಬ ಮನಸ್ಸಿನ ನಿಶ್ಚಯವನ್ನು ತೊರೆದವನೂ ಗುಣಾತೀತನು. ೧೪ ೨೫

(4) ಬೇರೆ ಮತ್ತಾವ ಕಡೆಯೂ ತಿರುಗಿಸದೆ ಒಂದೇ ಕಡೆ (ನಾನುವಿನಲ್ಲಿ) ಮನಸ್ಸನ್ನು ನೆಲೆಗೊಳಿಸಿ ಭಕ್ತಿಯಿಂದ ನಾನುವನ್ನು ದೊರೆಕಿಸಿ * ಕೊಳ್ಳುವ ಮಾರ್ಗವನ್ನು ಹಿಡಿದು ನಾನುವಿನ ಸೇವೆ ಮಾಡುವವನು ಸತ್ತ್ವವೇ ಮೊದಲಾದ ಮೂರು ಗುಣಗಳನ್ನು ದಾಟಿ ಬ್ರಹ್ಮಸ್ಥಿತಿಯನ್ನು ಹೊಂದುವವನು ಎಂದೆನಿಸಿಕೊಳ್ಳಲು ತಕ್ಕವನಾಗುತ್ತಾನೆ. ೧೪ ೨೬

ಪ್ರ—ಪ್ರಜ್ಞೆ (ಬುದ್ಧಿ)ಯನ್ನು ಹಿಡಿತದಿಂದ ಇಟ್ಟುಕೊಂಡು ಬ್ರಹ್ಮ (ಸಮ) ನಲ್ಲಿ ನಿಲ್ಲಿಸಿರುವ ಯೋಗಿಯ ವ್ಯವಹಾರ ಮಾತುಗಳು ಹೇಗೆ? ಬುದ್ಧಿಯನ್ನು ನಾನುವಿನಲ್ಲಿಯೇ ನಿಲ್ಲಿಸಿರುವವನು ಯಾವರೀತಿ ವ್ಯವಹರಿಸಬೇಕು? ಮಾತನಾಡಬೇಕು? ೨ ೫೪

ಉ—† ಸ್ಥಿತಪ್ರಜ್ಞನು ಆಯಾ ಶುಭಾಶುಭಗಳನ್ನು ಹೊಂದಿ ಹಿಗ್ಗದೆ ಮತ್ತು ಕುಗ್ಗದೆ ಯಾವುದರಲ್ಲಿಯೂ ಸ್ನೇಹವನ್ನು ಬಿಟ್ಟು ಇರುತ್ತಾನೆ. ೨ ೫೭

ಯಾವನು ನಾನುವಿನಲ್ಲಿ ಆಸಕ್ತನೂ, ನಾನುವಿನಿಂದ ತೃಪ್ತಿಪಡುವವನೂ ಮತ್ತು ನಾನುವಿನಲ್ಲಿ ಆನಂದವನ್ನು ಹೊಂದುವವನೂ ಆಗಿರುತ್ತಾನೋ ಅವನು ಮಾಡಬೇಕಾದುದು ಯಾವುದೂ ಇಲ್ಲ. ೩ ೧೭

ತತ್ತ್ವವನ್ನು ತಿಳಿದು ಯೋಗಿಯಾದವನು ಕಣ್ಣಿಂದ ನೋಡುವಾಗ, ಕಿವಿಯಿಂದ ಕೇಳುವಾಗ, ಮುಟ್ಟಿನೋಡುವಾಗ, ಆಹಾರ ಸೇವನೆ ಮಾಡುವಾಗ, ನಡೆಯುವಾಗ, ಮಲವಿಸರ್ಜನೆ ಮಾಡುವಾಗ, ಉಸಿರಾಡುವಾಗ, ತೆಗೆದುಕೊಳ್ಳು

---

* ಭೇದಭಾವನೆಯನ್ನು ಬಿಟ್ಟು 'ನಾನು' ಎಂಬ ವಸ್ತು 'ಒಂದೇ' ಎಂಬುದನ್ನೂ ಸ್ವಸ್ವರೂಪಜ್ಞಾನಾನಂದವನ್ನೂ ಹೊಂದುವ ಮಾರ್ಗ.

† ಸ್ಥಿತಪ್ರಜ್ಞರ ಲಕ್ಷಣಗಳೇ ಉತ್ತರವಾದರೂ ಉಚಿತವಾದ ಶ್ಲೋಕ ಸಂಗ್ರಹಗಳಿಂದ ಉತ್ತರವನ್ನು ಜೋಡಿಸಿದೆ.

ವಾಗ, ಕಣ್ಣಿನ ರೆಪ್ಪೆತೆರೆಯುವಾಗ ಮತ್ತು ಮುಚ್ಚುವಾಗ ಇಂದ್ರಿಯಗಳು ಅವುಗಳ ವಿಷಯಗಳಲ್ಲಿ ವ್ಯವಹರಿಸುತ್ತವೆಂದೂ, ನಾವು ಏನನ್ನೂ ಮಾಡುವುದಿಲ್ಲವೆಂದೂ ತಿಳಿದು ವ್ಯವಹರಿಸುತ್ತಾನೆ. ೫ ೮, ೯

ನಾನುವಿನಲ್ಲಿ ಚಿತ್ತವುಳ್ಳವರೂ, ನಾನುವಿನೊಡನೆ ಪ್ರಾಣಗಳನ್ನು ಸೇರಿಸುವವರೂ ಒಬ್ಬರಿಗೊಬ್ಬರು ನಾನುವಿನ ವಿಚಾರವನ್ನು ತಿಳಿಯಪಡಿಸುತ್ತಲೂ ಮತ್ತು ಯಾವಾಗಲೂ ನಾನುವಿನ ವಿಷಯವನ್ನೇ ಪರಸ್ಪರ ಹೇಳುತ್ತಲೂ ತೃಪ್ತರಾಗುತ್ತಾರೆ ಮತ್ತು ಆನಂದದಿಂದಿರುತ್ತಾರೆ. ೧೦ ೯

ಪ್ರ—ಸ್ಥಿತಪ್ರಜ್ಞನು ಹೇಗೆ ಇರಬೇಕು? ೨ ೫೪

ಉ—ನಾನುವನ್ನು ಶಾಂತರೀತಿಯಲ್ಲಿಟ್ಟುಕೊಂಡಿರುವವನೂ, ಅಂಜಿಕೆ ಮೊದಲಾದ ಮನಸ್ಸಿನ ವಿಕಾರಗಳನ್ನು ಬಿಟ್ಟವನೂ, ಸದಾ ಬ್ರಹ್ಮನಲ್ಲಿ ವರ್ತಿಸುವ ನಿಯಮಗಳಲ್ಲಿರುವವನೂ ಆಗಿ ಮನಸ್ಸು ಮತ್ತು ಮನಸ್ಸನ್ನು ಚದುರಿಸುವಷ್ಟು ಬಲವುಳ್ಳ ಇಂದ್ರಿಯಗಳನ್ನು ಹಿಡಿದು ಪಳಗಿಸಿ, ನಾನುವಿನಲ್ಲಿ ಚಿತ್ತವುಳ್ಳವನಾಗಿ, ಮನಸ್ಸು ಮತ್ತು ನಾನುಗಳ ಯೋಗದಿಂದ ಯಾವಾಗಲೂ ಇರುವವನಾಗುತ್ತಾನೆ.
೬ ೧೪, ೨ ೬೦, ೨ ೬೧

ಪ್ರ—ಸ್ಥಿತಪ್ರಜ್ಞನ ಗಮನ ಸ್ಥಾನಗಳು ಯಾವುವು? ೨ ೫೪

ಉ—ಯೋಗಸೇವೆಯಿಂದ ಚಿತ್ತವು ಬಿಗಿಯಲ್ಪಟ್ಟು, ಎಲ್ಲಿ ಆನಂದವನ್ನು ಹೊಂದಬಹುದೋ, ಎಲ್ಲಿ ನಾನುವಿನಿಂದ ನಾನುವನ್ನೇ ನೋಡುತ್ತಾ ನಾನುವಿನಲ್ಲಿ ತೃಪ್ತನಾಗಿರುತ್ತಾನೋ ಅಂತಹ ಕಡೆಯಲ್ಲಿರುತ್ತಾನೆ. ೬ ೨೦

ಪ್ರ—ಕೆಲಸ ಮಾಗೆಯ್ಮೆಗಿಂತಲೂ ಜ್ಞಾನಮಾರ್ಗವೇ ಶ್ರೇಷ್ಠವೆಂದು ಅಭಿಪ್ರಾಯಪಟ್ಟಿದ್ದರೂ ಘೋರವಾದ ಕೆಲಸದ ಮಾರ್ಗದಲ್ಲಿಯೇ ಇರಬೇಕೆಂದು ನಿಯಮಿಸುವುದೇತಕ್ಕೆ?* ಕರ್ಮ ಮತ್ತು ಜ್ಞಾನಮಾರ್ಗಗಳ ಕೀಳುಮೇಲು ೩ ೧ ಗಳ ವಿಚಾರಕ್ಕೆ ಸಂಬಂಧಪಟ್ಟ ಮಾತುಗಳಿಂದ ಸಾಮಾನ್ಯವಾದ ಬುದ್ಧಿಯು ಭ್ರಮೆಹೊಂದುವಂತೆ ಮಾಡಿದಂತಾಗುವುದು. ಇವೆರಡರಲ್ಲಿ ಶ್ರೇಯಸ್ಸನ್ನು ಹೊಂದುವುದಕ್ಕಾಗಿ ಶ್ರೇಷ್ಠವಾದ ಯಾವುದಾದರೊಂದು ಮಾರ್ಗವನ್ನು ನಿಶ್ಚಯವಾಗಿ ಸಿದ್ಧಾಂತಮಾಡಿ ತಿಳಿಸಬೇಕು. ೩ ೨

ಉ—ಈ ಲೋಕದಲ್ಲಿ ಶ್ರೇಯಸ್ಸನ್ನು ಹೊಂದಲು ಎರಡುಮಾರ್ಗಗಳು ಹಿಂದೆಯೇ ಹೇಳಲ್ಪಟ್ಟಿವೆ. ಸಾಂಖ್ಯರಿಗೆ ಜ್ಞಾನಯೋಗದಿಂದಲೂ ಆತ್ಮ ೩ ೩

---

* ಪುಟ ೨೦೮ ಪಙ್ಕ್ತಿ ೧-೨ ರಲ್ಲಿನ ಯೋಗದಮೇಲಿನ ಪ್ರಶ್ನೆಯು ಇಲ್ಲಿ ಮುಂದರಿದಿರುವುದು.

ಲಾಭದಯೋಗಿಗಳಿಗೆ ಕರ್ಮಯೋಗದಿಂದಲೂ ಶ್ರೇಯಸ್ಸುಂಟಾಗುವುದು. ೩ ೪
ಕೆಲಸದಲ್ಲಿ ತೊಡಗದಿದ್ದ ಮಾತ್ರಕ್ಕೆ ನೈಷ್ಕರ್ಮ್ಯಸಿದ್ಧಿಯನ್ನು (ಕೆಲಸವಿಲ್ಲದಿರುವಿಕೆ
ಯೆಂಬ ಸಿದ್ಧಿ) ಮನುಷ್ಯನು ಹೊಂದಲಾರನು. ಅಥವಾ ಕೆಲಸಗಳನ್ನು ಸುಮ್ಮನೆ
ಒತ್ತಟ್ಟಿಗಿಟ್ಟಮಾತ್ರದಿಂದಲಾದರೂ ಸಿದ್ಧಿಯುಂಟಾಗಲಾರದು.

ಪ್ರ —ಕೆಲಸಗಳನ್ನು ನಾನುವಿನಲ್ಲಿ ಒತ್ತಟ್ಟಿಗಿಡುವ ಸಂನ್ಯಾಸದ (ರಹಸ್ಯ-
ಗುಟ್ಟು) ತಿರುಳನ್ನು ತಿಳಿಯಬೇಕೆಂಬ ಇಚ್ಛೆಯಿದೆ. ಗುರುವೇ, ಹೃಷೀಕೇಶ,
ಕೇಶಿನಿಸೂದನ, 'ತೊರೆಯುವಿಕೆ' ಎಂಬ ತ್ಯಾಗದ ತಿರುಳನ್ನೂ ತಿಳಿಯಬೇಕಾಗಿದೆ.
ವಿವರಿಸಬೇಕು! ೧೮ ೧

ಉ—ಬಯಕೆಗಳನ್ನು ಈಡೇರಿಸಿಕೊಳ್ಳುವುದಕ್ಕಾಗಿ ಮಾಡುವ ಕೆಲಸಗಳ
ಬಯಕೆಗಳನ್ನು ಬಿಟ್ಟು ಕೆಲಸಗಳನ್ನು ಫಲಸಮೇತ ನಾನುವಿನಲ್ಲಿ ಸಮರ್ಪಿಸಿ
ಇಡುವುದೇ ನ್ಯಾಸ-ಸಂನ್ಯಾಸ ಎಂದು ಮೇಧಾವಿಗಳು ತಿಳಿದಿರುತ್ತಾರೆ. 'ಅದು',
'ಇದು' ಎನ್ನದೆ ಸಮಸ್ತ ಕೆಲಸಗಳ ಫಲವನ್ನು ತೊರೆಯುವುದೇ ತ್ಯಾಗವೆಂದು
ವಿಮರ್ಶೆಮಾಡುವವರು ಹೇಳುತ್ತಾರೆ. ಕೆಲಸವು ತಪ್ಪುಗಳಿಂದ ಕೂಡಿರು ೧೮ ೨
ವುದರಿಂದ ತೊರೆಯಲ್ಪಡತಕ್ಕದ್ದೇ ಸರಿ' ಎಂದು ವಿವೇಕಿಗಳು ಹೇಳುತ್ತಾರೆ.
ಯಜ್ಞ, ಕೊಡಿಗೆ (ದಾನ) ಮತ್ತು ತಪಸ್ಸಿನ ಕೆಲಸಗಳನ್ನು ತೊರೆಯಕೂಡದೆಂದು
ಮತ್ತೆ ಕೆಲವರು ಹೇಳುತ್ತಾರೆ. ೧೮ ೩

ಈ ರೀತಿ ಭಿನ್ನಾಭಿಪ್ರಾಯವುಳ್ಳ ತ್ಯಾಗದ ವಿಚಾರದಲ್ಲಿ ನಿರ್ಣಯವಾಗಿ ಇಲ್ಲಿ
ವಿವರಿಸಲಾಗುವುದು–ತೊರೆಯುವಿಕೆಯು ಸಾತ್ವಿಕಾದಿಗುಣತ್ರಯಗಳ ದೃಷ್ಟಿಯಿಂದ
ಮೂರುತೆರನಾಗಿರುವುದು. ದೇವತಾ ಪ್ರೀತಿಗಾಗಿ ದ್ರವ್ಯ ಸಮರ್ಪಣೆ ೧೮ ೪
ಮಾಡುವ ಯಜ್ಞಗಳನ್ನೂ, ಕೊಡಿಗೆಯನ್ನೂ (ದಾನವನ್ನೂ) ಮತ್ತು ತಪಸ್ಸಿನ
ಕೆಲಸಗಳನ್ನೂ ತೊರೆಯಲೇಬಾರದು. ಇವೆಲ್ಲವನ್ನೂ ಮಾಡಲೇಬೇಕು. ಯಜ್ಞ
ದಾನತಪಸ್ಸುಗಳು ಬುದ್ಧಿಶಾಲಿಗಳಿಗೂ ಸಹ ದೇಹೇಂದ್ರಿಯಗಳ ಶುದ್ಧಿಯ
ನ್ನುಂಟು ಮಾಡುವುವು. ಆದರೆ ಈ ಕೆಲಸಗಳನ್ನು ಸಹ ಅವುಗಳೊಡನೆ ೧೮ ೫
ಬೆರೆಯದೆ ಫಲದಗೋಜನ್ನೂ ಬಿಟ್ಟು, ಮಾಡಬೇಕೆಂಬ ಅಭಿಪ್ರಾಯವೇ ಉತ್ತಮ
ವಾದ ನಿರ್ಣಯ. 'ನಿತ್ಯಗಟ್ಟಲೆಯಾಗಿ ಮಾಡುವ ಕೆಲಸಗಳನ್ನು ೧೮ ೬
ಒತ್ತಟ್ಟಿಗಿಡುವಿಕೆ' ಎಂಬ ಸಂನ್ಯಾಸವು ಒಪ್ಪಲ್ಪಡತಕ್ಕದ್ದಲ್ಲ ಮತ್ತು ಸಮಂಜಸವೂ
ಅಲ್ಲ. ಭ್ರಾಂತಿಯಿಂದ ನಿತ್ಯಗಟ್ಟಲೆಯ ಕೆಲಸಗಳನ್ನು ತೊರೆಯುವುದು ತಾಮಸ
ತ್ಯಾಗವೆನಿಸುವುದು. ಶರೀರಕ್ಕೆ ತೊಂದರೆಯಾಗುವುದೆಂತಲೂ ಕೆಲಸ ೧೮ ೭
ವೆಲ್ಲಾ ದುಃಖಮಯವಾದುದೆಂತಲೂ ಕೆಲಸಗಳನ್ನು ಅಂಜಿಕೆಯಿಂದ ತೊರೆಯು

ವವನು ರಾಜಸ ತ್ಯಾಗವನ್ನು ಹಿಡಿದವನಾಗಿ ತ್ಯಾಗದ ಪರಮಾರ್ಥ (ಉತ್ತಮ)
ಫಲವನ್ನು ಪಡೆಯುವುದೇ ಇಲ್ಲ. 'ನಿತ್ಯಗಟ್ಟಲೆಯ ಕೆಲಸವು ಮಾಡಲ್ಪಡ ೧೮ ೮
ತಕ್ಕದ್ದೇ ಸರಿ' ಎಂಬುದಾಗಿ ಕೆಲಸದೊಡನೆ ಬೆರೆಯುವುದನ್ನೂ ಫಲದಗೋಜನ್ನು
ಸಹ ಬಿಟ್ಟು ಯಾವ ಕೆಲಸವು ಮಾಡಲ್ಪಡುತ್ತದೋ ಅದು ಸಾತ್ವಿಕವೆನಿಸುವುದು.
೧೮ ೯

ಮೇಧಾವಿಯೂ, ಸತ್ತ್ವಗುಣಗಳಿಂದ ತುಂಬಿದವನೂ, ಸಂಶಯಗಳನ್ನು
ತೊಡೆದು ಹಾಕಿದವನೂ, ಕೆಟ್ಟಕೆಲಸವೆಂದು ಬೇಸರಗೊಳ್ಳದೆ ಇರುವವನೂ
ಮತ್ತು ಒಳ್ಳೆಯಕೆಲಸವೆಂದು ಸ್ನೇಹದಿಂದ ಅದರೊಡನೆ ಬೆರೆಯದವನೂ ಆಗಿ
ಇರುತ್ತಾನೆ. ಶರೀರವನ್ನು ಧರಿಸಿದ ಯಾವತ್ಯಾಗಿಯಾದರೂ ಕೂಡ ೧೮ ೧೦
ಕೆಲಸಗಳನ್ನು ಸಂಪೂರ್ಣವಾಗಿ ತೊರೆದುಹಾಕಲು ಆಗುವುದೇ ಇಲ್ಲ. ಯಾವನು
ಕೆಲಸದ ಫಲವನ್ನು ತೊರೆದಿರುವನೋ ಅವನೇ 'ತ್ಯಾಗಿ'ಯೆನಿಸುವನು ೧೮ ೧೧

ಬೇಡವಾದುದು, ಬೇಕಾದುದು ಮತ್ತು ಇವೆರಡರ ಬೆರಕೆ ಎಂಬುದಾಗಿ
ಕೆಲಸಕ್ಕೆ ಮೂರುತೆರನಾದ ಫಲಗಳಿವೆ. ಈ ಮೂರು ಬಗೆಯ ಫಲಗಳೂ ಸಹ
ಫಲವನ್ನು ತೊರೆಯದವರಿಗೆ ಮಾತ್ರ ಈ ಜೀವಿತಕಾಲದಲ್ಲಿ ಮಾತ್ರವಲ್ಲದೆ
ಮುಂದಿನ ಜನ್ಮಕ್ಕೂ ಸಹ ಅಂಟಿಕೊಳ್ಳುವುವು. ಆದರೆ ಒತ್ತಟ್ಟಗಿಟ್ಟವನಿಗೆ ಇವು
ಎಂದಿಗೂ ಅಂಟಲಾರವು. ೧೮ ೧೨

ಪ್ರ—ಕೃಷ್ಣ! ಗುರುನಾಥ! 'ಕೆಲಸಗಳನ್ನು ಒತ್ತಟ್ಟಗಿಡುವಿಕೆ' ಮತ್ತು
'ಕೆಲಸಗಳನ್ನು ಯೋಗದಿಂದ ಮಾಡುತ್ತಲೇ ಇರುವಿಕೆ'ಎಂಬದಾಗಿ ಹೇಳಲಾಗಿದೆ.
ಇವೆರಡು ಮಾರ್ಗಗಳಲ್ಲಿ ಶ್ರೇಷ್ಠವಾದ ಯಾವುದಾದರೊಂದು ಮಾರ್ಗವನ್ನು
ಮಾತ್ರ ನಿರ್ಣಯ ವಾ ಸಿದ್ಧಾಂತಮಾಡಿ ಹೇಳಬೇಕು. ೫ ೧

ಉ—ಕೆಲಸಗಳನ್ನು ಒತ್ತಟ್ಟಗಿಡುವುದಾಗಲೀ, ಕೆಲಸವನ್ನು ಯೋಗದಿಂದ
ಮಾಡುವುದಾಗಲೀ ಇವೆರಡೂ ಉತ್ತಮ ಫಲವನ್ನೇ ಈಯುವುವು. ಅವುಗಳಲ್ಲಿ
ಕೆಲಸಗಳನ್ನು ಒತ್ತಟ್ಟಗಿಡುವಿಕೆಯೆಂದು ಕೆಲಸಗಳನ್ನು ಮಾಡದೆ ಬಿಡುವುದ
ಕ್ಕಿಂತಲೂ, ಕೆಲಸಗಳನ್ನು ಯೋಗದಿಂದ ಮಾಡುವುದೇ ಲೇಸು. ಸಾಂಖ್ಯ ೫ ೨
(ಜ್ಞಾನಯೋಗ) ಮತ್ತುಕರ್ಮಯೋಗಗಳು ಬೇರೆಬೇರೆ ಎಂದು ಅಜ್ಞಾನದಿಂದ
ಕೂಡಿದವರು ಆಡಿಕೊಳ್ಳುತ್ತಾರೆಯೇ ಹೊರತು ಪಂಡಿತರೆಂದಿಗೂ ಹಾಗೆ ಹೇಳು
ವುದಿಲ್ಲ. ಯಾವುದೊಂದನ್ನು ಹಿಡಿದರೂ ಎರಡು ಮಾರ್ಗಗಳ ಫಲವನ್ನೇ ೫ ೪
ಹೊಂದಬಹುದು. ಸಾಂಖ್ಯರು ಯಾವ ಪರಮಪದವಿಯನ್ನು ಹೊಂದಬಹುದೋ
ಅದೇ ಪರಮಪದವಿಯು ಕರ್ಮಯೋಗದವರಿಗೂ ದೊರೆಯುವುದು. ಸಾಂಖ್ಯ
ಯೋಗ ಕರ್ಮಯೋಗಗಳೆರಡೂ, ಒಂದೇ ಆದ ಆತ್ಮಲಾಭವನ್ನು ಬೇರೆಬೇರೆ ದೃಷ್ಟಿ

ಗಳಿಂದ ನೋಡುವುದರ ಫಲವೆಂದೂ ಮತ್ತು ಅವು ಎರಡೂ ಒಂದೇ ಎಂದೂ ತಿಳಿಯುವವನು ಯೋಗವನ್ನು ಹೊಂದ್ದವನು. ಇದೂ ಅಲ್ಲದೆ, ಕರ್ಮ ೫ ೫
ಯೋಗಮಾರ್ಗದ ಸಹಾಯವಿಲ್ಲದೆ ಕರ್ಮ ಸಂನ್ಯಾಸಯೋಗಮಾರ್ಗವನ್ನು ಹಿಡಿಯುವುದು ಬಲುಕಷ್ಟವು. ಕರ್ಮಯೋಗಮಾರ್ಗದಲ್ಲಿ ನಾನುವಿನೊಡನೆ ಮನಸ್ಸನ್ನು ಒಂದುಗೂಡಿಸಿರುವ ಮುನಿಯು ಬ್ರಹ್ಮ (ನಾನು) ವನ್ನು ಬೇಗನೆ ಪಡೆಯುತ್ತಾನೆ. (ಸ್ವರೂಪ ಜ್ಞಾನಾನಂದವನ್ನು ಅನುಭವಿಸುತ್ತಾನೆ.) ೫ ೬
ಕೆಲಸದ ಫಲವನ್ನು ಹಿಡಿಯದೆ, ಆಚರಿಸಬೇಕಾದ ಕೆಲಸವನ್ನು ಮಾಡುವವನೇ ಸಂನ್ಯಾಸಿ; ಅವನೇ ಯೋಗಿ; ಕೆಲಸಗಳಿಗೆ ಅವಶ್ಯಕವಾದ ಅಗ್ನಿಯೇ ಮೊದಲಾದುವನ್ನು ಬಿಟ್ಟಮಾತ್ರಕ್ಕೇನೆ ಅಥವಾ ಕೆಲಸಗಳನ್ನು ಮಾಡದೆ ಬಿಟ್ಟ ಮಾತ್ರಕ್ಕೇನೇ ಸಂನ್ಯಾಸಿ ಎಂದು ಹೇಳುವುದು ತಪ್ಪು. ಯಾವುದನ್ನು ೬ ೧
ಸಂನ್ಯಾಸವೆನ್ನುವರೋ ಅದು ಯೋಗವು. ಫಲಾಪೇಕ್ಷೆಯಿಂದ ಕೆಲಸಮಾಡಬೇಕೆಂಬ ಮನಸ್ಸಿನ ಮೊದಲಾಲೋಚನೆಯನ್ನು ಒತ್ತಟ್ಟಗಿಟ್ಟಹೊರತು ಯೋಗಿಯಾಗಲಾರನು. ೬ ೨

ಪ್ರ :—ಹಿಂದೆ ಹೇಳಿದಂತೆ ಎಡೆಬಿಡದೆ ನಾನುವಿನಲ್ಲಿ ಮನಸ್ಸಿಟ್ಟು, ಭಕ್ತರು ವ್ಯಕ್ತವಾದ (ನಾಮರೂಪಧಾರಿಯಾದ) ನಾನುವನ್ನು ಸೇವಿಸುತ್ತಾರೆ. ಮತ್ತೆ ಕೆಲವರು ಅವ್ಯಕ್ತವಾದ ಅಂದರೆ ನಾಮರೂಪಗಳಿಲ್ಲದ ಅಕ್ಷರಪುರುಷನನ್ನೇ ಸೇವಿಸುತ್ತಾರೆ. ಯೋಗವನ್ನು ಬಲ್ಲ ಈ ಎರಡು ವಿಧಗಳ ಯೋಗಿಗಳಲ್ಲಿ ಯಾರು ಶ್ರೇಷ್ಠರು ? ೧೨ ೧

ಉ :—ನಾನುವಿನಲ್ಲಿ ಮನಸ್ಸನ್ನು ಒಳ ಹೊಗಿಸಿ, ನಾನುವನ್ನು ಎಡೆಬಿಡದೆ ಮನಸ್ಸನ್ನು ಒಂದುಗೂಡಿಸಿ ಯಾರು ಸೇವಿಸುತ್ತಾರೋ ಮತ್ತು ಅತ್ಯಂತ ಶ್ರದ್ಧೆಯಿಂದ ಯಾರುಕೂಡಿರುತ್ತಾರೋ ಅವರೇ ಯೋಗಿ ಶ್ರೇಷ್ಠ*ರೆಂದಭಿಪ್ರಾಯ ೧೨ ೨

ಉಪಸಂಹಾರ

ಗುಟ್ಟಾಗಿಟ್ಟಿರಬೇಕಾದವುಗಳಲ್ಲೆಲ್ಲಾ ತುಂಬಾ ಗುಟ್ಟಾಗಿಡಬೇಕಾದ (ಕಾಪಾಡಬೇಕಾದ) ಜ್ಞಾನವಿಷಯವು ಹೇಳಲ್ಪಟ್ಟಿತು. ಇದೆಲ್ಲವನ್ನೂ ಸ್ವಲ್ಪವೂ ಬಿಡದೆ, ಚೆನ್ನಾಗಿ ವಿಮರ್ಶೆಮಾಡಿ ಇಷ್ಟಬಂದ ಮಾರ್ಗವನ್ನು ಅಂದರೆ ಅನುಕೂಲವಾಗಿರುವುದನ್ನು ಆಚರಿಸಬಹುದು. ತಪಸ್ಸುಗಳನ್ನು ಆಚರಿಸದವನಿಗೂ ೧೮ ೬೩
ಭಕ್ತನಲ್ಲದವನಿಗೂ, ಸೇವಾಪರನಲ್ಲದವನಿಗೂ ಮತ್ತು ನಾನುವನ್ನು ಅಸೂಯೆಯಿಂದ ನೋಡುವವನಿಗೂ ಈ ಜ್ಞಾನ ವಿಷಯವನ್ನು ಹೇಳಬಾರದು.† ೧೮ ೬೭

* ಅವ್ಯಕ್ತೋಪಾಸಕರ ಉಪಾಸನೆಯು ಕಷ್ಟತರವಾದುದು.

†ಅಂದರೆ:–ಅರ್ಹತೆಗಳಿಲ್ಲದವರಿಗೆ ಜ್ಞಾನಾಪೇಕ್ಷೆಯೇ ಉಂಟಾಗುವುದಿಲ್ಲ: ಉಂಟಾದರೂ ಹಿಡಿಯುವುದಿಲ್ಲ ಅಸೂಯಾದಿ ಗುಣಗಳು ಮನಸ್ಸಿನಲ್ಲಿ ಅದನ್ನು ನಾಟಗೊಡಿಸುವುದಿಲ್ಲ.

ಪರಮಗೋಪನೀಯವಾದ ಈ ಯೋಗವಿಷಯವನ್ನು ನಾನುವಿನ ಭಕ್ತರಲ್ಲಿ ಹೇಳುತ್ತಾ ಇರುವವನು ನಾನುವಿನಲ್ಲಿ ಅತಿಶಯವಾದ ಭಕ್ತಿಯನ್ನಿಟ್ಟು ನಾನುವನ್ನು ಸೇರುವುದು(ನಾನುವಿನ ಸ್ವ ಸ್ವರೂಪ ಜ್ಞಾನಾನಂದವನ್ನು ಹೊಂದುವುದು) ಖಂಡಿತ. ೧೮ ೬೮

ಭಕ್ತನೂ, ಜ್ಞಾನಿಯೂ ಆದ ಯೋಗಿಗಿಂತಲೂ ಹೆಚ್ಚಾಗಿ ನಾನುವಿಗೆ ಹಿತವಾದ ಕೆಲಸಗಳನ್ನು ಮಾಡುವವನು ಮಾನವರಲ್ಲಿ ಬೇರೊಬ್ಬನಿಲ್ಲ. ಮತ್ತು ಈ ಪ್ರಪಂಚದಲ್ಲಿ ನಾನುವಿಗೆ ಬೇಕಾದವನೂ ಅವನಿಗಿಂತ ಬೇರೆ ಮತ್ತೊಬ್ಬನಿಲ್ಲ.* ೧೮ ೬೯

ಬ್ರಾಹ್ಮಣ ಧರ್ಮವನ್ನು ವಿವರಿಸಿ ಧರ್ಮವನ್ನೊಳಗೊಂಡ ಗೀತೆಯಲ್ಲಿ ಹೇಳಿರುವಂತೆ ಯೋಗದ ವಿಷಯದ ಸಂಭಾಷಣೆಯನ್ನು (ಸಂಭಾಷಣೆಗಳನ್ನು) ಓದಿ ತಿಳಿಯುವವನು ಜ್ಞಾನ ಯಜ್ಞವನ್ನು ಅಚರಿಸಿದವನಾಗುವನು. ಈ ಗೀತಾ ಯೋಗಪಾಠವನ್ನು ಅಭ್ಯಾಸಮಾಡುವವನು, ಮಾಡಿದ ಅಂತಹ ಜ್ಞಾನ ಯಜ್ಞದಿಂದ ನಾನುವು ಪೂಜಿಸಲ್ಪಟ್ಟವನಾಗುತ್ತಾನೆಂದು ಅಭಿಪ್ರಾಯವು. ಶ್ರದ್ಧೆ (ಸಡ್ಡೆ) ಯುಳ್ಳವನೂ. ಅಸೂಯಾದಿ ಕೆಟ್ಟಗುಣಗಳಿಲ್ಲದವನೂ ಆಗಿ ೧೮ ೭೦ ಈ ಗೀತಾ ಯೋಗಪಾಠ ಪ್ರವಚನವನ್ನು ಕಿವಿಯಿಂದಕೇಳುವ ಮನುಷ್ಯನೂ ಸಹ ಪುಣ್ಯಕಾರ್ಯಗಳನ್ನು ಮಾಡಿದವರು ಹೊಂದಬಹುದಾದ, ಮಂಗಳಕರವೂ ಸುಖಕರವೂ ಆದ ಮತ್ತು ವಿಶೇಷ ಜ್ಞಾನಪ್ರದವೂ ಆದ ಸನ್ನಿವೇಶಗಳನ್ನು ಹೊಂದುತ್ತಾನೆ. ೧೮ ೭೧

ಹೀಗೆ ಹೇಳಿದುದನ್ನೆಲ್ಲಾ ಪ್ರವಚನ ವಿಷಯವನ್ನು ಶ್ರವಣಮಾಡಿ ತಿಳಿಯಬೇಕೆಂಬುದರಲ್ಲಿಯೇ ನಟ್ಟಮನಸ್ಸುಳ್ಳವನಾಗಿ ಕೇಳಿದುದಾಗಿದೆ! ಮತ್ತು ಹೀಗೆ ಕೇಳಿದವನ, ಅಜ್ಞಾನದಿಂದ ಉಂಟಾದ ದಟ್ಟವಾದ ಮರುಳುತನ ಭ್ರಾಂತಿಗಳೂ ಸಹ ತೊಡೆದು ಹಾಕಲ್ಪಟ್ಟಿರುವುವು. ೧೮ ೭೨

ಆದ್ದುದರಿಂದ ವ್ಯರ್ಥವಾಗಿ ಹೇಳಬಾರದು. ವಿದ್ಯಾಭ್ಯಾಸದ ಅಂತಸ್ತುಗಳೆಂಬ ಮೇಲು ಮೇಲಿನ ಮೆಟ್ಟಲುಗಳನ್ನೇರಲು, ಕೆಳಗಿನ ಮೆಟ್ಟಲುಗಳನ್ನು ಏರಿರಬೇಕು (ಅರ್ಹತೆಯನ್ನು ಹೊಂದಿರಬೇಕು); ಅಲ್ಲದಿದ್ದರೆ ಉಪದೇಶವು ವ್ಯರ್ಥವೆಂಬುದೂ ಅನೇಕರ ಅನುಭವದಲ್ಲಿದೆ.

* ಯೋಗಿಯು ಒಬ್ಬೊಂಟಿಗನಾಗಿ ಮಾಡುವ ತಪಸ್ಸೇ ಮೊದಲಾದವು ಅವನ ಏಳಿಗೆಗೆ ಮಾತ್ರವಲ್ಲದೆ, ಪ್ರಪಂಚದ ಏಳಿಗೆಗೂ (ಆಶ್ರಯ) ಕಾರಣವಾಗುತ್ತವೆ ಎಂಬ ವಿಷಯವನ್ನೂ, ಇಂದ್ರಿಯ ಪ್ರಪಂಚದಲ್ಲಿ ಓಡಾಡುವ ಲೌಕಿಕರೂ, 'ಕೆಲಸಮಾಡುತ್ತೇನೆ', ಸೇವೆಮಾಡುತ್ತೇನೆ; ಎಂಬ ಹೆಮ್ಮೆಯಿಂದ ಕೂಡಿದವರೂ ಸಹ ಸಾಕ್ಷಾತ್ತಾಗಿ, ಅಲ್ಲದಿದ್ದರೆ ಪರಂಪರೆಯಾಗಿಯಾದರೂ ಯೋಗಿಯ ಯೋಗದಿಂದ ಫಲವನ್ನು ಹೊಂದುತ್ತಾರೆಂಬುದನ್ನೂ ಮನಗಾಣುವುದು ಕಷ್ಟ. ಆದ ಮಾತ್ರಕ್ಕೇನೇ ಲೌಕಿಕರು ಯೋಗಿಗಳ ಕೆಲಸವನ್ನು ಅಲ್ಲಗಳೆಯುವ ಮಾತುಗಳಿಗೆ ಕಿವಿಗೊಡದಿರುವುದು ಮೇಲು.

(ಕೃತಜ್ಞತಾ.)

ಶಿಷ್ಯನ* ಮೇಲೆ ಒಲಿದು ಶಿಷ್ಯನನ್ನು ಮೇಲಕ್ಕೆತ್ತಬೇಕೆಂಬದಾಗಿ,† ಬಹಳ ಶ್ರೇಷ್ಠವೂ ರಹಸ್ಯವೂ ಆದ ಅಧ್ಯಾತ್ಮವೆಂಬ ಪವಿತ್ರವಿಷಯವು ಹೇಳಲ್ಪಟ್ಟಿತು. ಗುರುವಿನ ಒಲುಮೆಯಿಂದಲೇ ಈ ಕೆಟ್ಟ ಅಜ್ಞಾನವೂ, ಭ್ರಾಂತಿಯೂ ತೊಲಗಿ ಹೋದುವು. ಪ್ರಾಣಿಗಳ ಹುಟ್ಟುಸಾವುಗಳೂ ಸಹ (ವಿಷಯಗಳೂಸಹ) ೧೧ ೧ ವಿವರವಾಗಿ ಕಿವಿಯಿಂದ ಕೇಳಲ್ಪಟ್ಟವು. ಅಳಿವಿಲ್ಲದ ನಾನುವಿನ ಮಹಿಮೆಯೂ ಸಹ, ಕಮಲಪತ್ರಾಕ್ಷನಾದ ನಾನುವಿನಿಂದ ತಿಳಿದುದೂ ಆಯಿತು. ನಾನುವಿನ ಪ್ರೀತಿ ಮತ್ತು ಒಲುಮೆಗಳಿನ್ದ "ಭ್ರಾಂತಿಯು ತೊಲಗಿತು;§ ನಾನು ೧೧ ೨ ವನ್ನು ನೆನೆಯುವ ಮಾನಸಿಕ ಶಕ್ತಿಯು ದೊರೆಯಿತು"–$ಸ್ವಧರ್ಮಜ್ಞಾನ ಯೋಗಾದಿ ವಿಷಯಗಳಲ್ಲಿ ಸಂದೇಹವಿಲ್ಲದೆ ಇರುತ್ತದೆ. ನಾನುವಿನ ಅಪ್ಪಣೆ ಯಾದಂತೆ ಕೆಲಸಮಾಡಲು ಯಾವ ಅಡ್ಡಿಯೂ ಇರುವುದಿಲ್ಲ. ೧೮ ೭೩

....................ಕರಿಷ್ಯೇವಚನಂತವ ||
ಯಥಾ ನಿಯುಕ್ತೋಽಸ್ಮಿ ತಥಾ ಕರೋಮಿ ||

—ಓಂ ತತ್ಸತ್—

ಎಂಬುದಾಗಿ ಶ್ರೀಮದ್ಭವದ್ಗೀತಾ ವಿಷಯ ವಿಭಜನ ಸಂಯೋಜನ ಪೂರ್ವಕ ಸಂಪುಟೀಕೃತ ಗೀತಾಕೃತಿಯಲ್ಲಿ ಪ್ರಶ್ನೋತ್ತರಮಾಲೆಯೆಂಬ ಆರನೆಯ ಕನ್ನಡ ಪ್ರಬಂಧವು.

---

* ಶಿಷ್ಯಸ್ತೇಽಹಂ ಶಾಧಿಮಾಂತ್ವಾಂ ಪ್ರಪನ್ನಮ್ ಪುಟ ೧೫

† ಉದ್ಧರೇದಾತ್ಮನಾಽಽತ್ಮಾನಮ್ ಪುಟ ೪೫

§ ಸ್ವಧರ್ಮ ಯುದ್ಧಾರಂಭದಲ್ಲಿ ಅರ್ಜುನನಿಗೆ ಉಂಟಾಗಿದ್ದ ತಪ್ಪು ತಿಳಿವಳಿಕೆಯು ಹೋಗಿ ಪರಮೇಶ್ವರ ಪ್ರೀತಿಗಾಗಿಯೇ ಮಾಡಲು ಪ್ರೇರಿಸಲ್ಪಟ್ಟು ನಡೆಯುವ ಯುದ್ಧಾದಿ ಸ್ವಧರ್ಮವು ಆಚರಣೆಗೆ ಪವಿತ್ರವೆಂಬುದು ನೆನಪಿಗೆ ಬಂತು. ಕುಲಧರ್ಮದ ಮೇಲಿನ ಮೋಹ; ಶತ್ರು ಪಕ್ಷದಲ್ಲಿ ಸೇರಿ ಮೇಲೆ ಬೀಳಲು ನಿಂತಿರುವ ನೆಂಟರಿಷ್ಟರ ಮತ್ತು ಹಿರಿಯರ ಮೇಲಿನ ಮೋಹ; ಯುದ್ಧಮಾಡಲಾರೆ ಎಂಬ ಕ್ಷತ್ರಿಯವೀರನ ಧರ್ಮಕ್ಕೆ ವಿರುದ್ಧವಾದ ದೈನ್ಯ; ಪಂಡಿತನೆಂಬ ಭಾವನೆಯಿಂದ ವಿರುದ್ಧ ವಿಷಯಗಳ ಸ್ಥಾನ ಸಂದರ್ಭಗಳನ್ನು ತಿಳಿಯದೆ ಅವಿವೇಕಕ್ಕೆ ಅವಕಾಶಕೊಡುವ ಮೋಹ–ಇಂತಹ ಮೋಹದ ಕಗ್ಗತ್ತಲೆಯೆಲ್ಲವೂ ಹರಿದು, ಅಜ್ಞಾನವು ಹೋಗಿ ಜ್ಞಾನವೆಂಬ ಬೆಳಕು ಮೂಡಿತು.

$ ಆತ್ಮಲಾಭದ-ಯೋಗದ-ನೆನಪು ಎಂಬ ಯೋಗ ಶಕ್ತಿಯು ಸ್ಥಿರವಾಯಿತು.

ಶ್ರೀ ಯೋಗಾನಂದ ಗುರುಭ್ಯೋ ನಮಃ

ಸಂಪುಟೀಕೃತ ಶ್ರೀಮದ್ಭಗವದ್ಗೀತಾ ಶ್ಲೋಕಪ್ರಬಂಧಗಳ ಕನ್ನಡ ಗದ್ಯಾನುವಾದ ಪ್ರಬಂಧಗಳು

ಏಳನೆಯ ಪ್ರಬಂಧವು

ಯೋಗಾನುಭವ

(ಸಾಧಕನು ಅಥವಾ ಯೋಗಿಯು ನಾನುವನ್ನು ಸಾಕ್ಷಾತ್ಕರಿಸಿಕೊಳ್ಳುವಿಕೆ,)

ಪ್ರಾರ್ಥನೆ

ಇದುವರೆಗೂ (ಹಿಂದೆಹೇಳಿದಂತೆ) ನಾನುವಿನ ವಿಷಯದಲ್ಲಿ ಹೇಗೆಹೇಗೆ
ವಿವರಿಸಿ (ವರ್ಣಿಸಿ) ಹೇಳಲ್ಪಟ್ಟತೋ ಅದಕ್ಕನುಗುಣವಾಗಿಯೇ ನಾನುವಿನ
ನಾಮರೂಪಗಳ ಐಶ್ವರ್ಯಗಳನ್ನು ಕಣ್ಣಿನಿಂದ ನೋಡಲು ಇಚ್ಛೆಯುಂಟಾಗುತ್ತದೆ.
ಹಾಗೆ ಮಾಡುವುದು ಸಾಧ್ಯವೆಂದು ತೋರಿದರೆ, ಯೋಗೇಶ್ವರನೂ ೧೧ ೩
ಜಗದ್ಗುರುವೂ ಆದ 'ನಾನುವು', ಅಳಿವಿಲ್ಲದ ನಾನುವನ್ನು ತೋರಿಸಬೇಕಾಗಿ
(ಅಪರೋಕ್ಷಾನುಭವಮಾಡಿಸಬೇಕಾಗಿ) ಪ್ರಾರ್ಥನೆ. ೧೧ ೪

ಅನುಗ್ರಹ

ನೋಡಬಹುದು. ನಾನುವಿನ ರೂಪಗಳು ನೂರಾರು; ಸಹಸ್ರಾರು;
ನಾನಾಬಗೆಗಳು; ದಿವ್ಯವಾದವುಗಳು; ಬಗೆಬಗೆಯ ಬಣ್ಣಗಳೂ ಆಕಾರಗಳೂ
ಉಳ್ಳವು. ಹನ್ನೆರಡು ಸಂಖ್ಯೆಯ ಆದಿತ್ಯದೇವತೆಗಳು, ಎಂಟು ಸಂಖ್ಯೆಯ ೧೧ ೫
ವಸುದೇವತೆಗಳು, ಹನ್ನೊಂದು ಸಂಖ್ಯೆಯ ರುದ್ರದೇವತೆಗಳು, ಅಶ್ವಿನೀ
ದೇವತೆಗಳು, ಮರುತ್ ದೇವತೆಗಳು, ಹಾಗೆಯೇ ಇನ್ನೂ ಹೇರಳವಾಗಿರುವ
ಹಿಂದೆ ಎಂದೂ ಕಾಣದ ಆಶ್ಚರ್ಯವನ್ನುಂಟುಮಾಡುವ ರೂಪಗಳು-ಇವೆಲ್ಲವನ್ನೂ
ನೋಡಬಹುದು. ೧೧ ೬

ಒಂದೇ ವಸ್ತುವಿನಲ್ಲಿರುವ ಇಡೀ ಜಗತ್ತೆಲ್ಲವನ್ನೂ ಚರಾಚರ ವಸ್ತುಗಳ
ಸಮೇತವಾಗಿ ಈಗ ಇಲ್ಲಿಯೇ ನಾನುವಿನ(ನಾನುವುಹೊಂದಿರುವ) ಶರೀರದಲ್ಲಿಯೇ
ನೋಡಬಹುದು. ಬೇರೇ ಇನ್ನು ಯಾವುದನ್ನೂ ನೋಡಬೇಕೆಂಬ ಇಚ್ಛೆ
ಯಿದ್ದರೂ ಅದೆಲ್ಲವನ್ನೂ ನೋಡಬಹುದು. ಆದರೆ ಸಾಧಕನ ಚರ್ಮದ ೧೧ ೭
ಕಣ್ಣಿನಿಂದ ಈ ನಾನುವಿನ ವೈಭವವನ್ನು ನೋಡಿ ತಿಳಿಯಲು ಶಕ್ತಿಸಾಲದು.
ಆದುದರಿಂದ ದಿವ್ಯವಾದ ಅಂದರೆ ತೇಜೋಮಯವೂ ಜ್ಞಾನಮಯವೂ ಆದ

ಕಣ್ಣು* ಕೊಡಲಾಗುವುದು. ಅದರಿಂದ ನಾನುವಿನ ಯೋಗದ (ಮಹಿಮೆ) ಐಶ್ವರ್ಯವನ್ನು ನೋಡಬೇಕು. ೧೧ ೮

ಬಹುಮುಖಗಳೂ, ಕಣ್ಣುಗಳೂ ಉಳ್ಳ ಆಶ್ಚರ್ಯಕರಗಳಾದ ನೋಟಗಳನ್ನು ಹೇರಳವಾಗಿ ಉಳ್ಳ, ದಿವ್ಯವಾದ ಒಡವೆಗಳನ್ನೂ ಹೆಚ್ಚಾಗಿ ಧರಿಸಿರುವ, ಮೇಲ ಕ್ಕೆತ್ತಿ ಹಿಡಿದ ಅನೇಕ ಆಯುಧಗಳನ್ನುಳ್ಳ, ದಿವ್ಯವಾದ ಹೂ ಮಾಲೆ ೧೧ ೧೦

ವಿಶ್ವರೂಪ ದರ್ಶನಾನುಭವ–ವಾಣಿ ರೂಪದಲ್ಲಿ ಪ್ರಕಾಶ

ಗಳನ್ನೂ ಬಟ್ಟೆಗಳನ್ನೂ ಧರಿಸಿರುವ, ದಿವ್ಯವಾದ ಗಂಧವನ್ನು ಹಚ್ಚಿಕೊಂಡಿರುವ, ಸಮಸ್ತವಾದ ಆಶ್ಚರ್ಯಗಳಿಂದ ತುಂಬಿದ, ಕೊನೆಮೊದಲಿಲ್ಲದಂತೆ ಎಲ್ಲಿ ನೋಡಿದರಲ್ಲಿ ಮುಖಗಳುಳ್ಳ ಮತ್ತು ಜ್ಞಾನಪ್ರಕಾಶ ಮಯನಾದ ನಾನುವು ಕಾಣುತ್ತಿದೆ. ೧೧ ೧೧

ಆಕಾಶದಲ್ಲಿ ಸಹಸ್ರ ಸೂರ್ಯ ಬಿಂಬಗಳು ಏಕಕಾಲದಲ್ಲಿ ಎದ್ದು ಕಾಣಿಸಿ ಕೊಂಡಾಗ ಎಷ್ಟು ಬೆಳಕು ಉಂಟಾಗುತ್ತದೋ ಮಹತ್ತಾದ ನಾನುವಿನ ಬೆಳಕೂ ಅಷ್ಟಾಗಿದೆ. ೧೧ ೧೨

ದೇವದೇವನ ಆ ಬೆಳಕಿನ ಮುದ್ದೆಯ ಶರೀರದಲ್ಲಿ ಒಂದೇ ಕಡೆಯಿದ್ದಾಗ್ಯೂ ಅನೇಕ ಬಗೆಯಾಗಿ ಬೇರೆಬೇರೆ ಯಾಗಿರುವ ಇಡೀ ಜಗತ್ತೆಲ್ಲವೂ ಗೋಚರವಾಗು ತ್ತದೆ. † ೧೧ ೧೩

ಓ ! ನಾನು !! ಹೋ ! ನಾನು !!! ನಾನುವಿನ ಶರೀರದಲ್ಲಿ § ಸಮಸ್ತ ದೇವತೆಗಳೂ ; ಮತ್ತು ಗುಂಪು ಗುಂಪಾಗಿರುವ ಚರಾಚರ ವಸ್ತು ವಿಶೇಷಗಳೂ ;

---

* ನೋಡಲು ಸಾಧನವಾದ ದಿವ್ಯವಾದ ಇಂದ್ರಿಯ (ಜ್ಞಾನದೃಷ್ಟಿ)

† ನಾನುವಿನ ಒಲುಮೆಗೆ ಪಾತ್ರನಾದ ಅರ್ಜುನ ಯೋಗಿಗೆ ನಾನುವಿನ ಸ್ವರೂಪದರ್ಶನ ಉಂಟಾಯಿತು. ಈ ಅನುಭವವು ಯೋಗಿಯ ಅಂತರ್ದೃಷ್ಟಿಗೆ ಗೋಚರವಾದರೂ ಹೊರ ಗಡೆಯೂ ಕಾಣುವುದು. ದಿವ್ಯದೃಷ್ಟಿಗೆ ಭೂತವರ್ತಮಾನ ಭವಿಷ್ಯದ್ವಿಷಯಗಳು ಎದ್ದು ಬಂದು ನಿಂತು ತೋರುತ್ತವೆ. ನಾನುವಿನ ಪ್ರಪಂಚದಲ್ಲಿ ನೋಡುವವನೂ 'ನಾನು ;' ನೋಟವೂ 'ನಾನು' ; ನೋಟಕ್ಕೆ ವಿಷಯವೂ 'ನಾನು' ; ನಾನುವಿನ ತೇಜೋಘನದಲ್ಲಿ ಮನೋಗತ ವಿಷಯಗಳೆಲ್ಲಾ ಯಥಾರ್ಥವಾಗಿ ಕಾಣಿಸಿಕೊಳ್ಳುವುವು. ನೋಡಬೇಕಾದ ದೇವತೆಗಳೇ ಮೊದ ಲಾದ ಆಶ್ಚರ್ಯ ಸಂಗತಿಗಳನ್ನು ನೋಡುವುದರ ಜತೆಗೆ ಏನೇನು ಮನಸ್ಸಿನಲ್ಲಿ ಉದಯಿಸು ವುದೋ ಅದೆಲ್ಲವನ್ನೂ ನೋಡುವುದಕ್ಕೆ ಅವಕಾಶವಿದೆಯಾದುದರಿಂವ ಪ್ರಸಕ್ತಸಾಧಕನ ಮನಸ್ಸು ಯುದ್ಧದಲ್ಲಿ ಪರಿಣಾಮವಾಗಿರುವುದರಿಂದ ಯುದ್ಧದ ವಿಷಯಗಳನ್ನು ನೋಡಲವಕಾಶವಿದೆ.

§ ಕೃಷ್ಣ ನಾನುವಿನ ಶರೀರ ಅಥವಾ ಅರ್ಜುನ ನಾನುವಿನ ಶರೀರ—ಶ್ರೀಗುರುವಿನ ಶರೀರವೇ ಸಾಧಕನ ಶರೀರ ; ಸಾಧಕನ ಶರೀರವೇ–ಗುರುವಿನ ಶರೀರ ; ಸರ್ವವೂ ಏಕಾ ಕಾರ–ತೇಜೋಮಯ–ನಾನು–ನಾನುವೊಂದೇ !

ಆನಂದ ಸಮಾಧಿಯಲ್ಲಿ ಯೋಗಿಯ ಅನುಭವ ಉಕ್ಕಿ ಬಂದು ವಾಚಾ ಹೊರಹೊರಡುವುದು

ಕಮಲದ ಮೇಲೆ ಕುಳಿತಿರುವ ಬ್ರಹ್ಮ, ವಿಷ್ಣು ಮತ್ತು ಈಶ್ವರ;
ಸಮಸ್ತ ಋಷಿಗಳು; ದಿವ್ಯವಾದ ಹಾವುಗಳು † —ಕಾಣು
ತ್ತವೆ. ವಿಶ್ವೇಶ್ವರ! ವಿಶ್ವರೂಪ!! ಅನೇಕ ತೋಳು ॥ ೧೫
ಗಳು; ಹೊಟ್ಟೆಗಳು; ಮುಖಗಳೂ ಕಣ್ಣುಗಳೂ ಉಳ್ಳವನು
ನಾನು! ಎಲ್ಲಿ ನೋಡಿದರಲ್ಲಿ ಕೊನೆ ಮೊದಲಿಲ್ಲದಷ್ಟು ಮೂರ್ತಿಗಳುಳ್ಳವನು!!
ಕೊನೆಯಿಲ್ಲ, ನಡುವಿಲ್ಲ ಮತ್ತು ಮೊದಲೇ ಇಲ್ಲದ ನಾನು!!! ಕಿರೀಟ ॥ ೧೬
ವುಳ್ಳವನೂ, ಗದೆಯನ್ನೂ ಚಕ್ರವನ್ನೂ ಹಿಡಿದಿರುವವನೂ, ತೇಜಸ್ಸಿನ
ಮುದ್ದೆಯೂ, ಎಲ್ಲೆಡೆಯಲ್ಲಿಯೂ ಪ್ರಕಾಶವನ್ನು ಬೀರುವವನೂ, ಸುತ್ತಲೂ ಉರಿ
ಯುವ ಬೆಂಕಿ ಮತ್ತು ಸೂರ್ಯರ ಕಾಂತಿಯುಳ್ಳವನಾದುದರಿಂದ ನೋಡಲಿಕ್ಕಾಗ
ದವನೂ ಮತ್ತು ಅಳತೆಗೆ ನಿಲುಕದವನೂ ಆದ ‘ನಾನು’! ನಾನುವೇ ॥ ೧೭
ಅಕ್ಷರ; ಶ್ರೇಷ್ಠ; ತಿಳಿಯಲ್ಪಡತಕ್ಕದ್ದು; ನಾನುವೇ ಈ ಪ್ರಪಂಚದ ಶ್ರೇಷ್ಠ
ವಾದ ನಿಕ್ಷೇಪಸ್ಥಾನ; ನಾನುವು ಅಳಿವಿಲ್ಲದವನು; ಶಾಶ್ವತವಾದ ಬ್ರಾಹ್ಮಣ
ಧರ್ಮವನ್ನು ಸಂರಕ್ಷಿಸುವವನು; ಸನಾತನನು ಮತ್ತು ನಾನುವೇ ಪುರುಷನು.
ಬುಡನಡುಕಡೆಗಳಿಲ್ಲದವನಾಗಿಯೂ, ಕೊನೆಯಿಲ್ಲದಷ್ಟು ಶಕ್ತಿಯುಳ್ಳವ ॥ ೧೮
ನಾಗಿಯೂ, ಲೆಕ್ಕವಿಲ್ಲದಷ್ಟು ತೋಳುಗಳುಳ್ಳವನಾಗಿಯೂ, ಚಂದ್ರಸೂರ್ಯರೇ
ಕಣ್ಣುಗಳಾಗಿ ಉಳ್ಳವನಾಗಿಯೂ, ಉರಿಯುವ ಬೆಂಕಿಯೇ ಬಾಯಿಯಾಗಿ ಉಳ್ಳ
ವನಾಗಿಯೂ ಮತ್ತು ತೇಜಸ್ಸಿನಿಂದ ಈ ವಿಶ್ವವನ್ನೆಲ್ಲಾ ಬೇಯಿಸುವವನಾಗಿಯೂ
ಕಾಣುವವನು ‘ನಾನು’! ನಾನುವಿನೊಂದರಿಂದಲೇ ಆಕಾಶ ಭೂಮಿಗಳ ॥ ೧೯
ನಡುವಣ ಪ್ರದೇಶವೆಲ್ಲಾ ತುಂಬಿ ಹೋಗಿದೆ. ಹತ್ತು ದಿಕ್ಕುಗಳಿಗೂ ಹರಡಿಕೊಂ
ಡಿರುವುದು ‘ನಾನು’ ಒಂದೇ. ಅಬ್ಬ! ಅದ್ಭುತವೂ ಅಂಜಿಕೆಯನ್ನುಂಟುಮಾಡು
ವುದೂ ಆದ ನಾನುವಿನ ಈ ರೂಪವನ್ನು ನೋಡಿ ಮೂರು ಲೋಕವೂ ತಲ್ಲಣಿಸಿ
ಹೋಗಿದೆ. ಹೋ! ಮಹತ್ವವುಳ್ಳ ನಾನುವೇ! ಇಗೋ ಈ ದೇವತಾ ॥ ೨೦
ಗಣಗಳೆಲ್ಲವೂ ನಾನುವಿನ ಒಳಹೋಗುತ್ತಿದಾರೆ! ಕೆಲವರು ಅಂಜಿಕೊಂಡು ಬಗಸೆ
ಗಳನ್ನೊಡ್ಡಿ ಪ್ರಾರ್ಥಿಸುತ್ತಿದಾರೆ!! ಮಹರ್ಷಿಗಳೂ ಸಿದ್ಧಪುರುಷರೂ ಗುಂಪು
ಗುಂಪಾಗಿ ‘ಸ್ವಸ್ತಿ’ (ಶುಭವಾಗಲಿ) ಎಂದು ಹೇಳುತ್ತಾ ಅತಿಶಯವಾದ ಸ್ತೋತ್ರ
ಗಳಿಂದ ನಾನುವನ್ನು ವರ್ಣಿಸಿ ಹೊಗಳುತ್ತಿದಾರೆ!!! ಹನ್ನೊಂದು ॥ ೨೧
ಸಂಖ್ಯೆಯ ರುದ್ರರೂ, ಹನ್ನೆರಡು ಸಂಖ್ಯೆಯ ಆದಿತ್ಯರೂ, ಎಂಟು ವಸುಗಳೂ,

---

†ಸ್ವರ್ಗ, ಮರ್ತ್ಯ ಮತ್ತು ಪಾತಾಳಲೋಕದ ದೃಶ್ಯಗಳು. (ಮೇಲಾದ, ಕೀಳಾದ ಮತ್ತು ನೀಚವಾದ ಸನ್ನಿವೇಶ ಸ್ಥಿತಿಗಳು)

ಎಲ್ಲಾ ಸಾಧ್ಯರೂ, ಅಶ್ವಿನೀ ದೇವತೆಗಳೂ, ಮರುದ್ದೇವತೆಗಳೂ, ಪಿತೃದೇವತೆ
ಗಳೂ, ಗಂಧರ್ವರೂ, ಯಕ್ಷರೂ, ಅಸುರರೂ ಮತ್ತು ಸಿದ್ಧರೂ ಗುಂಪು ಗುಂಪಾಗಿ
ನಿಂತು ಆಶ್ಚರ್ಯಗೊಂಡು ನಾನುವನ್ನೇ ಕಣ್ಣಾರ ನೋಡುತ್ತಿದ್ದಾರೆ. ॥ ೨೨
ಮಹತ್ತಾದುದು! ಲೆಕ್ಕವಿಲ್ಲದಷ್ಟು ಬಾಯಿಗಳೂ ಕಣ್ಣುಗಳೂ ಉಳ್ಳದ್ದು!
ಲೆಕ್ಕವಿಲ್ಲದಷ್ಟು ತೋಳುಗಳು ತೊಡೆಗಳು ಕಾಲುಗಳು ಉಳ್ಳದು! ಲೆಕ್ಕವಿಲ್ಲ
ದಷ್ಟು ಹೊಟ್ಟೆಗಳುಳ್ಳದು; ಭಯಂಕರವಾದ ಕೋರೆದಾಡೆಗಳು ಲೆಕ್ಕವಿಲ್ಲದಷ್ಟು
ಇವೆ; ಈ ರೂಪವನ್ನು ನೋಡಿ ಲೋಕಗಳೆಲ್ಲವೂ ಕಳವಳಗೊಂಡಿವೆ! ಹಾಗೆಯೇ
ಸಾಧಕ * ನಿಗೂ ಕಳವಳವುಂಟಾಗಿದೆ. ಮುಗಿಲು ಮುಟ್ಟುವ ಎತ್ತರ ॥ ೨೩
ವುಳ್ಳ, ಜ್ವಲಿಸುತ್ತಿರುವ, ಅನೇಕ ಬಣ್ಣಗಳುಳ್ಳ ಬಿಟ್ಟಬಾಯುಳ್ಳ ಮತ್ತು ಹೊಳೆ
ಯುವ ವಿಶಾಲವಾದ ಕಣ್ಣುಗಳುಳ್ಳ ನಾನುವಿನ ರೂಪವನ್ನು ನೋಡಿದವನ ಮನ
ಸ್ಸಿನಲ್ಲಿ ಕಳವಳವುಂಟಾಗಿ ಧೈರ್ಯವಾಗಲೀ, ಸಮಾಧಾನವಾಗಲೀ ಇಲ್ಲದೆ
ಹೋಗಿದೆ. ದೇವೇಶ! ಜಗನ್ನಿವಾಸ!!—ನಾನುವಿನ ಈ ರೂಪದ ॥ ೨೪
ಮುಖಗಳು ಭಯವನ್ನುಂಟುಮಾಡುವ ಕೋರೆದಾಡೆಗಳನ್ನು ಹೊಂದಿ ಪ್ರಳಯ
ಕಾಲದ ಬೆಂಕಿಗೆ ಸಮಾನವಾಗಿರುವುವು. ಇವನ್ನು ನೋಡಿ ದಿಕ್ಕೇ ತೋರುತ್ತಿಲ್ಲ.
ಮನಸ್ಸಮಾಧಾನವೂ ಉಂಟಾಗಲಾರದು. ಪ್ರಸನ್ನನಾಗಬೇಕು. ಇಗೋ! ॥ ೨೫
ಇಲ್ಲಿ ಕಾಣುವ ಸಮಸ್ತ ರಾಜರುಗಳ ಗುಂಪುಗಳ ಸಮೇತವಾಗಿ ಧೃತರಾಷ್ಟ್ರನ
ಮಕ್ಕಳೆಲ್ಲರೂ, ಭೀಷ್ಮ, ದ್ರೋಣ ಮತ್ತು ಇಲ್ಲಿ ಕಾಣುವ ಕರ್ಣ ಮತ್ತು ಪಾಂಡ
ವರ ಕಡೆಯ ಕೆಲವು ಮುಖ್ಯ ಭಟರೊಡನೆ ಬೇಗ ಬೇಗನೆ, ಭಯವ ॥ ೨೬
ನ್ನುಂಟುಮಾಡುವ, ಭಯಂಕರವಾದ ಕೋರೆದಾಡೆಗಳುಳ್ಳ ಬಾಯೊಳಕ್ಕೆ ಹೋಗು
ತ್ತಿದಾರೆ. ಕೆಲವರು ಹಲ್ಲುಗಳ ಮಧ್ಯೆ ಸಿಕ್ಕಿ, ಅಗಿಯಲ್ಪಟ್ಟು ಚೂರುಚೂರಾದ
ತಲೆಗಳುಳ್ಳವರಂತೆ ಕಾಣುತ್ತಿದಾರೆ. ನದಿಗಳಲ್ಲಿ ಹರಿಯು ನೀರಿನ ॥ ೨೭
ಪ್ರವಾಹಗಳು ಸಮುದ್ರದ ಕಡೆಗೆ ಹೋಗುವುದಕ್ಕಾಗಿ ಹರಿಯುವಂತೆ ಈ
ಭೂಲೋಕದ ಯುದ್ಧಭಟರೆಲ್ಲರೂ ಉರಿಯ ಪ್ರವಾಹದ ಬಾಯನ್ನು ಸೇರುತ್ತಿ
ದಾರೆ. ಅಳಿವಿಗಾಗಿಯೇ ಎಂಬಂತೆ ಹೆಚ್ಚು ವೇಗದಿಂದ ಹಾರಿ; ಪತಂಗ ॥ ೨೮
ಗಳು ಉರಿಯುವ ಬೆಂಕಿಗೆ ಬೀಳುವಂತೆ, ಅಳಿವಿಗಾಗಿಯೇ ಬಹು ವೇಗವಾಗಿ ಈ
ಲೋಕದ ಜನರೆಲ್ಲರೂ ನಾನುವಿನ ರೂಪದ ಬಾಯೊಳಗೆ ತುಂಬಿಕೊಳ್ಳುತ್ತಿದ್ದಾರೆ.
(ನುಗ್ಗುತ್ತಾ ಇದ್ದಾರೆ.) ಉರಿಯನ್ನು ಹೊರಡಿಸುತ್ತಿರುವ ಬಾಯಿ ॥ ೨೯
ಗಳಿಂದ ಲೋಕದ ಜನಗಳೆಲ್ಲರನ್ನೂ ಪೂರ್ಣವಾಗಿ ನುಂಗಿಹಾಕುತ್ತಾ ರುಚಿ

---

* ಸಾಧಕನಾದ ಅರ್ಜುನನೂ ಆ ತೇಜೋಘನದಲ್ಲಿ ಕಾಣುತ್ತಿದಾನೆ.

ನೋಡಲೆಳಸಿದಂತೆ ಕಾಣುತ್ತದೆ. ಇಡೀ ಜಗತ್ತೆಲ್ಲವನ್ನೂ ತೇಜಸ್ಸಿನಿಂದ ತುಂಬಿಸಿ, ನಾನುವಿನ ಬೆಳಗುವ ಭಯಂಕರವಾದ ಕಿರಣಗಳು ಸುಡುತ್ತಿವೆ. ಹೇಳಬೇಕು; ನಾನುವಿನ ಭಯಂಕರವಾದ ಈ ರೂಪವು ಯಾವುದು? ನಾನುವಿಗೆ ೧೧ ೩೦ ನಮಸ್ಕಾರ; ಪ್ರಸನ್ನನಾಗಬೇಕು! ನಾನುವೇ! ಸರ್ವಕ್ಕೂ ಮೂಲನಾದ ನಾನು ವನ್ನು ಅನುಭವಮಾಡಿಕೊಳ್ಳಲು ಇಚ್ಛೆಯುಂಟಾಗಿದೆ. ನಾನುವಿನ ಈ ವೃತ್ತಿ ಗಳನ್ನು ಕಂಡರಿಯಲು ಕಷ್ಟವು. ಹೃಷೀಕೇಶ! ನಾನುವಿನ ಮಹಿಮೆ ೧೧ ೩೧ ಯಿಂದ ಈ ಜಗತ್ತೆಲ್ಲವೂ ಸಂತಸಗೊಳ್ಳುವುದು; ಪ್ರೇಮದೊಡನೆ ಕೂಡಿ (ಪ್ರೇಮ ಮಯವಾಗಿ) ರುವುದು. ಇದೆಲ್ಲಾ ಸಮಂಜಸವಾಗಿದೆ. ರಕ್ಷಸ್ಸುಗಳು ಹೆದರಿ ದಿಕ್ಕು ದಿಕ್ಕಿಗೆ ಓಡಿ ಹೋಗುತ್ತಿದಾರೆ. ಸಮಸ್ತ ಸಿದ್ಧರ ಗುಂಪುಗಳು ನಮಸ್ಕರಿ ಸುತ್ತಿರುವುವು. ಮಹದ್ಯುಕ್ತನಾದ ನಾನುವೇ, ಅನನ್ತ—ದೇವೇಶ– ೧೧ ೩೬ ಜಗನ್ನಿವಾಸ–ನಾನುವೇ ಅಕ್ಷರ! ನಾನುವೇ ಸತ್ ಮತ್ತು ಅಸತ್! ಯಾವುದು ಪರ ವಸ್ತುವೋ ಅದೇ ನಾನು! ಬಹು ದೊಡ್ಡದೆನಿಸಿಕೊಂಡಿರುವ, ಬ್ರಹ್ಮಾದಿ ಗಳಿಗೆಲ್ಲ ಮೊದಲನೆಯ ಸೃಷ್ಟಿಕರ್ತೃವಾದ ಮೇಲ್ಕಂಡ ಮಹಿಮೆಯುಳ್ಳ ನಾನು ವಿಗೆ ಅದೇಕೆತಾನೆ ನಮಸ್ಕರಿಸದೆ ಇದ್ದಾರು?!! ಆದಿ ದೇವನು ೧೧ ೩೭ 'ನಾನು'! ಪುರುಷನು 'ನಾನು! ಪುರಾಣನು · ನಾನು'! ಈ ಜಗತ್ತಿಗೆಲ್ಲ ಶ್ರೇಷ್ಠವಾದ ನಿಕ್ಷೇಪಸ್ಥಾನವು 'ನಾನು! ತಿಳಿಯುವವನು 'ನಾನು'! ತಿಳಿಯ ಲ್ಪಡತಕ್ಕದ್ದು 'ನಾನು"! ಅತ್ಯುತ್ಕೃಷ್ಟವಾದ ತೇಜೋಮಯಸ್ಥಾನವು 'ನಾನು'! ಅನನ್ಯ ರೂಪನಾದ ನಾನುವಿನಿಂದ ಈ ಜಗತ್ತೆಲ್ಲವೂ ತುಂಬಿ ಹೋಗಿರುವುದು.!! ವಾಯು, ಯಮ, ಅಗ್ನಿ, ವರುಣ, ಚಂದ್ರ, ಪ್ರಜಾಪತಿ ಮತ್ತು ಪ್ರಪಿತಾ ೧೧ ೩೮ ಮಹ ಎಲ್ಲರೂ 'ನಾನು'! ನಮಸ್ಕಾರ;! ನಾನುವಿಗೆ ನಮಸ್ಕಾರ;! ಸಹಸ್ರಾವೃತ್ತಿ ನಮಸ್ಕಾರ! ಇನ್ನೂ ಹೆಚ್ಚು ಸಂಖ್ಯೆಯ ನಮಸ್ಕಾರಗಳು ನಾನುವಿಗೆ!! ೧೧ ೩೯ ನಾನುವಿನ ಮುಂಭಾಗದಲ್ಲಿ ನಮಸ್ಕಾರ! ನಾನುವಿನ ಹಿಂಭಾಗದಲ್ಲಿ ನಮಸ್ಕಾರ! ಎಲ್ಲವೂ ಆದ ನಾನುವೇ, ಎಲ್ಲ ಕಡೆಯಲ್ಲೂ ನಮಸ್ಕಾರ! ಮಿತಿಯಿಲ್ಲದಷ್ಟು ವೀರ್ಯವುಳ್ಳವನು 'ನಾನು'! ಮಿತಿಯಿಲ್ಲದಷ್ಟು ವಿಕ್ರಮವುಳ್ಳವನು 'ನಾನು'! ಸಮಸ್ತವನ್ನೂ ಹೊಂದುವವನು 'ನಾನು' ಆದುದರಿಂದಲೇ ಸಮಸ್ತವಾಗುವ ವನೂ 'ನಾನು-'!! ೧೧ ೪೦

ಪೂರ್ಣನಾದ ನಾನುವಿನ ಮಹಿಮೆಯುನ್ನು ತಿಳಿಯದೇನೇ ಸಾಮಾನ್ಯನಾಗಿ ಸ್ನೇಹಿತನೆಂದು ತಿಳಿದು, ಸ್ನೇಹದಿಂದಾಗಲೀ ಮರುಳುತನದಿಂದಾಗಲೀ–ಕೃಷ್ಣ, ಯಾದವ, ಸಖ–ಎಂಬದಾಗಿ ಗುರುವನ್ನು ಸಡಗರದಿಂದ ಮಾತನ್ನಾಡಿಸಿದ

ತಪ್ಪನ್ನು ಕ್ಷಮಿಸಬೇಕಾಗಿ ಪ್ರಾರ್ಥನೆ. * ವಿಹಾರಸ್ಥಾನಗಳಲ್ಲಿ ಮಲಗುವ ೧೧ ೪೧
ಸ್ಥಾನಗಳಲ್ಲಿ ಮತ್ತು ಕುಳಿತುಕೊಳ್ಳುವ ಸಂದರ್ಭಗಳಲ್ಲಿ ಹಾಸ್ಯಕ್ಕಾಗಲೀ,
ವಿನೋದಕ್ಕಾಗಲೀ ಮರ್ಯಾದೆ ಇಲ್ಲದೆ ಏನಾದರೂ ಒಂದು ಸಣ್ಣ ತಪ್ಪು ನಡೆದಿ
ದ್ದರೂ ಅದನ್ನು ಮನ್ನಿಸಬೇಕಾಗಿ-ಅಪ್ರಮೇಯನಲ್ಲಿ-(ಸತ್ಸಮಕ್ಷಂ-ತತ್ಸಮಕ್ಷಂ)
ಪ್ರಾರ್ಥನೆ * ೧೧ ೪೨

ಚರಾಚರ ವಸ್ತುಗಳ ಈ ಪ್ರಪಂಚಕ್ಕೆಲ್ಲಾ ತಂದೆಯಾಗಿರುವವನು 'ನಾನು'!
ಲೋಕಕ್ಕೆಲ್ಲಾ ಪೂಜ್ಯನು 'ನಾನು'! ಗುರು ಮತ್ತು ಪರಮಗುರುವು 'ನಾನು'!
ಅಪ್ರತಿಮವಾದ ಮಹಿಮೆಯುಳ್ಳ ನಾನುವಿಗೆ ಸಮಾನರಾಗಲೀ ಹೆಚ್ಚಿನವರಾಗಲೀ
ಈ ಮೂರು ಲೋಕಗಳಲ್ಲಿ ಬೇರೆಯಾರು? ಎಲ್ಲಿದ್ದಾರು? ಆದುದರಿಂದ ೧೧ ೪೩
ಶರೀರವನ್ನು ದಂಡದಂತೆ ನೆಲದ ಮೇಲೆ ಮಲಗಿಸಿ, ನಮಸ್ಕಾರ ಪೂರ್ವಕ,
ಪೂಜ್ಯನೂ ಈಶ್ವರನೂ ಆದ 'ನಾನುವು' ಪ್ರಸನ್ನನಾಗಬೇಕಾಗಿ, ಪ್ರಾರ್ಥನೆ.
ತಂದೆಯು ಮಗನ ವಿಷಯದಲ್ಲಿ; ಸ್ನೇಹಿತನು ಸ್ನೇಹಿತನ ವಿಷಯದಲ್ಲಿ ಹೇಗೋ
ಹಾಗೆ, ಸಾಧಕನಿಗೆ ಕಲ್ಯಾಣವನ್ನುಂಟುಮಾಡಲೋಸ್ಕರ ಪ್ರಸನ್ನನಾಗಿ ಸಹಿಸಿ
ಕೊಳ್ಳಬೇಕಾಗಿ ಪ್ರಾರ್ಥನೆ. ೧೧ ೪೪

ಹಿಂದೆ ಎಂದೂ ಕಾಣದ ನಾನುವಿನ ದಿವ್ಯರೂಪವನ್ನು ನೋಡಿ, ಸಂತೋಷ
ವುಂಟಾಗಿದೆ ಮತ್ತು ಅಂಜಿಕೆಯು ತಲೆದೋರಿ ಮನಸ್ಸು ತಲ್ಲಣಗೊಂಡಿದೆ.

ಪ್ರಾರ್ಥನೆ ;— ದೇವೇಶ, ಜಗನ್ನಿವಾಸ-ಪ್ರಸನ್ನನಾಗಬೇಕು. 'ನಾನು'ವಿನ
ಶಂಖ ಚಕ್ರ ಗದಾಪದ್ಮಯುಕ್ತವಾದ ಸೌಮ್ಯರೂಪವನ್ನೇ
ತೋರಿಸಬೇಕು. ಕಿರೀಟವನ್ನು ಧರಿಸಿ, ಗದೆ ಮತ್ತು ಚಕ್ರಗಳನ್ನು ೧೧ ೪೫
ಕೈಲಿ ಹಿಡಿದಿರುವ ನಾನುವಿನ ರೂಪವನ್ನೇ ನೋಡಲು ಇಚ್ಛೆಯುಂಟಾಗಿದೆ.
ವಿಶ್ವಮೂರ್ತಿಯೂ, ಸಹಸ್ರ ಬಾಹುವೂ ಆದ ನಾನುವು ವಿಶ್ವರೂಪವನ್ನು ಉಪ
ಸಂಹರಿಸಿ ಚತುರ್ಭುಜಗಳುಳ್ಳ ಶ್ರೀ ಕೃಷ್ಣನ ರೂಪಿನಲ್ಲಿ ದರ್ಶನ ಕೊಡ
ಬೇಕಾಗಿ ಪ್ರಾರ್ಥನೆ. ೧೧ ೪೬

ಪ್ರಸನ್ನನಾದ ನಾನುವಿಗಿದ್ದ ಈ ಉತ್ಕೃಷ್ಟವಾದ ರೂಪವು ನಾನುವಿನ
ಯೋಗದ ದೆಸೆಯಿಂದ ತೋರಿಸಲ್ಪಟ್ಟಿತು. ತೇಜೋಮಯನಾದ, ಸಮಸ್ತ

---

* ಯೋಗದ ಅರ್ಥದೃಷ್ಟಿಯಿಂದ ಸರ್ವಕ್ಕೂ 'ನಾನುವೇ' ಕಾರಣಕರ್ತನೆಂದರಿತಿರುವ ಅಂತಸ್ತಿನಲ್ಲಿ ಈ ವಿಧವಾದ ಮನೋವ್ಯಾಪಾರಕ್ಕೆ ಅವಕಾಶವಿಲ್ಲದಿದ್ದಾಗ್ಯೂ, ಸಾಧಕನಸಾಧನೆಯ ಸಂಸ್ಕಾರವು ಪೂರ್ಣವಾಗದೆ, ಸ್ವಸ್ವರೂಪ ದರ್ಶನವು ತಾತ್ಕಾಲಿಕವಾಗಿರುವುದರಿಂದ, ದೇಹಿಯ ದೃಷ್ಟಿಯಿಂದ ಸಾಧುವೆಂದು ಹೇಳಬಹುದು.

ವಿಶ್ವರೂಪೋಪಸಂಹಾರ-ಶಾಂತ ಸೌಮ್ಯರೂಪ ದರ್ಶನಾನುಗ್ರಹ

ವೆನಿಸಿದ, ಅನಂತವಾದ ಮತ್ತು ಸರ್ವಕ್ಕೂ ಮೂಲವಾದ ಈ ವಿಶ್ವರೂಪವು ತೋರಿಸಲ್ಪಟ್ಟಿತು. ಈ ರೂಪವು ಯೋಗಿಯಾದ ಅರ್ಜುನನಿಂದಲ್ಲದೆ, ಬೇರೆ ಮತ್ತಾರಿಂದಲೂ ಎಂದೂ ನೋಡಲ್ಪಡದೆ ಇದ್ದುದು. ವೇದಯಜ್ಞಾಧ್ಯಯನಗಳಿಂದಲೂ ಕೊಡಿಗೆಗಳಿಂದಲೂ, ಕುಲಕೆಲಸಗಳಿಂದಲೂ ಮತ್ತು ಕಠಿನ ತಪಸ್ಸು ॥ ४೭ ಗಳಿಂದಲೂ ಮನುಷ್ಯ ಲೋಕದಲ್ಲಿ ಮೇಲೆ ತೋರಿಸಿದ ರೂಪವುಳ್ಳ ನಾನುವು ದೃಷ್ಟಿಗೆ ಸಾಧ್ಯನಲ್ಲ. ಕುರುಪ್ರವೀರನಾದ ಅರ್ಜುನನಿಂದಲ್ಲದೆ ಬೇರೆಯಾರಿಂದಲೂ ಸಾಧಿಸಲ್ಪಟ್ಟವನಲ್ಲ. ॥ ४८

ಕ್ಷತ್ರಿಯ ಬ್ರಾಹ್ಮಣನಿಗೋಸ್ಕರ ಪ್ರಸ್ತುತ ರಣರಂಗದ ಚಿತ್ರವನ್ನು ತೋರಿಸುವ ದೃಶ್ಯವುಳ್ಳ ನಾನುವಿನ ಭಯಂಕರವಾದ ರೂಪವನ್ನು ನೋಡಿ- ಕಳವಳವು ಉಂಟಾಗಬೇಕಾದುದೂ ಇಲ್ಲ; ಭ್ರಾಂತಿಭಾವನೆಯೂ ಬೇಕಾಗಿಲ್ಲ. ಅಂಜಿಕೆಯನ್ನು ದೂರಮಾಡಿ, ಸಂತೋಷದ ಮನಸ್ಸುಳ್ಳವನಾಗಿ, ಹಿಂದೆ ನೋಡಿದ ನಾನುವಿನ ಶ್ರೀಕೃಷ್ಣಾವತಾರವನ್ನೇ ಮತ್ತೆ ನೋಡಬಹುದು. ಶಾಂತಿರಸ್ತು!— ॥ ४೯

ಈಗ ನಾನುವಿನ ಸೌಮ್ಯವಾದ ಮಾನುಷ ರೂಪವನ್ನು ನೋಡಿ, ಶಾಂತಿ ಬುದ್ಧಿಯನ್ನು ನಿಲ್ಲಿಸಿ (ನಾನುವಿನಲ್ಲಿ ಸೇರಿಸಿ), ಪ್ರಕೃತಿಯನ್ನು ಅಂದರೆ ಸಾಮ್ಯಾವಸ್ಥೆ ಸಮತ್ವವನ್ನೂ ಹೊಂದಿದ ಯೋಗಿಯು ನಾನು. ॥ ೫೧

ಅನುಭವ :—

ಓಂ ಶಾಂತಿಃ ಶಾಂತಿಃ ಶಾಂತಿಃ

ಶ್ರೀ ಗುರು ಚರಣಾರವಿಂದಾರ್ಪಣಮಸ್ತು.

—ಓಂ ತತ್ಸತ್—

ಎಂಬದಾಗಿ ಶ್ರೀಮದ್ಭಗವದ್ಗೀತಾ ವಿಷಯವಿಭಜನಸಂಯೋಜನ ಪೂರ್ವಕ ಸಂಪುಟೀಕೃತ ಗೀತಾಕೃತಿಯಲ್ಲಿ ಸಮಾಧಿ—ವಿಶ್ವರೂಪದರ್ಶನ—ವಾ—ಅತ್ಮಸಾಕ್ಷಾತ್ಕಾರ ಯೋಗಾನುಭವವೆಂಬ ಏಳನೆಯ ಕನ್ನಡ ಪ್ರಬಂಧವು.

ಇತೀಯಂ ಶ್ರೀಮತ್‌ಕೌಶಿಕ ನಾನಪ್ರಸ್ಥಾಚಾರ್ಯವರ್ಯ ಶ್ರೀ ಬ್ರಹ್ಮಾನಂದನಾಥ ಶ್ರೀರಂಗಪಟ್ಣಂ. ಬೊಂಬಾಯಿ ಶ್ರೀ ಸೂರ್ಯನಾರಾಯಣ ಶಾಸ್ತ್ರಿ (ಶ್ರಿಮತ್‌ಪರಮಹಂಸಪರಿವ್ರಾಜಕಾಚಾರ್ಯವರ್ಯ ಶ್ರೀ ಕಾಶೀ ಪೂರ್ಣಾನಂದಭಾರತೀ)—ಪ್ರಿಯ ಮುಖ್ಯ ಶಿಷ್ಯ ಶ್ರೀ ಮಂಕಾಲಕುಲ

ವಿಭೂಷಣ ಯಜನಯಾಜನಾದಿ ಷಟ್ಕರ್ಮತತ್ಪರ ಸಕಲಾಗಮಸಾರ ವೈದಿಕಾಗಮಪ್ರತಿಷ್ಠಾಪನ ವಿಚಕ್ಷಣ ಶಿಷ್ಯಹೃದಯವಿಹಾರಿ ಶ್ರೀ ಶೃಂಗಗಿರಿ ಜಗದ್ಗುರು ಪೀಠಾಧಿಪಸನ್ನುತ ಶ್ರೀ ಬ್ರಹ್ಮರ್ಷಿ ಶ್ರೀ ಯೋಗಾನಂದ ಶ್ರೀ ಶ್ರೀಯಾನಂದ ಕಡಬ ಉಪಾಧ್ಯಾಯ ಶ್ರೀಮದಹೋಬಲ ನರಸಿಂಹ ಶಾಸ್ತ್ರಿ—(ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯ ಶ್ರೀ ಯೋಗಾನಂದಭಾರತೀ)—ಸದ್ಗುರು ಶಿಷ್ಯ ರುದ್ರಪತ್ತನಂ. ಶ್ರೀಸೂರ್ಯನಾರಾಯಣ ಶರ್ಮಣಃ. ಶ್ರೀಮದ್ಭಗವದ್ಗೀತಾಮೃತಪಾನಧುರೀಣ ಶ್ರೀಗುರುಪ್ರೇರಣಯಾ ಶ್ರೀಗುರುಪ್ರೀತ್ಯರ್ಥಂ, ಯಥಾನುಬೋಧಂ, ವಿಷಯವಿಭಜನಸಂಯೋಜನ ಪೂರ್ವಕ ಶ್ಲೋಕ ಕನ್ನಡ ಗದ್ಯಾನುವಾದ ಸಮೇತ ಸಂಪುಟೀಕೃತ ಪ್ರಬಂಧರೂಪಾ ಶ್ರೀಭಗವದ್ಗೀತಾ ಕೃತಿಃ ವಿಜಯತೇತಮಾಮ್.

ಒಪ್ಪೋಲೆ

ಪುಟ	ಸಾಲು	ತಪ್ಪು	ಒಪ್ಪು
೧೪	೨೩	ಸಾಮಾನು	ಸಾಮಾನ್ಯ
೧	೧	ಯುಯುತ್ಸುವಃ	ಯುಯುತ್ಸವಃ
೫	೨೧	ವಿಹವಿಹ	ವಿಹ
೮	೨೪	ಸೌವಮ್ಯಪು	ಸೌಮ್ಯವಪು
೧೭	೪	ಶ್ಲೋಕ ಸಂ. ೫೦	ಶ್ಲೋಕ ಸಂ. ೬೦

ಅಧ್ಯಾಯ ೪–ಶ್ಲೋ ೩೩ ರ ಅನಂತರ ಶ್ಲೋಕ ೩೪–೩೫ ಗಳನ್ನು ಕ್ರಮವಾಗಿ ಓದಿಕೊಳ್ಳಿ.

ಪುಟ	ಸಾಲು	ತಪ್ಪು	ಒಪ್ಪು
೨೨	೯	ಶಾಶ್ವತೋಽಯಃ	ಶಾಶ್ವತೋಽಯಂ
೨೪	೨	ಹೇತುನರ್ಾ	ಹೇತುನಾ
	೧೪	ದೇಹೀನ	ದೇಹಿನ
೨೫	೧೫	ಊರ್ಧ್ವ	ಊರ್ಧ್ವಂ
೨೬	೧೩	ಪೃಸೃತಾ	ಪ್ರಸೃತಾ
೩೫	೬	ಸಾತ್ವಿಕೀ	ತಾಮಸೀ
೩೭	೨೨	ಅ. ೭ ಶ್ಲೋ ೧೨	ಅ. ೩ ಶ್ಲೋ ೨೭
೪೦	೩	ಶ್ಲೋ. ಸಂ. ೧೩	ಶ್ಲೋ. ಸಂ. ೧೨
೪೨	೨೦	ಶ್ಲೋ. ಸಂ. ೨೪	ಶ್ಲೋ. ಸಂ. ೨೫
೪೫	೧	ಈ ಪುಟದ ೪ನೇ ಸಾಲನ್ನು ಮೊದಲು ಓದಿಕೊಂಡು ಅನಂತರ ಈ ಸಾಲನ್ನು ಅದರ ಜತೆಗೆ ಓದಿಕೊಳ್ಳಿ.	
೬೩	೧೬	ಬಾಹ್ಮೀ	ಬ್ರಾಹ್ಮೀ
೬೭	೧೨	ಇದರ ಅನಂತರ ಅ. ೩ ಶ್ಲೋಕ ೩೪ ನ್ನು ಓದಿಕೊಳ್ಳಿ	

ಇಂದ್ರಿಯಸ್ಯೇಂದ್ರಿಯಸ್ಯಾರ್ಥೇ ರಾಗದ್ವೇಷೌ ವ್ಯವಸ್ಥಿತೌ ।
ತಯೋರ್ನ ವಶಮಾಗಚ್ಛೇತ್ತೌ ಹ್ಯಸ್ಯ ಪರಿಪಂಥಿನೌ ॥ ೩–೩೪

ಪುಟ	ಸಾಲು	ತಪ್ಪು	ಒಪ್ಪು
೭೩	೧೨	ವೈಷಸ್ಯ	ವೈಷ್ಯಸ್ಯ
೯೯	೧೧	ಶಾಂಶಿ	ಶಾಂತಿ
	೯	ದರಡಿ	ಹರಡಿ
೧೧೫	೧೪	ವೇದಗಳಲ್ಲಿ	ವೇದಗಳಲ್ಲಿ *
೧೨೫	೨೯	ಸರ್ಪತಕ್ತಿ	ಸರ್ಪಶಕ್ತಿ
೨೨೬	೩	ಪೀರಾಥಿಪ	ಪೀಠಾಧಿಪ

ಸಂಪುಟೀಕೃತ ಭಗವದ್ಗೀತಾ : ಅಭಿಪ್ರಾಯಗಳು.

"....ಬಹು ವಿಶಾಲ ದೃಷ್ಟಿಯಿಂದ ಭಗವದ್ಗೀತೆಯನ್ನು ನೋಡಿ "ಸರ್ವಂ ಖಲ್ವಿದಂ ಬ್ರಹ್ಮ" "ಸರ್ವವೂ ಬ್ರಹ್ಮವೇ" ಬ್ರಹ್ಮವನ್ನರಿತ ಮಹಾತ್ಮರೆಲ್ಲರೂ ಬ್ರಾಹ್ಮಣರೇ; ನಾನು ಎಂದು ಹೇಳುವ ವಸ್ತುವೇ ಬ್ರಹ್ಮವು. ಬ್ರಹ್ಮಸ್ವರೂಪವಲ್ಲದೆ ಮತ್ತೊಂದು ...ನೇ ಜಗತ್ತಿನಲ್ಲಿ ಇಲ್ಲ, ಎಂಬುದನ್ನು ಸ್ವಾನುಭವದಿಂದ ಅತ್ಯಂತ ಸಮೀಚೀನವಾಗಿ ತಿಳಿಸಿರು...ಂದ ಈ ಗ್ರಂಥವು ಕನ್ನಡಿಗರೆಲ್ಲರಿಗೂ ಗ್ರಾಹ್ಯವಾಗಿದೆ.

ಶಿಲ್ಪಸಿದ್ಧಾಂತಿ ಸಿದ್ಧಲಿಂಗಸ್ವಾಮಿಗಳು.
ಶ್ರೀ ಜಗದ್ಗುರು ನಾಗಲಿಂಗಸ್ವಾಮಿ ಮಠ.

Mr. M. A. Doreswami Iyengar, M.A., B.L., Advocate, Mysore.

"The book on the Bhagavadgita by Sri R. N, Suryanarayana, M.A., is a work of considerable merit. Great simplicity of language, faithful adherence to orthodox 'waitisim, high scholarship and deep spiritual earnestness characterise the work throughout. In place of the traditional analysis of the subject into Karma, Jnana and Bhakti a new topical analysis is presented in order to emphasise that the Gita is a Sadhana Shastra rather than an academic or a utilitarian discourse. A sound mastery over the Gita text is displayed in allocating the verses to the respective topics of the author's new synopsis."

Dr. T. A. Purushottam, M.A., Ph.D. (Lond.)
Professor of Philosophy, Maharaja's College, Mysore.

"Mr. R. N. Suryanarayana's Bhagavadgita Essays are commendable as a work of redaction of the Gita in which certain themes are exhibited as the central teaching and illustrated with passages extracted from the various chapters of the Text.

His work would appeal as a compendium of ready reference. The work would also be helpful to those whose Gita reading is not merely a symbolic act of piety, but is in addition the stimulus for meditative self-musings.

Of far greater moment is the silent invitation his work extends to all his readers to get acquainted with the imperishable and self-revealing God whose light shines through in the Gita."

Dr. M. H. Krishna, M.A. D.Lit. (Lond.)
Director of Archaeology, Mysore State.

"Mr. R. N. Suryanarayana's interpretation is brilliant and highly interesting, while his Kannada is simple and direct."

ಹೆಚ್ಚು ವಿವರಗಳನ್ನು ಈ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು :—

ಹೆಚ್. ಕೆ. ಶ್ರೀ ಲಕ್ಷ್ಮಿ
ಪ್ರಕಟನ ಶಾಖೆ, ಬ್ರಹ್ಮರ್ಷಿ ಗುರುಕುಲಮ್
C/o
Hanasoge House
27, Model, Basavangudi P.O.
Bangalore City